ಇವರೆಲ್ಲರೂ ಕೂಡ ಮಾತನಾಡುವವರಿದ್ದಾರೆ. ತಾವು ನಿನ್ನೆ ಅರ್ಧ ಗಂಟೆ ಮಾತನಾಡಿರುತ್ತೀರಿ. ಇನ್ನೂ ೧೫ ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ ಬೇರೆ ಸ್ನೇಹಿತರಿಗೂ ಮಾತನಾಡಲು ಅವಕಾಶ ಮಾಡಿ ಕೊಡಿ.

BUDGET ESTIMATES FOR 1979-80.—Demands for grants

Demand Nos. 42, 43, 44 and 45 (Debate continued)

†ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ (ವರ್ತೂರು).—ಲೋಕೋಪಯೋಗಿ ಇಲಾಖೆ ಬಹಳ ಮಹತ್ತರವಾದ ಇಲಾಖೆಯಾಗಿರುತ್ತದೆ. ಟೆಕ್ನಿಕಲ್ ಸಬ್ಜೆಕ್ಟ್ ಬಹಳವಾಗಿ ಇರುತ್ತದೆ. ಮಾನ್ಯ ಸಚಿವರು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ............

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ ಅವರಿಗೆ ೨ ಗಂಟೆಯ ತನಕ ಮಾತನಾಡಲು ಅವಕಾಶ ಕೊಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಬೇರೆಯವರಿಗೆ ಏನು ಮಾಡುವುದು. ಇನ್ನು ಎಂ.ಸಿ. ಬಸಪ್ಪನವರು ಮಾತನಾಡ ಬೇಕೆಂದು ಹೇಳಿರುತ್ತಾರೆ. ಆದ್ದರಿಂದ ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಲೋಕೋಪಯೋಗಿ ಇಲಾಖೆಯಲ್ಲಿ ಮೊದಲು ಮೂರು ಜನ ಮುಖ್ಯ ಇಂಜಿನೀಯರುಗಳನ್ನು ಇಟ್ಟುಕೊಂಡು ಮಾಡುತ್ತಿದ್ದ ಕೆಲಸಗಳನ್ನು ಈಗ ೩೦ ಜನರು ಬಂದಿರು ತ್ತಾರೆ. ಇನ್ನೂ ೧೦ ಜನರನ್ನು ಕ್ರಿಯೇಟ್ ಮಾಡಿದರೂ ಪರವಾಗಿಲ್ಲ, ಹೆಚ್ಚು ಜನರನ್ನು ಮಾಡಿ ಎಂದು ಹೇಳುತ್ತೇನೆ. ಅನಂತರ ಕ್ವಾಲಿಟಿ ಕಂಟ್ರೋಲ್ ಎಂದು ಸಿ.ಓ.ಡಿ. ಇಲಾಖೆಗೆ ಒಬ್ಬ ಚೀಫ್ ಇಂಜಿನೀಯರನ್ನು ಪೋಸ್ಟ್ ಮಾಡಿ. ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸಗಳು ನಡೆಯುತ್ತದೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ.

ಸ್ವಾಮಿ ಬಹಳ ದಿವಸಗಳ ಹಿಂದೆ ಆರ್ಕಿಟೆಕ್ಟ್ ಎನ್ನತಕ್ಕಂಥ ಪೋಸ್ಟ್ ಇತ್ತು. ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಚೀಫ್ ಆರ್ಕಿಟೆಕ್ಟ್ ಪೋಸ್ಟ್ ಎಂದು ಲೋಕೋಪ ಯೋಗಿ ಇಲಾಖೆಯಲ್ಲಿ ಇತ್ತು. ಈ ಪೋಸ್ಟ್‌ನಲ್ಲಿ ಹಿಂದೆ ಶ್ರೀ ಹನುಮಂತ ನಾಯ್ಡು ಎಂಬುವರು ಇದ್ದರು. ಅವರು ಹೋದ ಮೇಲೆ ಈ ಪೋಸ್ಟ್ ಬೇರೆಯವರ ಕೈಯಲ್ಲಿ ಇನ್‌ಚಾರ್ಜ್‌ನಲ್ಲಿ ಇಟ್ಟು ಕೊಂಡಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಬೇಕೆಂದು ಹೇಳುತ್ತೇನೆ.

೧.೩೦ ಪಿ. ಎಂ.

ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರುಗಳಾದ ಮೇಲೆ ಎರಡನೆಯದಾಗಿ ಬರುವ ಮಹತ್ತರ ಹುದ್ದೆಗಳೆಂದರೆ "ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು" ಸೂಪರಿಂಟೆಂಡೆಂಟಿಕ ಇಂಜಿನಿಯರ್‌ಗಳ ಕಚೇರಿಗಳು ಅಂಚೆ ಕಚೇರಿಗಳು ! ಇಲ್ಲಿ ಯಾವುದಾದರೊಂದು ಫೈಲಿಗೆ ವಿರಾಮ ಹಾಗಿ ಬೇಕೆಂದು ಮನಸ್ಸು ಮಾಡಿದರೆ ಅದನ್ನಲ್ಲಿಯೇ ಮುಗಿಸಿ ಬಿಡುತ್ತಾರೆ. ಮೇಲಕ್ಕೆ ಕಳುಹಿಸಬೇಕೆನ್ನುವ ಮನಸ್ಸಿದ್ದರೆ, ಆರಾಮವಾಗಿ ಮೇಲಕ್ಕೆ ಕಳುಹಿಸಿಕೊಡುತ್ತಾರೆ. ಇವರು ಯಾವುದೇ ತೀರ್ಮಾನವನ್ನೂ ತೆಗೆದುಕೊಳ್ಳುವುದಿಲ್ಲ. ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರಿಂದ ಬರುವ ಫೈಲುಗಳನ್ನು ಮೇಲೆ ಯಾವುದೇ ಸಲಹೆ ಅಥವಾ ಸೂಚನೆಯನ್ನು ಕೊಡದೆ ಅದನ್ನು ಸೀದಾ ಮುಖ್ಯ ಇಂಜಿನಿಯರ್ ಅವರಿಗೆ ಹೊತ್ತಾಕಿ ಬಿಡುತ್ತಾರೆ. ಈ ಕೆಲಸ ಮಾಡುವುದಕ್ಕೇನು ಅವರನ್ನು ಇಟ್ಟಿರುವುದು ? ಅವರಿಗೆ ಏನು ಅಧಿಕಾರವಿದೆ ಮತ್ತು ಇರುವ ಅಧಿಕಾರವನ್ನು ಸರಿಯಾಗಿ ಚಲಾಯಿಸುತ್ತಿದ್ದಾರೆಯೋ ಎನ್ನುವುದನ್ನು ಮಾನ್ಯ ಸಚಿವರು ಪರಿಶೀಲಿಸಬೇಕು. ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಇನ್ನೊಂದು ಕೆಲಸ : ಇಲಾಖೆಯಲ್ಲಿ ಓವರ್ ಎಂಪ್‌ಲಾಯ್‌ಮೆಂಟ್ ಇದೆಯೋ, ಅಂಡರ್ ಎಂಪ್ಲಾಯಿಮೆಂಟ್ ಇದೆಯೋ, ಯೋಜನೆಗಳು ಸರಿಯಾಗಿ ಕಾರ್ಯಗತವಾಗುತ್ತಿವೆಯೋ ಅಥವಾ ಇಲ್ಲವೆ, ಹೆಚ್ಚುವರಿ ಇಂಜಿನಿಯರ್‌ಗಳು ಇರುವರೆ ಅಥವಾ ಇಲ್ಲವೆ, ಒಂದೊಂದು ಸರ್ಕಲ್‌ನಲ್ಲೂ ಹೆಚ್ಚುವರಿ ಕೆಲಸಗಳಿವೆಯೋ ಅಥವಾ ಎಲ್ಲಾ

ದರೂ ಕೆಲಸಗಳನ್ನು ತೆಗೆದುಕೊಳ್ಳಬೇಕೆ ಎನ್ನುವುದನ್ನು ವರದಿ ಮಾಡುವುದು. ಈ ರೀತಿಯ ವರದಿಯನ್ನು ವರ್ಷಕ್ಕೊಂದು ಸಲ ಕೊಡಬೇಕು, ನನಗೆ ತಿಳಿದ ಮಟ್ಟಿಗೆ ಸುಮಾರು ಐನೂರು ಇಂಜಿನಿಯರ್‌ಗಳ ಹುದ್ದೆಗಳು ಖಾಲಿಯಿದ್ದರೂ ಅವರು ಶಿಫಾರಸ್ಸು ಮಾಡಿ ಕಳುಹಿಸಿಲ್ಲ. ಅವರು ಇದರ ಬಗ್ಗೆ ನಿರ್ಲಕ್ಷತನ ತೋರಿಸುತ್ತಿದ್ದಾರೆ. ಇದರ ಜೊತೆಗೆ ಅವರಿಗೆ ಡ್ಯಾಟಾ ರೇಟ್ ಮಾಡುವ ಅಧಿಕಾರವೂ ಇದೆ. ಎಸ್ಟಿಮೇಷನ್ ಮಾಡುವಾಗ ಷೆಡ್ಯೂಲ್ ಆಫ್ ರೇಟ್‌ನಲ್ಲಿ ಮಾಡಬೇಕು. ಆದರೆ, ಕೆಲವು ಐಟಂಗಳಿಗೆ ನಾನ್ ಷೆಡ್ಯೂಲ್ ರೇಟ್‌ನಲ್ಲಿ ಡ್ಯಾಟಾ ರೇಟ್ ಮಾಡುತ್ತಾರೆ. ಅಂದಾಜು ತಯಾರು ಮಾಡುವಾಗ ಯಾವ ಅಂಶ ಇವರಿಗೆ ಹೊಳೆಯುವುದಿಲ್ಲವೋ ಅದು ಕೆಲಸ ಕಾರ್ಯಗತವಾಗುವ ಸಂದರ್ಭದಲ್ಲಿ ಜ್ಞಾಪಕಕ್ಕೆ ಬಂದು ಬಿಡುತ್ತದೆ ! ಅದೂ ಎಂತಹ ಐಟಂ ಹೊಳೆಯುವುದು ? ನಮ್ಮ ಇಲಾಖೆಯಲ್ಲಿ ಯಾವ ಐಟಂಗೆ ಷೆಡ್ಯೂಲ್ ಆಫ್ ರೇಟ್ಸ್ ಇಲ್ಲವೋ ಅದು ಬಹಳ ತಡವಾಗಿ ಇವರ ತಲೆಗೆ ಹೊಳೆಯುತ್ತದೆ. ಈ ರೀತಿ ಇವರಿಗೆ ತಡವಾಗಿ ಹೊಳೆಯುವುದರಿಂದ ಇಲಾಖೆಗೆ ಲಕ್ಷಾಂತರ ರೂಪಾಯಿಗಳ ನಷ್ಟ. ಇದನ್ನು ತಪ್ಪಿಸಿದರೆ ಇಲಾಖೆಯಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಿಲ್ಲಿಸುವುದಕ್ಕೆ ಅನುಕೂಲವಾಗುತ್ತದೆ.

ಇನ್ನು, ನಿಯಮ ೫೧ನ್ನು ನಾನು ಓದಿದ್ದು ಇವತ್ತೇ. ಅದರಲ್ಲಿ ''ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ತಾಲ್ಲೂಕು ಬೋರ್ಡ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಯಾವುದಾದರೂ ಕಾಮಗಾರಿಗಳನ್ನು ಮಾಡುತ್ತಿದ್ದರೆ, ಅವುಗಳ ಮೇಲ್ವಿಚಾರಣೆ ಮಾಡುವುದರ ಜೊತೆಗೆ ತಮ್ಮ ಮಾಮೂಲಿ ಮೇಲ್ವಿಚಾರಣಾ ಜವಾಬ್ದಾರಿಯೂ ಇದೆ' ಎಂದಿದೆ.

(ಛೇರ್ಮನ್ ಶ್ರೀ ಎಂ. ಸಿ. ಬಸಪ್ಪನವರು ಅಧ್ಯಕ್ಷ ಸ್ಥಾನದಲ್ಲಿದ್ದರು)

ಹೀಗಿದ್ದರೂ. ತಾಲ್ಲೂಕು ಅಭಿವೃದಿ ಮಂಡಲಿಯ ಕಾಮಗಾರಿಗಳನ್ನು ಯಾರೂ ಮೇಲ್ವಿಚಾರಣೆ ನಡೆಸುವುದಿಲ್ಲ. ಅಲ್ಲಿ ಕ್ಷೇತ್ರ ವಿಸ್ತರಣಾಧಿಕಾರಿಯೇ ಮುಖ್ಯ ಇಂಜಿನಿಯರ್ ! ಅಲ್ಲಿಗೆ ಜೂನಿಯರ್ ಇಂಜಿನಿಯರ್ ಒಬ್ಬರನ್ನು ಪೋಸ್ಟ್ ಮಾಡಲಾಗಿರುತ್ತದೆ. ಮತ್ತು ಸೂಪರಿಂಟೆಡೆಂಟ್ ಇಂಜಿನಿಯರ್‌ರವರು ಖುದ್ದು ಪರಿಶೀಲಿಸಬೇಕು. ಆದರೆ, ಈ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಒಬ್ಬ ಕ್ಷೇತ್ರ ವಿಸ್ತರಣಾಧಿಕಾರಿ ಒಂದು ಲಾರಿ ಮಣ್ಣಿಗೆ ೧೦,೦೦ ರೂಪಾಯಿಗಳನ್ನು ಕೊಟ್ಟಿದ್ದಾನೆ. ವೈಟ್ ಫೀಲ್ಡ್ ಬಳಿ ಇರುವ ಇಮ್ಮಸಹಳ್ಳಿ ಹತ್ತಿರ ಒಂದು ಲಾರಿ ತುಂಬ ಮಣ್ಣು ತುಂಬಿಸಿ, ಅದನ್ನು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಚೆಲ್ಲಿಸಿ, ಅದಕ್ಕೆ ಹತ್ತು ಸಾವಿರ ರೂಪಾಯಿ ಎಸ್ಟಿಮೇಟ್ ಮಾಡಿ, ಪಾವತಿ ಕೂಡ ಮಾಡಿಯಾಗಿದೆ. ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ತಮ್ಮ ಜವಾಬ್ದಾರಿಯನ್ನರಿತು, ಮೇಲ್ವಿಚಾರಣೆ ಮಾಡಿದ್ದರೆ, ಇಂತಹ ಅವ್ಯವಹಾರವಾಗುತ್ತಿರಲಿಲ್ಲ. ಆ ರಸ್ತೆಯಲ್ಲಿ ಮಣ್ಣು ಹಾಕಿದ್ದರಿಂದ ಅಲ್ಲಿನ ಹಳ್ಳಿಗಳವರು ಏನು ಹೇಳುತ್ತಿದ್ದಾರೆ ಗೊತ್ತೆ ? 'ಸ್ವಾಮಿ, ರಸ್ತೆಗೆ ಹೋದರೆ ಮುಖಕ್ಕೆಲ್ಲ ಪೌಡರ್ ಮೆತ್ತಿಕೊಳ್ಳುವಂತೆ ಮಣ್ಣು ಮೆತ್ತಿ ಕೊಳ್ಳುತ್ತದೆ – ಧೂಳಿನಿಂದ. ನಮ್ಮ ರಸ್ತೆಗೆ ಮಣ್ಣು ಹಾಕಿಸದಿದ್ದರೂ ಚಿಂತೆ ಇಲ್ಲ. ಇಂತಹ ಕೆಲಸಗಳನ್ನು ಮಾತ್ರ ಮಾಡಬಾರದೆಂದು ತಾವು ವಿಧಾನ ಸಭೆಯಲ್ಲಿ ಹೇಳಿ ಎಂದು ನನಗೆ ಹೇಳುತ್ತಾರೆ. ಮನೆ ಒಳಕ್ಕೆಲ್ಲ ಧೂಳು ಹೋಗುತ್ತದೆ, ಅನ್ನದ ಮೇಲೆ ಮುಚ್ಚಿರುವುದಿಲ್ಲ, ಧೂಳೆಲ್ಲ ತುಂಬಿಕೊಂಡು ಬಿಡುತ್ತದೆ. ಅಲ್ಲದೆ ದಾರಿಯಲ್ಲಿ ಓಡಾಡುವವರ ಬಟ್ಟೆಯೆಲ್ಲ ಧೂಳಿನ ಮಯವಾಗಿ ಬಿಡುತ್ತದೆ. ಇವೆಲ್ಲ ಬಹಳ ಗಹನವಾದ ವಿಚಾರಗಳು. ಮಾನ್ಯ ಸಚಿವರು ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು.

ಇನ್ನು, ಡಿವಿಜನಲ್ ಕಛೇರಿಗೆ ಬರೋಣ. ಈ ಕಛೇರಿಯೇ, ಲೋಕೋಪಯೋಗಿ ಇಲಾಖೆಯ ರಾಜ ! ಎಲ್ಲರೂ ಕೆಲಸಗಳನ್ನು ಮಾಡಿಸಿಕೊಳ್ಳುವುದು ಇಲ್ಲಿಯೇ. ಕೆಲಸ ಮಾಡಿಸಿಕೊಳ್ಳಲು ಬಂದವರಾರು, ಮುಖ್ಯ ಇಂಜಿನಿಯರ್‌ರವರಿಗೆ ಫೋನ್ ಮಾಡಿ, ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರಿಗೆ ಫೋನ್ ಮಾಡಿ ಎಂದು ಹೇಳುವುದಿಲ್ಲ. ಡಿವಿಜನಲ್ ಆಫೀಸಿಗೆ ಫೋನ್ ಮಾಡಿ ಎಂದು ಹೇಳುತ್ತಾರೆ ! ಈ ಆಫೀಸ್ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಭಿವೃದ್ಧಿ ಕಾಮಗಾರಿಗಳನ್ನು ನೋಡಿಕೊಳ್ಳುತ್ತದೆ. ರಸ್ತೆ ಮಾಡಿಸುವುದು, ಸೇತುವೆ ಕಟ್ಟಿಸುವುದು, ಕಟ್ಟಡ ನಿರ್ಮಾಣ, ಕೆರೆ ನಿರ್ಮಾಣ ಮತ್ತು ಕಾಲುವೆ ತೆಗೆಸುವುದು—ಇವೆಲ್ಲಾ ಇದರ ವ್ಯಾಪ್ತಿಗೆ ಬರುವ ಕಾಮಗಾರಿಗಳು. ಆದರೆ, ಕುಡಿಯುವ ನೀರನ್ನು ಮಾತ್ರ ಇದರಿಂದ ತಪ್ಪಿಸಿ, ಅದನ್ನು ಜನಾರೋಗ್ಯ ಇಲಾಖೆಯಿಂದ ಮಾಡಿಸುತ್ತಾರೆ. ಈ ಇಲಾಖೆಯಲ್ಲಿ ಇರುವ ಎಕ್ಸಿಕ್ಯುಟೀವ್ ಇಂಜಿನಿಯರ್ ಎಲ್ಲಾ ಕಡೆ ಓಡಾಡುವುದಕ್ಕಾಗುವುದಿಲ್ಲ. ಹೀಗಾಗಿ ಕೆಟ್ಟು

ಹೋದ ಕೊಳವೆ ಬಾವಿಗಳು ಹಾಗೆಯೇ ಬಿದ್ದಿರುತ್ತವೆ. ಆದುದರಿಂದ, ಅದನ್ನು ಮತ್ತೆ ರೆಗ್ಯುಲರ್ ಪಿ.ಡಬ್ಲ್ಯು.ಡಿ. ಗೆ ತೆಗೆದು ಕೊಂಡು, ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡ ಬೇಕು. ಆರೇಳು ಸಬ್ ಡಿವಿಜನ್‌ಗೆ ಒಬ್ಬ ಎಕ್ಸಿಕ್ಯುಟೀವ್ ಇಂಜಿನಿಯರ್ ಇರುವುದನ್ನು ತಪ್ಪಿಸಿ, ನಾಲ್ಕು ಸಬ್ ಡಿವಿಜನ್‌ಗೆ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಇರುವಂತೆ ಮಾಡಿ. ಕೆರೆ, ಕಟ್ಟೆ ಮತ್ತು ಕಾಲುವೆ ತೋಡಿಸುವವನ ಕೈಯಲ್ಲಿ ಕೊಳವೆ ಬಾವಿಗಳನ್ನು ತೆಗೆಸಲಿಕ್ಕೆ ಬರುವುದಿಲ್ಲವೆ ? ಈತ ಇನ್ನೂ ಚೆನ್ನಾಗಿಯೇ ನೋಡಿಕೊಳ್ಳುತ್ತಾನೆ. ವಿವಿಧ ಕಾಮಗಾರಿಗಳ ಮೇಲ್ವಿಚಾರಣೆ ಮಾಡುವ ಈತ ದಿನನಿತ್ಯ ಸಂಚಾರ ಮಾಡಿ ಜನರ ಸಂಕಷ್ಟವನ್ನು ಅರಿತುಕೊಂಡು ಇನ್ನೂ ಉತ್ತಮ ಕೆಲಸ ಮಾಡಲು ಅನುಕೂಲ ವಾಗುತ್ತದೆ.

ಇನ್ನು ಗೆಜೆಟೆಡ್ ಹುದ್ದೆಗಳಲ್ಲಿ ಕೊನೆಯದಾಗಿ ಬರುವುದು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿ ಯರ್‌ಗಳ ಹುದ್ದೆಗಳು. ಇವುಗಳನ್ನು ಮೊದಲು ಅಸಿಸ್ಟೆಂಟ್ ಇಂಜಿನಿಯರ್ ಎಂದು ಕರೆಯುತ್ತಿದ್ದರು. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಎನ್ನುವುದು ಮಾನ್ಯ ಶ್ರೀ ಕಂಠಯ್ಯನವರು ಮಾಡಿದ ಮರಿ ! ಇವರನ್ನು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಎಂದು ಮಾಡಿ, ಹಿಂದಿನ ಅಸಿಸ್ಟೆಂಟ್ ಇಂಜಿನಿ ಯರ್‌ಗೆ ಕೊಡುತ್ತಿದ್ದ ವೇತನವನ್ನೇ ಕೊಡುತ್ತಿದ್ದಾರೆ. ಬರೀ ಹುದ್ದೆಯ ಹೆಸರು ಮಾತ್ರ ಬದಲಾವಣೆ ಯಾಯಿತಷ್ಟೆ. ಇವರಷ್ಟು ಕಷ್ಟಪಟ್ಟು ಕೆಲಸ ಮಾಡುವವರು ಈ ಇಲಾಖೆಯಲ್ಲಿ ಯಾರೂ ಇಲ್ಲ ; ಕತ್ತೆ ದುಡಿದ ಹಾಗೆ ದುಡಿಯುತ್ತಾನೆ. ಮೇಲಿನ ಅಧಿಕಾರಿಗಳ ಕೈಯಲ್ಲಿ ಬೈಸಿಕೊಳ್ಳುತ್ತಾನೆ, ಶಾಸಕರ ಹತ್ತಿರ ಬೈಸಿಕೊಳ್ಳುತ್ತಾನೆ, ಕೊನೆಗೆ ಜನರ ಹತ್ತಿರವೂ ಬೈಸಿಕೊಳ್ಳುತ್ತಾನೆ. ಗಾಳಿ, ಮಳೆ, ಬಿಸಿಲನ್ನು ಲೆಕ್ಕಿಸದೆ, ನೆರೆ ಹಾವಳಿ ಸಂದರ್ಭಗಳಲ್ಲಿ ತನ್ನ ಜೀವನವನ್ನೇ ಮುಡಿಪಿಟ್ಟು ಹಗಲು ರಾತ್ರಿ ಕೆಲಸ ಮಾಡು ತ್ತಾನೆ. ಈತನು ಇಲಾಖೆಗೆ ಸೇರಿ ಇಪ್ಪತ್ತೈದು ವರ್ಷಗಳ ಸೇವೆ ಸಲ್ಲಿಸಿದರೂ ಬಡ್ತಿ ಸಿಕ್ಕುವುದಿಲ್ಲ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ವಿದ್ಯಾಭ್ಯಾಸ ಒಂದೇ ಮಟ್ಟದ್ದು, ಆದರೆ ಮೆಡಿಕಲ್‌ಗಿಂತಲೂ ಇಂಜಿನಿಯರಿಂಗ್ ಸ್ವಲ್ಪ ಕಷ್ಟವೆಂದು ನನ್ನ ಅನುಭವದ ಮೇಲೆ ಹೇಳುತ್ತಿದ್ದೇನೆ. ಇವರಿಬ್ಬರದೂ ಒಂದೇ ರೀತಿಯ ವ್ಯಾಸಂಗ, ಮತ್ತು ಅಷ್ಟೇ ದುಬಾರಿ ಕೂಡ. ಆದರೆ, ಇವರು ಸರ್ಕಾರಿ ಕೆಲಸಕ್ಕೆ ಸೇರಿ ಕೆಲವು ವರ್ಷಗಳ ಸೇವೆ ಸಲ್ಲಿಸಿದ ಮೇಲೆ ಇವರಿಗೆ ಸಿಕ್ಕುವುದು ೭೫೦ ರೂಪಾಯಿಗಳ ವೇತನ. ಅದೇ ಮೆಡಿ ಕಲ್‌ನವರು ಕಾಲೇಜಿನಿಂದ ಹೊರಗೆ ಬಂದ ತಕ್ಷಣ ಪಡೆಯುವುದು ೯೦೦ ರೂಪಾಯಿಗಳ ವೇತನ. ಈ ತಾರತಮ್ಯವೇತಕ್ಕೆ ? ಇವರಿಗೆ ಸಂತೃಪ್ತಿಯಾದ ವೇತನ ನೀಡಿದರೆ, ಇವರೂ ಸಂತೃಪ್ತಿಯಾಗಿ ಕೆಲಸ ಮಾಡುತ್ತಾರೆ ಮತ್ತು ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಇವರು ಅಸಂತೃಪ್ತರಾದರೆ, ಇಲಾಖೆಯ ಹೆಸರು ಅಷ್ಟಕ್ಕಷ್ಟೆ. ವಿಧಾನಸೌಧ ಕಟ್ಟುವಾಗ ಇವರಿಗೆ ಒಂದು ರೀತಿಯ ಸಮಾಧಾನವಿತ್ತು, ಇಲ್ಲದಿ ದ್ದರೆ ಇಂತಹ ಭವ್ಯವಾದ ವಿಧಾನಸೌಧವನ್ನು ಕಟ್ಟುವುದಕ್ಕಾಗುತ್ತಿರಲಿಲ್ಲ.

ಇವರಿಗೂ ಕೂಡ ಅದೇ ರೀತಿ ಸಂತೃಪ್ತಿಯಾಗಿ ಇರುವಂಥಾ ವೇತನ ಶ್ರೇಣಿಯನ್ನು ಕೊಟ್ಟಿದ್ದರೆ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ. ಈಗ ಅವರಿಗೆ ಅಷ್ಟು ಸಂತೃಪ್ತಿ ಇಲ್ಲ. ಅದುದರಿಂದ ಈಗ ಅವರಿಗೇನಾ ದರೂ ವಿಧಾನ ಸೌಧದಂತಾ ಕಟ್ಟಡ ಕಟ್ಟಿ ಎಂದು ಹೇಳಿದರೆ ಮಲ್ಟಿ ಸ್ಟೋರೇಡ್ ಬಿಲ್ಡಿಂಗ್ ತರಹ ಕಟ್ಟಡಗಳನ್ನು ಕಟ್ಟುತ್ತಾರೆ. ಮೊದಲು ಅವರಲ್ಲಿ ಏನು ಒಂದು ಸಂತೃಪ್ತಿ ಇತ್ತೋ ಈಗ ಇಲ್ಲವಾಗಿದೆ. ಅದುದರಿಂದ ತಾವು ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥಾ ಇಂಜನೀಯರುಗಳಿಗೆ ವೈದಕೀಯ ವೃತ್ತಿಯಲ್ಲಿ ಕೆಲಸ ಮಾಡತಕ್ಕಂಥಾವರಿಗೆ ಏನು ಒಂದು ವೇತನ ಶ್ರೇಣಿಯನ್ನು ಕೊಟ್ಟಿ ದ್ದೀರೋ ಅದೇರೀತಿಯಲ್ಲಿ ಇವರಿಗೂ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಹೆಚ್ಚು ಸಮಯ ಕೊಟ್ಟಿಲ್ಲವಾದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಲೋಕೋಪಯೋಗಿ ಇಲಾಖೆಯಲ್ಲಿ ಒಟ್ಟು ೪೪೦ ಕೋಡ್‌ಗಳಿವೆ ಅದರಲ್ಲಿ ಕೆಲವೊಂದು ಮಾತ್ರ ೭-೮ ಮಾತ್ರ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ನನ್ನ ಭಾಷಣವನ್ನು ಮುಗಿಸುತ್ತೇನೆ.

ಮೊದಲನೆಯದಾಗಿ ಹೇಳುವುದಾದರೆ ರೂಲ್ ನಂಬರ್ ೧೨೫ ರ ಪ್ರಕಾರ ಪ್ರಿಪರೇಷನ್ ಆಫ್ ಪ್ರಾಜೆಕ್ಟ್ ಅಂಡ್ ಟ್ರೈಯಲ್ ಪಿಟ್ಸ್ ಈ ಬಗ್ಗೆ ಏನು ಇದೆ ಅನ್ನುವುದನ್ನು ಹೇಳುತ್ತೇನೆ. ಯಾವುದಾದರೂ ಒಂದು ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಮುಂಚೆ ಒಂದು ಟ್ರಯಲ್ ಪಿಟ್ಸ್‌ಗಳನ್ನು ತೆಗೆದು ಪರೀಕ್ಷೆ ನಡೆಸಬೇಕು. ಸ್ವಾಮಿ, ತಾವು ೧೪ ವರ್ಷಗಳಿಂದ ಈ ಇಲಾಖೆಯ ಮಂತ್ರಿಗಳಾಗಿದ್ದೀರಿ. ಯಾವುದಾದರೂ

ಒಂದು ಯೋಜನೆಗೇ ಆಗಲಿ ಅಥವಾ ಒಂದು ರಸ್ತೆ ಯೋಜನೆಗೇ ಆಗಲಿ ಆ ಮಣ್ಣನ್ನು ಪರೀಕ್ಷೆ ಮಾಡಿ ಆ ಯೋಜನೆಯನ್ನು ಸಿದ್ಧಪಡಿಸಿದ್ದೀರಾ ? ಈ ಲೋಕೋಪಯೋಗಿ ಇಲಾಖೆಯಲ್ಲಿ ಮಣ್ಣಿನ ಪರೀಕ್ಷೆ ಮಾಡಿ ಸಂವುದು ಯಾವಗಾ ಎಂದರೆ ಒಂದು ಅಂದಾಜುನ್ನು ತಯಾರು ಮಾಡುವುದಕ್ಕೆ ಮುಂಚಿತವಾಗಿ ಮಾಡುವುದಿಲ್ಲ. ಅದರ ಬಗ್ಗೆ ಯಾವುದಾದರೂ ಕಾಮಗಾರಿಯನ್ನು ಕಂಟ್ರಾಕ್ಟರಿಗೆ ಕೊಟ್ಟಾದ ಮೇಲೆ ಆ ಮಣ್ಣನ್ನು ಪರೀಕ್ಷೆ ಮಾಡುತ್ತಾರೆ. ಏತಕ್ಕೆ ಮೊದಲೇ ಈ ಮಣ್ಣನ್ನು ಪರೀಕ್ಷೆ ಮಾಡುವುದಿಲ್ಲಾ ? ಮೊದಲೇ ಮಣ್ಣಿನ ಪರೀಕ್ಷೆ ಮಾಡಿದರೆ ಈ ಕಂಟ್ರಾಕ್ಟರಿಗೆ ಯಾವ ಲಾಭವೂ ಬರುವುದಿಲ್ಲ ಎಂದು ಈ ರೀತಿ ಮಾಡುತ್ತಾರೆ. ಉದಾಹರಣೆಗೆ ಯಾವುದಾದರೂ ಒಂದು ಕಾಮಗಾರಿಯನ್ನು ಕಂಟ್ರಾಕ್ಟರಿಗೆ ಕೊಡಬೇಕಾದರೆ ಮೊದಲು ಮಣ್ಣಿನ ಪರೀಕ್ಷೆ ನಡೆಸದೇ ಟೆಂಡರ್ ಕರೆದುಬಿಡುತ್ತಾರೆ. ಆ ಕಂಟ್ರಾಕ್ಟರ್ಸ್ ಆ ಸಂದರ್ಭದಲ್ಲಿ ಒಂದು ದರವನ್ನು ನಮೂದು ಮಾಡಿಬಿಡುತ್ತಾನೆ, ಆ ಪ್ರಕಾರವಾಗಿ ಅವನಿಗೆ ಕೊಟ್ಟುಬಿಡುತ್ತಾರೆ. ನಂತರ ಅವನು ಶುರು ಮಾಡಿದಾಗ ಅಲ್ಲಿ ಹಾರ್ಡ್ ರ್‍ಯಾಕ್ ಏನಾದರೂ ಸಿಕ್ಕಿದರೆ ಆವಾಗ ಅವನು ಅದಕ್ಕೆ ಒಂದು ರೇಟ್ ಹಾಕಬಹುದು, ಇಲ್ಲವೇ ಏನಾದರೂ ಸಾಫ್ಟ್ ರ್‍ಯಾಕ್ ಸಿಕ್ಕಿದರೆ ಅದಕ್ಕೆ ಒಂದು ತರಹ ರೇಟ್ ಹಾಕಬಹುದು. ಒಂದುವೇಳೆ ಇಲಾಖೆಯವರು ಆ ಮಣ್ಣನ್ನು ಪರೀಕ್ಷೆ ಮಾಡಿಕೊಟ್ಟಿದ್ದೆ ಆದರೆ ಆ ಕಂಟ್ರಾಕ್ಟರ್ಸ್ ಯಾವ ರೀತಿಯಾಗಿಯೂ ಕೂಡ ಅವನ್ನು ಹಾಕಿದಂಥಾ ದರವನ್ನು ಬದಲಾಯಿಸಿಕೊಳ್ಳುವುದಕ್ಕಾಗುವುದಿಲ್ಲ. ಈರೀತಿ ಮಾಡುವುದರಿಂದ ಆ ಕಂಟ್ರಾಕ್ಟರ್ ಆಗಾಗ್ಗೆ ತನ್ನ ದರವನ್ನು ಬದಲಾಯಿಸಿಕೊಳ್ಳುವುದಕ್ಕೆ ಸಾಧ್ಯ ಇದೆ. ಈ ಲೋಕೋಪಯೋಗಿ ಇಲಾಖೆಯ ಒಂದು ನಿಯಮಾವಳಿಯಲ್ಲಿರುವ ರೂಲ್ ೧೨೫ ರ ಪ್ರಕಾರ ಮೊದಲು ಮಣ್ಣನ್ನು ಪರೀಕ್ಷೆ ಮಾಡಿ ನಂತರ ಅದನ್ನು ಕಂಟ್ರಾಕ್ಟರ್‌ಗೆ ಕೊಟ್ಟರೆ ದರ ಹೆಚ್ಚಾಗಿ ಆಗುವುದಿಲ್ಲ. ಹೀಗಿದ್ದರೂ ಕೂಡ ಈವೊತ್ತು ಆರೀತಿ ಕೆಲಸ ಮಾಡುತ್ತಾ ಇಲ್ಲ. ಆದುದರಿಂದ ನಾನು ಕೇಳುತ್ತೇನೆ. ಏತಕ್ಕೆ ಈ ರೂಲ್ ಇಟ್ಟುಕೊಂಡಿದ್ದೀರಾ ಎಂದು, ತಾವು ಮೊದಲೇ ಏತಕ್ಕೆ ಮಣ್ಣನ್ನು ಪರೀಕ್ಷೆ ಮಾಡಿಸುತ್ತಿಲ್ಲಾ ಎಂದು ಕೇಳುತ್ತೇನೆ.

ಇನ್ನು ನಿಯಮಾವಳಿ ೧೩೭ ರ ಪ್ರಕಾರ ಎಸ್ಟಿಮೇಟ್ ಅಂದಾಜುಗಳನ್ನು ಖರಾರುವಾಕ್ಕಾಗಿ ಕೊಡಬೇಕು ಅಂತ ಇದೆ. ಈ ಪ್ರಕಾರ estimate should be correct and it should be exact to the actual quantities ಇರಬೇಕು ಮೊದಲೇ ಇದರ ಬಗ್ಗೆ ನಕ್ಷೆ ಮತ್ತು ಒಂದು ಅಂದಾಜುಗಳು ಇರುತ್ತವೆ ಹೀಗೆಲ್ಲಾ ಇದ್ದರೂ ಕೂಡ ಈ ಬಗ್ಗೆ ಒಂದು ಅಂದಾಜನ್ನು ತಯಾರು ಮಾಡಿದ ಮೇಲೆ ಕ್ವಾಂಟಿಟೀಸ್‌ನ್ನು ಛೇಂಜ್ ಮಾಡುತ್ತೀರಿ. ಕ್ವಾಂಟಿಟೀಸ್ ಅನ್ನು ಬದಲಾವಣೆ ಮಾಡಿ ಅವನಿಗೆ ಲಾಭ ಬರುವ ಹಾಗೆ ಮಾಡುವುದಕ್ಕೆ ಅವನಿಗೆ ಆ ಕೆಲಸ ಸಿಗುವ ಹಾಗೆ ಮಾಡುವುದಕ್ಕೆ ಏನಾದರೂ ಮಾಡುತ್ತೀರಿ. ಅದಕ್ಕೆ ನಾನು ಹೇಳುವುದು ಏನೆಂದರೆ ಈ ಬಗ್ಗೆ . ಇರತಕ್ಕಂಥಾ ನಿಯಮಾವಳಿ ಕರೆಕ್ಟ್ ಆಗಿದ್ದರೂ ಕೂಡ ತಾವು ಈ ಬಗ್ಗೆ ಒಂದು ಅಂದಾಜನ್ನು ಖರಾರುವಾಕ್ಕಾಗಿ ಮಾಡುವುದಕ್ಕೆ ತೊಂದರೆ ಏನು ಇದೆ, ಅದನ್ನು ಏಕೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ತಾವು ಮೊದಲೇ ಒಂದು ಆಜ್ಞೆಯನ್ನು ಹೊರಡಿಸಿ ಏನಂತ ಅಂದರೆ ಈ ೧೩೭ ರ ಒಂದು ನಿಯಮಾವಳಿ ಪ್ರಕಾರ ಯಾರು ಈ ಬಗ್ಗೆ ಅಂದಾಜನ್ನು ಖರಾರುವಾಕ್ಕಾಗಿ ಕೊಡುವುದಿಲ್ಲವೋ ಅಂಥಾವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಅಂತ ಮಾಡಿದರೆ ಆವಾಗ ಆ ಅಧಿಕಾರಿಗಳಿಗೆ ಭಯ ಬಂದು ಇಂಜನೀಯರುಗಳು ನಮ್ಮನ್ನು ಎಲ್ಲಿ ಹಿಂಬಡ್ತಿ ಮಾಡುತ್ತಾರೋ ಎಂದು ತಿಳಿದು ಖರಾರುವಾದ ಎಸ್ಟಿಮೇಟ್ಸ್‌ಗಳನ್ನು ಸರ್ಕಾರಕ್ಕೆ ಕಳುಹಿಸುವ ಹಾಗೆ ಮಾಡುತ್ತಾರೆ. ಇದರಿಂದ ಸರ್ಕಾರಕ್ಕೂ ಕೂಡ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ಆದುದರಿಂದ ಈ ಬಗ್ಗೆ ನಾನು ಹೇಳುವುದೇನೆಂದರೆ ಯಾರೂ ಕೂಡ ಈ ನಿಯಮಾವಳಿ ಪ್ರಕಾರ ಪರಿಪಾಲಿಸುತ್ತಾ ಇಲ್ಲ ಎಂದು ಹೇಳುತ್ತೇನೆ. ಪ್ರತಿಯೊಂದು ಕಾಮಗಾರಿಗೂ ಕೂಡ ಒಂದು ಯೋಜಿತವಾದ ಸ್ಥಳವನ್ನು ಗರುತಿಸಬೇಕು. ಎಷ್ಟೋ ಕಡೆ ಈ ಯೋಜಿತವಾದ ಸ್ಥಳವನ್ನು ಗುರುತಿಸದೆ, ಸಲೆಕ್ಷನ್ ಆಫ್ ಸೈಟ್‌ನ್ನು ಗುರುತಿಸದೇ ಈ ಕಾಮಗಾರಿ ಕೆಲಸವನ್ನು ಕೊಟ್ಟಿದ್ದಾರೆ. ೧೯೬೪ ರಿಂದ ೧೯೬೭ ರವರೆಗೂ ಕೂಡ ತಾವು ಕೊಟ್ಟಿರುವಂಥಾ ಈ ಒಂದು ಆನ್ಯೂಯಲ್ ರಿಪೋರ್ಟ್‌ನ್ನು ನೋಡಿದರೆ ಗೊತ್ತಾಗುತ್ತದೆ. ಈ ಬಗ್ಗೆ ತಮಗೆ ಒಂದು ಉದಾಹರಣೆ ಹೇಳುವುದಾದರೆ ಕೃಷ್ಣರಾಜಪುರದಲ್ಲಿ ಪೋಲೀಸ್ ಕ್ವಾರ್ಟರ್ಸ್ ಅನ್ನು ಕಟ್ಟಬೇಕೆಂದು ಯೋಜನೆ ಮಾಡಿದಿರಿ. ಅಲ್ಲಿ ಸರಿಯಾದ ಸ್ಥಳವೇ ಇಲ್ಲ. ಯಾರಿಗೋ ಒಬ್ಬರಿಗೆ ಅಲ್ಲಿ ಕೆಲಸಕ್ಕಾಗಿ ಕಂಟ್ರಾಕ್ಟನ್ನೂ ಕೊಟ್ಟುಬಿಟ್ಟಿರಿ. ಅವನಿಗೆ ಸ್ಥಳವನ್ನೇ ತೋರಿಸಲಿಲ್ಲಾ. ಅವನು ಯಾವುದೋ ಒಂದು ಸ್ಥಳದಲ್ಲಿ ಪೋಲಿಸ್ ಕ್ವಾರ್ಟರ್ಸ್ ಕಟ್ಟಬೇಕೆಂದು ಮಣ್ಣನ್ನು ತೋಡಿಸುವುದಕ್ಕೆ ಶುರು ಮಾಡಿದನು ಅಲ್ಲಿಗೆ ಇನ್ನೊಬ್ಬ ಅವನಿಗೆ ಒಂದು ನೋಟಿಸ್ ಕೊಟ್ಟು ಏನಂತ ಅಂದರೆ ನನ್ನ ಸೈಟಿನಲ್ಲಿ ಇವನ್ನು ಕೆಲಸ

ಮಾಡುತ್ತಿದ್ದಾನೆ ಎಂದು. ಅವನು ಆ ಕೆಲಸವನ್ನು ಅಲ್ಲಿಗೇ ಬಿಟ್ಟ. ಈವೊತ್ತಿನವರೆಗೂ ಕೂಡ ಅದಕ್ಕೆ ಸೈಟು ಯಾವುದು ಎಂಬುದನ್ನು ಇನ್ನೂ ನಗದಿ ಮಾಡಿಲ್ಲಾ. ಈರೀತಿಯಾಗಿ ೧೯೭೬ ರಿಂದ ೧೯೭೮ ರವರೆಗೂ ಕೂಡ ಅಲ್ಲಲ್ಲಿ ಆಗಿದೆ. ಇದರಲ್ಲಿ ಒಂದು ವಿಶೇಷ ಏನೆಂದರೆ ಈ ೧೦ ವರ್ಷದ ಪ್ರಗತಿಯಲ್ಲಿ ಇವರು ಏನು ಮಾಡಿದ್ದಾರೆ ಎಂದರೆ ಮುಖ್ಯವಾಗಿ ಮಾಡಿರುವುದು ಯಾವುದಾದರೂ ಕೆಲಸವನ್ನು ಶುರು ಮಾಡಿದರೆ ಮೊದಲು ಒಂದು ದರ ಇರುತ್ತದೆ ಆನಂತರ ಅದನ್ನು ರಿವೈಸ್ ಮಾಡಿ ಇನ್ನೊಂದು ದರವನ್ನು ಕೊಡುವುದು. ಈರೀತಿಯಾಗಿ ರಿವೈಸ್ಡ್ ಎಸ್ಟಿಮೇಟ್ ಒಂದು ನಡೆಯುತ್ತಾ ಇದೆ. ತಮಗೆ ಮೊದಲೇ ಹೇಳಿದಂತೆ ಈ ಒಂದು ಕೆಲಸಕ್ಕೆ ೧೩ ಲಕ್ಷ ರೂಪಾಯಿ ಎಸ್ಟಿಮೇಟ್ ಅನ್ನು ರಿವೈಸ್ ಮಾಡಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಕೆಲಸ ಇನ್ನೂ ಶುರುವಾಗೇ ಇಲ್ಲಾ ಆ ಪೋಲೀಸಿನವರು ಇನ್ನೂ ಕೂಡ ಆ ಮನೆಯಲ್ಲಿ ಇದ್ದಾರೆ. ಅವರ ತೊಂದರೆ ನಿವಾರಣೆಯಾಗಲಿಲ್ಲಾ. ಎಸ್ಟಿಮೇಟ್ ಮಾತ್ರ ರಿವೈಸ್ ಆಯಿತು. ಹೀಗಾದರೆ ಈ ಇಲಾಖೆಯನ್ನು ನಡೆಸುವುದು ಹೇಗೆ ಎಂದು ನಾನು ಕೇಳುತ್ತೇನೆ.

ಇನ್ನು ಪ್ರೋಗ್ರೆಸ್ ರಿಪೋರ್ಟ್ ಬಗ್ಗೆ ಹೇಳುವುದಾದರೆ ಯಾವ ಒಂದು ಕಾಮಗಾರಿಯನ್ನಾಗಲಿ ಅಥವಾ ಯಾವ ಒಂದು ಕಟ್ಟಡದ ಕೆಲಸವಾಗಲಿ ಸಮಯಕ್ಕೆ ಸರಿಯಾಗಿ ಕಟ್ಟುತ್ತಾ ಇಲ್ಲಾ. ತಾವು ಇದರಲ್ಲಿ ಏನು ನ್ಯೂನತೆ ಇದೆ, ಎನ್ನುವುದನ್ನು ಪರಿಶೀಲಿಸಿ ಕಂಡುಹಿಡಿಯಬೇಕು. ಸುಮಾರು ೧೦೦ಕ್ಕೆ ೯೦ ರಷ್ಟು ಕಾಮಗಾರಿಗಳ ಕೆಲಸವನ್ನು ಅದರ ಟೈಂ ಅನ್ನು ಎಕ್ಸ್‌ಟೆಂಡ್ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಇದರಲ್ಲಿ ಸಾಮಾನ್ಯವಾಗಿ ಫೈನಾಶಿಯಲ್ ಪ್ರೋಗ್ರೆಸ್ ಏನೂ ಇರುವುದಿಲ್ಲಾ. ಸಾಮಾನ್ಯವಾಗಿ ಫಸ್ಟ್ ಸ್ಟೇಜ್‌ನಲ್ಲಿ ಮತ್ತು ಸೆಕೆಂಡ್ ಸ್ಟೇಜ್‌ನಲ್ಲಿ ಅವನಿಗೆ ಹಣವನ್ನು ಕೊಟ್ಟುಬಿಡುತ್ತಾರೆ. ಕೊನೆಯಲ್ಲಿ ಫೈನಲ್ ಸ್ಟೇಜ್ ಬಂದಾಗ ಆ ಕೆಲಸ ನಿದಾನವಾದರೆ ಆಗ ದಂಡ ಹಾಕುವ ಪರಿಸ್ಥಿತಿ ಬರುತ್ತದೆ. ಈ ನಿಯಮಾವಳಿಯ ೧೬೩ ರಲ್ಲಿ ಸ್ಪಷ್ಟವಾಗಿ ಕೊಟ್ಟಿದೆ. ಏನು ಕೊಟ್ಟಿದೆ ಎಂದರೆ Sub-divisional Officer should measure the works every fortnightly or in a month and report the financial progress ಎಂದು. ಆದರೆ ಇವರು ತಿಂಗಳಿಗೊಂದು ಸಾರಿ ಯಾವರೀತಿ ಪ್ರೋಗ್ರೆಸ್ ರಿಪೋರ್ಟ್ ಕಳುಹಿಸುತ್ತಾರೆ ಎಂದರೆ foundation work has started, building has reached little level, building has reached ventilation level building has reached the roof level etc., ಈರೀತಿಯಾಗಿ ಕಳುಹಿಸುತ್ತಾರೆ. ಈ ರೀತಿಯಾದಂಥಾ ರಿಪೋರ್ಟ್‌ನ್ನು ನಮ್ಮ ಊರಿನಲ್ಲಿರುವ ಒಬ್ಬ ನೀರುಗಂಟಿಯನ್ನು ಕೇಳಿದರೂ ಸಹ ಹೇಳಿಬಿಡುತ್ತಾನೆ. ಆ ಊರಿನ ಛೇರ್ಮನ್ ಅವನನ್ನು ಅಲ್ಲಿ ಏನು ಕೆಲಸ ನಡೆದಿದೆ ಎಂದು ಕೇಳಿದರೆ ಅವನು ಈ ರೀತಿಯಾಗಿ ಅಲ್ಲಿ ಪಾಯ ಹಾಕಿದೆ. ಬಿಲ್ಡಿಂಗ್ ವೆಂಟಿಲೇಷನ್ ಲೆವಲ್‌ಗೆ ಬಂದಿದೆ, ರೂಫ್ ಲೆವಲ್‌ಗೆ ಬಂದಿದೆ ಅಂತ ಹೇಳಿಬಿಡುತ್ತಾನೆ. ನಾನು ಕೇಳುವುದೇನೆಂದರೆ ಇದರಲ್ಲಿ ಟೆಕ್ನಿಕಲ್ ಫೀಸಬಿಲಿಟೀಸ್ ಏನು ಇದೆ ಮತ್ತು ಫೈನಾಷಿಯಲ್ ಪ್ರೋಗ್ರೆಸ್ ಏಷ್ಟಾಗಿದೆ ಅನುವುದನ್ನು ಏತಕ್ಕೆ ಸೂಚಿಸಿಲ್ಲಾ ಎಂದು. ಇದರಲ್ಲಿ ಅವರು ಏನಾದರೂ ೪೦ ಲಕ್ಷ ರೂಪಾಯಿ ಕೆಲಸ ಏನಾದರೂ ತೆಗೆದುಕೊಂಡರೆ ಅದರಲ್ಲಿ ೫ ಲಕ್ಷ ರೂಪಾಯಿ ಅಷ್ಟು ಕೆಲಸವಾಗಿದೆಯೋ ಅಥವಾ ೧/೮ ಭಾಗದಷ್ಟು ಕೆಲಸವಾಗಿದೆಯೋ ಅದನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಈವೊತ್ತಿನ ದಿವಸ ಆ ರೀತಿ ಇಲ್ಲಾ. ಬರೇ ಅವ್ಯವಸ್ಥಿತವಾದ ಪ್ರೋಗ್ರೆಸ್ಸ್ ರಿಪೋರ್ಟ್‌ನ್ನು ಕಳುಹಿಸುವುದಾದರೆ ಏನು ಪ್ರಯೋಜನ ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಈ ಬಿಲ್ಡಿಂಗ್ ಬಗ್ಗೆ ಒಂದು ಪಟ್ಟಿ ಕೊಟ್ಟಿದ್ದೀರಿ. ಇದರಲ್ಲಿ ೬೨ ಕೆಲಸಗಳದ್ದು ಇದೆ. ಇದರಲ್ಲಿ ಯಾವುದು ಮುಗಿದಿದೆ ಯಾವುದು ಮುಗಿದಿಲ್ಲ ಎನ್ನುವುದು ಒಂದೂ ಗೊತ್ತಾಗುವುದಿಲ್ಲಾ. ಇಂತಹ ಒಂದು ಪ್ರೋಗ್ರೆಸ್ ರಿಪೋರ್ಟ್‌ನ್ನು ಕೊಟ್ಟರೆ ಅದರ ಮೇಲೆ ನಾವು ಹೇಗೆ ಚರ್ಚೆ ಮಾಡುವುದಕ್ಕಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

(MR. CHAIRMAN SRI VEERAPPA MOILY in the Chair)

ಇನ್ನೊಂದು ವಿಚಾರ ಏನಂದರೆ ಡಿಪಾರ್ಟ್‌ಮೆಂಟಿನವರೇ ಈ ಕಾಮಗಾರಿಯ ಕೆಲಸವನ್ನು ತೆಗೆದು-ಕೊಳ್ಳುವುದಾದರೆ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲಾ. ಇಲಾಖೆಯವರು ಯಶಸ್ವಿಯಾಗಿ ಕೆಲಸ ಮಾಡಿದರೆ ಕಂಟ್ರಾಕ್ಟರ್ಸನ್ನೂ ತೆಗೆದು ಅವರೇ ಮಾಡಬಹುದು. ಇದು ರೂಲ್ ನಂಬರ್ ೧೬೨ ರಲ್ಲಿ ಇದೆ ಎಂದು ಹೇಳುತ್ತೇನೆ. ಡಿಪಾರ್ಟ್‌ಮೆಂಟಿನಲ್ಲಿ ಈ ವರ್ಕ್ ಅನ್ನು ಪೀಸ್‌ವರ್ಕ್ ಬೇಸಿಸ್ ಮೇಲೆ ಮಾಡಬೇ-ಕಾದರೆ ಈ ರೂಲ್ ಪ್ರಕಾರ ಏನಿದೆ ಎಂದರೆ whenever there is response to the tender notification the rates quoted by the agency are too high ಆವಾಗ

ಅವರೇ ಮಾಡಬಹುದು ಅಂತ ಇದೆ. ನೀವು ಟೆಂಡರ್ ಕರೆದು ಕೊಡಿ ಅಥವಾ ಟೆಂಡರ್ ಕರೆಯದೇ ಕೊಡಿ ಅದು ನಮಗೆ ಬೇಕಾಗಿಲ್ಲಾ. ತಮಗೆ ಒಂದು ಉದಾಹರಣೆ ಹೇಳ ಬೇಕಾದರೆ ನಮ್ಮ ಲೆಜಿಸ್ಲೇಚರ್ ಹೋಂ ಅನ್ನು ಫಸ್ಟ ಸ್ಟೇಜ್‌ನಲ್ಲಿ ಕಟ್ಟಬೇಕಾದರೆ ಮೊದಲು ಎಸ್ಟಿಮೇಟ್‌ಗಿಂತ ಸುಮಾರು ೫೦ ಪರ್ಸೆಂಟ್ ಜಾಸ್ತಿ ರೇಟ್ ಮಾಡಿ ಹಾಕಿ ಡಿಪಾರ್ಟ್‌ಮೆಂಟಿನವರೇ ಕಟ್ಟಿದರು. ನಂತರ ಎರಡನೇ ಸ್ಟೇಜು ಕಟ್ಟಬೇಕಾದರೆ ನಿಮ್ಮ ಇಲಾಖೆಯವರೇ ಅದನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟರು. ಆ ಒಂದು ಅಂದಾಜು ಮೊದಲಿನ ಒಂದು ಎಸ್ಟಿಮೇಟ್‌ಗಿಂತ ಶೇಕಡಾ ೧೬ ರಷ್ಟು ಹೆಚ್ಚಿನ ದರವನ್ನು ಹಾಕಿ ಅದನ್ನು ಮುಗಿಸಿದರು. ನಂತರ ಈಗ ಮೂರನೇ ಸ್ಟೇಜನ್ನು ಕಟ್ಟುವುದಕ್ಕೆ ನಿಮ್ಮ ಇಲಾಖೆಯವರೇ ತೆಗೆದುಕೊಂಡಿದ್ದಾರೆ. ನಾನು ಈ ಬಗ್ಗೆ ಕೇಳುವುದೇನೆಂದರೆ ಮೊದಲು ನಿಮ್ಮ ಇಲಾಖೆಯವರು ಈ ಕೆಲಸ ತೆಗೆದುಕೊಂಡಾಗ ಮೊದಲಿನ ಎಸ್ಟಿಮೇಟ ಗೂ ಆನಂತರದ ಎಸ್ಟಿಮೇಟ್‌ಗೂ ೫೦ ಪರ್ಸೆಂಟ್ ಜಾಸ್ತಿ ಆಯಿತು. ನಂತರ ಎರಡನೇ ಸ್ಟೇಜನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಾಗ ೧೬ ಪರ್ಸೆಂಟ್ ಜಾಸ್ತಿ ಆಗಿದೆ. ಮತ್ತೆ ೩ ನೇ ಸ್ಟೇಜನ್ನು ನಿಮ್ಮ ಇಲಾಖೆಯವರೇ ತೆಗೆದುಕೊಂಡಿದ್ದಾರೆಲ್ಲಾ ಇದಕ್ಕೆ ಕಾರಣ ಏನು ಅನುವುದನ್ನು ಕೇಳುತ್ತೇನೆ ಈ ೩ನೇ ಹಂತವನ್ನು ನಿಮ್ಮ ಇಲಾಖೆಯವರೇ ಕಟ್ಟಿ ಮುಗಿಸುತ್ತಾರೆಯೇ ಅನ್ನುವುದು ನನ್ನ ಪ್ರಶ್ನೆ. ಏತಕ್ಕೆಂದರೆ ಎರಡನೇ ಹಂತವನ್ನು ಒಬ್ಬ ಕಂಟ್ರಾಕ್ಟರ್ ಕಟ್ಟುವುದಕ್ಕೆ ಕೊಡಲು ಇಲಾಖೆಯವರಿಗೆ ಬಂದಂಥಾ ತೊಂದರೆಗಳನ್ನು? ಮೊದಲನೇ ಸ್ಟೇಜನ್ನು ಇಲಾಖೆಯವರೇ ಕಟ್ಟಿಸಿದ್ದಾಗ ಆವಾಗ ಸ್ವಲ್ಪ ನಷ್ಟವನ್ನು ಹೊಂದಿದ್ದಾರೆ. ಹೀಗಿರುವುದರಿಂದ ಈ ೩ ನೇ ಸ್ಟೇಜ್‌ನ್ನು ಕಟ್ಟುವಾಗ ಏನಾದರೂ ತೊಂದರೆ ಯಾದೀತು ಎಂದು ನನ್ನ ಒಂದು ಕಳಂಕ. ಇಲಾಖೆಯವರೇ ನಷ್ಟವಿಲ್ಲದೇ ಇರುವ ಹಾಗೆ ಮಾಡಿದರೆ ಬಹಳ ಸಂತೋಷ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ ಮೊದಲಿನ ಎರಡು ಸ್ಟೇಜ್‌ಗಳಲ್ಲಿ ತಾರತಮ್ಯ ಇರುವುದರಿಂದ ಮತ್ತು ಈ ೩ ನೇ ಸ್ಟೇಜಿನ ಕೆಲಸವನ್ನು ಮಾಡುವುದಕ್ಕೆ ತೆಗೆದುಕೊಂಡಿದ್ದಾರಲ್ಲಾ ಇವರು ಯಾವ ಒಂದು ಕ್ವಾಲಿಫಿಕೇಷನ್ ಇಟ್ಟುಕೊಂಡು ಈ ಕೆಲಸ ಮಾಡುತ್ತಿದ್ದಾರೆ ಅನ್ನುವುದನ್ನು ನಾನು ಕೇಳುತ್ತೇನೆ. ನನಗೆ ಈ ಬಗ್ಗೆ ಕೇಳುವುದಕ್ಕೆ ಹಕ್ಕು ಇರುವುದರಿಂದ ಕೇಳುತ್ತಿದ್ದೇನೆ. ದಯವಿಟ್ಟು ತಾವು ಇದಕ್ಕೆ ಉತ್ತರ ಕೊಡುವಾಗ ಹೇಳಬೇಕು ಎದು ಕೇಳುತ್ತೇನೆ.

ಆಮೇಲೆ ತಾವು ಕೆಲವು ಕೆಲಸಗಳಲ್ಲಿ ಡಿಪಾರ್ಟ್‌ಮೆಂಟಲ್ ಅಗಿ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಬೆಂಗಳೂರು ನಗರದ ನೃಪತುಂಗ ರಸ್ತೆಯಲ್ಲಿರುವ ಒಂದು ಕಟ್ಟಡವನ್ನು ತಾವು ಮೊದಲು ಡಿಪಾರ್ಟ್‌ಮೆಂಟ್‌ನಿಂದಲೇ ತೆಗೆದುಕೊಂಡು ಎಕ್ಸಕ್ಯೂಟ್ ಮಾಡಿದಿರಿ. ಮಾಡಿದ ನಂತರ ಫೌಂಡೇಷನ್ ಸ್ಟೇಜಿನಲ್ಲಿ, ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಯಾರೋ ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿರಿ. ಇದ್ದಕ್ಕಿದ ಹಾಗೆ ಡಿಪಾರ್ಟ್‌ಮೆಂಟಿಗೆ ಶಕ್ತಿ ಎಲ್ಲಿಂದ ಬರುತ್ತದೆ ? ಬಂದ ಶಕ್ತಿ ಎಲ್ಲಿಗೆ ಹೋಗುತ್ತದೆ ? ನಮಗೆ ಕೆಲಸ ಮಾಡುವುದು ಬೇಡ ಎನ್ನುವ ಪರಿಸ್ಥಿತಿಯಲ್ಲಿದ್ದಾಗ ೩೬ ಪರ್ಸೆಟ್ ಕೋಟ್ ಮಾಡಿರುವವರಿಗೆ ಕೊಟ್ಟು, ಮತ್ತೆ ೧೬ ಪರ್ಸೆಂಟ್‌ನಲ್ಲಿ ಇಲಾಖೆಯವರೇ ಮಾಡುತ್ತೇವೆಂದು ಹೇಳುವುದಕ್ಕೆ ಕಾರಣ-ಗಳೇನು ಸ್ವಾಮಿ ? ಕೃಷ್ಣರಾಜಪುರದ ಪೋಲೀಸ್ ಸ್ಟೇಷನ್ ಕಟ್ಟಡದ ಕೆಲಸವನ್ನು ಹಿಂದಿನ ಲೋಕೋಪಯೋಗಿ ಸಚಿವರು ಕಂಟ್ರಾಕ್ಟದಾರರಿಗೆ ಕೊಡಬೇಡಿ ಡಿಪಾರ್ಟಮೆಂಟಿನಿಂದಲೇ ಮಾಡಿ ಎಂದು ಹೇಳಿದರು ಇದನ್ನು ನೀವು ಏಕೆ ತೆಗೆದುಕೊಳ್ಳಲಿಲ್ಲ? ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಇರತಕ್ಕ ತೊಂದರೆಗಳಾದರೂ ಏನು ? ಒಂದು ಕಡೆ ಡಿಪಾರ್ಟಮೆಂಟ್‌ನವರು ಕೆಲಸವನ್ನು ತೆಗೆದುಕೊಳ್ಳಿ ಎಂದು ಹೇಳಿದರೂ ತೆಗೆದುಕೊಳ್ಳದೆ ಇರುವುದು, ಇನ್ನೊಂದು ಕಡೆ ಆತುರಾತುರವಾಗಿ ತೆಗೆದುಕೊಳ್ಳುವಂಥ ಪರಿಸ್ಥಿತಿ ಏನು ಬಂತು ? ಇದನ್ನು ತಾವು ಉತ್ತರಿಸುವಾಗ ಸ್ವಲ್ಪ ವಿವರಿಸಬೇಕು.

ಕಂಡೀಷನ್ಸ್ ಆಫ್ ಕಾಂಟ್ರಾಕ್ಟನಲ್ಲಿ ಬಹಳಷ್ಟು ತಪ್ಪುಗಳು ಇವೆ. ಇದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ನನಗೆ ಸಮಯವಿಲ್ಲ. ಆದರೂ ಒಂದರೆಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಅರ್ನೆಸ್ಟ್ ಡಿಪಾಜಿಟ್-ಐದು ಲಕ್ಷ ರೂಪಾಯಿಗಳ ಕೆಲಸಕ್ಕೆ ಎರಡೂವರೆ ಪರ್ಸೆಂಟ್ ಡಿಪಾಸಿಟ್ ಮಾಡಬೇಕು, ಐದು ಲಕ್ಷದಿಂದ ಹತ್ತು ಲಕ್ಷರೂಪಾಯಿಗಳ ಕೆಲಸಕ್ಕೆ ಎರಡು ಪರ್ಸೆಂಟ್, ೧೦ ಲಕ್ಷ ದಿಂದ ೨೦ ಲಕ್ಷ ರೂಪಾಯಿಗಳ ಕೆಲಸಕ್ಕೆ ಒಂದೂವರೆ ಪರ್ಸೆಂಟ್‌ ಮತ್ತು ೨೦ ಲಕ್ಷದ ಮೇಲ್ಪಟ್ಟು ಕೆಲಸಗಳಿಗೆ ಒಂದು ಪರ್ಸೆಂಟ್ ಇದರಲ್ಲಿ ತಾವು ಏನು ಮಾಡುತ್ತಿದ್ದೀರಿ ಎಂದರೆ, ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಅನುಕೂಲ ಮಾಡಿ ಕೊಡುತ್ತಿದ್ದೀರಿ. ಇದೊಂದು ಪರೋಕ್ಷವಾದ ಹಣದ ಸಹಾಯ ಆದರೆ ಸಣ ಕಂಟ್ರಾಕ್ಟರುಗಳಿಂದ ಎರಡೂವರೆ ಪರ್ಸೆಂಟ್ ಅರ್ನೆಸ್ಟ್ ಮನಿ ಡಿಪಾಸಿಟ್ ತೆಗೆದುಕೊಳ್ಳುತ್ತೀರಿ. ಈ ತಾರತಮ್ಯ ಏಕೆ ? ಸಣ್ಣ ಕಂಟ್ರಾಕ್ಟರುಗಳು ಇವತ್ತಿನ ದಿವಸ ಜೀವನ ಮಾಡುವುದೇ ಕಷ್ಟವಾಗಿದೆ. ಇವರಿಗೆ ಜಾಸ್ತಿ ಅರ್ನೆಸ್ಟ್ ಡಿಪಾಸಿಟ್ ತೆಗೆದುಕೊಳ್ಳುವುದು ಎಂಥ ಸಮಾಜವಾದ ನೀತಿ ?

ಕ್ಲಾಸ್—೯ (ಎ) ಇದರ ಪ್ರಕಾರ ೧೦೦ ರೂಪಾಯಿಗಳ ಕೆಲಸಕ್ಕೆ ಷೆಡ್ಯೂಲ್ಡ್ ರೇಟ್ ಪ್ರಕಾರ ೧೨೫ ರೂಪಾಯಿಗಳನ್ನು ನಮೂದು ಮಾಡುತ್ತಾರೋ ಅವರಿಗ ೨೫ ರೂಪಾಯಿಗಳ ಠೇವಣಿಯನ್ನು ಇಟ್ಟುಕೊಳ್ಳುತ್ತೀರಿ. ಬೇರೆಯವರು ೧೨೪-೯೯ ಪೈಸೆಯನ್ನು ಕೊಟ್ಟರೂ ಹಿಡಿಯುವುದಿಲ್ಲ. ಷೆಡ್ಯೂಲ್ಡ್ ಆಫ್ ರೇಟ್ಸ್‌ನಲ್ಲಿ ಏನಾದರೂ ತಪ್ಪುಗಳು ಇದ್ದರೆ ಕಂಟ್ರಾಕ್ಟರಿಗೆ ದಂಡ ಹಾಕುತ್ತೀರಿ. ಇದು ಸ್ಲೋ ಪ್ರೊಸೆಸ್‌ಗೆ ಕಾರಣವಾಗುತ್ತದೆ. ಇದನ್ನು ತಾವು ತೆಗೆದುಹಾಕಬೇಕು ಎಂದು ನಾನು ಈ ಸಮಯದಲ್ಲಿ ಸೂಚನೆಮಾಡುತ್ತೇನೆ.

ಕ್ಲಾಸ್—೧೩. ಇದು ಅಭಾಸ, ಇದರ ಪ್ರಕಾರ ಕೆಲಸಗಳಿಗೆ ಟೆಕ್ನಿಕಲ್ ಸ್ಯಾಂಕ್ಷನ್ ಮಾಡುವುದನ್ನು ಎಸ್ಟಿಮೇಟ್ ಸ್ಯಾಂಕ್ಷನ್ ಮಾಡುವ ಅಧಿಕಾರವನ್ನು ಚೀಫ್ ಎಂಜನಿಯರ್ ಅವರಿಗೆ ಕೊಟ್ಟು ಆದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಸರಿಪಡಿಸುವುದಕ್ಕೆ ಎಕ್ಸಿಕುಟೀವ್ ಇಂಜನಿಯರ್ ಅವರಿಗೆ ಪವರ್ ಕೊಟ್ಟಿದ್ದೀರಿ. ಎಕ್ಸಿಕುಟೀವ್ ಇಂಜನಿಯರ್, ಚೀಫ್ ಇಂಜನಿಯರ್ ಮಾಡಿದ್ದನ್ನು ಏಕೆ ಬದಲಾವಣೆ ಮಾಡಬೇಕು? ಮೇಲಿನ ಅಧಿಕಾರಿ ಮಾಡಿದ್ದನ್ನು ಕೆಳಗಿನ ಅಧಿಕಾರಿ ಸರಿಮಾಡಬಹುದು ಎಂದು ರೂಲ್ಸ್‌ನಲ್ಲಿ ಅವಕಾಶ ಇದ್ದರೆ ಇದು ಎಂಥ ಅಭಾಸ? ಇದಕ್ಕೆ ನಾನು ಒಂದು ಉದಾರಣೆಯನ್ನು ಕೊಡುತ್ತೇನೆ. ಕೆಂಪೇಗೌಡ ರೋಡಿನಲ್ಲಿ ಒಂದು ಕೆಲಸ ನಡೆಯಿತು. ಒಂದು ಸಾವಿರ ಚದರ ಮೀಟರ್ ಬ್ರಿಕ್‌ಪಾರ್ಟಿಷನ್ ವಾಲ್ ಕಟ್ಟುವುದಕ್ಕೆ ಸುಮಾರು ೨ ಲಕ್ಷದ ೩೧ ಸಾವಿರ ರೂಪಾಯಿಗಳ ಕಡಿಮೆ ದರವನ್ನು ಕೋಟ್ ಮಾಡಿ ಕೆಲಸ ನಡೆಯುತ್ತದೆ. ಆದರೆ ಯಾರಿಗೂ ಗೊತ್ತಿಲ್ಲದೆ ಐಟಂಗಳನ್ನು ಚೇಂಜ್ ಮಾಡಿ ಬ್ರಿಕ್ ಪಾರ್ಟಿಷನ್ ಇದ್ದುದನ್ನು ಟೀಕ್ ವುಡ್ ಪಾರ್ಟಿಷನ್ ಮಾಡಿಸೋಣ ಎಂದು ೪೦೦ ಚದರ ಮೀಟರ್‌ಗೆ ಅಳತೆಯಾಗಿ ಯಾರಿಗೂ ಗೊತ್ತಿಲ್ಲದಂತೆ ಪೇಮೆಂಟ್ಸ್ ಸಹ ಆಗಿದೆ. ಇದರಿಂದ ಸರ್ಕಾರಕ್ಕೆ ಚದರ ಮೀಟರ್ ಒಂದಕ್ಕೆ ೩೯೮ ರೂಪಾಯಿಗಳಂತೆ ಹಣ ಲಾಸ್ ಆಗಿದೆ.

ಆ ಮೇಲೆ ಪದವೀಧರ ನಿರುದ್ಯೋಗಿಗಳ ವಿಚಾರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ೧೦ ಲಕ್ಷ ರೂಪಾಯಿಗಳ ಮೇಲ್ಪಟ್ಟು ಕೆಲಸವಿರುವಂಥ ಕಂಟ್ರಾಕ್ಟರು ಇಬ್ಬರುಇಂಜನಿಯರುಗಳನ್ನು ನೇಮಕ ಮಾಡಿಕೊಳ್ಳಬೇಕು, ಕಡಿಮೆ ಕೆಲಸ ಇರುವಂಥ ಕಂಟ್ರಾಕ್ಟರುಗಳು ಒಬ್ಬರನ್ನು ಕೆಲಸದಲ್ಲಿ ತೆಗೆದುಕೊಳ್ಳ ಬೇಕು ಎಂದು ರೂಲ್ ೧೯ರ ಪ್ರಕಾರ ನಿಯಮ ಇದೆ. ಇದರಂತೆ ಯಾರೂ ಮಾಡುವುದಿಲ್ಲ. ಇಲಾಖೆ ಯವರೂ ಸಹ ಇದನ್ನು ಇನ್‌ಸಿಸ್ಟ್ ಮಾಡುವುದಿಲ್ಲ, ನಮ್ಮ ಇಂಜನಿಯರುಗಳಿಗೆ ಕರ್ನಾಟಕದಲ್ಲಿ ಒಳ್ಳೆಯ ಹೆಸರು ಇದೆ. ಪ್ರತಿಯೊಬ್ಬ ಕಂಟ್ರಾಕ್ಟರುಗಳು ಬಿಲ್ಲಿನಲ್ಲಿ ಶೇಕಡ ೦.೧ ರೂಪಾಯಿಗಳನ್ನು ಹಿಡಿದರೆ ಯಾರೂ ಗಲಾಟೆ ಮಾಡುವುದಿಲ್ಲ. ಸುಮಾರು ೩ ಕೋಟಿ ರೂಪಾಯಿಗಳು ಬರುತ್ತದೆ. ಈ ಮೂರು ರೂಪಾಯಿಂಗಳನ್ನು ೭೫೦೦ ಇಂಜನಿಯರುಗಳಿಗೆ ವಾರ್ಷಿಕ ಸ್ಟೈಪೆಂಡ್ ಕೊಡಬಹುದು. ಡಿಪ್ಲಮೋ ಪದವೀ ಧರರಿಗೆ ೩೦೦ ರೂಪಾಯಿಗಳನ್ನು ಗ್ರಾಜುಯೇಟ್ಸ್‌ಗೆ ೪೦೦ ರೂಪಾಯಿಗಳನ್ನು ಈ ನಿಧಿಯಿಂದ ಕೊಡ ಬಹುದು. ಏಕೆಂದರೆ ಇವರಿಗೆ ಇನ್ನೂ ಸ್ವಲ್ಪ ಕಾಲ ಎಲ್ಲಿಯೂ ಕೆಲಸ ಸಿಕ್ಕುವುದಿಲ್ಲ. ಕೆಲವರು ಲಕ್ಷಾಂತರ ರೂಪಾಯಿಗಳ ಜಮೀನುಗಳನ್ನು ಮಾರಿ ಇಂಜನಿಯರ್ ಡಿಗ್ರಿಯನ್ನು ಪಡೆದುಕೊಂಡಿರುತ್ತಾರೆ. ನಮ್ಮ ತೆಲುಗಿನಲ್ಲಿ ಒಂದು ಗಾಧೆ ಹೇಳುತ್ತಿದ್ದರು ಇಚ್ಚಿಪುಟ್ಟಿನಾವಾಳ್ಳು ಇಂಜನಿಯರ್ ಎಂದು. ಅಂದರೆ ಕೊಟ್ಟು ಹುಟ್ಟಿದವನು ಇಂಜನಿಯರ್ ಎಂದು. ಆದರೆ ಇವರಿಗೆ ಇವತ್ತಿನ ದಿವಸ ಮದುವೆಯ ಮಾರ್ಕೆಟ್ ಇಲ್ಲ. ಈಗ ಶಾಪದಿಂದ ಹುಟ್ಟಿದವನ್ನು ಇಂಜನಿಯರ್ ಎಂದು ಹೇಳುತ್ತಾರೆ.

ಇನ್ನು ಎಸ್. ಆರ್. ರೇಟ್ಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಎಸ್. ಆರ್. ರೇಟು ಪ್ರಕಾರ ನಮ್ಮ ಲೆಜಿಸ್ಲೇಚರ್ ಹೋಂನಲ್ಲಿ ಒಂದು ಕ್ಯೂಬಿಕ್ ಮೀಟರ್ ಮಣ್ಣನ್ನು ತೆಗೆಸುವುದಕ್ಕೆ ಎಷ್ಟು ಹಣ ಖರ್ಚಾಗಿದೆ,? ಎಸ್.ಆರ್. ನಲ್ಲಿ ಕೊಟ್ಟಿರುವುದು ೩-೩೫ಪೈಸೆ, ಹೋದವರ್ಷ ೩-೩೦ ಪೈಸೆ ಇತ್ತು ಕೂಲಿಯನ್ನು ಮಾತ್ರ ೨೫ ಪರ್ಸೆಂಟ್ ಹೆಚ್ಚು ಮಾಡಿ, ರೇಟಿನಲ್ಲಿ ಮಾತ್ರ ಐದು ಪೈಸೆ ಹೆಚ್ಚು ಮಾಡಿದ್ದಾರೆ. ನನಗೆ ಇರುವ ಅನುಭವದಲ್ಲಿ, ೧೬ ಫೈಸೆಯಂತೆ ಕೆಲಸ ಮಾಡಿದರೆ ಒಂದು ಕ್ಯೂಬಿಕ್ ಮೀಟರ್‌ಗೆ ಐದು ರೂಪಾಯಿಗಳು ಬೇಕಾಗುತ್ತದೆ. ನೀವು ೩-೩೫ ಪೈಸೆ ಮಾಡಿರುವುದರಲ್ಲಿ ಕೆಲಸ ನಡೆದಿದೆಯೋ ಎನ್ನುವ ವಿವರಗಳನ್ನು ತರಿಸಿಕೊಂಡು ನಮಗೆ ಉತ್ತರ ಕೊಡುವಾಗ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಷೆಡ್ಯೂಲ್ ಆಫ್ ರೇಟ್ಸ್‌ಗೆ ಎಕ್ಸಿಕ್ಯುಟಿವ್ ಇಂಜನಿಯರ್ ಅವರೇ ಜವಾಬ್ದಾರರು. ಆದಕಾರಣ ಅವರು ಈ ವ್ಯತ್ಯಾಸಗಳನ್ನೆಲ್ಲಾ ನೋಡಬೇಕಾಗುತ್ತದೆ. ಅವರು ಈ ರೀತಿಯ ತಪ್ಪು ಅಭಿಪ್ರಾಯ ಕೊಟ್ಟಿದ್ದು ಏತಕ್ಕೆ? ಇಲ್ಲಿ ಎರಡನೇಯದು ಎಂದರೆ ಜೆಲ್ಲಿ. ಷೆಡ್ಯೂಲ್ ಆಫ್ ರೇಟ್ಸ್

ನಲ್ಲಿ ಹೋದವರ್ಷ ಒಂದು ಕ್ಯೂಬಿಕ್ ಮೀಟರ್‌ಗೆ ೪೮ ರೂ.ಗಳನ್ನು ಕೋಟ್ ಮಾಡಿದ್ದರೆ. ಈ ವರ್ಷ ಅದನ್ನು ೫೦ ರೂ.ಗಳೆಂದು ಕೋಟ್ ಮಾಡಿದ್ದಾರೆ. ಆದರೆ ಈ ಕೆಲಸಕ್ಕೆ ಕೊಟೇಷನ್ ಕರೆಯುವುದರ ಮೂಲಕ ಒಂದು ಕ್ಯೂಬಿಕ್ ಮೀಟರ್‌ಗೆ ೧೦೬ ರೂ.ಗಳಂತೆ ಖರೀದಿ ಮಾಡುತ್ತಿದ್ದಾರೆ ಅಂದರೆ ದರದಲ್ಲಿ ವ್ಯತ್ಯಾಸ ಬರತಕ್ಕಂಥ ೫೬ ರೂ ಗಳನ್ನು ಯಾವ ಲೆಕ್ಕಕ್ಕೆ ಹಾಕಬೇಕು? ಅದಕ್ಕೇ ನಾನು ಹೇಳುತ್ತಿರುವುದು, ದರಗಳನ್ನು ನಿಗದಿ ಮಾಡುವ ವಿಚಾರದಲ್ಲಿ ತಪ್ಪು ಮಾಡುವಂತ್ತಿದ್ದರೆ. ಇಲಾಖೆ ಮೂಲಕ ಕೆಲಸಗಳನ್ನು ಏತಕ್ಕೆ ಮಾಡಿಸಬೇಕು ಎಂದು ?

೨-೦೦ ಪಿ. ಎಂ.

ಇನ್ನು ನಮ್ಮಗೆಲ್ಲಾ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ. ಈ ಇಲಾಖೆ ವರ್ಷಕ್ಕೆ ೫೦-೬೦ ಕೋಟಿಗಳಷ್ಟು ಹಣ ಖರ್ಚು ಮಾಡುತ್ತದೆ. ಆದರೆ ೧೪ ಪುಟಗಳು ಮಾತ್ರ ಈ ವರದಿಯಲ್ಲಿದೆ. ಅದೇ ಯುವಜನ ಸೇವಾ ಇಲಾಖೆಯವರು ಒಂದು ಕೋಟಿ ರೂ.ಗಳನ್ನು ಖರ್ಚು ಮಾಡಿದರೂ ಸಹ ಇದಕ್ಕಿಂತ ಹೆಚ್ಚಿನ ವಿವರಗಳನ್ನು ಅವರ ವರದಿಯಲ್ಲಿ ಕೊಟ್ಟಿದ್ದರು. ನಮಗೆ ಈ ವಾರ್ಷಿಕ ವರದಿಯ ಜೊತೆಗೆ ಪರ್ಫಾರ್ಮೆನ್ಸ್ ರಿಪೋರ್ಟ್‌ನ್ನು ಸಹ ಒದಗಿಸಿದ್ದಾರೆ. ಇದರಲ್ಲಿ ಇವರು ಯಾವ ಯಾವ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆ, ಯಾವ ಯಾವ ಕೆಲಸಗಳು ಯಾವ ಯಾವ ಹಂತದಲ್ಲಿ ನಡೆಯುತ್ತಿವೆ, ಮುಂದೆ ಯಾವ ರೀತಿ ಮಾಡುತ್ತಾರೆಂಬ ಬಗ್ಗೆ ಸಾಕಷ್ಟು ವಿವರಗಳು ಇಲ್ಲ. ಮಾಡರ್ನ್ ಸಿವಿಲ್ ಇಂಜನಿಯರಿಂಗ್ ವರ್ಕ್ಸ್, ಪಿರಮಿಡ್ಸ್ ರೋಪ್ಸ್ ಹೀಗೆ ನಾನಾ ಕೆಲಸಗಳನ್ನು ಮಾಡುತ್ತೀರಿ. ಇದಕ್ಕೆಲ್ಲಾ ಇಂಡಿಯನ್ ರೋಡ್ ಕಾಂಗ್ರೆಸ್‌ನ ರೆಕಮಂಡೇಷನ್ ಏನಾದರು ಇದೆಯೇ? ಈ ವರದಿಯಲ್ಲಿ ಯಾವ ವಿವರಗಳನ್ನೂ ಕೊಟ್ಟಿಲ್ಲ. ನಾನು ನನ್ನ ಮಗಳ ಜೊತೆಯಲ್ಲಿ ಸಿಂಗಾಪುರ್‌ನಲ್ಲಿ ರಾಜಾ ಕುಳ್ಳ ಎನುವ ಹೆಸರಿನ ಚಲನಚಿತ್ರಕ್ಕೆ ಹೋಗಿದ್ದೆ. ಅಲ್ಲಿ ನನ್ನ ಮಗಳಿಗೆ ಆ ಚಿತ್ರದ ಹಾಡುಗಳು ಇರತಕ್ಕಂಥ ಪುಸ್ತಕವನ್ನು ಕೊಡಿಸಿದೆ. ಆ ಪುಸ್ತಕ ಈ ವಾರ್ಷಿಕ ವರದಿ ಪುಸ್ತಕಕ್ಕಿಂತ ಚೆನ್ನಾಗಿತ್ತು. ಈ ವರದಿಯಲ್ಲಿ ಭೌಗೋಳಿಕ ದೃಷ್ಟಿಯಿಂದ ಕೆಲವೊಂದು ವಿವರಗಳನ್ನು ಕೊಟ್ಟಿದ್ದಾರೆಯೇ ಹೊರತು ಮತ್ತೆ ಬೇರೆ ಯಾವ ವಿವರಗಳೂ ಇಲ್ಲ. ಕಮ್ಯುನಿಕೇಷನ್ಸ್ ಬಗ್ಗೆ The total road length in Karnataka at present is 93016 Kms. spread over an area of 1,91,773 Sq. Kms. ಎಂದು ಇಲ್ಲಿ ಹೇಳಿದ್ದಾರೆ. ಮುಂದೆ during the last 23 years, there has been a rapid increase in the total road length in the State; ಎಂದು ಹೇಳಿದ್ದಾರೆ. ಅಂದರೆ ಪ್ರತಿ ಎಂ.ಎಲ್.ಎ ಕ್ಷೇತ್ರದಲ್ಲಿಯೂ ಹನ್ನೊಂದು ಕಿಲೋಮೀಟರ್‌ಪ್ರಕಾರ ರಸ್ತೆ ಕೆಲಸಗಳನ್ನು ಮಾಡಿಸಿ ಅದನ್ನು ಮೊದಲು ಮಾಡಿಸಿದ ಕೆಲಸಕ್ಕೆ ಕಳೆದ ೨೩ ವರ್ಷಗಳಿಂದ ಸೇರಿಸುತ್ತಾ ಬಂದಿದ್ದಾರೆಂದು ಅರ್ಥವಾಗುತ್ತದೆ. ಪ್ರತಿ ಎಂ.ಎಲ್.ಎ. ಕ್ಷೇತ್ರದಲ್ಲಿಯೂ ಇವರ ಲೆಕ್ಕದ ಪ್ರಕಾರ ಸರಾಸರಿ ಹನ್ನೊಂದು ಕಿಲೋ ಮೀಟರ್ ಪ್ರಕಾರ ರಸ್ತೆ ಕೆಲಸವನ್ನು ವಾರ್ಷಿಕವಾಗಿ ತೆಗೆದುಕೊಂಡಿದ್ದಾರೆಯೇ ಎಂದು ನಾನು ಇಲ್ಲಿರುವ ಎಂ.ಎ.ಲ್.ಎ. ಗಳನ್ನು ಕೇಳುತ್ತಿದ್ದೇನೆ? ಮಾನ್ಯ ಶ್ರೀಕಂಠಯ್ಯನವರ ಕ್ಷೇತ್ರದಲ್ಲಿ ಒಂದು ಕೆಲಸವನ್ನು ಸಹ ನನಗೆ ಗೊತ್ತಿರುವಂತೆ ತೆಗೆದುಕೊಂಡಿಲ್ಲ. ವರ್ಷೇ ವರ್ಷೇ ಇವರು ೨೦ ಕೋಟಿ ರೂ.ಗಳಷ್ಟು ಹಣವನ್ನು ಈ ಬಾಬಿಗೆ ಖರ್ಚು ಮಾಡಿದ್ದಾರೆಂದು ಲೆಕ್ಕಕ್ಕೆ ತೆಗೆದುಕೊಂಡರೂ ಸಹ, ಕಳೆದ ೨೩ ವರ್ಷಗಳಲ್ಲಿ ರಸ್ತೆಗಳಿಗಾಗಿಯೇ ೫೦೦ ಕೋಟಿ ರೂ.ಗಳನ್ನು ಖರ್ಚು ಮಾಡಿದ್ದಾರೆಂದು ಅರ್ಥವಾಗುತ್ತದೆ. ಇಷ್ಟೊಂದು ಆಸ್ತಿಯುಳ್ಳ ರಸ್ತೆಗಳೆಲ್ಲಾ ಎಲ್ಲಿ ಹೋದೆವು? ಮಳೆ ಬಂದು ಎಲ್ಲ ರಸ್ತೆಗಳನ್ನು ಕೊಚ್ಚಿಕೊಂಡು ಹೋಯಿತೇ ಅಥವಾ ಮಾನ್ಯ ಬಸವಲಿಂಗಪ್ಪನವರು ಈ ರಸ್ತೆಗಳನ್ನೆಲಾ ಸ್ವಾಧೀನಪಡಿಸಿಕೊಂಡು ಹರಿಜನ ಮತ್ತು ಗಿರಿಜನರಿಗೆ ಕೊಟ್ಟರೇ ಎಂದು ನಾನು ಕೇಳುತ್ತೇನೆ? ಈ ರಸ್ತೆಗಳಿಗಾಗಿ ತಾವು ಇನ್‌ವೆಸ್ಟ್ ಮಾಡಿದ್ದೆಷ್ಟು, ರಿಪೇರಿಗಾಗಿ ಖರ್ಚು ಮಾಡಿದ್ದೆಷ್ಟು ಎಂಬ ವಿವರಗಳನ್ನು ತಾವು ಕೊಡಬೇಕು.

ಇನ್ನು ಆಯವ್ಯಯ ಪತ್ರವನ್ನು ಮಂಡನೆ ಮಾಡಿದ ಕಾಲಕ್ಕೆ ಈ ಇಲಾಖೆಗೆ ಸಂಬಂಧಪಟ್ಟಂತೆ ಒಂದು ದೊಡ್ಡ ಪುಸ್ತಕವನ್ನು ನಮಗೆಲ್ಲಾ ಕೊಟ್ಟರು. ಈ ಪುಸ್ತಕದ ಬಗ್ಗೆ ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಅದು ನಮ್ಮ ಕರ್ನಾಟಕ ರಾಜ್ಯದ ಬಡ್ಜೆಟ್ ಆಗಿಲ್ಲ, ಯಾವುದಾದರೂ ಒಂದು ಜಿಲ್ಲೆಯ ಬಡ್ಜೆಟ್ ಆಗಿಲ್ಲ, ಅದು ಕೇವಲ ಕೆಲವೇ ಮಂತ್ರಿಗಳ ಕ್ಷೇತ್ರಗಳಿಗೆ ಸೇರಿದ ಬಡ್ಜೆಟ್ ಆಗಿದೆ ಎಂದು ಹೇಳಬಹುದು ಇದಕ್ಕೂ ಮೊದಲು ನಾನು ಒಂದು ಮಾತನ್ನು ಹೇಳಿದ್ದೆ ಏನೆಂದರೆ, ಮಾನ್ಯ ಬಂಗಾರಪ್ಪನವರು ಬಹಳ

ಒಳ್ಳೆಯವರು ಮತ್ತು ಅವರಿಗೆ ಹೆಸರು ಜಾಸ್ತಿ ಎಂದು ; ಇವರು ನಮಗೆಲ್ಲಾ ಒಂದು ಕಾಗದ ಬರೆದರು ಏನೆಂದರೆ, ನಿಮ್ಮ ಕ್ಷೇತ್ರದಲ್ಲಿ ೫ ಕಿಲೋಮೀಟರ್ ರಸ್ತೆ ಕೆಲಸ ತೆಗೆದುಕೊಳ್ಳುತ್ತೇವೆ, ಯಾವ ಭಾಗದಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ಬರೆದು ತಿಳಿಸಿ ಎಂದು ಅದರಲ್ಲಿ ಬರೆದಿದ್ದರು. ಅದನ್ನು ತೀರ್ಮಾನ ಮಾಡಲು ಪಂಚಾಯಿತಿ ಚೇರ್‌ಮನ್‌ಗಳನ್ನು ಕರೆಸಿದ. ಅವರೆಲ್ಲಾ ಬಂದು ನನ್ನ ಕೊಠಡಿಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದರು. ಈ ಕೆಲಸ ಎಲ್ಲರೂ ಅವರವರ ಪಂಚಾಯಿತಿ ವ್ಯಾಪ್ತಿಯಲ್ಲಿಯೆ ಆಗಬೇಕೆಂದು ಜಗಳ ಮಾಡಿದರು. ಮತ್ತು ಕಿತ್ತಾಡಿದರು. ಕೊನೆಗೆ ಒಂದೊಂದು ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದೆ ಒಂದು ಕಿಲೋಮೀಟರ್ ಕೆಲಸ ತೆಗೆದುಕೊಳ್ಳುವಂತೆ ಅವರಿಗೆ ಪತ್ರ ಬರೆದೆ. ಆದರೆ ಇಲ್ಲಿಯವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಲಕ್ಷ ರೂ.ಗಳ ವೆಚ್ಚದಲ್ಲಿ ಸೇತುವೆ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದನ್ನೂ ಮಾಡಲಿಲ್ಲ. ಈ ರೀತಿ ಹೇಳಿ ನಮ್ಮ ಮಾನವನ್ನು ಹರಾಜ್ ಹಾಕಬೇಕೆಂದು ಇವರ ಐಡಿಯಾ ಇತ್ತೋ ಏನೋ ಗೊತ್ತಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ, ಇವರು ಜನರ ಮುಂದೆ ನಮ್ಮ ಮಾನವನ್ನು ಪೂರ್ತಿಯಾಗಿ ಹರಾಜು ಹಾಕಿದ್ದಾರೆಂದು ಹೇಳಬಹುದು. ಅವರ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಿಸಿಕೊಂಡರು. ಯಾವ ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಕೆಲಸ ಮಾಡಿದ್ದಾರೆಂಬುದನ್ನು ಸಹ ಬೇಕಾದರೆ ಹೇಳುತ್ತೇನೆ. ಕೆ.ಆರ್.ನಗರ ಡಿವಿಜನ್‌ನಲ್ಲಿ ಅಂದರೆ ಹುಣಸೂರಿಗೆ ಮಾತ್ರ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಡಿವಿಜನ್‌ಗೆ ಸೇರಿದ ಕೆ.ಆರ್ ನಗರ, ಹೆಗ್ಗಡದೇವನಕೋಟೆ, ಪಿರಿಯಾಪಟ್ಟಣ ಕ್ಷೇತ್ರಗಳಿಗೆ ಯಾವ ಹಣವನ್ನೂ ಕೊಟ್ಟಿಲ್ಲ, ಮಾನ್ಯ ಗುಂಡೂರಾವ್ ಅವರಿಗೆ ಸೇರಿದ ಕೊಡಗಿಗೆ ಅಪಾರವಾದ ಹಣ ಕೊಟ್ಟಿದ್ದಾರೆ. ಮಾನ್ಯ ಕಾಳಮರಿಗೌಡರ ಕ್ಷೇತ್ರಕ್ಕೆ ಒಂದು ಪೈಸಾವನ್ನೂ ಕೊಟ್ಟಿಲ್ಲವೆಂದು ಅವರು ಗೊಳೋ ಎಂದು ಅಳುತ್ತಿದ್ದಾರೆ. ಸಾಗರ ಡಿವಿಜನ್‌ಗೆ ೧೧ ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಚಿಕ್ಕಮಗಳೂರು ಕ್ಷೇತ್ರ ಅಂದರೆ ಮಾನ್ಯ ಚಂದ್ರೇಗೌಡರ ಕ್ಷೇತ್ರಕ್ಕೆ ೮ ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಅದೇ ಶ್ರೀ ನಾರಾಯಣಪ್ಪ ಅವರ ಕ್ಷೇತ್ರಕ್ಕೆ ೨೪ ಸಾವಿರ ರೂ.ಗಳನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಇಲ್ಲಿ ಬಹಳ ಬುದ್ಧಿವಂತಿಕೆಯಿಂದ ಕೆಲಸ ಮಾಡಿದ್ದಾರೆ. ಏನೆಂದರೆ, ಇಲ್ಲಿ ಇಷ್ಟು ಕಿಲೋಮೀಟರ್ ರಸ್ತೆಗಳ ಕೆಲಸ ಮಾಡಲಾಗಿದೆ ಎಂದು ಹೇಳಿದ್ದಾರೆಯೇ ಹೊರತು, ಹಳ್ಳಿಗಳ ಹೆಸರನ್ನು ಹೇಳಿಲ್ಲ. ಈ ರೀತಿ ಕೆಲವೇ ಕ್ಷೇತ್ರಗಳಲ್ಲಿ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳುವುದು ಸರಿಯಲ್ಲ, ಎಲ್ಲ ಕಡೆಯೂ ರಸ್ತೆಗಳ ಕೆಲಸ ಆಗಬೇಕಾಗಿದೆ. ಆದಕಾರಣ ಈಗ ಹಣವನ್ನು ಏನು ಅಲಾಟ್ ಮಾಡಿದ್ದೀರಿ, ಅದನ್ನು ಬದಲಾವಣೆ ಮಾಡಲು ತಮಗೆ ಅಧಿಕಾರವಿದ್ದರೆ, ಕೆಲವು ಭಾಗಗಳಿಗೆ ಹೆಚ್ಚಾಗಿ ಕೊಟ್ಟಿರುವ ಫಂಡ್ಸನ್ನು ಬೇರೆ ಕಡೆಗಳಿಗೆ ವರ್ಗಾವಣೆ ಮಾಡಿ ಎಂದು ಹೇಳುತ್ತೇನೆ. ಈ ಬಗ್ಗೆ ಬೇಕಾದರೆ ರಿವೈಸ್ಡ್ ಎಸ್ಟಿಮೇಟ್ ಇಲ್ಲವೇ ಸಪ್ಲಿಮೆಂಟರಿ ಎಸ್ಟಿಮೇಟ್ ಆದರೂ ಮಾಡಿ ನಮ್ಮಂತಹವರ ಕ್ಷೇತ್ರಗಳಿಗೂ ಹೆಚ್ಚಿನ ಹಣ ಬರುವಂತೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ನಾನು ಕೊಟ್ಟ ಒಂದು ಪ್ರಶ್ನೆಯನ್ನು ಚುಕ್ಕೆ ಗುರುತಿಲ್ಲದಪ್ರಶ್ನೆಯಾಗಿ ಪರಿವರ್ತಿಸಿ, ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರವನ್ನು ನೋಡಿದರೆ, ಮಂತ್ರಿಗಳ ಪಕ್ಷದ ಕ್ಷೇತ್ರದಲ್ಲಿರುವ ಎಂ.ಎಲ್.ಎ.ಗಳು ಬದುಕುವುದಕ್ಕಾಗುವುದಿಲ್ಲ. ಏಕೆಂದರೆ ಮಂತ್ರಿಗಳ ಕ್ಷೇತ್ರದಲ್ಲಿ ಆಗುವಷ್ಟು ಕೆಲಸಗಳು ನಮ್ಮ ಕ್ಷೇತ್ರಗಳಲ್ಲಿ ಆಗುತ್ತಿಲ್ಲ; ಇದರಿಂದ ನಮಗೆ ಓಟು ಕೊಟ್ಟು ಮೋಸ ಹೋದವು ಎಂದು ಜನರು ಹೇಳುವಂತೆ ಆಗಿದೆ, ಇದಕ್ಕೆ ಉದಾಹರಣೆ ಎಂದರೆ ಹೊಸಕೋಟೆ ಮತ್ತು ದೊಡ್ಡ ಬಳ್ಳಾಪುರ ಕ್ಷೇತ್ರದಲ್ಲಿ ಹೆಚ್ಚಿನ ರಸ್ತೆ ಕೆಲಸ ತೆಗೆದುಕೊಂಡಿದ್ದಾರೆ. ಅದೇ ವರ್ತೂರಿನಲ್ಲಿ ಕಡಿಮೆ ಖರ್ಚು ಮಾಡಿದ್ದಾರೆ. ಈ ಒಂದು ತಾರತಮ್ಯವೇಕೆ ಎಂದು ಪ್ರಶ್ನೆ ಕೇಳಿದ್ದಕ್ಕೆ, ಉತ್ತರವಾಗಿ, ಈ ಕ್ಷೇತ್ರಗಳು ವರ್ತೂರು ಕ್ಷೇತ್ರಕ್ಕಿಂತ ವಿಶಾಲವಾಗಿವೆ ಎಂದು ಹೇಳುತ್ತಾರೆ. ಇವರನ್ನು ಏನಾದರು ರಾಜಾಸ್ಥಾನದಲ್ಲಿ ಮಂತ್ರಿಯನ್ನಾಗಿ ಮಾಡಿದ್ದರೆ, ಅಲ್ಲಿರುವ ಮರುಭೂಮಿಗೆಲ್ಲಾ ಟಾರ್ ಹಾಕಿಸುತ್ತಿದ್ದರೆಂದು ಕಾಣುತ್ತದೆ. ರಸ್ತೆಗಳನ್ನು ಮಾಡುವುದಕ್ಕೆ ಫಸ್ಟ್ ಕ್ವಾಲಿಫಿಕೇಷನ್ ಇನ್‌ಟೆನ್‌ಸಿಟಿ ಆಫ್ ಟ್ರಾಫಿಕ್;ಎರಡನೇ ಕ್ವಾಲಿಫಿಕೇಷನ್ ಏರಿಯಾ. ಆದರೆ ಇಲ್ಲಿ ಏರಿಯಾ ನೋಡಿಕೊಂಡು ರಸ್ತೆ ಮಾಡಿಸಿದ್ದಾರೆಂದರೆ ನನಗೆ ಸ್ವಲ್ಪ ಅನುಮಾನ ಬರುತ್ತದೆ.

ಇನ್ನು ಕಟ್ಟಡದ ಬಗ್ಗೆ ಸ್ವಲ್ಪ ಹೇಳುತ್ತೇನೆ. ೧೯೭೪ರಲ್ಲಿ ವಿಜಿಲೆನ್ಸ್‌ಕಮೀಷನ್‌ನವರು ವಿರೋಧ ಪಕ್ಷದ ನಾಯಕರಿಗೆ ಬೆಲೆ ಕೊಟ್ಟಿದ್ದಾರೆ.ಕೆಲವು ಕಡೆ ಚೆಕಪ್ ಮಾಡಿ ೧೨ ಲಕ್ಷ ರೂಪಾಯಿ ದುರುಪಯೋಗವಾಗಿರುವುದನ್ನು ಕಂಡುಹಿಡಿದಿದ್ದಾರೆ. ಆ ೧೧ ಲಕ್ಷ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಅದನ್ನು

ಎಕ್ಸ್ ಗ್ರೇಶಿಯೋ ಪೇಮೆಂಟ್ ಎಂದು ಕೊಟ್ಟಿದ್ದಾರೆಯೇ? ಕಳೆದ ವರ್ಷ ಬೆಂಗಳೂರು ನಗರದಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಕಟ್ಟಡಗಳಿಗೆ ಖರ್ಚು ಮಾಡಿರುವುದರಲ್ಲಿ ೧೨ ಪರ್ಸೆಂಟ್ ಅವ್ಯವಹಾರ ನಡೆದಿದೆ.

[ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು]

ಈ ಕಟ್ಟಡಗಳ ಬಗ್ಗೆ ಹಣ ದುರುಪಯೋಗವಾಗಿರುವ ಸಂಬಂಧದಲ್ಲಿ ವಿಜಿಲೆನ್ಸ್ ಕಮೀಷನ್ ಅವರು ಕೊಟ್ಟ ವರದಿಯನ್ನು ಸರ್ಕಾರದವರು ಒಪ್ಪಿಕೊಳ್ಳದಿದ್ದರೆ ವಿಜಿಲೆನ್ಸ್ ಕಮೀಷನ್ ಏತಕ್ಕೆ ಇರಬೇಕು. ವಾರ್ಷಿಕ ವರದಿಯಲ್ಲಿ ಕೊಟ್ಟಿರುವ ಬಗ್ಗೆ ಕೆಲವು ಅಂಕಿ ಅಂಶಗಳ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ವಿವರಣೆ ಕೇಳುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಹಣಕಾಸಿನ ಸ್ಥಿತಿಯ ಬಗ್ಗೆ ಇದರಲ್ಲಿ ಏನು ಕೊಟ್ಟಿದ್ದೀರಿ ಅದರಲ್ಲಿ ಸಿಬ್ಬಂಧಿ ಸಂಬಳಕ್ಕೋಸ್ಕರ ೬.೨೩ ಕೋಟಿ ಎಂದು ಹೇಳಿದ್ದೀರಿ. ಕೆಲಸ ಕ್ಕೋಸ್ಕರ ೪-೮ ಕೋಟಿ ಎಂದು ಹೇಳಿದ್ದೀರಿ. ಹಾಗಾದರೆ ೪.೮ ಕೋಟಿ ರೂಪಾಯಿಗಳ ಕೆಲಸ ಮಾಡುವುದಕ್ಕೆ ೬.೨೩ ಕೋಟಿ ರೂಪಾಯಿ ಸಂಬಳವೇ? ಈ ವರದಿಯಲ್ಲಿ ಕೊಟ್ಟಿರತಕ್ಕ ಕೆಲವು ವಿಚಾರಗಳು ಅಚ್ಚಿನ ದೋಷವೋ ಏನೋ ಗೊತ್ತಿಲ್ಲ. ಇದರಲ್ಲಿ ರಿಪೇರಿಗೋಸ್ಕರ ೩ ಪರ್ಸೆಂಟ್ ಹಣವನ್ನು ಇಟ್ಟಿದ್ದಾರೆ. ಕೆಲವು ಸಂದರ್ಭದಲ್ಲಿ ಇದಕ್ಕೆ ೨ ಪರ್ಸೆಂಟೂ ಕೂಡ ಬೇಕಾಗುವುದಿಲ್ಲ. ಆಸ್ಪತ್ರೆ ಮತ್ತು ಶಾಲಾ ಕಾಲೇಜುಗಳಿಗೆ ಸುಣ್ಣ ಬಳಿಯುತ್ತಾರೆ. ಅದ್ದರಿಂದ ಇಲ್ಲಿಗೆ ೩ ಪರ್ಸೆಂಟು ಬೇಕಾಗುವುದಿಲ್ಲ. ಈಗ ವಿಧಾನಸೌಧಕ್ಕೆ ಬಣ್ಣ ಹೊಡೆಯುತ್ತಾರೆ. ಇದಕ್ಕೆ ೩ ಪರ್ಸೆಂಟ್ ಬೇಕಾಗಬಹುದು. ಇದನ್ನು ಆವರೇಜ್ ೩ ಪರ್ಸೆಂಟ್ ಹಾಕಿದ್ದಾರೆಯೇ ಅಥವಾ ಇಂಡಿವಿಜುಯಲ್ ಆಗಿ ಹಾಕಿದ್ದಾರೆಯೇ ಎಂಬುದನ್ನು ಸ್ವಲ್ಪ ಹೇಳಬೇಕು. ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಕರ್ನಾಟಕ ರಾಜ್ಯ ಕಂಸ್ಟ್ರಕ್ಷನ್ ಬಗ್ಗೆ ಸಿಕ್ಕಾಪಟ್ಟೆ ಕೆಲಸ ಮಾಡಿದ್ದಾರೆಂದು ಹೇಳಿದ್ದಾರೆ. ರಾಜ್ಯದಲ್ಲಿ ಪ್ರಾಜೆಕ್ಟ್‌ಗಳ ಕೆಲಸವನ್ನು ಇವರಿಗೆ ಕೊಟ್ಟಿದ್ದಾರೆ. ಇದರ ಬಗ್ಗೆ ನಾವು ಏನಾದರೂ ಪ್ರಶ್ನೆ ಕೇಳಿದರೆ ಇದಕ್ಕೆ ಉತ್ತರ ಕೊಡುತ್ತಿರುವುದು ಬಹಳ ನಿಧಾನವಾಗುತ್ತಿದೆ.

ಇನ್ನು ನಮ್ಮ ರಾಜ್ಯದಲ್ಲಿ ಕೆಲವರಿಗೆ ಸರ್ಕಾರಿ ಸೇವೆಯನ್ನು ವಿಸ್ತರಣೆ ಮಾಡುತ್ತಿದ್ದಾರೆ. ಪ್ರಾಮಾಣಿಕವಾಗಿ ದುಡಿದವರಿಗೆ ಒಳ್ಳೆಯ ಹೆಸರನ್ನು ಪಡೆದುಕೊಂಡಿರುವವರಿಗೆ ಇವರು ಸೇವಾ ವಿಸ್ತರಣೆಯನ್ನು ಮಾಡುವುದಿಲ್ಲ. ಈಗ ಸೇವಾ ವಿಸ್ತರಣೆ ಮಾಡಿರತಕ್ಕವನ ಹೆಸರಿನ ಪಟ್ಟಿ ನೋಡಿದರೆ ಇವರೆಲ್ಲಾ ವಿಜಿಲೆನ್ಸ್ ಕಮಿಷನ್ನಿನವರ ತನಿಖೆಗೆ ಒಳಗಾಗಿ ಬಂದಿರುವವರೇ ಆಗಿದ್ದಾರೆ. ಎಲ್ಲಾರೂ ೫೫ ವರ್ಷಕ್ಕೆ ರಿಟೈರ್ ಆಗಬೇಕು. ಒಬ್ಬ ಸೂಪರಿಂಡೆಂಟ್ ಎಂಜಿನಿಯರ್ ೩೦ ವರ್ಷ ಸರ್ಕಾರಿ ಸೇವೆಯನ್ನು ಮಾಡಿರುತ್ತಾರೆ. ಅವರು ನಿವೃತ್ತರಾಗಲು ಒಂದು ವರ್ಷ ಮಾತ್ರ ಉಳಿದಿರುತ್ತದೆ. ಅಂಥ ಸಂದರ್ಭದಲ್ಲಿ ಅವರ ಮೇಲ್ಪಟ್ಟಿರತಕ್ಕ ಚೀಫ್ ಇಂಜಿನಿಯರಿಗೆ ೫೫ ವರ್ಷ ಆಗಿದ್ದು ಅವರು ಇನ್ನು ನಿವೃತ್ತರಾಗುತ್ತಾರೆ ನಾನು ನನ್ನ ಜೀವನದಲ್ಲಿ ಚೀಫ್ ಇಂಜಿನಿಯರ್ ಆಗುತ್ತೇನೆನ್ನುವ ಆಸೆಯನ್ನು ಇಟ್ಟುಕೊಂಡಿರುತ್ತಾರೆ. ಅಂಥ ಸಂದರ್ಭದಲ್ಲಿ ಆ ಚೀಫ್ ಇಂಜನಿಯರ್‌ಗೆ ಸೇವಾ ವಿಸ್ತರಣೆ ಮಾಡಿದರೆ ಈ ಬಡ್ತಿಗೋಸ್ಕರ ಕಾಯ್ದಿರತಕ್ಕ ಸೂಪರಿಂಟೆಂಡೆಂಟ್ ಇಂಜಿನಿಯರ್‌ಗೆ ತೊಂದರೆ ಆಗುತ್ತದೆ ಮತ್ತು ನಿರಾಶೆಯಾಗುತ್ತದೆ. ಈ ದೃಷ್ಟಿಯಿಂದ ಸೇವಾ ವಿಸ್ತರಣೆ ಮಾಡುವುದನ್ನು ಖಡ್ಡಾಯವಾಗಿ ನಿಲ್ಲಿಸಬೇಕೆಂದು ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).— ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದಿರುವ ಡಿಮ್ಯಾಂಡನ್ನು ಸ್ವಾಗತಿಸುತ್ತಾ ಕೆಲವು ಸೂಚನೆಗಳನ್ನು ಕೊಡಬೇಕೆಂದಿದ್ದೇನೆ. ಮಂತ್ರಿವರ್ಯರಿಗೂ ಗೊತ್ತು ನಮ್ಮ ದೇಶ ಗ್ರಾಮಗಳಿಂದ ಕೂಡಿರತಕ್ಕ ದೇಶವೆಂದು. ಎಲ್ಲಾ ಶಾಸಕರೊಂದಿಗೆ ಸಮಾಲೋಚನೆ ಮಾಡಿ ಇಡೀ ನಮ್ಮ ದೇಶಕ್ಕೆ ಅನ್ವಯವಾಗುವ ಹಾಗೆ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ ನಮ್ಮೆಲ್ಲರಿಗೂ ಕೊಟ್ಟಿದ್ದಾರೆ. ಜಿಲ್ಲಾ ಮಾಸ್ಟರ್ ಪ್ಲಾನ್ ಏನು ಕೊಟ್ಟಿದ್ದಾರೆ. ಇಲ್ಲಿಯವರೆಗೂ ಯಾವ ಒಬ್ಬ ಮಂತ್ರಿಗಳೂ ಅಂಥ ಒಂದು ಪ್ಲಾನನ್ನು ತಯಾರು ಮಾಡಿರಲಿಲ್ಲ. ಈ ಮಾಸ್ಟರ್ ಪ್ಲಾನ್‌ನಲ್ಲಿ ಗ್ರಾಮಾಂತರ ಪ್ರದೇಶಕ್ಕೆ ಏನು ಸೌಕರ್ಯ ಬೇಕು, ಯಾವ ರಸ್ತೆ ಬೇಕು, ಯಾವ ಸೇತುವೆ ಆಗಬೇಕು, ಎಂಬುದನ್ನು ಇವತ್ತಿನವರೆಗೂ ಯಾವ ಮಂತ್ರಿಗಳು ಮಾಡಿರಲಿಲ್ಲ. ನಮ್ಮ ಇಂದಿನ ಮಾನ್ಯ ಮಂತ್ರಿಗಳು ಈ ಲೋಕೋಪಯೋಗಿ ಇಲಾಖೆಯನ್ನು ವಹಿಸಿಕೊಂಡ ತಕ್ಷಣ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗಬೇಕು, ಅವರಿಗೆ ರಸ್ತೆಗಳ ಸೌಕರ್ಯವನ್ನು ಒದಗಿಸಿಕೊಡಬೇಕು ಎಂಬ ಉದ್ದೇಶ

ದಿಂದ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿದ್ದಾರೆ. ಅವರು ಬಹಳ ದಕ್ಷರಾಗಿದ್ದರೆ ಹಾಗೂ ಬುದ್ಧಿವಂತರಾಗಿದ್ದಾರೆ. ಒಳ್ಳೆಯ ಲವಲವಿಕೆಯುಳ್ಳವರೂ ಆಗಿದ್ದಾರೆ. ಆದರೆ ನನಗೆ ಅನುಮಾನ ಬರುತ್ತಿದೆ ಈ ಒಂದು ಮಾಸ್ಟರ್ ಪ್ಲಾನನ್ನು ಕಾರ್ಯಗತ ಮಾಡುವುದಕ್ಕೆ ೯೨೮ ಕೋಟಿ ರೂಪಾಯಿಗಳು ಬೇಕು ಎಂದು ಹೇಳಿದ್ದಾರೆ. ಸ್ಪಿಲ್ ಓವರ್ ವರ್ಕ್‌ನ್ನು ಇನ್ನು ೨೦ ವರ್ಷಗಳಲ್ಲಿ ಪೂರ್ತಿ ಮಾಡುತ್ತೇವೆಂದು ನಮಗೆ ಒದಗಿಸಿರತಕ್ಕ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ, ಇದು ಸಾಧ್ಯವೇ ? ಹಣ ದೊರೆತರೆ ಮಾತ್ರ ಈ ಕೆಲಸವನ್ನು ಮಾಡುತ್ತೆವೆಂದು ಹೇಳಿದ್ದಾರೆ. ತಮಗೆಲ್ಲಾ ಗೊತ್ತಿದೆ ನಮ್ಮ ರಾಜ್ಯದಲ್ಲಿ ಸುಮಾರು ೨೬,೮೭೧ ಗ್ರಾಮಗಳು ಇವೆ. ಇದರಲ್ಲಿ ೭.೩೨೪ ಕಿ.ಮಿ. ಸರ್‌ಫೇಸ್ ರಸ್ತೆಗಳು ಇವೆಯೆಂದೂ, ವಾಟರ್ ಬಂಡ್ ರಸ್ತೆಗಳು ೬,೦೪೬ ಕಿ.ಮಿ. ಇದೆಯೆಂದೂ ಕಚ್ಚಾ ರಸ್ತೆಗಳು ೧೧,೪೮೯ ಕಿ. ಮಿ. ಇದೆಯೆಂದೂ ತಮ್ಮ ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಸರ್ಕಾರದವರು ಈಗ ಕೋಟ್ಯಾಂತರ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದಾರೆ ಆದರೆ ಒಂದು ರಸ್ತೆ ಮಾಡಬೇಕೆಂದರೂ ಹಿಂದು ಮುಂದುನೋಡುತ್ತಿದ್ದಾರೆ. ಕಾರಣ ಏನು ಎಂಬುದು ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಶೇಕಡ ೭೫ರಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿದ್ದಾರೆ ಆದ್ದರಿಂದ ಗ್ರಾಮಾಂತರ ಪ್ರದೇಶವನ್ನು ಅಭಿವೃದ್ಧಿ ಮಾಡಬೇಕಂದು ಸರ್ಕಾರದವರು ನಾನಾ ಯೋಜನೆಗಳನ್ನು ಮಾಡುತ್ತಿದ್ದಾರೆ. ಆದರೆ ನಮಗೆ ಸ್ವಾತಂತ್ರ್ಯ ಬಂದು ೩೨ ವರ್ಷಗಳು ಆಯಿತು. ಆದರೂ ಸಹ ಇವತ್ತಿನವರೆವಿಗೂ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚಿನ ಮಹತ್ವ ಕೊಟ್ಟಿಲ್ಲ. ಬರೀ ಮಾಸ್ಟರ್ ಪ್ಲಾನ್ ಮಾಡಿದರೆ ಅದು ಕನ್ನಡಿಯಲ್ಲಿರುವ ಗಂಟಾಗುತ್ತದೆ. ಅದನ್ನು ನೋಡಿಕೊಂಡು ನಾವು ಆನಂದ ಪಡುವ ಪ್ರಸಂಗ ಬರುತ್ತದೆ. ಈಗ ಪಿ. ಡಬ್ಲ್ಯೂ. ಡಿ. ಡಿಪಾರ್ಟ್‌ಮೆಂಟ್‌ಗೆ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟು ಹಣವನ್ನು ಒದಗಿಸುವುದಕ್ಕೆ ಇವತ್ತಿನವರೆಗೆ ಸಾಧ್ಯವಾಗಿಲ್ಲ. ಕೆಲವು ಗ್ರಾಮಗಳಲ್ಲಿ ಇರತಕ್ಕ ಜನರಿಗೆ ಒಂದು ಬಸ್ಸು ಹೇಗಿದೆ ಎಂಬುದೂ ಗೊತ್ತಿಲ್ಲ. ಅಷ್ಟರ ಮಟ್ಟಿನ ಅವಿದ್ಯಾವಂತರಿದ್ದಾರೆ. ಗ್ರಾಮಾಂತರ ಪ್ರದೇಶದ ಜನರಿಗೆ ಇವತ್ತಿನವರೆಗೂ ರಸ್ತೆಗಳ ಸೌಕರ್ಯ ಸಿಕ್ಕಿಲ್ಲ. ಒಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕಾದರೆ ಬಂಡಿಯಲ್ಲಿ ಹೋಗತಕ್ಕ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಕಚ್ಚಾ ರೋಡಿನ ಅವಸ್ಥೆಯನ್ನು ದೇವರೇ ಬಲ್ಲ. ಇಂಥ ಪ್ರಸಂಗದಲ್ಲಿ ಗ್ರಾಮಗಳ ಕಡೆಗೆ ಹೆಚ್ಚಿನ ಗಮನ ಕೊಡದೆ ಪಟ್ಟಣಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ.

ಏತಕ್ಕಾಗಿ ಅಂದರೆ, ಪಟ್ಟಣದಲ್ಲಿರತಕ್ಕ ಜನರು ವಿದ್ಯಾವಂತರಿದ್ದಾರೆ, ತಿಳುವಳಿಕೆಯುಳ್ಳವರಿದ್ದಾರೆ, ಅವರು ಸ್ವಲ್ಪ ರಸ್ತೆ ಸರಿಯಾಗಿಲ್ಲ ಎಂದು ಸರ್ಕಾರಕ್ಕೆ ನಿವೇದನೆ ಮಾಡಿಕೊಳುತ್ತಾರೆ ಸರ್ಕಾರ ಮಾಡಲಿಲ್ಲ ಅಂದರೆ ಸ್ಟ್ರೈಕ್ ಮಾಡುತ್ತಾರೆ, ಗಲಾಟೆ ಮಾಡುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರು ತಿಳುವಳಿಕೆ ಇಲ್ಲದವರಾಗಿದ್ದಾರೆ. ಅವರಿಗೆ ಬೇರೆ ಪ್ರದೇಶಗಳಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಿರುವುದಿಲ್ಲ. ಆದುದರಿಂದ ಗ್ರಾಮಾಂತರ ರಸ್ತೆಗಳನ್ನು ಮಾಡಿಯೇ ತೀರಬೇಕು. ಈಗ ೯೪೮ ಕೋಟಿ ರೂಪಾಯಿಗಳು ಬೇಕು ಎಂದು ಹೇಳಿದ್ದೀರಿ. ಇದನ್ನು ವಲ್ಡ್ ಬ್ಯಾಂಕಿನಿಂದ ಮತ್ತು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಇದು ಸಾಧ್ಯವೇ ಎಂದು ನಾನು ಕೇಳುತ್ತೇನೆ. ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಅದರ ಕಾಪಿಯನ್ನು ಪ್ರತಿಯೊಬ್ಬ ಎಂ.ಎಲ್.ಎ. ಕೈಗೂ ಕೊಟ್ಟಿರಿ. ತಾವು ದಕ್ಷರು, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರು. ಗ್ರಾಮಾಂತರ ಪ್ರದೇಶದಲ್ಲಿ ರೈತರು ಎಷ್ಟರ ಮಟ್ಟಿಗೆ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಎನ್ನುವುದನ್ನು ತಾವು ಮನಗಂಡಿದ್ದೀರಿ. ಅದಕ್ಕೋಸ್ಕರ ಈ ಪ್ಲಾನ್ ಮಾಡಿದ್ದೀರಿ. ಇದನ್ನು ಯಾವ ರೀತಿ ಕಾರ್ಯಗತ ಮಾಡುತ್ತೀರೋ. ೨೦ ವರ್ಷಗಳ ಒಳಗಾದರೂ ಈ ಸ್ಕಿಂ ಕಾರ್ಯಗತವಾಗುತ್ತದೋ ಇಲ್ಲವೊ. ಏಕೆಂದರೆ, ಈ ವರ್ಷ ಅಂದರೆ ೧೯೭೯-೮೦ ರಲ್ಲಿ ೯೨೮ ಕೋಟಿ, ೧೯೮೦-೮೧ ರಲ್ಲಿ ೧೦೨೦ ಕೋಟಿ ಇನ್ನು ೨೦ ವರ್ಷಗಳಲ್ಲಿ ೨೦೦೦ ಕೋಟಿ ರೂಪಾಯಿ ಆದರೆ ಆಶ್ಚರ್ಯಕರವಲ್ಲ. ಇದನ್ನು ಕಾರ್ಯಗತ ಯಾವರೀತಿ ಮಾಡುತ್ತೀರಿ ಎಂದು ಭರವಸೆ ಕೊಡಬೇಕು. ಮಾನ್ಯ ರಾಮಚಂದ್ರ ರೆಡ್ಡಿಯವರು ಹೇಳಿದ ಹಾಗೆ ಹೊದವರ್ಷ ಪ್ರತಿಯೊಂದು ತಾಲ್ಲೂಕಿಗೂ ೫ ಕಿಲೋ ಮೀಟರ್ ರಸ್ತೆಯನ್ನು ಕೊಡುತ್ತೇವೆ ಇಮ್ಮಿಡಿಯೇಟಾಗಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ ಅರ್ಜೆಂಟಾಗಿ ಕೊಡಿ ಎಂದು ಪ್ರತಿಯೊಬ್ಬ ಎಂ. ಎಲ್. ಎ. ಗೂ ಹೇಳಿದಿರಿ. ನಾವು ಅದೇ ರೀತಿ ಜನರಿಗೆ ಹೇಳಿಬಿಟ್ಟೆವು. ಅದು ಕನ್ನಡಿಯಲ್ಲಿನ ಗಂಟಿನಂತೆ ಆಯಿತು; ಇವತ್ತಿನವರೆಗೆ ಬಂದಿಲ್ಲ, ಎಲ್ಲಿ ಹೋಯಿತೋ ಗೊತ್ತಿಲ್ಲ, ನನಗಂತೂ ಇದನ್ನು ನೋಡಿ ವ್ಯಸನವಾಯಿತು. ನೀವು ಹೇಳಿದ ಮೇಲೆ ಅದಗಂತೆ ನಡೆದುಕೊಂಡು ಹೋಗಬೇಕು ಎಂದು ಮನವಿ

ಮಾಡಿಕೊಳ್ಳುತ್ತೇನೆ. ನೀವು ಹೇಳಿದ್ದೀರಿ ಎಂದು ನಾವು ಅಲ್ಲಿನ ಜನಗಳಿಗೆ ಹೇಳಿಬಿಟ್ಟಿದ್ದೇವೆ. ೫ ಕಿಲೋ ಮೀಟರ್ ರಸ್ತೆ ಮಾಡುವ ಬಗ್ಗೆ ಈ ವರ್ಷದ ಬಡ್ಜೆಟ್‌ನಲ್ಲಿ ಇಲ್ಲದೆ ಹೋದರೂ ಹಿಂದೆ ಯಾರ್ಯಾರು ಬರೆದು ಕೊಟ್ಟಿದ್ದಾರೆ ಅದನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಿ ಎನ್ನುವ ಭರವಸೆ ನನಗಂತೂ ಇದೆ, ಇದನ್ನು ತಾವು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನ್ಯಾಷನಲ್ ಹೈವೇ ವಿಷಯ ಮಾತನಾಡಬೇಕು. ನ್ಯಾಷನಲ್ ಹೈವೇಯನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಬಹಳ ಕಡಿಮೆ ಇದೆ. ೧೯೭೮-೭೯ ರಲ್ಲೂ ಕೂಡ ಹಿಂದೆ ಹೇಗಿತ್ತೋ ಈಗಲೂ ಅಷ್ಟೇ ಇದೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಇವತ್ತಿನವರೆಗೂ ಇದರ ಬಗ್ಗೆ ಪ್ರಭಾವ ಬೀರಿಲ್ಲ ಎಂದು ಕಾಣಿಸುತ್ತದೆ. ನ್ಯಾಷನಲ್ ಹೈವೇ ಮಾಡುವುದರಿಂದ ಸಾರಿಗೆ ಉಳಿತಾಯ ಆಗುತ್ತದೆ, ರಸ್ತೆಗಳನ್ನು ಕೇಂದ್ರ ಸರ್ಕಾರ ತೆಗೆದುಕೊಂಡರೆ ನಾವು ಖರ್ಚು ಮಾಡಿರುವ ಹಣ ತೀವ್ರ ಉಳಿತಾಯವಾಗುತ್ತದೆ. ನಾವು ೨೦ ವರ್ಷಗಳಿಂದ ಮನವಿಮಾಡಿಕೊಳ್ಳುತ್ತಿದ್ದೇವೆ. ಉದಕಮಂಡಲದಿಂದ ಮೈಸೂರು, ನಾಗಮಂಗಲ, ಬೀದರ್ ರಸ್ತೆ, ಬಳ್ಳಾರಿ, ಸಿಂಧನೂರು, ಲಿಂಗಸೂಗೂರು, ಗುಲ್ಬರ್ಗ ಬೀದರ್, ಸೋಲಾಪುರ್ ರಸ್ತೆಗೆ ಕಮ್ಯೂನಿಕೇಷನ್ ಕೊಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ರೆಸಲ್ಯೂಷನ್ ಮುಖಾಂತರ ಆಗಿನ ಮಂತ್ರಿಗಳ ಗಮನಕ್ಕೆ ತಂದಾಗ ಅವರು ಇದನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸಿ ಆದಷ್ಟು ಮಟ್ಟಿಗೆ ನ್ಯಾಷನಲ್ ಹೈವೇಯಾಗಿ ಕನ್‌ವರ್ಟ್ ಮಾಡಿಸುತ್ತೇನೆ ಎಂದು ಹೇಳಿದರು, ಈ ರಸ್ತೆ ನಮ್ಮ ಕರ್ನಾಟಕದ ಸುಮಾರು ೮ ಜಿಲ್ಲೆಗಳಲ್ಲಿ ಹಾದುಹೋಗತ್ತಾ ಇದೆ. ೪೦ ತಾಲ್ಲೂಕುಗಳು ಈ ಮೇಲೆ ಹಾದುಹೋಗತಕ್ಕಂಥಾದ್ದಿದೆ. ಇದು ಬಹುಮುಖ್ಯವಾದ ರಸ್ತೆ. ತಮಿಳುನಾಡು, ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಈ ರಸ್ತೆ ಹೋಗುತ್ತಾ ಇದೆ. ಆಗಿನ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಈ ರಸ್ತೆಯನ್ನು ನ್ಯಾಷನಲ್ ಹೈವೇಯಾಗಿ ಕನ್‌ವರ್ಟ್ ಮಾಡಿಸುತ್ತೇನೆಂದು ಹೇಳಿದ್ದರು. ಅದು ಇವತ್ತಿನವರೆಗೂ ಕಾರ್ಯಗತವಾಗಿಲ್ಲ ಇವತ್ತು ಟ್ರಾಫಿಕ್ ಇನ್‌ಕ್ರಿಸ್ ಆಗುತ್ತಾ ಇದೆ. ಉದಕಮಂಡಲದಿಂದ ಬೀದರ್‌ಗೆ ವಯಾ ಮೈಸೂರು, ಚಳ್ಳಕೆರೆ, ಬಳ್ಳಾರಿ, ಲಿಂಗಸೂಗೂರು, ಗುಲ್ಬರ್ಗ ಈ ರಸ್ತೆಯನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು, ಪ್ರಭಾವ ಬೀರಿ ನ್ಯಾಷನಲ್ ಹೈವೇ ಮಾಡಿಬಿಟ್ಟರೆ ಪ್ರತಿವರ್ಷ ಕೋಟಿಗಟ್ಟಲೇ ಹಣ ಬರುತ್ತದೆ, ಈಗ ಸ್ಟೇಟ್ ಹೈವೇಯಾಗಿ ಖರ್ಚು ಮಾಡುತ್ತಿದ್ದೇವೆ. ಈಗ ಟ್ರಾಫಿಕ್ ಜಾಸ್ತಿಯಾಗುತ್ತಾ ಇದೆ. ಈ ರಸ್ತೆ ಏನಿದೆ ಅದರಲ್ಲಿ ಕೃಷ್ಣರಾಜ ಸಾಗರ ಪ್ರಾಜೆಕ್ಟ್ ಇದೆ. ವಾಣಿವಿಲಾಸ್ ಪ್ರಾಜೆಕ್ಟ್ ಇದೆ, ತುಂಗಭದ್ರ ಪ್ರಾಜೆಕ್ಟ್ ಇದೆ, ತುಂಗಾ ಪ್ರಾಜೆಕ್ಟ್ ಇದೆ, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬರುತ್ತಾ ಇದೆ, ನೀರಾವರಿ ಪ್ರದೇಶ ಕೂಡ ಇದೆ. ಕೇಂದ್ರ ಸರ್ಕಾರ ಈ ರಸ್ತೆಯನ್ನು ನ್ಯಾಷನಲ್ ಹೈವೇ ಮಾಡಿಬಿಟ್ಟರೆ ನಮ್ಮ ರಾಜ್ಯದ ಬೊಕ್ಕಸಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಆಗಿನ ಮಂತ್ರಿಗಳು ಏನು ಭರವಸೆ ಕೊಟ್ಟಿದ್ದರು ಅದನ್ನು ಈಗಿನ ಮಂತ್ರಿಗಳು ನೆರವೇರಿಸಿಕೊಡುತ್ತಾರೆಂಬ ಭಾವನೆ ನನಗೆ ಇದೆ.

ಇನ್ನು ಷೆಡ್ಯೂಲ್ ರೇಟ್ ತೆಗೆದುಕೊಂಡರೆ ಇದರಲ್ಲಿ ಬಹಳ ವ್ಯತ್ಯಾಸ ಇದೆ. ಸೂಪರಿಂಟೆಂಡಿಂಗ್ ಇಂಜಿನಿಯರ್ ತಮ್ಮ ಸರ್ಕಲ್‌ಗೆ ಸಂಬಂಧ ಪಟ್ಟ ಹಾಗೆ ರೇಟನ್ನು ಮಾಡುತ್ತಾರೆ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಒಂದು ಷೆಡ್ಯೂಲ್ ರೇಟ್ ಮಾಡುತ್ತಾರೆ. ಒಂದು ಯುನಿಟ್ಟಿಗೆ ೧೩ ರೂಪಾಯಿ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿದ್ದರೆ, ಪಿ.ಡಬ್ಲ್ಯೂ.ಡಿ. ಯದು ೨೬ ರೂಪಾಯಿ ಇರುತ್ತದೆ. ಇರಿಗೇಷನ್ ಮತ್ತು ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಗೂ ಕೋಆರ್ಡಿನೇಷನ್ ಇರಬೇಕು. ಡಿಪಾರ್ಟ್‌ಮೆಂಟ್ಸ್ ಬೇರೆ ಬೇರೆ ಇದ್ದರೂ ಅವು ಬೇರೆ ಬೇರೆ ಎನ್ನತಕ್ಕ ಭಾವನೆ ಹೋಗಬೇಕು. ಅವರೂ ಇವರೂ ಕಲೆತು ಷೆಡ್ಯೂಲ್ ರೇಟ್ ಮಾಡಿದರೆ ಅನುಕೂಲವಾಗುತ್ತವೆ, ಡಿಕ್ರಿಮಿನೇಷನ್ ಆಗಬಾರದು — ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೇನೆ.

ಇನ್ನು ರೈಲ್ವೆಲೈನ್ ವಿಷಯ ಹೇಳುವುದಾದರೆ, ನಮ್ಮ ರಾಜ್ಯದ ಮೇಲೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆಗಿನ ಕೇಂದ್ರದ ಹಣಕಾಸು ಮಂತ್ರಿಗಳು ಗುಂತ್‌ಕಲ್ ಮತ್ತು ಬೆಂಗಳೂರು ಮೀಟರ್ ಗೇಜ್ ರೈಲ್ವೆ ಲೈನ್ ಏನಿದೆ ಅದನ್ನು ಬ್ರಾಡ್‌ಗೇಜಿಗೆ ಕನ್‌ವರ್ಟ್ ಮಾಡುವುದಕ್ಕೆ ಆರ್ಡರ್ ಕೊಟ್ಟರು, ಪ್ರಾರಂಭ ಮಾಡಿದರು, ಆದರೆ ಕೆಲಸ ಸಾಗಲಿಲ್ಲ. ಈ ರೈಲ್ವೆ ಲೈನ್ ಬ್ರಾಡ್‌ಗೇಜ್ ಆಗಿ ಕನ್‌ವರ್ಟ್ ಆದರೆ ಬೆಂಗಳೂರಿನಿಂದ ಡೆಲ್ಲಿಗೆ ೨೪ ಗಂಟೆಯಲ್ಲಿ ಹೋಗಬಹುದು. ರಾಜಧಾನಿ ಎಕ್ಸ್‌ಪ್ರೆಸ್ ಕೊಡಬೇಕು; ಪ್ರತಿಯೊಂದು ಕ್ಯಾಪಿಟಲ್‌ನಿಂದ ಡೆಲ್ಲಿಗೆ ಹೋಗಬೇಕಾದರೆ ಎಷ್ಟು ಅರ್ಲಿಯೆಸ್ಟ್ ಸಾಧ್ಯವೋ ಅಷ್ಟು ಅನುಕೂಲ ಆಗಬೇಕು ಎನ್ನುವ ಉದ್ದೇಶದ ಮೇಲೆ ಕನ್

ವರ್ಟ್ ಮಾಡಿಸಿದರು. ಕೆಲಸ ಶುರುವಾಗಿ ೭–೮ ವರ್ಷವಾಯಿತು; ಕೆಲಸ ಆಮೆಯ ವೇಗದಲ್ಲಿ ನಡೆಯುತ್ತಾ ಇದೆ. ಕೇಂದ್ರ ಸರ್ಕಾರದವರು ಅದಕ್ಕೆ ಇವತ್ತಿನವರೆಗೂ ಹಣ ಕೊಟ್ಟಿಲ್ಲ. ಇವತ್ತು ನಾವು ಡೆಲ್ಲಿಗೆ ಹೋಗಬೇಕಾದರೆ ಮದ್ರಾಸ್ ಮೂಲಕ ಹೋಗಬೇಕು, ೪೮ ಗಂಟೆ ತೆಗೆದು ಕೊಳ್ಳುತ್ತಾ ಇದೆ. ಈ ರೈಲ್ವೆ ಲೈನ್ ಬ್ರಾಡ್‌ಗೇಜ್ ಆದರೆ ೨೪ ಗಂಟೆಯಲ್ಲಿ ನಾವು ಡೆಲ್ಲಿ ತಲುಪುವುದಕ್ಕೆ ಸಾಧ್ಯವಾಗುತ್ತದೆ. ಈ ಕನಸು ನನಸಾಗುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಬ್ರಾಡ್‌ಗೇಜಾಗಿ ಕನ್‌ವರ್ಟ್ ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

೨–೩೦ ಪಿ. ಎಂ.

ಆ ಮೇಲೆ ನಾಳೆಯೋ ಕೇಂದ್ರ ಸರ್ಕಾರದ ರೈಲ್ವೆ ಸಚಿವರು ಮೈಸೂರು ಬೆಂಗಳೂರು ಮೀಟರ್ ಗೇಜ್‌ನ್ನು ಬ್ರಾಡ್‌ಗೇಜನ್ನಾಗಿ ಕನ್‌ವರ್ಟ್ ಮಾಡುವುದಕ್ಕೆ ಬರುತ್ತಿದ್ದಾರೆ. ಇದು ಕೂಡ ಬಹಳ ಸಂತೋಷದ ವಿಷಯ. ಇದನ್ನೂ ಕೂಡ ಆದಷ್ಟು ಜಾಗ್ರತೆ ಮಾಡಬೇಕು ಏತಕ್ಕೆಂದರೆ ಪ್ರಾರಂಭ ಮಾಡುವುದು ಸುಲಭ ಫೌಂಡೇಷನ್ ಹಾಕಬಹುದು, ಆದರೆ ಅದರ ಕೆಲಸ ಜಾಗ್ರತೆಯಾಗಿ ಆಗುವ ಹಾಗೆ ನೋಡಿಕೊಳ್ಳಬೇಕು. ಇದೇ ರೀತಿ ನಾವು ಹರಿಹರ ಕೊಪ್ಪಳ ರೈಲ್ವೆ ಲೈನ್ ಹಾಕಿ ಕೊಡಿ ಎಂದು ನಾವು ಕಳೆದ ೨೫ ವರ್ಷಗಳಿಂದಲೂ ಕೇಂದ್ರ ಸರ್ಕಾರದವರನ್ನು ಮತ್ತು ರಾಜ್ಯ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತಲೇ ಇದ್ದೇವೆ. ಹರಿಹರ ಕೊಪ್ಪಳ ಕೇವಲ ೪೦ ಮೈಲಿಯಾಗುತ್ತದೆ ಅಷ್ಟೇ ಅದನ್ನು ಮಾಡಿದರೆ ನಾವು ಬಳ್ಳಾರಿಯಿಂದ ಹರಿಹರಕ್ಕೆ ಹೋಗವುದಕ್ಕೆ ಅನುಕೂಲವಾಗುತ್ತದೆಂದು ನಾವು ಕೇಳುತ್ತಲೇ ಇದ್ದೇವೆ ಆದರೆ ಇದುವರೆಗೂ ಅದನ್ನು ಮಾಡಿಸಿ ಕೊಟ್ಟಿಲ್ಲ ಆದುದರಿಂದ ಅದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡಬೇಕೆಂದು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇದೇ ರೀತಿ ಐರನ್ ಓರ್‌ಗೆ ನಮ್ಮ ಜಿಲ್ಲೆ ಬಹಳ ಹೆಸರುವಾಸಿಯಾಗಿದೆ ಹೊಸಪೇಟೆಯಲ್ಲಿ ದೊರೆಯುವ ಐರನ್ ಓರನ್ನು ನಾವು ಮದ್ರಾಸ್, ಬೊಂಬಾಯಿ, ಗೋವಾ ಮುಖಾಂತರ ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಐರನ್ ಓರ್ ದೊರೆತರೂ ನಾವು ಎಕ್ಸ್‌ಪೋರ್ಟ್ ಮಾಡುತ್ತಿದ್ದರೂ ಲಾಸ್ ಆಗುತ್ತಿದೆ ಇದಕ್ಕೆ ಕಾರಣವೇನೆಂದರೆ ಐರನ್ ಓರ್‌ಗಳನ್ನು ೫೦೦,೬೦೦ ಮೈಲುಗಳ ದೂರಕ್ಕೆ ತೆಗೆದು ಕೊಂಡು ಹೋಗಬೇಕಾಗಿದೆ ಅದಕ್ಕೆ ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಜಾಸ್ತಿ ಬೀಳುತ್ತಿದೆ. ಅದಕ್ಕಾಗಿ ಬಳ್ಳಾರಿ ಹೊಸಪೇಟೆಗೆ ಇದ್ದ ಮೀಟರ ಗೇಜನ್ನು ಬ್ರಾಡ್ ಗೇಜ್‌ನ್ನಾಗಿ ಪರಿವರ್ತನೆ ಮಾಡಿದ್ದಾರೆ. ಇದೇ ರೀತಿ ಹೊಸಪೇಟೆಯಿಂದ ಕಾರವಾರದವರೆಗೆ ಬ್ರಾಡ್‌ಗೇಜ್‌ನ್ನಾಗಿ ಮಾಡಿದರೆ ಚೆನ್ನಾಗಿರುತ್ತದೆ. ಅದಕ್ಕಾಗಿ ಹುಬ್ಬಳ್ಳಿಯಿಂದ ಕಾರವಾರದವರೆಗೆ ಬ್ರಾಡ್‌ಗೇಜಾನ್ನಾಗಿ ಕನ್‌ವರ್ಟ್ ಮಾಡಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರದವರಲ್ಲಿ ಯೋಜನೆ ಇದೆ, ಇದು ಬಹಳ ಅವಶ್ಯಕವಾದದ್ದು ಇದರ ಬಗ್ಗೆ ಎಸ್ಟಿಮೇಟ್ ಕಮಿಟಿಯವರು ಸಹ ೧೯೭೩-೭೪ ರಲ್ಲಿ ವರದಿಯನ್ನು ರೆಕಮಂಡ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೂ ಸಹ ಕೇಂದ್ರ ಸರ್ಕಾರದವರು ಇದರ ಬಗ್ಗೆ ಗಮನ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಏತಕ್ಕೆಂದರೆ ನಮ್ಮ ಐರನ್ ಓರ್ ಕಾರವಾರ ಬಂದರ್‌ಗ ಹೋದರೆ ಬಹಳ ಕಡಿಮೆ ಖರ್ಚಿನಲ್ಲಿ ಐರನ್ ಓರ್‌ನ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೂ ಹೆಚ್ಚಿನ ಆದಾಯ ಇದರಿಂದ ಬರುತ್ತದೆ ಅದಕೋಸ್ಕರ ಹುಬ್ಬಳ್ಳಿ ಕಾರವಾರ ರೈಲ್ವೆ ಲೈನನ್ನು ಹೊಸದಾಗಿ ಹಾಕಲಿಕ್ಕೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಹೇರಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯದ ಬಗ್ಗೆ ನಾವು ನಮ್ಮ ಸರ್ಕಾರದವರು ಅಭಿನಂದಿಸಬೇಕಾಗಿದೆ. ಈ ಸಾರಿಯ ಬಜೆಟ್‌ನಲ್ಲೂ ಕೂಡ ೧ ಕೋಟಿ ರೂಪಾಯಿಗಳನ್ನು ಧೈರ್ಯ ಮಾಡಿ ಕಾರವಾರ ಪೋರ್ಟಿಕೊ ಡೆವಲಪ್‌ಮೆಂಟ್‌ಗೋಸ್ಕರವಾಗಿ ಇಟ್ಟಿದ್ದಾರೆ. ಆದುದರಿಂದ ಮುಂದೆ ಅಲ್ಲಿಗೆ ರೈಲ್ವೆ ಲೈನ್ ಹಾಕಿದರೆ ಬಹಳ ಅನುಕೂಲವಾಗುತ್ತದೆ. ಮಂಗಳೂರು ಪೋರ್ಟ್ ಬೇರೆ ಇದೆ. ಅದು ಬಹಳ ದೂರವಾಗುತ್ತದೆ. ಆದ್ದರಿಂದ ಕಾರವಾರ ಬಹಳ ಸಹಾಯಕವಾಗುತ್ತದೆ. ಮತ್ತೊಮ್ಮೆ ಹುಬ್ಬಳ್ಳಿ–ಕಾರವಾರಕ್ಕೆ ರೈಲ್ವೆ ಲೈನನ್ನು ಆದಷ್ಟು ಬೇಗ ಮಾಡಿಸಿ ಕೊಡುವ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಿನಿಮಂ ನೀಡ್ಸ್ ಪ್ರೋಗ್ರಾಂ, ಕೆಳಗೆ ೧೫,೦೦೦, ೨೦,೦೦೦ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಸರ್ವಿಸ್ ರೋಡ್‌ನ್ನು ಮಾಡಿಸಿಕೊಡಬೇಕೆಂದು ಸುಮಾರು ೧೯೭೫ ರಿಂದ ಒಂದು ಯೋಜನೆಯನ್ನು ಪ್ರಾರಂಭ ಮಾಡಿದ್ದೀರಿ. ಅದನ್ನು ಯಾವ ರೀತಿಯಲ್ಲಿ ಮಾಡುತ್ತೀರೋ ಗೊತ್ತಾಗುತ್ತಿಲ್ಲ.

ಏತಕ್ಕೆಂದರೆ, ಆ ರೀತಿ ಇರತಕ್ಕಂಥ ಗ್ರಾಮಗಳು ಸಾಕಷ್ಟು ಇವೆ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಯಾವ ಈ ರೀತಿಯ ಯೋಜನೆಗಳನ್ನೂ ತೆಗೆದುಕೊಂಡ ಹಾಗಿಲ್ಲ. ತಾವು ಈ ರೀತಿಯ ಒಂದು ಪಾಲಿಸಿಯನ್ನು ಹಾಕಿಕೊಂಡ ಮೇಲೆ ಎಲ್ಲಾ ಕಡೆಯೂ ಮಾಡಬೇಕು. ನಮ್ಮ ಬಳ್ಳಾರಿ ಜಿಲ್ಲೆಯನ್ನು ತಾವು ಕೈಬಿಟ್ಟಿರುವುದರಿಂದ ಈ ಪ್ರೋಗ್ರಾಂನ್ನು ನಮ್ಮಲ್ಲೂ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಆ ಮೇಲೆ ಇಂಟರ್ ಸ್ಟೇಟ್ಸ್ ಎಕಾನಮಿ ಇಂಪಾರ್ಟೆನ್ಸ್ ರೋಡ್ ಅಂತ ಹೇಳಿದ್ದೀರಿ, ಇದು ಇಂಟರ್ ಸ್ಟೇಟ್ ಎಂದರೆ ಬರೀ ಬಾರ್ಡರ್ ಲೈನ್‌ನಲ್ಲಿ ಬರತಕ್ಕ ಜಿಲ್ಲೆಗಳಿಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಕೇಂದ್ರ ಸರ್ಕಾರದವರೂ ಸಹ ಇದಕ್ಕೆ ಹಣವನ್ನು ಒದಗಿಸುತ್ತಿದ್ದಾರೆ ಹಾಗಂತ ಹೇಳಿದ್ದೀರಿ. ಒಂದು ಸಾರಿ ನಮ್ಮ ಚೀಫ್ ಇಂಜನಿಯರರವರು ಆದೋನಿಯಿಂದ ಸಿರಗುಪ್ಪ ಕಡೆಗೆ ಬಂದರು. ಸಿರುಗುಪ್ಪ ಕಡೆಗೆ ಬರುವಷ್ಟು ಹೊತ್ತಿಗೆ ಅವರ ಕಾರಿನ ಟೈರೇ ಪಂಚರ್ ಆಗಿ ಹೋಯಿತು. ಅಂದರೆ ರಸ್ತೆ ಅಷ್ಟು ಕೆಟ್ಟು ಹೋಗಿತ್ತು ಎಂದು ಅವರೇ ಹೇಳಿದ್ದಾರೆ, ಅಂದರೆ ಅಷ್ಟರಮಟ್ಟಿಗೆ ನಮ್ಮ ಬಾರ್ಡರನಲ್ಲಿರುವ ರಸ್ತೆಗಳು ಇದೆ ಎಂಬುದು ಗೊತ್ತಾಗುತ್ತದೆ. ಹಿಂದೆ ನಮ್ಮ ಕರ್ನಾಟಕ ರಾಜ್ಯದ ರಸ್ತೆಗಳು ಬಹಳ ಹೆಸರುವಾಸಿಯಾದ ರಸ್ತೆಗಳು ಆಗಿದ್ದವು, ಉತ್ತಮವಾದ ರಸ್ತೆಗಳಾಗಿದ್ದವು ಆದರೆ ಈಗ ಅವುಗಳನ್ನು ಸರಿಯಾಗಿ ರಿಪೇರಿ ಮಾಡಿ ಸರಿಯಾದ ಕಂಟ್ರೋಲನಲ್ಲಿ ಇಟ್ಟು ಕೊಳ್ಳದೇ ಇರುವುದರಿಂದ ಹೀಗೆ ಆಗಿದೆ ಆದುದರಿಂದ ಇದರ ಕಡೆಗೆ ಸರ್ಕಾರದವರು ಇನ್ನಾದರೂ ಗಮನವನ್ನು ಹರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಪಿ. ಡಬ್ಲ್ಯೂ. ಡಿ. ಮಂತ್ರಿಗಳವರನ್ನು ಅಭಿನಂದಿಸಬೇಕಾದ ವಿಷಯವೇನೆಂದರೆ ತಮ್ಮ ಬಡ್ಜೆಟ್ಟಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ರಸ್ತೆಗಳನ್ನು ಮಾಡಿಸಿಕೊಡುವ ಬಗ್ಗೆ ತಿಳಿಸಿದ್ದಾರೆ. ಇದರಿಂದ ಅವರಿಗೂ ನಮಗೂ ಅಂದರೆ ನಮ್ಮಂಥ ಎಂ. ಎಲ್. ಎ. ಗಳಿಗೂ ಒಂದು ಹೆಮ್ಮೆಯ ವಿಚಾರವಾಗಿದೆ.

ಇನ್ನೊಂದು ವಿಚಾರವನ್ನು ಇಲ್ಲಿ ಹೇಳಬೇಕೆಂದರೆ ನೀರಾವರಿ ಪ್ರದೇಶಗಳಲ್ಲಿ ಹೋಗತಕ್ಕಂಥ ರಸ್ತೆಗಳೇನಿವೆ. ಅವು ಬಹಳ ಬೇಗನೆ ಕೆಟ್ಟು ಹೋಗುತ್ತಿವೆ ತಮಗೆ ಉದಾಹರಣೆಗೆ ಹೇಳಬೇಕೆಂದರೆ ಬಳ್ಳಾರಿ ಸಿರಗುಪ್ಪ ರಸ್ತೆ, ಸಿಂಧನೂರು ರಸ್ತೆಯ ಮೂಲಕ ಬೆಂಗಳೂರಿನಿಂದ ಬೆಳಗಾಂ, ಹುಬ್ಬಳ್ಳಿಗೆ ಹೋಗಬೇಕಾದರೆ ಈ ರಸ್ತೆಗಳ ಮೂಲಕವೇ ಹೋಗಬೇಕಾಗಿದೆ. ಈ ರಸ್ತೆಗಳು ಸಿಂಕ್ ಆಗುತ್ತಿರುವುದರಿಂದ ಇನ್ನು ಸ್ವಲ್ಪ ಹೆಚ್ಚು ಹಣ ಖರ್ಚಾದರೂ ಚಿಂತೆಯಿಲ್ಲ ಅದರ ಸರ್ವೀಸ್‌ನ್ನು ಹೆಚ್ಚು ಮಾಡುವುದು ಉತ್ತಮವಿದೆ. ಆದರೆ ಇವತ್ತು ತಮ್ಮ ಬಡ್ಜೆಟ್‌ನಲ್ಲಿ ಬಳ್ಳಾರಿ ಜಿಲ್ಲೆಗೆ ೧೫ ಲಕ್ಷ ರೂಪಾಯಿಗಳನ್ನು ಪ್ಯಾಚ್ ಅಪ್ ವರ್ಕ್‌ಗಳಿಗೆ ಇಟ್ಟಿದ್ದೀರಿ. ಎಲ್ಲೆಲ್ಲಿ ರಸ್ತೆಗಳು ಕೆಟ್ಟು ಹೋಗಿವೆ ಅದನ್ನು ಮಾತ್ರ ಪ್ಯಾಚ್ ಅಪ್ ಮಾಡಲು ಹಣ ಒದಗಿಸಿದ್ದೀರಿ. ಆ ರೀತಿ ಮಾಡಬಾರದು ಆ ರೀತಿ ಮಾಡುವುದು ಸೂಕ್ತವೂ ಅಲ್ಲ, ಇವತ್ತು ಬಳ್ಳಾರಿ, ಸಿರಗುಪ್ಪ, ಸಿಂಧನೂರ ರಸ್ತೆಗಳೇನಿವೆ ಅವು ತುಂಬಾ ಕೆಟ್ಟು ಹೋಗಿವೆ, ನೀರಾವರಿ ಪ್ರದೇಶದಲ್ಲಿ ಹೋಗತಕ್ಕ ರಸ್ತೆಗಳು ಆಗಿರುವುದರಿಂದ ಅವು ಬಹಳ ಬೇಗ ಸಿಂಕ್ ಆಗಿ ಹೋಗುತ್ತವೆ ಆದಕ್ಕೆ ತಾವು ಅದರ ರಿಪೇರಿಗಾಗಿ ೩೦ ಲಕ್ಷ ರೂಪಾಯಿಗಳನ್ನಾದರೂ ಪ್ರೊವೈಡ್, ಮಾಡಿ. ಮೊದಲು ಕೆಲಸ ಪ್ರಾರಂಭ ಮಾಡಿದರೆ ಕೊನೆಯವರೆಗೂ ರಸ್ತೆ ರಿಪೇರಿ ಕೆಲಸವನ್ನು ಮಾಡಿ ಉತ್ತಮ ಪಡಿಸುವ ಅವಶ್ಯಕತೆ ತುಂಬಾ ಇದೆ ಎಂದು ಹೇಳುತ್ತೇನೆ.

ಇನ್ನು ನನ್ನ ತಾಲ್ಲೂಕಿನ ವಿಚಾರ ಹೇಳಬೇಕೆಂದರೆ ಇದು ಸ್ಟೇಟ್ ಹೈವೇನಲ್ಲಿ ಹೋಗತಕ್ಕ ರಸ್ತೆ ಇದೆ. ಇದಕ್ಕೆ ಸುಮಾರು ೩ ವರ್ಷಗಳ ಬಡ್ಜೆಟ್‌ನಲ್ಲೂ ೧ ಲಕ್ಷ, ಒಂದೂವರೆ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡುತ್ತಾ ಬಂದಿದ್ದೀರಿ. ಆದರೆ ದುರ್ದೈವ ಏತಕ್ಕೋ ಈ ಸಾರಿಯ ಬಡ್ಜೆಟ್‌ನಲ್ಲಿ ನೋಡಿದರೆ ನಿಲ್ ಅಂತ ಮಾಡಿದ್ದೀರಿ ಇದಕ್ಕೆ ಕಾರಣವೇನು ಅರ್ಥವಾಗುತ್ತಿಲ್ಲ. ನಮಗೆ ಇದು ನಿಜವಾಗಿಯೂ ಆಶ್ಚರ್ಯವಾಗುತ್ತಿದೆ. ಏತಕ್ಕೆಂದರೆ ಅಲ್ಲಿಯ ಕೆಲಸಕಾರ್ಯಗಳಿಗೆಲ್ಲಾ ಈಗಾಗಲೇ ಟೆಂಡರ್ ಕರೆದಿದ್ದಾರೆ, ೫೦ ಸಾವಿರ ರೂಪಾಯಿಗಳನ್ನು ಅದರ ಮೇಲೆ ಖರ್ಚುಮಾಡಿದ್ದಾರೆ, ಹೀಗಿದ್ದಾಗ್ಯೂ ಕೂಡ ಅದಕ್ಕೆ ಈ ಸಾರ್ತಿ ತಾವು ಹಣವನ್ನು ಪ್ರೊವೈಡ್ ಮಾಡದೇ ನಿಲ್ ಅಂತ ಮಾಡಿದ್ದೀರಿ. ಅಲ್ಲಿ ಟೆಂಡರ್ ಬಂದಿದ್ದು, ವರ್ಕ್ ನಡೆದಿರುವ ಬಗ್ಗೆ ಸರ್ಕಾರದವರ ಗಮನಕ್ಕೆ ತಂದಿದ್ದೇವೆ ಆದರೂ ಕೂಡ ತಾವು ಏಕಾ ಏಕಿಯಾಗಿ ಹೀಗೆ ಹಣವನ್ನು ಕೊಡದೇ ನಿಲ್ಲಿಸಿ ಬಿಟ್ಟಿದ್ದೀರಿ. ಇದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. ಏಕೆಂದರೆ ೩ ವರ್ಷಗಳಿಂದ ಬಂದದ್ದು ಈ ವರ್ಷ ಏಕಾಏಕಿಯಾಗಿ ಬಿಟ್ಟುಹೋಗಿದೆ. ಕಳೆದ ಸಾಲಿನ ಬಡ್ಜೆಟ್ಟಿನಲ್ಲಿ ಒಂದೂವರೆ ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೀರಿ. ಆದರೆ ಈ ವರ್ಷ ಇಲ್ಲವೇ ಇಲ್ಲ. ಇನ್ನು ಮಳೆ

ಗಾಲ ಶುರುವಾದರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿದೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಿದೆ. ಕಂಟ್ರಾಕ್ಟರಿಗೆ ಎಂಟ್ರುಸ್ಟ್ ಮಾಡಿದ್ದೇವೆ ಅಂದಾಗ ಏಕೆ ಈ ರೀತಿಯಾಯಿತು ? ಆದ್ದರಿಂದ ಕೂಡಲೇ ಹಣ ಮಂಜೂರ್ಮಾಡಿ ಆದಷ್ಟು ಜಾಗ್ರತೆ ಆ ಕೆಲಸವನ್ನುಶುರು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಹೆಚ್ಚಿಗೆ ಹೇಳದೆ, ಇಷ್ಟು ಅವಕಾಶ ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಇಲಾಖಾ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಅವರ ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಒಂದು ಕೈಪಿಡಿಯನ್ನು ಕೂಡ ನಮಗೆ ಒದಗಿಸಿದ್ದಾರೆ. ಅದರಲ್ಲಿ ಹೇಳಿದ್ದಾರೆ, ಅವರು ಇಲಾಖೆಯನ್ನು ೧೬ ಜೋನ್‌ಗಳನ್ನಾಗಿ ಮಾಡಿ ಪ್ರತಿಯೊಂದು ಜೋನಿಗೂ ಒಬ್ಬೊಬ್ಬ ಚೀಫ್ ಇಂಜಿನಿಯರನ್ನು ಮೇಲ್ವಿಚಾರಣೆಗಾಗಿ ಇಟ್ಟಿದ್ದೇವೆ ಎಂದು. ನಾನು ಈಗ ಎಷ್ಟು ಜನ ಚೀಫ್ ಇಂಜಿನಿಯರ್‌ಗಳು ಇರಬೇಕೆಂಬ ಬಗ್ಗೆ ವಾದ ಮಾಡುವುದಕ್ಕೆ ತಯಾರಾಗಿಲ್ಲ, ಅವಶ್ಯಕತೆ ಇದ್ದರೆ ಇನ್ನೂ ೧೦ ಜನರನ್ನು ನೇಮಿಸಿಕೊಳ್ಳಲಿ. ಆದರೆ ಒಬ್ಬ ಹಿರಿಯ ನುರಿತ ಅಧಿಕಾರಿಯೊಬ್ಬರು, ಕರ್ನಾಟಕದಲ್ಲಿ ೧೫-೨೦ ಜನ ಚೀಪ್ ಇಂಜಿನಿಯರ್‌ಗಳು ಇದ್ದಾರೆ ಮತ್ತು ಇನ್ನೂ ಪೋಸ್ಟ್‌ಗಳು ಕ್ರಿಯೇಟ್ ಆಗುತ್ತಿವೆ ಎಂಬುದನ್ನು ಕೇಳಿ ನೊಂದು ಏನು ಒಂದು ಮಾತನ್ನು ಹೇಳಿದರೆಂದರೆ "They are not creating posts of Chief Engineers, but they are creating posts of Chief Engineers" ಎಂದು ಒಬ್ಬೊಬ್ಬರ ಅಭಿಪ್ರಾಯಗಳು ಒಂದೊಂದು ರೀತಿ ಇರುತ್ತದೆ. ಆದರೆ ಕೆಲಸ ಇದ್ದಾಗ ಚೀಫ್ ಇಂಜಿನಿಯರ್‌ಗಳ ಅಗತ್ಯ ಇದ್ದರೆ ನೇಮಿಸಿಕೊಳ್ಳಬೇಕೆಂದರೆ ಯಾರು ಅಡ್ಡ ಬರುವುದಿಲ್ಲ. ಕೆಲಸ ಕಾರ್ಯಗಳ ಬಗ್ಗೆ ಮಾನ್ಯ ಬಂಗಾರಪ್ಪನವರು ಕಳೆದ ವರ್ಷ ಈ ಸಭೆಗೆ ಉತ್ತರ ಕೊಡುತ್ತಾ ಎರಡು ಉದಾಹರಣೆಗಳನ್ನು ತೆಗೆದುಕೊಂಡು ಅವರ ಇಲಾಖೆಯ ಬೆನ್ನು ತಟ್ಟಿ ಕೊಂಡರು. ಒಂದನೆಯದು, ಕುದುರೆಮುಖ ಪ್ರಾಜೆಕ್ಟ್‌ನಲ್ಲಿ ನಾವು ರಸ್ತೆಗಳನ್ನು ಚೆನ್ನಾಗಿ ಮಾಡಿದ್ದೇವೆಂದು, highy technically the quality of the work is good ಎಂದು. ಮತ್ತೊಂದು, ಹೈಕೋರ್ಟ್ ಬಿಲ್ಡಿಂಗ್‌ನ್ನು ಕೂಡ ೨-೩ ಸಾರಿ ಇನ್ಸ್‌ಪೆಕ್ಟ್ ಮಾಡಿದ್ದೇವೆ. ಬಹಳ ಚೆನ್ನಾಗಿದೆ, ಅಪ್-ಟು-ಡೇಟ್ ಆಗಿದೆ ಎಂದು ಹೇಳಿದರು. ಹೇಳುವುದು ಬೇಡವೆಂದು ಹೇಳುವುದಿಲ್ಲ. ಆದರೆ ತಮ್ಮ ಇಲಾಖೆಯಲ್ಲಿ ಅಂಕಿ ಅಂಶಗಳು ಇದ್ದರೆ ತಿಳಿಸಿ, ಎಷ್ಟು ಕೆಲಸಗಳನ್ನು ನಿಗದಿಯಾದ ವೇಳೆಯಲ್ಲಿ ಮಾಡಿ ಮುಗಿಸಿದ್ದೀರಿ ಎಂಬುದನ್ನು. ಉದಾಹರಣೆಗೆ ಹೇಳುತ್ತೇನೆ. ೧೯೬೫ನೇ ಇಸವಿಯಲ್ಲಿ ಕಬಿನಿ ನದಿಗೆ ಮಾದಾಪುರ, ಹುಲ್ಲಹಳ್ಳಿ, ನಂಜನಗೂಡು ಮತ್ತು ಸುತ್ತೂರು ಜಾಗಗಳಲ್ಲಿ ೪ ಸೇತುವೆಗಳನ್ನು ಕಟ್ಟಿಸಿ, ಅದಕ್ಕೆ ಬೇಕಾದ ಹಣ ಸಹಾಯವನ್ನು ಒದಗಿಸುತ್ತೇವೆಂದು ಕೇಂದ್ರ ಸರ್ಕಾರದವರು ಹೇಳಿದರು. ಅದಕ್ಕೆ we are taking steps to complete the construction of 4 bridges across Kabini river ಎಂದು ೪ ಬ್ರಿಡ್ಜ್‌ಗಳನ್ನು ಸ್ಯಾಂಕ್ಷನ್ ಮಾಡಿದಿರಿ. ಆಗಿನ ಕಾಲದಲ್ಲಿ ಒಂದೊಂದಕ್ಕೆ ಕೇವಲ ೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹೆಗ್ಗಡದೇವನ ಕೋಟೆಯ ಇಂಜಿನಿಯರ್‌ರವರು ಮಾದಾಪುರ ಮತ್ತು ಹುಲ್ಲಹಳ್ಳಿಯ ಸೇತುವೆ ಕೆಲಸವನ್ನು ಮುಗಿಸಿದರು. ಆದರೆ ನಂಜನಗೂಡು ಸೇತುವೆ ಕಾರ್ಯ ಏನಾಗಿದೆ ? ಸುತ್ತೂರು ಸೇತುವೆಯ ಸಲುವಾಗಿ ಕಳೆದ ವರ್ಷದ ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ you have sanctioned Rs. 51.01 lakhs in your Order No, PWD 199 CB 78 dated 8th August 1978 What action your department has taken so far in this regard? ಈ ಸಂದರ್ಭದಲ್ಲಿ, ನಾನು ತಮ್ಮಲ್ಲಿ ಒಂದು ವಿಚಾರವನ್ನು ಕೇಳುವುದಕ್ಕೆ ಅಪೇಕ್ಷೆ ಪಡುವುದೇನೆಂದರೆ, ತಮ್ಮ ಇಲಾಖೆಯ ಕೆಲಸ ಕಾರ್ಯಗಳನ್ನ ಸಕಾಲದಲ್ಲಿ ಮಾಡುತ್ತಿದ್ದೇವೆಂದು ಹೇಳಬೇಕಾದರೆ total work estimated in the year and completed as per the scheduled time prescribed in the estimateಅನ್ನು ಕೊಡಬೇಕು. ಆದರ ಪರ್ಸೆಂಟೇಜ್‌ಕೊಡುವುದಾದರೆ ತಮ್ಮ ಇಲಾಖೆಗೆ ಸಹಭಾಷ್‌ಗಿರಿ ಕೊಡುವುದಕ್ಕೆ ತಯಾರಾಗಿದ್ದೇನೆ. ಹೈಕೋರ್ಟ್ ಬಿಲ್ಡಿಂಗನ್ನು ಏನೋ ರಿಪೇರಿ ಮಾಡಿದ್ದೀರಿ, ಏಕೆಂದರೆ ಅದು ನಡೆಯಬೇಕು. ಅದರಲ್ಲೂ ಸರ್ಕಾರ ಇರತಕ್ಕ ಸ್ಟೇಟ್ ಹೆಡ್-ಕ್ವಾರ್ಟರ್‌ನಲ್ಲಿ ಇರತಕ್ಕ ಹೈಕೋರ್ಟ್ ಬಿಲ್ಡಿಂಗನ್ನು ರಿಪೇರಿ ಮಾಡಲಿಲ್ಲವೆಂದರೆ ಅದು ಸರ್ಕಾರದ ಮೇಲೆ ಪರಿಣಾಮವಾಗುತ್ತದೆಂದು ಮಾಡಿದ್ದೀರಿ. ಅದೇ ರೀತಿ ಕುದರೆ ಮುಖದಲ್ಲೂ ಕೂಡ, ಫಾರಿನ್ ಎಕ್ಸ್-

ಛೇಂಜ್ ಇರುವುದರಿಂದ ಮಾಡಲಿಲ್ಲವೆಂದರೆ ತೊಂದರೆಯಾಗುತ್ತದೆಂದು ಮಾಡಿದ್ದೀರಿ. ಈ ರೀತಿ ತಿಳಿದು ಕೊಂಡು ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ಬಡ್ಜೆಟ್ ಪ್ರಕಾರ ಎಷ್ಟು ಎಷ್ಟಿಮೇಟ್ ಇರುತ್ತದೋ ಅದರ ಪ್ರಕಾರ ಮುಗಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಯು. ಟಿ. ಫರೀದ್.— ಅವರು ಈಗ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಸಮಯಕ್ಕೆ ಸರಿಯಾಗಿ ಎಷ್ಟು ಕೆಲಸ ಮುಗಿದಿದೆ, ಒಂದೆರಡು ಕೆಲಸಗಳನ್ನು ಮುಗಿಸಿದ ಕೂಡಲೇ ಸರ್ಟಿ–ಫಿಕೇಟ್ ಕೊಡುವುದು ಸರಿಯಾಗಿಲ್ಲ ಎಂದು. ಆದರೆ ಇವರ ಎಫಿಷಿಯನ್ಸಿ ಮಟ್ಟಿಗೆ ಅವರಿಗೆ ಸಂಶಯವೋ ಅಥವಾ ದುಡ್ಡಿನ ಕೊರತೆಯಿಂದಾಗಿ ಕೆಲಸವಾಗಿಲ್ಲ ಎಂದೋ ?

ಶ್ರೀ ಎಂ. ಸಿ. ಬಸಪ್ಪ.— ಒಳ್ಳೆಯ ಸಮಯದಲ್ಲಿ ಕ್ಲಾರಿಫಿಕೇಷನ್ ಕೇಳಿದಿರಿ ಬಹುಶ: ತಾವು ಸ್ವಲ್ಪ ಆಳವಾಗಿ ಯೋಚನೆ ಮಾಡಿದರೆ ತಮಗೇ ಗೊತ್ತಾಗುತ್ತದೆ. ದುಡ್ಡಿಲ್ಲದೆ ಇದ್ದರೆ ಎಷ್ಟಿಮೇಟನ್ನು ಸ್ಯಾಂಕ್ಷನ್ ಮಾಡುವುದಿಲ್ಲ ಎಂದು. ಅಂದಮೇಲೆ ಎಷ್ಟಿಮೇಟ್ ಸ್ಯಾಂಕ್ಷನ್ ಮಾಡಿಯೂ ಏತಕ್ಕೆ ಕೆಲಸ ಮಾಡದೆ ಹಾಗೆ ಇಟ್ಟುಕೊಳ್ಳಬೇಕು? Estimates sanctioned are kept in Cub-board

ಶ್ರೀ ಯು. ಟಿ. ಫರೀದ್.— ಹಾಗಾದರೆ ಎಫಿಷಿಯನ್ಸಿ ಬಗ್ಗೆ ನಿಮಗೆ ಸಂಶಯವೆ ?

ಶ್ರೀ ಎಂ. ಸಿ. ಬಸಪ್ಪ.— ಅಲ್ಲ. ಹೇಳಬೇಕೆಂದರೆ, ಇವರ ಇಲಾಖೆಯ ಕೆಲಸದ ಬಗ್ಗೆ ಯೇ ಸಂಶಯ ನನಗೆ ಗೊತ್ತಿರುವ ಹಾಗೆ ಬೆಂಗಳೂರು ಮೈಸೂರು ರಸ್ತೆಯಲ್ಲಿ ಹೋದರೆ ಚನ್ನಪಟ್ಟಣದ ಹತ್ತಿರ ೨ ಸೇತುವೆಗಳ ನಿರ್ಮಾಣ ಕಾರ್ಯ ಆಗದೆ ಹಾಗೆ ಇದೆ. ಬಿಡದಿ ಸೇತುವೆ ಕಳೆದ ೨೦ ವರ್ಷಗಳಿಂದ ಹಾಗೆ ಬಿದ್ದಿದ್ದು ಈವರ್ಷ ಕಂಪ್ಲೀಟ್ ಮಾಡಿದ್ದಾರೆ. ಇಲಾಖೆಯಲ್ಲಿ ಅಂಕಿ ಅಂಶಗಳು ಇದ್ದರೆ ಎಷ್ಟು ಕೆಲಸಗಳನ್ನು ಮಂಜೂರ್ಮಾಡಿ ನಿಗದಿಯಾದ ವೇಳೆಯಲ್ಲಿ ಮುಗಿಸಿದ್ದೀರಿ ಎಂಬ ಬಗ್ಗೆ ಉತ್ತರ ಕೊಡಬೇಕು, ಅಷ್ಟೆ ಅಲ್ಲ ಎಷ್ಟು ಕೆಲಸಗಳನ್ನು ಎಸ್ಟಿಮೇಟ್ ರಿವೈಸ್ ಮಾಡದೆ ಒರಿಜಿನಲ್ ಎಸ್ಟಿಮೇಟ್ ಪ್ರಕಾರ ಮಾಡಿದ್ದೇವೆಂಬು ದನ್ನು ಕೂಡ ಹೇಳಬೇಕು. ೧೯೬೫ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಮಾಡಿ ಅಂದಾಗಲೇ ಮಾಡಿದ್ದರೆ ಇವತ್ತಿನ ದಿವಸ ನಮ್ಮ ಸರ್ಕಾರಕ್ಕೆ ಇಷ್ಟು ಖರ್ಚು ಬರುತ್ತಿರಲಿಲ್ಲ, ಅವತ್ತು ಪೂರಾ ಹಣವನ್ನು ಕೇಂದ್ರ ಸರ್ಕಾರದವರೇ ಕೊಡುತ್ತಿದ್ದರು. ಕೇವಲ ೩೨ ಲಕ್ಷ ರೂಪಾಯಿಗಳಲ್ಲಿ ೪ ಸೇತುವೆಗಳ ಕೆಲಸವು ಮುಗಿಯು ತಿತ್ತು ಈಗ ಸುತ್ತೂರು ಸೇತುವೆಗೆ ೫೨ ಲಕ್ಷದ ೧೦ ಸಾವಿರ ರೂಪಾಯಿಗಳನ್ನು ಮತ್ತು ನಂಜನಗೂಡಿನ ಸೇತುವೆಗೆ ೧೮ ಲಕ್ಷ ರೂಪಾಯಿಗಳನ್ನು ಏನು ಮಂಜೂರ್ಮಾಡಿದ್ದೀರಿ ಆ ಕೆಲಸ ಮುಗಿಯುವುದರೊಳಗೆ ೫೪ ಲಕ್ಷ ರೂಪಾಯಿಗೆ ಹೋಗುತ್ತದೆ ಅಂದರೆ ಒಂದಕ್ಕೆ ಒರಷ್ಟು ಖರ್ಚಾಗುತ್ತದೆ. ಇದನ್ನೇನಾದರೂ ಕಡಿಮೆ ಮಾಡಿಸುವುದಾದರೆ ಹೇಳಿ, ತಮಗೆ ಸಹಭಾಷ್‌ಗಿರಿ ಕೊಡುವುದಕ್ಕೆ ತಯಾರಾಗಿದ್ದೇನೆ. ಇದನ್ನೆಲ್ಲ ಯಾರ ತಲೆ ಮೇಲೆ ಹಾಕುತ್ತೀರಿ ? ಇದು ಯಾರಿಗೆ ನಷ್ಟ ?ಇದು ನಮ್ಮ ಇಂಜಿನಿಯರ್‌ಗಳು ದೇಶಕ್ಕೆ ಮಾಡುತ್ತಿರ ತಕ್ಕ ಸಹಾಯವೆಂದು ಹೇಳೋಣವೇ ಅಥವಾ ದೌರ್ಭಾಗ್ಯವೆಂದು ಹೇಳೋಣವೆ? ಇನ್ನು ರಸ್ತೆಗಳ ಬಗೆ ತಾವು ಕಳೆದ ವರ್ಷ ಬಹಳ ಕಷ್ಟಪಟ್ಟು ಹೇಳಿದ್ದೀರಿ ಪ್ಲಾನ್ ತಯಾರಿಸುತ್ತಿದ್ದೇವೆ ಎಂದು ಎರಡು ದಿನಗಳ ಮುಂಚೆ ಅದನ್ನು ಒದಗಿಸಿಕೊಟ್ಟಿದ್ದೀರಿ ಬಹುಶಃ ತಮ್ಮ ಉದ್ದೇಶವೇನೆಂದರೆ, ಗ್ರಾಮಾಂತರ ಪ್ರದೇಶ ಗಳಲ್ಲಿ ರಸ್ತೆಗಳು ಬಹಳ ಕಡಿಮೆ ಇವೆ ಪ್ರತಿಯೊಂದು ಗ್ರಾಮಕ್ಕೂ ಕೂಡ ರಸ್ತೆಗಳನ್ನು ಮಾಡತಕ್ಕ ಅವಶ್ಯಕತೆ ಇದೆಯೆಂಬ ದೃಷ್ಟಿಯನ್ನಿಟ್ಟುಕೊಂಡು ಪ್ಲಾನನ್ನು ಮಾಡಿದ್ದೀರೆಂದು ಕಾಣುತ್ತದೆ. ತಾವು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ೬೫೬೮ ಕಿಲೋಮೀಟರ್ ರಸ್ತೆ ಗಳಿವೆ; ಅದರಲ್ಲಿ ನ್ಯಾಷನಲ್ ಹೈವೇಸ್ ೧೯೬೮ ಕಿಲೋಮೀಟರ್ ಸ್ಟೇಟ್ ಹೈವೇಸ್ ೭೭೦೦ ಕಿಲೋ ಮೀಟರ್, ಆದರೆ ಮೆಜರ್ ಡಿಸ್ಟ್ರಿಕ್ಟ್ ರೋಡ್ಸ್ ೧೩೫೦೦ ಕಿಲೋಮೀಟರ್ ಅದರೆ ಡಿಸ್ಟ್ರಿಕ್ಟ್ ರೋಡ್ಸ್ ೯೫೦೦ ಕಿಲೋಮೀಟರ್, ಹಾಗೂ, ವಿಲೇಜ್ ರೋಡ್ಸ್ ೩೩೦೦೦ ಕಿಲೋಮೀಟರ್ ಈ ರೀತಿಯಾಗಿ ೬೫೬೬೮ ಕಿಲೋಮೀಟರ್ ರಸ್ತೆಗಳು ಇವೆ ಎಂದು ಹೇಳಿದ್ದೀರಿ. ಈ ರೀತಿ ೬೫,೬೬೮ ಕ್ಕಿಂತ ಮೇಲ್ಪಟ್ಟು ರಸ್ತೆಗಳು ಇದೆಯೆಂದು ತಾವು ಹೇಳಿದ್ದೀರಿ ಮತ್ತು ಇವಕ್ಕೆ ಮೈನ್‌ಟೆನೆನ್ಸ್ ಗ್ರಾಂಟ್ ತಾವು ಹೇಳಿರತಕ್ಕಂಥ ಪ್ರಕಾರ ಕಿಲೋಮೀಟರ್‌ಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಸಹ ತಾವು ಉದಾಹರಿಸಿದ್ದೀರಿ. ಸ್ಟೇಟ್ ಹೈವೇಸ್‌ಗೆ ೪,೫೦೦ ರೂಪಾಯಿಗಳಿಂದ ೬,೦೦೦ ರೂಪಾಯಿಗಳವರೆಗೆ ಖರ್ಚು ಮಾಡುತ್ತೇವೆ ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್‌ಗೆ ೨,೫೦೦ ರೂಪಾಯಿಗಳಿಂದ ೪೦೦೦ ರೂಪಾಯಿ ಗಳವರೆಗೆ ಖರ್ಚು ಮಾಡುತ್ತೇವೆ, ಆದರೆ ರೋಡ್ಸ್‌ಗೆ ಡಿಸ್ಟ್ರಿಕ್ಟ್ ೨೦೦೦ ರೂಪಾಯಿಗಳಿಂದ ೩೫೦೦ ರೂಪಾಯಿಗಳವರೆಗೆ ಖರ್ಚು ಮಾಡುತ್ತೇವೆ. ಹಾಗೂ ವಿಲೇಜ್‌ರೋಡ್ಸ್‌ಗೆ ೧೦೦೦ ರೂಪಾಯಿಗಳಿಂದ ೧೫೦೦ ರೂಪಾಯಿಗಳವರೆಗೆ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೀರಿ. ರೂರಲ್ ರೋಡ್ಸ್‌ಗೆ ತಾವು

ಖರ್ಚುಮಾಡತಕ್ಕಂಥ ಹಣ ಕಡಿಮೆ ಇದೆ, ೧೯೭೨ಕ್ಕಿಂತ ಮೊದಲು ಗೌರ್ನಮೆಂಟ್ ಆಫ್ ಇಂಡಿಯಾದವರ್ ಬೇರೆ ರೋಡುಗಳ ಮೇಲೆ ಎಷ್ಟು ಹಣ ಖರ್ಚು ಮಾಡಿದರೂ ಕೂಡ ಶೇಕಡ ೨೫ರಷ್ಟನ್ನು ರೂರಲ್ ರೋಡ್ಸ್ ಮೇಲೆ ಖರ್ಚು ಮಾಡಬೇಕು ಎಂದು ನಿಯಮ ಹಾಕಿದರು. ಅದರ ಪ್ರಕಾರ ತಾವು ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೀರಿ. ಮಾನ್ಯ ಚನ್ನಬಸಪ್ಪನವರು ೧೯೭೨-೭೩ರಲ್ಲಿ ತಮ್ಮ ಇಲಾಖೆಯನ್ನು ವಹಿಸಿಕೊಂಡಿದ್ದಾಗ ರೂರಲ್ ಕಮ್ಯುನಿಕೇಷನ್ ರೋಡ್ಸ್ ಎಂದು ಹೇಳಿ ಪ್ರತಿ ತಾಲ್ಲೂಕಿನಲ್ಲಿಯೂ ೫೦ ಕಿಲೋಮೀಟರ್‌ಗಳವರೆಗೆ ರಸ್ತೆಗಳನ್ನು ಪ್ರಾರಂಭ ಮಾಡಿದ್ದರು. ಬಹುಷ: ತಾವು ಅಲ್ಲಿ ೧೦೦ರಿಂದ ೧೫೦ ಕಿಲೋಮೀಟರುಗಳವರೆಗೆ ರಸ್ತೆಗಳನ್ನು ತೆಗೆದುಕೊಂಡು ಮಾಡಿದ್ದೀರಿ. ಅದರಲ್ಲಿ ಯಾವ ರಸ್ತೆಗಳು ಕೂಡ ಚನ್ನಾಗಿ ಇದೆಯೆಂದು ಹೇಳತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಬೇರೆ ರಸ್ತೆಗಳಿಗೆ ಸ್ವಲ್ಪ ಹಣವನ್ನು ಖರ್ಚು ಮಾಡಿದರೂ ಕೂಡ ಸರ್ಕಾರದವರು ಈ ರಸ್ತೆಗಳಿಗೆ ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈ ಬಗ್ಗೆ ನಾನು ನಮ್ಮ ಚಾಮರಾಜ ತಾಲ್ಲೂಕನ್ನೇ ಒಂದು ಉದಾಹರಣೆಯಾಗಿ ತೆಗೆದುಕೊಂಡು ಹೇಳಬಯಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಇರತಕ್ಕಂಥ ರೂರಲ್ ಕಮ್ಯುನಿಕೇಷನ್ ರಸ್ತೆಗಳ ವಿವರ ಏನಿದೆ ಎಂದರೆ ಸ್ಟೇಟ್ ಹೈವೇಸ್ ೫೫ ಕಿಲೋಮಿಟರುಗಳು, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ೧೦೮ ಕಿಲೋಮಿಟರ್‌ಗಳು ಆದರೆ ಡಿಸ್ಟ್ರಿಕ್ಟ್ ರೋಡ್ಸ್ ೭೭ ಕಿಲೋಮೀಟರ್‌ಗಳು, ವಿಲೇಜ್ ರೋಡ್ಸ್ ೨೯೭ ಕಿಲೋಮೀಟರುಗಳು ಇದೆ. ಈ ರಸ್ತೆಗಳಿಗೆ ಗ್ರಾಂಟ್ಸ್ ಕೊಡತಕ್ಕಂಥ ಕಾಲದಲ್ಲಿ ತಾವು ಏನು ಮಾಡುತ್ತೀರಿ ಎಂದರೆ ಸ್ಟೇಟ್ ಹೈವೇಸ್‌ಗೆ ಮತ್ತು ಎಂ.ಡಿ.ಆರ್. ರೋಡ್ಸ್‌ಗೆ ಸಾಧಾರಣವಾಗಿ ಗ್ರಾಂಟ್ಸ್ ಕೊಡುತ್ತೀರಿ; ಇದರಲ್ಲಿ ಸ್ಪೆಷಿಯಲ್ ರಿಪೇರ್ಸ್ ಮತ್ತು ಆನ್ಯುಯಲ್ ರಿಪೇರ್ಸ್ ಈ ಎರಡನ್ನು ಸೇರಿಸಿಕೊಂಡು ಗ್ರಾಂಟ್ಸ್ ಕೊಡುತ್ತೀರಿ. ಕಳೆದ ವರ್ಷ ಐ.ಸಿ.ಆರ್.ಸಿ. ರೋಡ್ಸ್‌ಗೆ ಒಂದು ತಾಲ್ಲೂಕಿಗೆ ೧ಲಕ್ಷ ಚಿಲ್ಲರೆ ಹಣವನ್ನು ಹಂಚಿದ್ದೀರಿ. ಪ್ರತಿತಾಲ್ಲೂಕಿನಲ್ಲಿಯೂ ಈ ಬಗ್ಗೆ ಮೈಲೇಜ್ ತೆಗೆದುಕೊಳ್ಳುವುದಾದರೆ ೫೦ ಕಿಲೋಮಿಟರ್‌ನಿಂದ ೨೦೦ ಕಿಲೋಮೀಟರ್‌ವರೆಗೆ ರಸ್ತೆಗಳನ್ನು ತೆಗೆದುಕೊಂಡು ಅದರಂತೆ ಗ್ರಾಂಟ್‌ಕೊಟ್ಟಿದ್ದೀರಿ. This is not depending on the lengh of the road If you fix it betweef 1 lakh and 1½ lakhs for each taluk, how to maintain these mileages on those taluks is the question. I want a definite answer for this Regarding master plan I think you have adopted some scientific metho-a cording to you. ತಾವು ಈ ರಸ್ತೆಗಳ ಅಂಕಿಅಂಶಗಳ ಪ್ರಕಾರ ಏನು ಹೇಳಿದ್ದೀರಿ ಎಂದರೆ ೧೦೦ marks foreach road ಎಂದು ಹೇಳಿದ್ದೀರಿ. ೧೦೦ ನಂಬರ್‌ಗಳನ್ನು ಕೊಟ್ಟಿದ್ದೀರಿ. This is the only method to determine the priority for each road. That means you have a plan of action for 15 or 20 years ೧೫,೨೦ ವರ್ಷಗಳಲ್ಲಿ ಇದನ್ನು ಮುಗಿಸಬೇಕು ಎನ್ನತಕ್ಕಂಥ ಕಾರ್ಯಕ್ರಮವನ್ನು ಇಟ್ಟು ಕೊಂಡು, ಇದರಲ್ಲಿ ಯಾವಯಾವ ರಸ್ತೆಗಳನ್ನು ಮೊದಲು ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ತಾವು ಒಂದು ತೀರ್ಮಾನಕ್ಕೆ ಬಂದಿದ್ದೀರಿ. ಇದರಲ್ಲಿ ನಂಬರ್ ಅಪ್ಲೈ ಮಾಡಿ ತೆಗೆದುಕೊಳ್ಳುತ್ತಿರೋ ಅಥವಾ ತಮ್ಮ ಮಾಸ್ಟರ್ ಪ್ಲಾನ್ ಪ್ರಕಾರವಾಗಿ ಈ ರಸ್ತೆಗಳನ್ನು ತೆಗೆದುಕೊಳ್ಳುತ್ತಿರೋ ಎಂಬ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳಬೇಕು. ನಮ್ಮ ತಾಲ್ಲೂಕಿನಲ್ಲಿ ಆಲ್‌ವೆದರ್ ರೋಡ್ಸ್ ಇರತಕ್ಕಂಥ ೯೭ ಹಳ್ಳಿಗಳು ಫೇರ್‌ವೆದರ್ ರೋಡ್ಸ್ ಇರತಕ್ಕಂಥ ಹಳ್ಳಿಗಳು ೨೩ ಮತ್ತು ಕುಚ ಅಂಡ್ ನಾನ್ ಮೋಟಾರೇಬಲ್ ರೋಡ್ಸ್ ಇರತಕ್ಕಂಥ ೩೪ ಹಳ್ಳಿಗಳು ಇವೆ. ಇದಕ್ಕೆ ೨ ಕೋಟಿ ೧೪ಲಕ್ಷ ೪೧ ಸಾವಿರ ರೂಪಾಯಿಗಳು ಬೇಕು ಎಂದು ತಮ್ಮ ಮಾಸ್ಟರ್ ಪ್ಲಾನ್ ಪ್ರಕಾರ ಹೇಳಿದ್ದೀರಿ. ಇದರಲ್ಲಿ ತಾವು ಮೈನ್‌ಟೈನ್ ಮಾಡಿರತಕ್ಕಂಥ ೪ ಕೆಟೊಗೊರಿಗಳ ರೋಡ್‌ಗಳು ಇವೆ. State Fund Road, National Highways, State highway M.D.R, other district Roads and village roads. Along with them you have a master plan according to which you are giving priority and taking up roads. Now there is confusion ಪ್ರತಿ ತಾಲ್ಲೂಕಿಗೆ ತಾವು ಅನ್ಯುಯಲ್ ಗ್ರಾಂಟ್ಸ್ ಕೊಡುವಾಗ ಈ ರಸ್ತೆಗಳಿಗೆ ಪ್ರಯರಿಟಿ ಕೊಡುತ್ತೀರಿ ಎಂದು ಕಾಣುತ್ತದೆ. ಮಾನ್ಯ ಶ್ರೀ ಚನ್ನಬಸಪ್ಪನವರ ಕಾಲದಲ್ಲಿ ಈ ಐ.ಸಿ.ಆರ್.ಸಿ ರೋಡ್‌ಗಳನ್ನು ತೆಗೆದುಕೊಂಡು ಮಾಡತಕ್ಕಂಥ ಸಂದರ್ಭದಲ್ಲಿ ೪ ಸ್ಟೇಜ್‌ಗಳನ್ನು ಮಾಡಿಕೊಂಡು ಫಸ್ಟ್‌ಸ್ಟೇಜ್ ಫಾರ್ಮೇಷನ್ ಆಫ್ ರೋಡ್ ಸೆಕೆಂಡ್ ಸ್ಟೇಜ್ ಗ್ರಾವಲಿಂಗ್. ಥರ್ಡ್

ಸ್ಟೇಜ್ ಮೆಟಲಿಂಗ್, ಫೋರ್ಸ್ ಸ್ಟೇಜ್ ಕಲ್ವರ್ಟ್ಸ್ ಅಂಡ್ ಅದರ್ ತಿಂಗ್ಸ್, ಈ ರೀತಿಯಲ್ಲಿ ರಸ್ತೆಗಳನ್ನು ಮಾಡಬೇಕೆಂದು ಹೇಳಿದ್ದರು. ಅನೇಕ ರಸ್ತೆಗಳು ಈ ಸ್ಟೇಜು ಗಳಲ್ಲೇ ಇವೆ. How are you going to have a reply. ಈ ರಸ್ತೆಗಳಿಗೆ compromise between the two, you must say in your ಪ್ರತಿ ತಾಲ್ಲೂಕಿನ ಗ್ರ್ಯಾಂಟ್ ಕೊಡತಕ್ಕಂಥ ಸಂದರ್ಭದಲ್ಲಿ ಲೆಂತ್ ಆಫ್ ರೋಡ್ ಎಷ್ಟು ಕಿಲೋಮೀಟರ್ ಇದೆ. ಎಷ್ಟು ಕಿಲೋಮೀಟರ್‌ಗಳ ರೋಡುಗಳನ್ನು ತೆಗೆದುಕೊಳ್ಳಬೇಕೆಂದು ಪ್ರಪೋಸ್ ಮಾಡುತ್ತೀರಿ ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟು ಆದನ್ನು ಮುಗಿಸಬೇಕೆಂದು ಹೇಳುತ್ತೇನೆ, ಏಕೆಂದರೆ ಎಲ್ಲಾ ರಸ್ತೆ ಗಳಿಗೂ ಹಣವನ್ನು ಕೊಟ್ಟು ಮಾಡಿದರೆ ಯಾವ ರಸ್ತೆಗಳೂ ಕಂಪ್ಲೀಟ್ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಆ ರೀತಿ ಮಾಡಬೇಕೆಂದು ಹೇಳುತ್ತೇನೆ. ನನ್ನ ಮಿತ್ರರೂ ಸಹ ಇದೇ ಮಾತನ್ನು ಹೇಳಿದ್ದಾರೆ. ಈ ರಸ್ತೆಗಳಿಗೆ ಪ್ರಯಾರಿಟಿ ಕೊಡಬೇಕೆಂದು ಹೇಳಿ ನಾವು ಕಳೆದ ವರ್ಷ ೨ ಕಾಗದಗಳನ್ನು ಬರೆದವು. ಅದಕ್ಕೆ ತಾವು ನಿಮ್ಮ ಕ್ಷೇತ್ರದಲ್ಲಿ ೫೦ ಕಿಲೋಮೀಟರ್ ರಸ್ತೆಯನ್ನು ಮಾಡಿಸಬೇಕು ಎಂದು ಇದ್ದೇವೆ. ಈ ಎರಡರಲ್ಲಿ ಯಾವುದಕ್ಕೆ ಪ್ರಯಾರಿಟಿ ಕೊಡೋಣ ಎಂದು ೧೦–೭–೧೯೭೮ರಲ್ಲಿ ನಮಗೆ ಕಾಗದವನ್ನು ಬರೆದಿರಿ. ನಾವು ಇದರಲ್ಲಿ ನಿಧಾನವಾದರೆ ನಮ್ಮ ರಸ್ತೆಗಳು ಬಿಟ್ಟು ಹೋದೀತು ಎಂದು ಹೇಳಿ ೧೨–೭ ೭೮ರಲ್ಲಿ ಕಾಗದ ಬರೆದಿದ್ದೇವೆ. ಆದರಗತಿ ಏನಾಯಿತೋ ಗೊತ್ತಿಲ್ಲ ತಾವು ಇದುವರೆಗೂ ನಮ್ಮ ರಸ್ತೆಗಳನು ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಈ ಕಾರ್ಯಕ್ರಮವನ್ನು ತಾವು ಕೈ ಬಿಡುವುದಕ್ಕೆ ಏನಾದರೂ ಕಾರಣ ಇರಬಹುದು ಎಂದು ಹೇಳಿ ಈ ಬಗ್ಗೆ ನಾವು ತಮ್ಮಿಂದ ಉತ್ತರ ನಿರೀಕ್ಷೆ ಮಾಡಿದೆವು ಆದರೆ ತಮ್ಮಿಂದ ಇಲ್ಲಿಯುವರೆಗೆ ನಮಗೆ ಉತ್ತರ ಬಂದಿಲ್ಲ. ಅದೂ ಅಲ್ಲದೇ ನಮ್ಮ ತಾಲ್ಲೂಕಿನಲ್ಲಿ ಎರಡು ಸೇತುವೆಗಳನ್ನು ಕಟ್ಟಿಸಿಕೊಡಿ ಎಂದು ನಾವು ತಮ್ಮನ್ನು ಕೇಳಿಕೊಂಡಿದ್ದೆವು. ತಾವು ೨–೬ ೧೯೭೮ರಲ್ಲಿ ಒಂದು ಲಕ್ಷಕ್ಕಿಂತ ಕಡಿಮೆ ಖರ್ಚಾಗತಕ್ಕಂಥ ೨ ಸೇತುವೆಗಳನ್ನು ನಿಮ್ಮ ಕ್ಷೇತ್ರದಲ್ಲಿ ಕಟ್ಟಿಸಬೇಕೆಂದಿದ್ದೆವೆ.ಅದು ಎಲ್ಲಿ ಆಗಬೇಕು ಎಂಬುದರ ಬಗ್ಗೆ ತಿಳಿಸಿ ಎಂದು ಕಾಗದ ಬರೆದಿದ್ದಿರಿ. ಎರಡೂ ದಿವಸದೊಳಗೆ ನಾವು ಇದಕ್ಕೆ ಉತ್ತರ ಕೊಟ್ಟಿದ್ದೇವೆ. ಈ ಬಗ್ಗೆ ತಾವು ಯಾವ ತೀರ್ಮಾನವನ್ನು ತೆಗೆದುಕೊಂಡಿರಿ ಎಂಬುದು ನಮಗೆ ಗೊತ್ತಾಗಲಿಲ್ಲ. ಈ ಬಗ್ಗೆ ತಾವು ಉತ್ತರ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ತಾವು ಕಳೆದ ವರ್ಷ ಬಹಳ ಮುಖ್ಯವಾದ ಒಂದು ತೀರ್ಮಾನವನ್ನು ತೆಗೆದುಕೊಂಡಿರಿ, ಈ ಇಲಾಖೆಯಲ್ಲಿ ಕೆಲಸಮಾಡತಕ್ಕಂಥ ೧೩ ಜನ ಗ್ಯಾಂಗ್‌ಮನ್‌ಗಳನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದೀರಿ. ಈ ಬಗ್ಗೆ ನಾನು ತಮ್ಮನ್ನು ಕೇಳಲಾಗಿ ಈ ವಿಚಾರದಲ್ಲಿ ರೂಲ್ಸ್ ಫೈನಲೈಸ್ ಆಗದೇ ಇರುವುದರಿಂದ ತಡವಾಗಿದೆ. ಆದಷ್ಟು ಬೇಗ ಅವರನ್ನು ಖಾಯಂ ಮಾಡುತ್ತೇವೆ. ಎಂದು ತಾವು ನನಗೆ ಹೇಳಿದ್ದಿರಿ. ಆದರೆ ಅವರನ್ನು ಇಲ್ಲಿಯುವರೆಗೆ ಖಾಯಂ ಮಾಡಲಿಲ್ಲ. ಅವರಲ್ಲಿ ೨೫ ವರ್ಷಗಳಿಂದ ಕೆಲಸಮಾಡಿದಂಥ ಜನ ಇದ್ದಾರೆ, ಮತ್ತು ೪–೫ವರ್ಷಗಳ ಹಿಂದೆ ಅಲ್ಲಿ ಕೆಲಸಕ್ಕೆ ಸೇರಿದಂಥವರೂ ಇದ್ದಾರೆ. ಇವರೆಲ್ಲರೂ ಬಹಳ ಕಷ್ಟದಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಆ ಕೆಲಸವನ್ನು ಬಿಟ್ಟರೆ ಬೇರೆ ವಿಧಿಯಿಲ್ಲವಾಗಿದೆ. ಅವರಿಗೆ ಆದಷ್ಟು ಬೇಗ ಟಾಪ್ ಪ್ರಯಾರಿಟಿ ಕೊಟ್ಟು ಅವರನ್ನು ಖಾಯಂ ಮಾಡಿಕೊಡಬೇಕು. ಅವರು ೩,೪,೫, ವರ್ಷಗಳ ವರೆಗೆ ಬೇಕಾದರೂ ಕಾಯುತ್ತಾರೆ. ಅವರನ್ನು ಇನ್ನು ೫ ವರ್ಷಗಳಲ್ಲಿ ಖಾಯಂ ಮಾಡಿ ಸರ್ಕಾರಿ ನೌಕರರ ರೀತಿಯಲ್ಲಿ ಅವರು ಅನುಕೂಲತೆಗಳನ್ನು ಪಡೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಂಸ್ಟ್ರಕ್ಷನ್ ಕಾರ್ಪೋರೇಷನ್ ಬಗ್ಗೆ ಹೇಳಬೇಕೆಂದರೆ ಅದರಲ್ಲಿ ತಮಗೆ ಬಹಳ ಅತ್ಮ ವಿಶ್ವಾಸ ಇದೆಯೆಂದು ಕಾಣುತ್ತದೆ. ಅದು ಪ್ರತಿಯೊಬ್ಬ ಮನುಷ್ಯನಿಗೂ ಇರಬೇಕಾದ್ದೇ, ಆದರೆ ತಮಗೆ ಅದರ ಬಗ್ಗೆ ಏನು ಆತ್ಮವಿಶ್ವಾಸ ಇದೆ ಅದು ನಮಗೆ ಕಾಣುತ್ತಾ ಇಲ್ಲ. ಏಕೆಂದರೆ ನಾನು ತಮಗೆ ಕಬಿನಿ ಸೇತುವೆ ದಷ್ಟು ಬೇಗ ಕಟ್ಟಿಕೊಡುವ ಬಗ್ಗೆ ೨–೩ ಇಂಟರ್‌ಪ್ರಿಟೇಷನ್ ಕಳಿಸಿದೆ, ಕಳೆದವರ್ಷ ತಾವು I am giving injections and vitamins. I will make it fit to take up more works. Not even a single stone is change l there, ಎಂದು ಹೇಳಿದಿರಿ. ಮತ್ತು ಅದಕ್ಕೆ ಇನ್ನಷ್ಟು ಬಂಡವಾಳವನ್ನು ಹಾಕುತ್ತೇವೆಂದು ಸಹ ಹೇಳಿದಿರಿ. ಇಲ್ಲಿಗೆ ಒಂದು ವರ್ಷ ಕಳೆದಿದೆ. ಅಲ್ಲಿಗೆ ಜಲ್ಲಿ ಬಂದಿಲ್ಲ ಮರಳು ಬಂದಿಲ್ಲ ಸಿಮೆಂಟ್ ಬಂದಿಲ್ಲ. ಈ ಸೇತುವೆ ಕೆಲಸವನ್ನು ಅವರು ತೆಗೆದುಕೊಳ್ಳುತ್ತಾರೆ ಎಂಬ ಚಿನ್ಹೆಯೂ ನಮಗೆ ಕಾಣುತ್ತಾ ಇಲ್ಲ. It is in the State highw y. The Chief Engineer, Superintending Engineer and all the depa t–

mental officers pass through that road but they do not do anything Have they got any responsibility ? what action they have taken What is the report they have sent to Government and what are they meant for ? ಇಲ್ಲಿಯುವರೆಗೆ ಆ ಕೆಲಸ ಆಗಲಿಲ್ಲ ಎಂದರೆ ಇದು ಬಹಳ ಶೋಚನೀಯುವಾದ ಸಂಗತಿ. ಈ ರೀತಿಯು ದುಸ್ಥಿತಿಗೆ ಇಲಾಖೆಯುನ್ನು ತಳ್ಳಬಾರದೆಂದು ತವುಗೆ ಎಚ್ಚರಿಕೆ ಕೊಡುತ್ತೇನೆ. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಹಾಗೆ ವ್ಯವಸ್ಥೆ ಮಾಡಿ ಇಲ್ಲದಿದ್ದರೆ. ಅದನ್ನು ಮುಚ್ಚಿರಿ. ಕಾಂಪಿಟೇಟೀವ್ ಟೆಂಡರುಗಳನ್ನು ಕರೆದು ಒಳ್ಳೆಯ ಕೆಲಸ ಮಾಡಿಸಿರಿ. ಯಾವುದಕ್ಕೂ ಹೊಸದ ಕಂಟ್ರಾಕ್ಟರುಗಳ ಕೈಗೆ ಕೆಲಸಗಳನ್ನು ಕೊಡಬೇಡಿ. On a firm foundation if the construction corporation takes it up and ivest more money and make it strong to take up this work. ಸುಮ್ಮನೆ ಹೆಸರಿಗಿರಲಿ ಎಂದು ಕಾರ್ಪೊರೇಷನನ್ನು ಮಾಡಿ ಅದರ ಮೂಲಕ ಕೆಲಸ ಮಾಡಿಸುತ್ತೇವೆ ಎಂದು ಹೇಳುವುದು ಬೇಡ. ಈ ಕೆಲಸಕ್ಕೆ ಹಿಂದೆ ಆಗಿದ್ದ ಅಂದಾಜು ಸುಮಾರು ೮ ಲಕ್ಷ ರೂಪಾಯಿಗಳಾಗಿದ್ದರೆ ಈಗ ೫೪ ಲಕ್ಷ ರೂಪಾಯಿಗಳ ಅಂದಾಜು ಆಗಿದೆ. ಅಂದರೆ ಒಂದಕ್ಕೆ ಆರರಷ್ಟು ಏರಿದಂತಾಗಿದೆ. ಇದಕ್ಕೆ ಯಾರು ಜವಾಬ್ದಾರರು ? ಈ ಹೆಚ್ಚುವರಿ ಹಣವನ್ನು ಕೊಡುವವರಾರು ? ಆದುದರಿಂದ ಇದನ್ನೆಲ್ಲ ಲೆಕ್ಕ ಹಾಕಿ, ಮಾನ್ಯ ಸಚಿವರು ಕಾರ್ಪೊರೇಷನನ್ನು ಸರಿಯಾದ ಹತೋಟಿಗೆ ತರಬೇಕೆಂದು ಹೇಳುತ್ತೇನೆ.

೩-೦೦ ಪಿ.ಎಂ.

ಇನ್ನು ರೈಲ್ವೆಗಳ ಬಗ್ಗೆ ಕೇಂದ್ರ ಸರ್ಕಾರದವರು ಕರ್ನಾಟಕದ ಮೇಲೆ ಮಲತಾಯಿ ಧೋರಣೆ ತಾಳಿದೆ ಎಂದು ಹೇಳುತ್ತಿದ್ದರು. ಆದರೆ ನಾನೀಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡಕ್ಕೂ ಅಭಿನಂದನೆ ಸಲ್ಲಿಸಬೇಕಾಗಿದೆ. ಹಾಸನ ಮಂಗಳೂರು ಮತ್ತು ಮೈಸೂರು ಬೆಂಗಳೂರು ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜನ್ನಾಗಿ ಪರಿವರ್ತನೆ ಮಾಡುವ ವಿಚಾರವನ್ನು ಕೇಂದ್ರ ಸರ್ಕಾರದ ರೈಲ್ವೆ ಸಚಿವ ಶ್ರೀ ಮಧುದಂಡವತೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ, ಮತ್ತು ಈ ಮಾರ್ಗಗಳನ್ನು ಬೇಗ ಮಾಡಿಸಿ ಕೊಡುವುದಾಗಿ ಅವರು ಹೇಳಿದ್ದಾರೆ ಎಂದು ಮಾನ್ಯ ಸಚಿವರು ತಿಳಿಸಿದ್ದರು. ಈಗದು ಸತ್ಯವಾಗಿದೆ, ಬೆಂಗಳೂರು ಮೈಸೂರು ರೈಲು ಮಾರ್ಗವನ್ನು ಬ್ರಾಡ್‌ಗೇಜನ್ನಾಗಿ ಪರಿವರ್ತಿಸುವ ಕೆಲಸವನ್ನು ನಾಳೆ ದಿವಸ ಪ್ರಾರಂಭ ಮಾಡಲಿರುವರು ಮತ್ತು ನಾಳಿದ್ದು ಹಾಸನ–ಮಂಗಳೂರು ರೈಲು ಮಾರ್ಗವನ್ನು ಉದ್ಘಾಟಿಸುವವರಿದ್ದಾರೆ ಈ ಎರಡು ವಿಚಾರಗಳನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದರು; ಈಗವು ನಿಜವಾಗಿವೆ. ಅದಕ್ಕಾಗಿ ಕೇಂದ್ರ ಸರ್ಕಾರದವರಿಗೆ ಮತ್ತು ತಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಇನ್ನು ಬೆಂಗಳೂರು ವಿಮಾನ ನಿಲ್ದಾಣದ ಸಂಬಂಧವಾಗಿ ಬಹಳ ದಿವಸಗಳಿಂದಲೂ ನಮ್ಮ ಬೇಡಿಕೆ ಇದೆ. ಇದು ಅಂತ ರಾಷ್ಟ್ರೀಯ ವಿಮಾನ ನಿಲ್ದಾಣವಾಗಲೇಬೇಕು. A team of officers are coming just to investigate what are the facilities to be provided in Bangalore Air port to make it suitable for inter-national trafic...ಎಂದು ನಾನು ಪತ್ರಿಕೆಗಳಲ್ಲಿ ಓದಿದ್ದೆ ಕೇಂದ್ರದವರ ಜೊತೆ ಈ ವಿಚಾರದಲ್ಲಿ ಸಮಾಲೋಚನೆ ಮಾಡಿ ಆದಷ್ಟು ಬೇಗ ಬೆಂಗಳೂರು ವಿಮಾನ ನಿಲ್ದಾಣವು ಅಂತರರಾಷ್ಟ್ರಿಯ ವಿಮಾನ ನಿಲ್ದಾಣವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು, ಲೆಟರ್ ಆಫ್ ಕ್ರೆಡಿಟ್ ಕೊಡುವ ವಿಷಯದಲ್ಲಿ ಒಂದು ಸಲಹೆ ಮಾಡಬಯಸುತ್ತೇನೆ. ಸಾಮಾನ್ಯವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಮೊದಲ ಹತ್ತು ತಿಂಗಳು ಯಾವುದೇ ಎಕ್ಸ್‌ಪೆಂಡಿಚರ್ ಇರುವುದಿಲ್ಲ, ವರ್ಷದ ಕೊನೆಯಲ್ಲಿ ಅಂದರೆ ಫೆಬ್ರುವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಇಡೀ ಆಯುವ್ಯಯುದ ಶೇಕಡ ೮೦ರಷ್ಟು ಹಣ ಖರ್ಚು ಮಾಡತಕ್ಕ ಕೆಟ್ಟ ಚಾಳಿ ಇದ್ದುದರಿಂದ, ಖರ್ಚನ್ನು ಪ್ರತಿ ತಿಂಗಳು ರೆಗ್ಯುಲರ್ ಆಗಿ ಖರ್ಚು ಮಾಡುವುದು ಒಳ್ಳೆಯದೆಂದು ಲೆಟರ್ ಆಫ್ ಕ್ರೆಡಿಟ್ ಕೊಡುವ ಪದ್ಧತಿಯುನ್ನು ಜಾರಿಗೆ ತಂದರು. ಆದರೆ ಇದು ಈಗ ಕಷ್ಟದ ಸಮಸ್ಯೆಯಾಗಿ ಪರಿಣಮಿಸಿದೆ. ಪ್ರತಿ ತಿಂಗಳು ಲೆಟರ್ ಆಫ್ ಕ್ರೆಡಿಟ್ ಬರಬೇಕಾದರೆ ಅನೇಕ ಸಂದರ್ಭಗಳಲ್ಲಿ ತಾಲ್ಲೂಕು ಮಟ್ಟದಲ್ಲಿರುವ ವಿಭಾಗಾಧಿಕಾರಿಗಳು ವಾರಗಟ್ಟಲೆ ಕಾಯು ಬೇಕಾಗುತ್ತದೆ. ಆದುದರಿಂದ ಇದಕ್ಕೊಂದು ನಿಖರವಾದ ಕಾಲವನ್ನು ನಿಗದಿ ಮಾಡಿ ಪ್ರತಿ ತಿಂಗಳ ಒಂದನೇ ಅಥವಾ ಎರಡನೇ ತಾರೀಖು ಲೆಟರ್ ಆಫ್ ಕ್ರೆಡಿಟನ್ನು ಕೊಡು

ವಂತೆ ಏರ್ಪಾಡು ಮಾಡಬೇಕು. ಹಾಗೆ ಮಾಡದಿದ್ದರೆ ಒತ್ತಡ ಮತ್ತು ಪ್ರಭಾವಗಳು ಜಾಸ್ತಿಯಾಗುತ್ತವೆ. ಇದರಿಂದಾಗಿ ಹೆಚ್ಚಿಗೆ ಇರುವ ಕಡೆ ಕಡಿಮೆ ಹಾಕುತ್ತಾರೆ. ಕಡಿಮೆ ಇರುವ ಕಡೆ ಹೆಚ್ಚು ಹಾಕುತ್ತಾರೆ. ಮತ್ತು ತಾಲ್ಲೂಕು ಮಟ್ಟದಲ್ಲಿ ಇದರಿಂದ ಅನೇಕ ಕೆಲಸಗಳು ಕುಂಠಿತಗೊಳ್ಳುತ್ತವೆ. ಆದುರಿಂದ, ಈ ಪದ್ಧತಿಯನ್ನು ಹೆಚ್ಚು ವೈಜ್ಞಾನಿಕವಾಗಿ ಮಾಡಿ ಪ್ರತಿ ತಿಂಗಳು ಒಂದು ನಿಗದಿ ಯಾದ ತಾರೀಖಿಗೆ ಚೀಫ್ ಇಂಜಿನಿಯರ್ ಅವರಿಂದ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರಿಗೆ ಹಣ ಬರುವ ಹಾಗೆ ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಸೋಮಪ್ಪ.(ಕೂಡ್ಲಿಗಿ)—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿರುವ ಲೋಕೋಪಯೋಗಿ ಇಲಾಖೆಯ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವೊಂದು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯಿಂದ ಆಗಿರುವ ಕೆಲಸ ಕಾರ್ಯಗಳನ್ನು ನೋಡಿದರೆ ದೊಡ್ಡ ದೊಡ್ಡ ಊರುಗಳ ಮತ್ತು ಜಿಲ್ಲಾ ಕೇಂದ್ರಗಳ ಕಡೆಗೆ ಹೆಚ್ಚಿನ ರೀತಿಯಲ್ಲಿ ಲಕ್ಷ್ಯ ಕೊಡಲಾಗಿದೆಯೇ ಹೊರತು ಹಳ್ಳಿಗಳ ಕಡೆ ಕೊಟ್ಟಿಲ್ಲದಿರುವುದರಿಂದ ಕಂಡುಬರುತ್ತದೆ. ಹಳ್ಳಿಗಳ ಹೆಸರಿನಲ್ಲಿ ಪೇಟೆ ಪಟ್ಟಣಗಳು ಮುಂದೆ ಬರುತ್ತಿವೆ ಹಳ್ಳಿಗಳು ಬಹಳ ಪ್ರಾಮುಖ್ಯವಾದುವು, ಅವುಗಳ ಉದ್ಧಾರಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು ಸರ್ಕಾರದವರು ಹೇಳುವುದನ್ನು ನೋಡಿದರೆ ಅವರು ಹೇಳಿದಷ್ಟು ಪ್ರಮಾಣದಲ್ಲಿ ಯೋಜನೆಗಳು ಕಾರ್ಯಗತವಾಗಿಲ್ಲ ಎಂದು ಕಂಡುಬರುತ್ತದೆ ಗ್ರಾಮಾಂತರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಹಾಕಿಕೊಂಡ ಐಸಿಆರ್‌ಸಿಯೋಜನೆ ರೂಪಾಯಿಯಲ್ಲಿ ನಾಲ್ಕಾಣೆಯಷ್ಟು ಕೂಡ ಕಾರ್ಯಗತ ಆಗಿಲ್ಲ ಬಳ್ಳಾರಿ ಜಿಲ್ಲೆಯಲ್ಲಂತೂ ಈ ಯೋಜನೆಗೆ ನಿಗದಿ ಮಾಡಿದ್ದ ಹಣ ಬರದೆ ಯಾವುದೇ ರೀತಿಯ ರಸ್ತೆಯಾಗದಿರುವುದು ಬಹಳ ದುರದೃಷ್ಟಕರ ಮತ್ತೆ ಕೆಲವು ರಸ್ತೆಗಳು ಅರ್ಧಂಬರ್ಧ ಹಾಗೆ ಉಳಿದಿದೆ ಸಂಪೂರ್ಣವಾಗಿಲ್ಲ. ಆದುದ್ದರಿಂದ, ಅಲ್ಲಿ ರಸ್ತೆಗಳು ಆಗದೆ ಇರುವುದಕ್ಕೆ ತಾಪತ್ರಯವೇನು ಎಂಬುದನ್ನು ಸಚಿವರು ಪರಿಶೀಲಿಸಿ, ನಿಗದಿ ಮಾಡಿರುವ ಹಣವನ್ನು ಕೊಟ್ಟು ಆದಷ್ಟು ಬೇಗನೆ ರಸ್ತೆ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು, ಮಿನಿಮಂ ನೀಡ್ ಪ್ರೋಗ್ರಾಂ ಮುಖಾಂತರ ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳನ್ನು ನಿರ್ಮಿಸಬೇಕಾಗಿದೆ, ಈ ಯೋಜನೆಯಡಿಯಲ್ಲಿ ಡಾಮರು ರಸ್ತೆಯನ್ನಾಗಲೀ ಅಥವಾ ದೊಡ್ಡ ದೊಡ್ಡ ರಸ್ತೆಗಳನ್ನಾಗಲಿ ಮಾಡಲಿಕ್ಕೆ ಸಾಧ್ಯವಿಲ್ಲದಿರುವುದರಿಂದ ನಮ್ಮ ತಾಲ್ಲೂಕಿನಲ್ಲಿರುವ ಹಳ್ಳಿಗಳಿಗೆ ಸಂಪರ್ಕ ರಸ್ತೆಗಳನ್ನು ಕಲ್ಪಿಸಬೇಕೆಂದು ಹೇಳುತ್ತೇನೆ ಹೊಸದಾಗಿ ರಸ್ತೆಗಳನ್ನು ನಿರ್ಮಿಸಲು ಮತ್ತು ಇರುವ ರಸ್ತೆಗಳನ್ನು ದುರಸ್ತು ಮಾಡಲು ತಾಲ್ಲೂಕು ಬೋರ್ಡ್‌ನವರು ಹಣವಿಲ್ಲವೆಂದು ಹೇಳಿದರೆ ಲೋಕೋಪಯೋಗಿ ಇಲಾಖೆಯವರು ಇದು ನಮಗೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ರಸ್ತೆಗಳ ಮಧ್ಯೆ ಬರುವ ಕಾಲುವೆಗಳಿಗೂ ಇದೇ ಗತಿಯಾಗಿದೆ. ಹೀಗಾಗಿ ಹಳ್ಳಿಗಳಿಂದ ತಾಲ್ಲೂಕು ಕೇಂದ್ರಗಳಿಗೆ ಬರುವುದಕ್ಕೆ ಹೆಚ್ಚಿನ ರಸ್ತೆ ಸೌಕರ್ಯವಿಲ್ಲದಾಗಿದೆ. ಮಾನ್ಯ ಸಚಿವರು ಈ ಕಡೆಗೆ ಗಮನಕೊಟ್ಟು. ನಮ್ಮ ತಾಲ್ಲೂಕಿನಲ್ಲಿ ಹೆಚ್ಚು ಹೆಚ್ಚು ರಸ್ತೆಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು, ಅಧಿಕಾರಿಗಳ ಬಗ್ಗೆ ಹೆಚ್ಚಿಗೆ ಹೇಳಬೇಕಾದ್ದೇನೂ ಇಲ್ಲ. ಈ ಇಲಾಖೆಯ ಕೆಲವು ಅಧಿಕಾರಿಗಳು ಕೆಲವಾರು ಐಟಂ ಕೆಲಸಗಳನ್ನು ನಿಗದಿಪಡಿಸಿರುವ ಕಂಟ್ರಾಕ್ಟರುದಾರರುಗಳಿಂದ ಮಾಡಿಸುವುದಿಲ್ಲ. ಜೂನಿಯರ್ ಇಂಜಿನಿಯರ್ ಮತ್ತು ಅವರ ಮಟ್ಟದ ಅಧಿಕಾರಿಗಳು ಬೇರೊಬ್ಬರ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡಿಸುವ ಪರಿಪಾಠ ಹೆಚ್ಚಾಗಿದೆ. ಬೇರೆಯವರ ಹೆಸರಿನಲ್ಲಿ ಇಲಾಖಾ ಅಧಿಕಾರಿಗಳೇ ಕೆಲಸಗಳನ್ನು ಮಾಡುವುದರಿಂದಾಗಿ. ಅವರು ಮಾಡುವ ಕೆಲಸಗಳನ್ನು ಸಾಮಾನ್ಯವಾಗಿ ಯಾರು ಚೆಕ್ ಮಾಡುವುದಿಲ್ಲ ಮತ್ತು ಬಿಲ್ ಮಾಡುವಾಗ ರಸ್ತೆ ಕೆಲಸವನ್ನು ಸರಿಯಾಗಿ ಮಾಡಲಾಗಿದೆಯೋ ಇಲ್ಲವೇ ಎಂದು ಪರಿಶೀಲಿಸಿ, ಮಾಡುವುದಿಲ್ಲ ಹೀಗಾಗಿ ಈ ವರ್ಷ ಮಾಡಿದ ರಸ್ತೆಗಳು ಮುಂದಿನ ವರ್ಷವೂ ಮಾಡಬೇಕಾದ ಪ್ರಮೇಯ ನಮ್ಮ ತಾಲ್ಲೂಕಿನ ಭಾಗದಲ್ಲಿ ಕಂಡುಬರುತ್ತಿದೆ. ಆ ಬಗ್ಗೆ ಯಾವರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಅವರೇ ನಿರ್ಧಾರ ಮಾಡಬೇಕೆಂದು ಹೇಳುತ್ತೇನೆ. ತಾಲ್ಲೂಕು ಮಟ್ಟದಲ್ಲಿರ ತಕ್ಕ ಕಂಟ್ರಾಕ್ಟ್ ದಾರರುಗಳಿಗೆ ಲಕ್ಷಗಟ್ಟಲೇ ವ್ಯವಹಾರದ ಕಂಟ್ರಾಕ್ಟ್‌ಗಳನ್ನು ಕೊಡುವಾಗ ಒಬ್ಬರೇ ಒಬ್ಬರಿಗೆ ಕೊಡದೇ ಪೀಸ್‌ವರ್ಕ್ ರೂಪದಲ್ಲಿ ೪–೫ ಜನ ಕಂಟ್ರಾಕ್ಟ್‌ದಾರರುಗಳಿಗೆ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ; ಈ ರೀತಿ ಮಾಡುವುದರಿಂದ ಹೆಚ್ಚಿನ ಜನಗಳಿಗೆ ಕೂಲಿ ಒದಗಿಸುವುದಕ್ಕೆ ಅನುಕೂಲವಾಗುತ್ತದೆ.

ಸ್ವಾಮಿ, ನಮ್ಮ ಹಗರಿಬೊಮ್ಮನಹಳ್ಳಿಯನ್ನು ಮೂರು ವರ್ಷಗಳ ಹಿಂದೆ ತಾಲ್ಲೂಕು ಕೇಂದ್ರವಾಗಿ ಸರ್ಕಾರದವರು ಮಾಡಿದರು. ಅಲ್ಲಿ ಇದುವರೆಗೂ ಯಾವುದೇ ಆಫೀಸಿನ ಕಟ್ಟಡಗಳು ಇಲ್ಲ. ಇರತಕ್ಕ ಆಫೀಸುಗಳು ಬಾಡಿಗೆ ಮನೆಯಲ್ಲಿವೆ. ಲೋಕೋಪಯೋಗಿ ಹಾಗೂ ತಾಲ್ಲೂಕು ಆಫೀಸು ಕೂಡ ಬಾಡಿಗೆ ಮನೆಯಲ್ಲಿವೆ, ಇಂಥ ಪರಿಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಯಾವರೀತಿ ಕೆಲಸಮಾಡುತ್ತಾರೋ ನಮಗಂತೂ ಆಶ್ಚರ್ಯವಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಹಗರಿ ಬೊಮ್ಮನಹಳ್ಳಿ ತಾಲ್ಲೂಕಿಗೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಕೊಡಬೇಕೆಂದು ಕೇಳಿಕೊಳ್ಳುತ್ತೆನೆ. ಬಳ್ಳಾರಿ ಜಿಲ್ಲೆಯಲ್ಲಿರತಕ್ಕ ಪ್ರತಿಯೊಂದು ಹಳ್ಳಿಗಳುಕೂಡ ಸಾಮಾನ್ಯವಾಗಿ ಹಿಂದುಳಿದಿವೆ. ಈಗ ಏನು ಮಾಸ್ಟರ್ ಪ್ಲಾನ್ ಮಾಡಿದ್ದೇವೆಂದು ಹೇಳಿದ್ದಾರೆ ಅದಕ್ಕೆ ಬದಲಾಗಿ ಪ್ರತಿವರ್ಷವೂ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ತಾಲ್ಲೂಕುಗಳನ್ನು ಅಡಾಪ್ಷನ್ ಆಗಿ ಮಾಡಿ ಒಂದೊಂದೇ ತಾಲ್ಲೂಕನ್ನು ಒಂದೊಂದು ವರ್ಷ ಸುಧಾರಿಸುವಂತೆ ಮಾಡಿದ್ದರೆ ಸಂಪೂರ್ಣವಾಗಿ ೭-೮ ವರ್ಷಗಳಲ್ಲಿ ಎಲ್ಲಾ ಹಳ್ಳಿಗಳ ಸುಧಾರಣೆಯಾಗುತ್ತಿದ್ದವು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದಷ್ಟು ಮಟ್ಟಿಗೆ ಹಿಂದುಳಿದಿರತಕ್ಕ ಪ್ರದೇಶಗಳನ್ನು ಉದ್ಧಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೆಲವು ತಾಲ್ಲೂಕುಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಸಂಪೂರ್ಣವಾಗಿ ರಸ್ತೆಗಳ ಸಂಪರ್ಕವೆ ಇಲ್ಲದಂತಾಗಿದೆ. ತಾಲ್ಲೂಕು ಪ್ರದೇಶದಿಂದ ನಗರಪ್ರದೇಶಗಳಿಗೆ ಬರುವುದಕ್ಕೆ ರಾಷ್ಟ್ರೀಯ ಹೆದ್ದಾರಿಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ ನಮ್ಮ ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ ಇನ್‌ಸ್ಪೆಕ್ಷನ್ ಬಂಗಲೋ ಇಲ್ಲ ನಮ್ಮ ತಾಲ್ಲೂಕಿಗೆ ಸರ್ಕಾರದ ಅಧಿಕಾರಗಳಾಗಲೀ ಮಂತ್ರಿಗಳಾಗಲೀ ಬಂದರೇ ತಂಗುವುದಕ್ಕೆ ಸ್ಥಳವಿಲ್ಲದೆ ಮುಂಜಾನೆಯೊಳಗೆ ವಾಪಸ್ಸು ಬರುವಂಥ ಪರಿಸ್ಥಿತಿ ಇದೆ. ಅತ್ಯಾವಶ್ಯಕವಾಗಿರತಕ್ಕ ಇನ್ಸ್‌ಪೆಕ್ಷನ್ ಬಂಗಲೆಯನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತೆ ಕಾಲುವೆ ಹಾಗೂ ಕೆರೆಗಳ ದುರಸ್ತಿ ಕೆಲಸ ಬಹಳ ಮುಖ್ಯವಾಗಿ ಆಗಬೇಕಾಗಿದೆ. ಇದರ ಕಡೆ ಹೆಚ್ಚಿನ ಲಕ್ಷ್ಯ ವಹಿಸಿ, ಆದಷ್ಟು ಕೆರೆ ಕಾಲುವೆಗಳನ್ನು ದುರಸ್ತಿ ಮಾಡಿಸಬೇಕೆಂದು ಹೇಳುವುದಕ್ಕೆ ಇಷ್ಟು ಪಡುತ್ತೇನೆ.

ಸ್ವಾಮಿ, ಗ್ರಾಮಾಂತರ ಪ್ರದೇಶಗಳಿಗೆ ಹೋಗತಕ್ಕ ರಸ್ತೆಗಳ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ನಮ್ಮ ಬಳ್ಳಾರಿ ಜಿಲ್ಲೆ ಅತಿ ಹಿಂದುಳಿದ ಜಿಲ್ಲೆಯಾಗಿದೆ. ನಮ್ಮ ಜಿಲ್ಲೆಗೆ ವಿಜಯನಗರ ಸ್ಟೀಲ್ ಪ್ಲಾಂಟ್ ಬರುವ ಸಂಭವ ಇದೆ. ಆದ್ದರಿಂದ ಕೊಟ್ಟೂರು ಮತ್ತು ಹರಿಹರಕ್ಕೆ ಇರತಕ್ಕ ರೈಲ್ವೆ ಮಾರ್ಗವನ್ನು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಭೀರಿ ಬ್ರಾಡ್‌ಗೇಜ್ ಆಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಹೋದ ವರ್ಷ ಹಾಸನ ಮಂಗಳೂರು ಮಾರ್ಗ ಬ್ರಾಡ್‌ಗೇಜ್ ಮಾರ್ಗವಾಯಿತು, ಈ ವರ್ಷ ಬೆಂಗಳೂರು ಮತ್ತು ಮೈಸೂರು ರೈಲು ಮಾರ್ಗ ಬ್ರಾಡ್‌ಗೇಜ್ ಆಯಿತು ಬಳ್ಳಾರಿ ಜಿಲ್ಲೆ ಕಡೆಗೂ ಹೆಚ್ಚಿನ ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಿತ್ರರಾದ ರಾಮಚಂದ್ರರೆಡ್ಡಿಯವರು ಹೇಳಿದಂತೆ ಈ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸದೆ, ನಮ್ಮ ಭಾಗದ ಕಡೆಗೂ ಗಮನಕೊಡಬೇಕೆಂದು ಹೇಳುತ್ತೆನೆ. ನಮ್ಮ ಜಿಲ್ಲೆಗೆ ಮಂತ್ರಿಮಂಡಲದಲ್ಲಿಯೂ ಕೂಡ ಒಂದು ಸ್ಥಾನ ಇಲ್ಲ. ತಾವೇ ಬಳ್ಳಾರಿ ಜಿಲ್ಲೆಯ ಪ್ರತಿನಿಧಿ ಎಂದು ತಿಳಿದುಕೊಂಡು ನಮ್ಮ ಭಾಗಕ್ಕೆ ಹೆಚ್ಚು ಸವಲತ್ತುಗಳನ್ನು ಮಾಡಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI C. M. ARUMUGHAM (K. G. F.).—Sir, at the outset I welcome the Master Plan prepared by the Hon'ble Minister for Public Works Sri Bangarappa. I compliment the Hon'ble Minister, the Engineers and all those involved in preparing this Master Plan. I think this is the first time in the history of Karnataka such a plan has beern prepared.

SRI S. BANGARAPPA (Minister for Public Works).—For the first time in the entire country !

SRI C. M. ARUMUGHAM.-- Having known about this Master Plan, I am told the Union Minister for Transport and Shipping Sri Chand Ram, has asked other States in India to prepare such a Plan. That way the Government of Karnataka is leading in preparing at least the Master Plan. We find very useful and helpful information in this Plan about roads, connecting roads, kucha roads, metal roads, number of schools, hospitals, number of villages, etc. I do not know from where they got this information. The information is very valuable not only for the Public Works Department, but also for all other Departments. It is very useful for the Members of the Legislature to know the number of villages in the State which have got roads and which have no roads. The total cost of master plan costs about Rs. 949 crores. This plan envisages to connect the villages with the road. For the last 30 years the planners at Delhi never thought of such a plan. If they had thought of it, by now all our villages would have had the roads. Nevertheless, our Karnataka Government has prepared a plan and I welcome it. But the time fixed is 20 years. By the time the master plan is implemented the cost would be doubled. I do not think they have taken into account the escalation of the cost of material over a period of 20 years. I hope the planners might have taken into account all these factors while preparing this plan. By that time our population would be increased, the number of vehicles and the traffic potential would be increased. In this connection I would like to state that our existing roads like the National Highways, the State Highways and the major district roads required to be widened. I think this aspect might have been taken into consideration while preparing this document. All the existing roads must be upgraded. For instance the Bangalore-Mysore may be converted into a National Highway. The road from Kolar to Bangarpet and the KGF-Kuppam road should also be converted into a National High way. This would enable the State Government to get more central grants. In good old days whenever a Chief Engineer used to move on the road, about 25 cars and jeeps used to follow his car. Now that is not the position. The bureaucrats have classified the roads into State Highways and the National Highways: Your annual report at page 5 indicates how grants are given and the length of roads proposed to be taken up. If you reclassify the roads, the mintenance grants to be claimed from the Central Government would be more. Therefore it is hightime that all roads be reclassified so that they will be properly maintained with adequate grants.

At page 9 of the report, it is stated that the master plan requires about 2000 engineers both graduates and diploma holders and 2000 supporting staff like clerks, accountants etc. If you are really in

need of so much staff, have you worked out the number of staff required for 20 years. In order to meet the requirements of your staff, you will have to think to increase the intake capacity of the Engineering Colleges and the Polytechnics and you should think of starting some more colleges and Polytechnics to cater to the needs of the Public Works Department.

While complimenting the Government for this master plan, I would also request the Minister to prepare a master plan for the residential and non-residential buildings to meet the requirement of the State. For instance, you will have to provide buildings for the new hospitals and the Primary Health Centres which are coming up every year. You must also bestow your attention to repair the existing buildings especially the hospital buildings. The annual repairs are not carried out to the hospital buildings yearly. The PWD provides quarters for the Engineers and other staff but the staff of the other Departments are neglected. Quarters for the doctors and other para medical staff are absolutely necessary. When a midwife is transferred from one place to another. she will be reluctant to go because there will not be quarters available to her. I am not bothered about the IAS and IPS officers because whenever they are transferred, they will be received with all the honours and they will be provided with quarters immediately. I request the Minister to include the staff quarters for the staff of other departments in the master plan.

Sir, it has been the practice for the last many years to entrust the work of construction–whether it is a road or a big project, to the Class A contractors. I have seen some of the contractors leading a luxurious life. It is said that 35% of the money allotted for a particular work will be eated away by the contractors. The Department which has got so much staff and machinery can come forward to execute the works departmentally. These PWD contractors are making money like the Excise Contractors. They are looting the money of the State. The Birlas, it is said that at one time had 100 crores of investment, now his capital has grown upto Rs. 2500 crores I know some of the contractors do pay money to some political parties, but I have never got a single pie from them. By paying to the party–funds, the contractors would mint the money in later years. These A class contractors came into existence when the Sharavati Project was taken up for construction. There were about 300 A class contractors. There was a big scandal in that project. The strength of these contractors was reduced to 6. These contractors have maintained a big establishment and they appear like a big company. Every year he is expanding his activities. These contractors decide as to who should get

the work and who should come to the project in charge of the entire project. They manipulate in such a way. I know Mr. Bangarappa is a very honest man and he will destroy this old procedure of having only few limited 'A' Class contractors. I was told that one A class contractor is running 10-15 buses under one number-plate. When he goes to the project area, he gets his own man as Engineers there. For example you can check it up in Upper Krishna project, Hemavathi project and Kabini project and see who are the officers working there. Every time, you give these works only to one dozen contractors who are equal to your Govt. But this is not correct. The work should be distributed among other small contractors also, since there are other contractors also. You can also take up some of the works through your department since there are so many engineers in your department.

3-30 P. M.

On page number 34 of your performance budget. there is some money provided for the construction of IAS Officers' Club. Do you want to encourage this type of clubs? This costs more than 18 lakhs But they reduced it to 13 lakhs because. otherwise it has to go to the Cabinet for approval if the cost exceeds 15 lakhs. The purpose of this club is for playing dance and drink. If they want a dancer from Madras they could bring and have a dance in their club. Do you mean to say that you have to encourage this kind of clubs. Another thing is that they have not included other officers of Revenue, Forest, Sericulture or Horticulture. It is purely meant for IAS men only. Why such discrimination? Let other officers also included in that Club. I know Mr. Bangarappa is a person for socialism. You must take proper action in this direction. Nonetheless, the club has come up. At least make it as a 'Senior Officers Club' instead of only restricting to IAS only. This monopoly of IAS officers should not be encouraged. Therefore. I think that the Hon. Minister for PWD, before giving final approval, make it as a general club making provisions for other officers also to join. Let it be called as 'Officers Club'. Because, as legislators we don't want any clubs. Let. there be a club for Ministers. But not for us.

Then I will come to Kudremukh road. With the help of the military the road was completed well in time. Therefore, I compliment the Chief Engineer Communications and buildings for the nice work he has done and also his other staff members. I want to know from the Minister about the cost. Who met this cost? Whether Kudremukh project people have given the money or the Government of

India? Suppose you are getting it from the Kudremukh. you could get lot of money from Iran which could be utilised for some other roads in that area.

Then irregularities should not be encouraged in the department. There was one Executive Engineer who has made 10-11 crore loss on account of bad works in Chikkahole project. What happened to him? He has been promoted. There is a Government Order dated 15th November 1978 which states that whenever there is any charge against any Engineers or Officers they should not be posted to such important places. Then what type of Government you have got; and what type of orders you are issuing? Further when he has been posted to some other important place, he will make some other crores of rupees loss to the Government. Kindly take proper action against such cases. There was another Chief Engineer who was involved in one case in which the CBI is probing into, and still investigation is going on. He has given some fancy rates in canal works I learnt that he has been given extension. Is this the way such officers are being dealt with by the Government? Kindly see that no extension is given to such officers There is also another Chief Engineer with questionable character. He has also been given the extension. Such things should not happen and it will not bring credit to the Government also.

Coming to the Confidential reports of the Executive Engineers. it is being written by the Dy. Commissioners of the District. The Confidential reports of the Superintendent Engineers are being written by the Divisional Commissioners. You are well aware that now-a-days we are having Dy. Commissioners who are aged between 25-35 generally. But to become an Executive Engineer, one must have worked for several years and must be more than 45 years of age. Such being the case, how could you ask the Dy. Commissioners to write the Confidential reports of such senior officers like Executive Engineers? There is a G. O. in this connection. But for which all of them have protested. So, the Government has withdrawn that G. O. Mr. Bangarappa is a strong man who would try to assert himself. Therefore. kindly see that such a practice is discontinued. The Dy. Commissioner must have the power to write Confidential reports of officers upto Class III but not that of Executive Engineers. Then, what would be the morale of the Engineering department? Once it has happened in Chickmagalur. Once the Dy. Commissioner suspended one Meti. The Meti said 'No', because he is under P.W.D. Therefore, it is high time that the writing of the confidential reports of Engineering Department by the IAS officers should be stopped forth with.

In Co-ordination Committee, the Chairman will be an IAS man. It is not correct. The Senior officer of the District should be made as the Chairman of such Co-ordination Committee; but not these young IAS officers.

Then there is a building at K.G.F., which is called as Travellers Bungalow. The land is very costly. I warn if they give it to a private man, we will have to agitate. Therefore, please see that such things do not happen. I have not come to liquidate K.G.F. but to get more facilities. You should not hand over the building to some other person.

Now I would like to deal with the subject-service matters of P.W.D. The representation given to the Scheduled Castes/Scheduled Tribes is negligible. The P.W.D. has not recruited for so many years. The total number of Assistant Engineers is 1328 and the number of Scheduled Caste/Scheduled Tribes is only 20. It is a shame on the part of the department. Government has not given proper representation for the Scheduled Castes/Scheduled Tribes. They have nicely evolved a system so that untouchables should not be given. In P.W.D. I know a case where a contractor has become a very big man in the country. He was in the Kabini river project. It is on account of such persons that the Scheduled Castes/Scheduled Tribe persons are prevented. The hon Minister should see that there are at least 224 Assistant Engineers from these presons to get our quota. Last time, the Hon. Minister said that there would be one Chief Engineer belonging to Scheduled Caste. What has happened to that, Mr. Bangarappa? Why not give them more representation if there are candidates? There are about 25 Chief Engineers; among them 13 are Brahmins, 6 Vokkaligars; 3 Lingayats and 3 Minority communities. There are about 10 vacancies. There are no Scheduled Casts persons. 8 Chief Engineers will be retiring in December. Why not the Minister consider giving promotion to S.C. S.Ts.? It should not be on merit and suitability What suitability is there? There are so many officers who are not suitable. The Chief Secretary was not selected on seniority. Seven senior officers were superseded when the Chief Secretary was selected. Some of the Chief Engineers are limping. For promotion of Assistant Engineers to Assistant Executive Engineers government have got a yard-stick that they should work for five years. This period must be reduced. Remove the word 'suitability' which is nicely coined. The minimum number of years of service should not be insisted in respect of Scheduled Castes/Scheduled Tribes. To look in to the welfare, promotion and service conditions of these people a cell may be created. An S.E. may be attached to the Secretary, P.W.D. to look into this. Regu-

larise the services of temporary SC/ST candidates. Last time, the Minister promised he would look into the conditions of casual labourers and gangmen.

With these few words, I thank you very muoh. I congratulate the Minister for having brought up a master plan for the roads.

† ಶ್ರೀ ಎನ್. ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ ಈವತ್ತಿನ ದಿವಸ ಮಾನ್ಯ ಲೋಕೋಪಯೋಗಿ ಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ತಮ್ಮ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ಏನು ಇಟ್ಟಿರುತ್ತಾರೆ ಅದಕ್ಕೆ ಪೂರ್ಣವಾಗಿ ಬೆಂಬಲಿಸುತ್ತಾ ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳಲು ಬಯಸುತ್ತೇನೆ. ಈವತ್ತಿನ ದಿವಸ ಶ್ರೀಮಾನ್ ಬಂಗಾರಪ್ಪನವರು ಲೋಕೋಪಯೋಗಿ ಮಂತ್ರಿಗಳಾದ ನಂತರ, ಅದಕ್ಕೂ ಮೊದಲು ಶ್ರೀಮಾನ್ ಶ್ರೀಕಂಠಯ್ಯನವರು ಲೋಕೋಪಯೋಗಿ ಮಂತ್ರಿಗಳಾಗಿದ್ದರು. ಅದಕ್ಕೂ ಮೊದಲೂ ಶ್ರೀಮಾನ್ ಚೆನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದರು. ನಾನು ಎಂಟು ವರ್ಷಗಳಿಂದಲೂ ಶಾಸಕನಾಗಿ ಕೆಲಸ ಮಾಡುತ್ತಿದ್ದೇನೆ. ಈವತ್ತಿನ ದಿವಸ ೧೯೭೭ರಲ್ಲಿ ನಮ್ಮ ತಾಲ್ಲೂಕಿನಲ್ಲಿಯಾಗಲಿ, ನಮ್ಮ ಜಿಲ್ಲೆಯಲ್ಲಿಯಾಗಲಿ ಮತ್ತೆ ಎಲ್ಲಾ ಕಡೆಗಳಲ್ಲಿಯೂ ಏನು ಒಂದು ಪರಿಸ್ಥಿತಿ ಇತ್ತು ಅದೇ ಪರಿಸ್ಥಿತಿ ಈವತ್ತಿಗೂ ಇರುತ್ತದೆ. ಮತ್ತೆ ಶ್ರೀಮಾನ್ ಬಂಗಾರಪ್ಪನವರು ಕೂಡ ಮೊದಲು ವಿರೋದಪಕ್ಷದ ಸದಸ್ಯರಾಗಿ ಸರ್ಕಾರದ ಆಡಳಿತದಲ್ಲಿ ಉಂಟಾಗತಕ್ಕ ಎಡರುತೊಡರುಗಳು ಏನು ಇವೆ, ಕೆಲಸಕಾರ್ಯಗಳು ಏನು ನಡೆಯಬೇಕು ಅವೆಲ್ಲವನ್ನು ಪ್ರಸ್ತಾಪ ಮಾಡುತ್ತಿದ್ದುದು, ವಿರೋದಪಕ್ಷದ ಸದಸ್ಯರಾಗಿ ಇದರ ಬಗ್ಗೆ ಮಾಹಿತಿಗಳು ಕೂಡ ಇವೆ. ಈವತ್ತಿನ ದಿವಸ ಅವರು ಈ ಖಾತೆಯನ್ನು ವಹಿಸಿಕೊಂಡನಂತರ ನಮ್ಮೆಲ್ಲರಿಗೂ ವಿಶ್ವಾಸ ಮತ್ತು ನಂಬಿಕೆ ಏನು ಆಗಿದೆ ಎಂದರೆ ಅವರು ಖಾತೆಯಲ್ಲಿ ಬಹಳಷ್ಟು ಬದಲಾವಣೆ ಮಾಡಬಹುದು, ಸಾಕಷ್ಟು ಇದರ ಬಗ್ಗೆ ಅವರು ಗಮನಕೊಟ್ಟು ಈ ಖಾತೆಯಲ್ಲಿ ಆಗತಕ್ಕಂಥ ಅನಾಹುತ ಏನು ಇದೆ ಅದನ್ನೆಲ್ಲ ಅವರು ತಡೆಗಟ್ಟಿ ಲೋಪದೋಷಗಳನ್ನು ನಿಲ್ಲಿಸಿ ಖಾತೆಗೆ ಒಂದು ಸರಿಯಾದ ಹೊಸ ರೂಪವನ್ನು ಕೊಡುತ್ತಾರೆಂಬ ಭಾವನೆ ಇತ್ತು ಈಗ ಕೂಡ ನಾವು ಅದೇ ಭಾವನೆಯಿಂದ ಇದ್ದೇವೆ. ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ತಮ್ಮ ಆಡಳಿತದಲ್ಲಿ ಬಹಳ ಅಭಿಮಾನವಿದೆ, ವಿಶ್ವಾಸವಿದೆ, ಆದರೆ ಎಲ್ಲಿ ಅಡ್ಡಿಯಾಗುತ್ತಿದೆ ಎನ್ನುವುದು ನಮಗೆ ತಿಳಿಯುತ್ತಿಲ್ಲ ಎಲ್ಲ ಖಾತೆಗಳ ಬಗ್ಗೆ ಚರ್ಚೆ ಆಗುತ್ತಿರುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು, ಆರ್ಥಿಕ ಮಂತ್ರಿಗಳು ಇರಬೇಕಾಗಿತ್ತು. ಸದಸ್ಯರು ಏನು ಹೇಳುತ್ತಿದ್ದಾರೆ ಸದಸ್ಯರು ಹೇಳತಕ್ಕಂಥ ಭಾವನೆ ಏನು ಇದೆ, ಎಂಬುದನ್ನು ಮಾನ್ಯ ಮಂತ್ರಿಗಳೂ ಕೂಡ ಕುಳಿತುಕೊಂಡು ಕೇಳಬೇಕಾಗಿತ್ತು. ಶ್ರೀಮಾನ್ ಬಂಗಾರಪ್ಪನವರು ಬಂದ ನಂತರ ರಾಜ್ಯದಲ್ಲಿ ಎಂಎಲ್‌ಪಿ ರೋಡ್ಸ್ ಆಗುತ್ತಿದೆ ಅದು ಆಗುತ್ತಿದೆ ಇದು ಆಗುತ್ತಿದೆ ಎಂದೆಲ್ಲ ಹೇಳಿದರು. ನಾವು ಕೂಡ ನಮ್ಮ ಕಡೆಗೆ ೫ ಕಿಲೋಮೀಟರ್ ರೋಡ್ಸ್ ಆಗುತ್ತದೆ. ೧೧ ಕಿಲೋಮೀಟರ್‌ಗಳಷ್ಟು ರೋಡ್ಸ್ ಆಗುತ್ತದೆ ಎಂದು ಜನರಿಗೆ ಹೇಳುತ್ತಲೇ ಇದ್ದೇವೆ. ಆದರೆ, ಅದಿನ್ನೂ ಕೂಡ ಪ್ರಾರಂಭವಾಗಿಲ್ಲ. ಕಾರಣ ಕೇಳಿದರೆ. ಹಣದ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಎಫ್.ಡಿ. (ಹಣಕಾಸು ಇಲಾಖೆ) ಎಂದರೆ ''ಫೈನಲ್ ಡೆತ್'' ಎಂದು ಅಲ್ಲಿಗೆ ಹೊದವು ಒಂದೂ ಮಂಜೂರಾಗಿ ಬರುವುದಿಲ್ಲ. ಈ ಇಲಾಖೆ ಬಹಳ ಮುಖ್ಯವಾದುದು. ದುಡ್ಡಿನ ಕೊರತೆಯಿಂದಾಗಿ, ಈ ಇಲಾಖೆಯಲ್ಲಿ ಅನೇಕ ಯೋಜನೆಗಳಿದ್ದರೂ, ಆ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂಬ ಮನಸಿದ್ದರು ಅವುಗಳನ್ನು ಮಾಡುವುದಕ್ಕಾಗುತ್ತಿಲ್ಲ, ಮಾನ್ಯಮಂತ್ರಿಗಳ ಮೇಲೆ ನನಗೆ ವಿಶ್ವಾಸವಿದೆ, ನಂಬಿಕೆ ಇದೆ, ಅವರು ರಾಜ್ಯದ ಎಲ್ಲಾಕಡೆ ಪ್ರವಾಸ ಮಾಡಿ, ಜನರ ಕುಂದುಕೊರತೆಗಳನ್ನು ಅರಿತುಕೊಂಡಿದ್ದಾರೆ. ಮೊನ್ನೆ ತಾನೆ ನಮ್ಮ ತಾಲ್ಲೂಕಿಗೆ ಅವರು ಬಂದಿದ್ದಾಗ, ಅಲ್ಲಿನ ಊರೊಂದರಲ್ಲಿ ಅವರು ಭಾಷಣ ಮಾಡಿದರು. ಮತ್ತೆ ಅವರು ಹಿಂದಿರುಗುವಾಗ ರಸ್ತೆ ಚೆನ್ನಾಗಿಲ್ಲದೆ ವಾಹನದಲ್ಲಿ ಕುಳಿತ ಅವರಿಗೆ ಎಷ್ಟು ಕಷ್ಟವಾಯಿತು ಎನ್ನುವುದನ್ನು ಅವರೂ ಅರಿತರು. ಪರಿಸ್ಥಿತಿ ಹೀಗಿರುವಾಗ. ಅಗತ್ಯ ಕಾಮಗಾರಿಗಳಿಗೆ ಹಣದ ಕೊರತೆ ಇದೆ ಎನ್ನುವುದರ ಬಗ್ಗೆ ಸಮಾಲೋಚನೆ ಮಾಡಿ, ಸಾಧ್ಯವಾದರೆ ಹೆಚ್ಚಿನ ಹಣದ ನೆರವನ್ನು ಪಡೆದುಕೊಂಡು ಈಗ ಕೊಟ್ಟಿರುವ ಪ್ರಪೋಸಲ್ಸ್‌ಗಳನ್ನೆಲ್ಲ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಹೈದರಾಬಾದ್ ಕರ್ನಾಟಕದ ಪ್ರದೇಶಗಳಾದ ಬೀದರ್, ರಾಯಚೂರ್ ಮತ್ತು ಗುಲ್ಬರ್ಗ

ಕಡೆಗಳಲ್ಲಿ ಚೆನ್ನಾಗಿರುವ ರಸ್ತೆಗಳಿಲ್ಲ. ನನ್ನ ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಅಲ್ಲಿರುವ ರಸ್ತೆಗಳು ಏನೇನು ಉಪಯೋಗವಿಲ್ಲ. ಆದುದರಿಂದ, ಮಾನ್ಯ ಸಚಿವರು ನಮ್ಮ ತಾಲ್ಲೂಕಿನ ರಸ್ತೆ ನಿರ್ಮಾಣದ ಕಡೆಗೆ ಹೆಚ್ಚಿನ ಗಮನ ನೀಡಬೇಕೆಂದು ಹೇಳುತ್ತೇನೆ. ಯಾವ ಜಿಲ್ಲೆಯಲ್ಲಿ ಪ್ರಭಾವವಿರುವಪರಿರುತ್ತಾರೆ ಮತ್ತು ಮಂತ್ರಿಗಳಿರುತ್ತಾರೆಆ ಜಿಲ್ಲೆಗೆ ಹೆಚ್ಚು ಹಣ ಒದಗಿಸಿದರೆ ಬೇರೆ ಜಿಲ್ಲೆಗಳಿಗೆ ಕಡಿಮೆಹಣ ಒದಗಿಸಬೇಕಾಗುತ್ತದೆ ಮತ್ತು ಇದರಿಂದ ಕಡಿಮೆ ಹಣ ಪಡೆದ ಜಿಲ್ಲೆಗಳು ಬಹಳ ತೊಂದರೆಯನ್ನನುಭವಿಸಬೇಕಾಗುತ್ತವೆ. ಆದುದರಿಂದ, ಎಲ್ಲ ಜಿಲ್ಲೆಗಳಿಗೂ ಸರಿಯಾದ ಪ್ರಮಾಣದಲ್ಲಿ ಹಣವನ್ನು ಹಂಚಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಮಲೆನಾಡು ಪ್ರದೇಶಗಳಲ್ಲಿರುವ ರಸ್ತೆಗಳ ಪರಿಸ್ಥಿತಿ ಬಗ್ಗೆ ಹೆಚ್ಚು ಗಮನ ಕೊಡಲು ಸರ್ಕಾರದವರು ವಿಚಾರ ಮಾಡುತ್ತಿರುವರೆಂದು ನಾನು ಕೇಳಿದೆ. ಹಾಗೆಯೇ, ನಮ್ಮ ಭಾಗವು ಕಪ್ಪು ಮಣ್ಣುಳ್ಳ ಪ್ರದೇಶ. ಆದುದರಿಂದ ಅಲ್ಲಿಗೂ ಕೂಡ ಹೆಚ್ಚು ಹಣ ಕೊಟ್ಟು ಹೊಸ ರಸ್ತೆಗಳ ನಿರ್ಮಾಣ ಹಾಗೂ ಹಳೇ ರಸ್ತೆಗಳ ದುರಸ್ತು ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಮೊನ್ನೆ ತಾವು ಗುಲ್ಬರ್ಗ ಜಿಲ್ಲೆಗೆ ಪ್ರವಾಸ ಬಂದಿದ್ದಾಗ, ನಮ್ಮ ಭಾಗದ ರಸ್ತೆಗಳ ಬಗ್ಗೆ ಆಂಧ್ರ ಸರ್ಕಾರದ ಲೋಕೋಪಯೋಗಿ ಸಚಿವರೊಡನೆ ಪ್ರಸ್ತಾಪ ಮಾಡುವುದಾಗಿ ತಿಳಿಸಿದ್ದೀರಿ. ಅದರಂತೆ, ಗುಲ್ಬರ್ಗದಲ್ಲಿ ಜೂನ್ ತಿಂಗಳಲ್ಲಿ ಸಮ್ಮೇಳನವೊಂದನ್ನು ಮಾಡುವ ಸಂಭಾವನೆಯೂ ಇತ್ತು. ಆದುದರಿಂದ, ಸೇಡಂ ಮತ್ತು ಹೈದರಾಬಾದ್ ಕಡೆಗಳಿಗೆ ನಮ್ಮ ಭಾಗದಿಂದ ಹೋಗುವ ಜನಗಳಿಗೆ ಬಹಳ ತೊಂದರೆ ಇರುವುದರಿಂದ, ಆಂಧ್ರ ಸರ್ಕಾರದ ಲೋಕೋಪಯೋಗಿ ಸಚಿವರೊಡನೆ ತಾವು ಸಮಾಲೋಚಿಸಿ, ನಮ್ಮ ಭಾಗದ ರಸ್ತೆ ಸೌಕರ್ಯಗಳ ಬಗ್ಗೆ ಹೈದರಾಬಾದ್ ಅಥವಾ ಗುಲ್ಬರ್ಗದಲ್ಲಿ ಸಮ್ಮೇಳನವೊಂದನ್ನು ನಡೆಸಿ ನಮ್ಮ ಕಷ್ಟಗಳಿಗೆ ಪರಿಹಾರ ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕದ ರೈಲು ಮಾರ್ಗಗಳ ಕುರಿತು ಮಾನ್ಯ ರಾಮಯ್ಯ ಹಾಗೂ ಎಂ.ಸಿ. ಬಸಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಕಳೆದ ವರ್ಷ ಬೇಡಿಕೆ ಮೇಲಣ ಚರ್ಚೆಯಲ್ಲಿ ತಾವು ಹೇಳಿದಂತೆ ಕೇಂದ್ರ ಸರ್ಕಾರದ ರೈಲ್ವೆ ಖಾತೆಯ ಸಚಿವರಾದ ಶ್ರೀ ಮಧು ದಂಡವತೆಯವರೊಂದಿಗೆ ವಿಚಾರ ವಿನಿಮಯ ನಡೆಸಿ ಹಾಸನ–ಮಂಗಳೂರು ರೈಲು ಮಾರ್ಗವನ್ನು ಮುಕ್ತಾಯಗೊಳಿಸಿದ್ದೀರಿ. ಬೆಂಗಳೂರಿಗೆ ಗುಲ್ಬರ್ಗ ನಾಲ್ಕು ನೂರು ಮೈಲಿಗಳಾದರೆ ಬೀದರೆ ಐದು ನೂರು ಮೈಲಿಗಳಾಗುತ್ತದೆ. ಇವುಗಳಿಗೆ ರೈಲು ಮಾರ್ಗ ಕಲ್ಪಿಸುವತ್ತ ತಾವು ಹೆಚ್ಚು ಗಮನ ಕೊಡಬೇಕಾಗಿದೆ. ಗುಂತಕಲ್‌ನಿಂದ ಬೆಂಗಳೂರಿಗೆ ಇರುವ ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತಿಸುವ ಕಾರ್ಯವಿದೆ. ಈಗ ನಾವು ನಮ್ಮ ಭಾಗದಿಂದ ಬೆಂಗಳೂರಿಗೆ ಬರಲು ಸಂಜೆ ಆರು ಗಂಟೆಗೆ ಬಿಟ್ಟರೆ ಇಲ್ಲಿಗೆ ಬರುವುದು ಮಾರನೆಯ ದಿವಸ ಆರು ಗಂಟೆಯಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಹಣವಿಲ್ಲವೆನ್ನುವ ಕಾರಣಕ್ಕಾಗಿ ಈ ರೈಲು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತಿಸುವ ಕಾರ್ಯ ತಡವಾಗಬಾರದು. ಮಾನ್ಯ ಸಚಿವರು ಕೇಂದ್ರದೊಡನೆ ಸಮಾಲೋಚನೆ ನಡೆಸಿ ಆದಷ್ಟು ಬೇಗನೆ ಇದನ್ನು ಕಾರ್ಯಗತಗೊಳಿಸಬೇಕೆಂದು ಹೇಳುತ್ತೇನೆ.

ಇನ್ನು, ಗುಲ್ಬರ್ಗಕ್ಕೆ ವಿಮಾನ ಯಾನ ಸೌಲಭ್ಯವನ್ನು ಒದಗಿಸಬೇಕಾಗಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳೂ ಸಹ ಗುಲ್ಬರ್ಗಕ್ಕೆ ಬಂದಿದ್ದರು ಮತ್ತು ಇಲ್ಲಿಗೆ ವಿಮಾನ ಯಾನ ಸೌಲಭ್ಯ ಕಲ್ಪಿಸಲಾಗುವುದೆಂದು ಹೇಳಿದ್ದರು. ಆದರೆ, ಏತಕ್ಕೆ ಹಾಗೆ ನಿಂತಿದೆಯೋ ಗೊತ್ತಾಗುತ್ತಿಲ್ಲ. ತುರ್ತಾಗಿ ನಾವೇನಾದರೂ ಗುಲ್ಬರ್ಗಕ್ಕೆ ಹೋಗಬೇಕಾದರೆ, ಅದೂ ಕಾರಿನಲ್ಲಿ ೧೨ ಗಂಟೆಗಳು ಬೇಕಾಗುತ್ತವೆ. ಆದುದರಿಂದ ಗುಲ್ಬರ್ಗಕ್ಕೆ ವಿಮಾನಯಾನ ಸೌಲಭ್ಯವನ್ನು ಒದಗಿಸಿದರೆ ಅನುಕೂಲವಾಗುತ್ತದೆ. ಗುಲ್ಬರ್ಗ ಕರ್ನಾಟಕದ ಕೊನೆಯ ಭಾಗವಾದುದರಿಂದ, ಈ ಕೆಲಸ ಮಾಡಿಸಿಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಕಡೆಯದಾಗಿ ನಾನೊಂದು ವಿಷಯ ಹೇಳಬೇಕಾಗಿದೆ. ಈ ಇಲಾಖೆ ಸರಿಯಾದ ಧಾಟಿಯಲ್ಲಿ ಕೆಲಸ ಮಾಡಬೇಕಾದರೆ ತಮ್ಮ ಮನಸ್ಸು ಹೇಗಿದೆ, ಹಾಗೆ ಇಲಾಖೆಯ ಇಂಜಿನಿಯರುಗಳು ಮತ್ತು ಅಧಿಕಾರಿಗಳು ಮನಸ್ಸು ಪರಿವರ್ತನೆಯಾಗಬೇಕು, ಎಲ್ಲಿಯವರೆಗೆ ಅವರ ಮನಸ್ಸು ಮತ್ತು ಹೃದಯ ಪರಿವರ್ತನೆಯಾಗುವುದಿಲ್ಲ ಮತ್ತು ಬದಲಾದ ಪರಿಸ್ಥಿತಿಯಲ್ಲಿ ಜನರ ಭಾವನೆಗನುಸಾರವಾಗಿ ಕೆಲಸ ಮಾಡುವುದಿಲ್ಲ ಅಲ್ಲಿಯವರೆಗೆ ನಾವು ಕೊಡುವ ಸಲಹೆ ಸೂಚನೆಗಳು ಕೇವಲ ಕಂಠಶೋಷಣೆಯಾಗುವುದೇ ಹೊರತು ಜನರಿಗೆ ಯಾವುದೇ ಪರಿಹಾರ ಸಿಕ್ಕುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಈ ಕಡೆಗೆ ಹೆಚ್ಚು ಗಮನ ಕೊಟ್ಟು ಜನಸಾಮಾನ್ಯರಿಗೆ ಹೆಚ್ಚು ಅನುಕೂಲ ಮಾಡಿಕೊಡುವರೆಂದು ಆಶಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

೪-೦೦ ಪಿ.ಎಂ.

† ಶ್ರೀ ಕೆ.ಬಿ. ಮಲ್ಲಪ್ಪ (ಅರಕಲಗೂಡು). — ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರುವ ಲೋಕೋಪಯೋಗಿ ಇಲಾಖೆ ಬೇಡಿಗೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಇಲಾಖೆ ಬೇಡಿಕೆ ಮೇಲೆ ಭಾಷಣವನ್ನು ಪ್ರಾರಂಭಿಸಿದ ನನ್ನ ಸ್ನೇಹಿತರಾದ ಶ್ರೀ ರಾಮಚಂದ್ರ ರೆಡ್ಡಿಯವರು ಈ ಇಲಾಖೆಯ ಲೋಪದೋಷಗಳ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ.

ಇಂದು ಲೋಕೋಪಯೋಗಿ ಸಚಿವರಾಗಿರುವ ಶ್ರೀ ಬಂಗಾರಪ್ಪನವರು ಹಿಂದೆ ವಿರೋಧ ಪಕ್ಷದಲ್ಲಿದ್ದಾಗ ಇದೇ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಯಾವ ಧಾಟಿಯಲ್ಲಿ ಮಾತನಾಡಿದ್ದರು, ಆ ಧಾಟಿಯನ್ನು ಇವರು ಮಂತ್ರಿಗಳಾದ ಮೇಲೆ ಬದಲಾಯಿಸಿಕೊಂಡಿರುವುದು ನೋವನ್ನುಂಟು ಮಾಡತಕ್ಕ ವಿಚಾರವಾಗಿದೆ. ನೀವು ನುಡಿದಂತೆ ನಡೆಯಬೇಕು ಅದು ಬಹಳ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ತಾವು ವಿರೋಧ ಪಕ್ಷದ ಸದಸ್ಯರಾಗಿದ್ದಾಗ ಯಾವ ರೀತಿ ಈ ಬಗ್ಗೆ ಮಾತನಾಡುತ್ತಿದ್ದೀರಿ ಅದೇ ಒಂದು ಧಾಟಿಯನ್ನು ತಾವು ಮಂತ್ರಿವರ್ಯರಾದ ಮೇಲೂ ಉಳಿಸಿಕೊಳ್ಳಬೇಕು ಎಂದು ನಾನು ತಮಗೆ ಸೂಚನೆ ಕೊಡುತ್ತೇನೆ. ಕೆಲವರು ನಮ್ಮ ತಾಲ್ಲೂಕಿನಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿ ಈ ಬಡ್ಜೆಟ್ಟಿನಲ್ಲಿ ಮತ್ತು ನಮ್ಮ ಜಿಲ್ಲೆಯಲ್ಲಿ ಈ ಬಡ್ಜೆಟ್ಟಿನಲ್ಲಿ ಏನು ಅನ್ಯಾಯವಾಗಿದೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ತಾವು ನಮಗೆ ಒಂದು ದೊಡ್ಡ ಪುಸ್ತಕವನ್ನು ಕೊಟ್ಟಿದ್ದೀರಿ. ಅದು ಯಾವುದೆಂದರೆ ಒಂದು ಆನ್ಯುಯಲ್ ರಿಪೋರ್ಟಿನ ಒಂದು ಪುಸ್ತಕ ಮತ್ತೊಂದು ಎಕ್ಸ್‌ಪೆಂಡಿಚರ್ ಬುಕ್, ೧೯೭೮-೭೯ರ ಒಂದು ಆಯವ್ಯಯದ ರಿಪೋರ್ಟ್ ಕೊಟ್ಟಿದ್ದಾರೆ. ಮತ್ತು ೧೯೭೯-೮೦ ರಲ್ಲಿ ನಾವು ಏನು ಖರ್ಚು ಮಾಡುತ್ತೇವೋ ಅದನ್ನೂ ಕೂಡ ಕೊಟ್ಟಿದ್ದಾರೆ. ಇದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ ಇದರಲ್ಲಿ ಯಾವ ಯಾವ ಬಾಬಿಗೆ ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನತಕ್ಕಂಥಾದನ್ನು ನಾವು ಅವಲೋಕನೆ ಮಾಡಿ ನೋಡಿದರೆ ಯಾರು ಎಲ್ಲಿ ಪ್ರಭಾವಶಾಲಿಗಳಾದಂಥಾ ಜನರಿದ್ದಾರೋ ಅಂಥಾ ಕಡೆಯಲ್ಲಿ ಮಾತ್ರ ಈ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಬಡ್ಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸಿದ್ದೀರಿ. ಯಾರು ಪ್ರಭಾವವಿಲ್ಲದಂಥಾ ವ್ಯಕ್ತಿಗಳಾಗಿದ್ದಾರೋ ಅಂಥಾ ಸಾಮಾನ್ಯ ಕ್ಷೇತ್ರದಲ್ಲಿ ಹೆಚ್ಚು ದುಡ್ಡು ಕೊಟ್ಟಿಲ್ಲಾ ಎಂದು ಹೇಳುವುದಕ್ಕೆ ನನ್ನ ಮನಸ್ಸಿಗೆ ನೋವಾಗುತ್ತದೆ. ಇದನ್ನು ಯಾವುದಾದರೂ ಸಂದರ್ಭದಲ್ಲಿ ಸರಿಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಈ ಬಗ್ಗೆ ವಿಶೇಷವಾಗಿ ಹೇಳಬೇಕಾದರೆ ಕೆಲವು ಕೆಲಸಕಾರ್ಯಗಳನ್ನು ನಾಮಕಾವಸ್ತೆಗೆ ಬಡ್ಜೆಟ್ಟಿನಲ್ಲಿ ಸೇರಿಸಿಬಿಡುತ್ತೀರಿ. ಅದಕ್ಕೆ ದುಡ್ಡು ಸೇರಿಸಿರುವುದಿಲ್ಲಾ. ಏತಕ್ಕೆ ಆ ರೀತಿ ಮಾಡುತ್ತೀರೋ ಗೊತ್ತಿಲ್ಲ. ಈ ಬಗ್ಗೆ ಚೀಫ್ ಇಂಜಿನೀಯರ್‌ರವರನ್ನು ಹೋಗಿ ಭೇಟಿ ಮಾಡಿದರೆ ಅವರು ಕೂಡ ಈ ಬಡ್ಜೆಟ್ಟಿನಲ್ಲಿ ಇಲ್ಲದೇ ಹೋದರೆ ನಾವು ಯಾವ ರೀತಿಯಲ್ಲಿ ಕೆಲಸಮಾಡಬೇಕು ಎಂದು ಹೇಳುತ್ತಾರೆ. ಈ ಒಂದು ಪರಿಸ್ಥಿತಿ ನೀವು ಬಡ್ಜೆಟ್ಟಿನಲ್ಲಿ ಸೇರಿಸದೇ ಇರುವುದರಿಂದ ಬಂದಿದೆ. ಆದುದರಿಂದ ತಾವು ಸ್ಪಷ್ಟವಾಗಿ ಇಂತಹ ಕೆಲಸಕಾರ್ಯಗಳಿಗೆ ಇಷ್ಟು ದುಡ್ಡು ಎಂದು ಸರಿಯಾದ ರೀತಿಯಲ್ಲಿ ಕೊಡಿಸಿಕೊಡಬೇಕು ಎಂದು ನಾನು ಈ ಸಂದರ್ಭ ತಮ್ಮನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾವೆಲ್ಲಾ ಹಳ್ಳಿಗಳಿಂದ ಬಂದಥಾವರು. ನಮ್ಮ ಹಳ್ಳಿಯ ಜನಗಳಿಂದ ಓಟು ತೆಗೆದುಕೊಂಡು ಬಂದಿದ್ದೇವೆ. ಅವರಿಗೆ ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟು ಬಂದಿದ್ದೇವೆ. ಈ ಬಗ್ಗೆ ಈಗಾಗಲೇ ಶ್ರೀ ಎಂ. ಸಿ. ಬಸಪ್ಪನವರು ಮತ್ತು ಶ್ರೀ ರಾಮಚಂದ್ರ ರೆಡ್ಡಿಯವರು ಹೇಳಿದ್ದಾರೆ. ನಾನು ಬೇರೆ ಹೇಳಬೇಕಾಗಿಲ್ಲ. ಈ ಬಗ್ಗೆ ನಮ್ಮ ಮನಸ್ಸಿನಲ್ಲಿ ಏನು ಕಳಕಳಿ ಇದೆ ಎಂದರೆ ನಮ್ಮ ಮನಸ್ಸಿಗೆ ನೋವಾಗಿರತಕ್ಕಂಥಾ ಒಂದು ಪತ್ರವನ್ನು ಬರೆದಿದ್ದೀರಿ. ಯಾವುದು ಎಂದರೆ ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಇರತಕ್ಕಂಥಾ ಬ್ರಿಡ್ಜಸ್ ಅದು ಒಂದು ಲಕ್ಷ ರೂಪಾಯಿದ ಅಂದಾಜು ಒಳಗೆ ಇರಬೇಕು ಹಾಗೂ ೫ಲಕ್ಷಕ್ಕೆ ಅಂದಾಜು ಇರತಕ್ಕಂಥಾ ೨-೨ ರೋಡ್ಸ್‌ಗಳು ಯಾವುದುಬೇಕೋ ಅದರ ಬಗ್ಗೆ ಒಂದು ಪ್ರಪೋಸಲ್ ಅನ್ನು ಕಳುಹಿಸಿ ಎಂದು ತಾವು ಒಂದು ನಮಗೆಲ್ಲಾ ಒಂದು ಕಾಗದ ಬರೆದಿರಿ. ಅದೇ ರೀತಿಯಾಗಿ ನಾವು ಪ್ರಪೋಸಲ್ಸ್ ಅನ್ನು ಕಳುಹಿಸಿದೆವು. ಈ ವಿಚಾರದಲ್ಲಿ ರಾಮಚಂದ್ರರೆಡ್ಡಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾವೂ ಈ ಬಗ್ಗೆ ಏನು ಪ್ರಪೋಸಲ್ ಕಳುಹಿಸಿ ಕೊಟ್ಟಿದ್ದೇವೋ ಆ ಪ್ರಕಾರ ನಮ್ಮ ಕ್ಷೇತ್ರದಲ್ಲಿ ರಸ್ತೆಗಳ ಕೆಲಸಗಳು ಆಗುತ್ತವೆ ಎನ್ನುವ ಒಂದು ಆಸೆಯನ್ನು ಇಟ್ಟುಕೊಂಡಿದ್ದೆವು. ಆದರೆ ಆ ಪ್ರಕಾರ ಈವೊತ್ತಿನವರೆಗೂ ಕೂಡ ಅದು ಕಾರ್ಯರೂಪಕ್ಕೆ ಬರಲಿಲ್ಲಾ. ಈ ಪ್ರಪೋಸಲ್ಸ್‌ನಂತೆ ಯಾವುದಾದರೂ ಒಂದು ಕೆಲಸವನ್ನು

ನಮ್ಮ ಊರಿನ ಕಡೆ ಮಾಡಿಕೊಟ್ಟಿದ್ದೀರಾ? ನಾವು ಯಾವರೀತಿ ಆ ಜನಗಳ ಮುಂದೆ ಹೋಗಿ ಮುಖ ತೋರಿಸಿಕೊಳ್ಳಬೇಕು ಹೇಳಿ. ನಾವು ಕಳುಹಿಸಿದ ಪ್ರಪೋಸಲ್ಸ್ ಭೋಗಸ್ ಆಗುವುದಾದರೆ ಇನ್ನೊಂದು ಸಾರಿ ಅವರನ್ನು ನಿಮಗೆ ಯಾವ ಕೆಲಸ ಮಾಡಿಸಿ ಕೊಡಬೇಕು, ಏನಾಗಬೇಕು ಅಂತ ಕೇಳುವುದಕ್ಕಾಗುತ್ತದೆಯೋ? ಅವರ ಮುಂದೆ ಮುಖ ತೋರಿಸದೇ ಇದ್ದ ಹಾಗೆ ಈಗ ಆಗಿದೆ. ಆದುದರಿಂದ ಈಗಲಾದರೂ ಕೂಡ ಮಾನ್ಯಮಂತ್ರಿಗಳು ಇದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಂಡು ಆ ಕೆಲಸಗಳನ್ನು ತಕ್ಷಣ ಮಾಡಿಸಿಕೊಡುವ ಒಂದು ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಎಷ್ಟೋ ಹಳ್ಳಿಗಳಲ್ಲಿ ಸರಿಯಾದ ರಸ್ತೆ ಇಲ್ಲಾ, ಎತ್ತಿನಗಾಡಿಯೂ ಸಹ ಹೋಗುವುದಕ್ಕಾಗುವುದಿಲ್ಲಾ, ಜನಗಳೂ ಕೂಡ ಹೋಗುವುದು ಕಷ್ಟ. ರಸ್ತೆ ಇಲ್ಲದೇ ಬಹಳ ಕಷ್ಟವಾಗಿದೆ. ಎಲ್ಲೆಲ್ಲಿ ಮೇಜರ್ ರೋಡ್ಸ್ ಇವೆ, ಎಲ್ಲೆಲ್ಲಿ ಸ್ಟೇಟ್ ಫಂಡ್ಸ್ ರೋಡ್ಸ್ ಇವೆ ಎಲ್ಲೆಲ್ಲಿ ನ್ಯಾಷನಲ್ ಹೈವೇ ರೋಡ್ಸ್ ಇವೆ, ಎಲ್ಲೆಲ್ಲಿ ಯು.ಡಿ.ಆರ್. ಎನ್.ಡಿ.ಆರ್. ರೋಡ್ಸ್ ಇವೆ ಆ ರೋಡ್ಸ್‌ಗಳನ್ನು ಬಿಟ್ಟರೆ ರೂರಲ್ ಕಮ್ಯೂನಿಕೇಷನ್ ರೋಡ್ಸ್ ಏನು ಇವೆ, ವಿಲೇಜ್ ರೋಡ್ಸ್ ಏನು ಇವೆ ಅವೆಲ್ಲಾ ಇಂದು ಕತ್ತಲೆಯಾಗಿ ಇವೆ. ಆ ರೋಡ್ಸ್‌ಗಳಲ್ಲಿ ಜನಗಳು ತಿರುಗಾಡುವುದಕ್ಕೂ ಕೂಡ ಕಷ್ಟವಾಗಿದೆ. ಆ ರಸ್ತೆಗಳಲ್ಲಿ ಒಂದು ಲೈಟ್ ಕೂಡ ಇಲ್ಲ, ಜನಗಳು ತಿರುಗಾಡುವುದಕ್ಕೆ ಕಷ್ಟವಾಗಿದೆ. ಮಳೆಗಾಲದಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಆ ಜನಗಳಿಗೆ ಬಹಳ ಕಷ್ಟವಾಗಿದೆ. ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರಗಮನ ತೆಗೆದುಕೊಂಡು ಆ ರಸ್ತೆಗಳನ್ನು ಮಾಡಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಇದಕ್ಕೆ ಸಂಬಂದಪಟ್ಟಂತೆ ಹೇಳುವುದಾದರೆ ನಮ್ಮ ಕಡೆ ಕೆಳ್ಳಾಪುರದ ಹತ್ತಿರ ಒಂದು ಬ್ರಿಡ್ಜ್ ಕಟ್ಟಬೇಕೆಂಧು ೧೯೬೭ ರಲ್ಲಿ ಈ ಬಗ್ಗೆ ಸ್ಯಾಂಕ್ಷನ್ ಆಗಿದ್ದರೂ ಕೂಡ ಇದುವರೆಗೆ ಅದರ ಪ್ರಾರಂಭವನ್ನೇ ಮಾಡಿರಲಿಲ್ಲಾ ಈಗ ಇದು ಮೊನ್ನೆ ಮೊನ್ನೆ ತಾನೇ ಪ್ರಾರಂಭವಾಗಿದೆ. ನಾನು ಚೀಫ್ ಇಂಜಿನಿಯರ್. ರವರನ್ನು ಪ್ರಾರ್ಥನೆ ಮಾಡಿಕೊಂಡ ಮೇಲೆ ಅವರು ಮುತುವರ್ಜಿ ವಹಿಸಿ ಈ ಕೆಲಸವನ್ನು ಮಾಡಿಸಿ ಕೊಟ್ಟರು. ಅದಕ್ಕಾಗಿ ನಾನು ಅವರನ್ನು ಈ ಸಂದರ್ಭದಲ್ಲಿ ವಂದಿಸುತ್ತೇನೆ. ಇದೇ ರೀತಿಯಾಗಿ ನಮ್ಮ ತಾಲ್ಲೂಕುಗಳಲ್ಲಿ ಇನ್ನೂ ಅನೇಕ ಕೆಲಸಕಾರ್ಯಗಳು ಇವೆ. ತಾವು ಆಶ್ವಾಸನೆ ಕೊಟ್ಟ ಹಾಗೆ ಆ ಕೆಲಸಗಳನ್ನೆಲ್ಲಾ ಪೂರೈಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ತಂದಿರತಕ್ಕಂಥಾ ಡಿಮ್ಯಾಂಡ್ಸ್ ನಂಬರ್ಸ್ ೪೨,೪೩,೪೪ ೪೫ ಈ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಈ ಇಲಾಖೆಯ ಬಗ್ಗೆ ಎರಡು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಈ ಲೋಕೋಪಯೋಗಿ ಇಲಾಖೆಯವರು ಈಗಾಗಲೇ ರಾಜ್ಯದಲ್ಲಿ ಬಹಳಷ್ಟು ಕಾಮಗಾರಿಗಳನ್ನು ನಡೆಸಿದ್ದಾರೆ. ನಮ್ಮ ರಾಜ್ಯದಲ್ಲಿ ಒಟ್ಟು ಸುಮಾರು ೯೩ ಸಾವಿರ ೧೪ ಕಿಲೋ ಮೀಟರ್ ಅಷ್ಟು ರಸ್ತೆ ಇದ್ದು ಅದರಲ್ಲಿ ಸುಮಾರು ೬೨,೩೨೬ ಕಿಲೋಮೀಟರ್ ಅಷ್ಟು ರಸ್ತೆಯನ್ನು ಪಿ.ಡಬ್ಲ್ಯು.ಡಿ.ಯವರು ಮೆಂಟೇನ್ ಮಾಡುತ್ತಿದ್ದಾರೆ. ಇದಲ್ಲದೆ ಸುಮಾರು ೮೨೧ ಸಣ್ಣ ಮತ್ತು ದೊಡ್ಡ ಸೇತುವೆಗಳನ್ನು ನಿರ್ಮಿಸಿದ್ದಾರೆ. ಇನ್ನು ೬ನೇ ಯೋಜನೆಯಲ್ಲಿ ಇದಕ್ಕಾಗಿ ೬೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಕೆಲಸ ಮಾಡಬೇಕೆಂದಿದ್ದಾರೆ. ಆದರೆ ಇದರಲ್ಲಿ ಒಂದು ವಿಚಾರ ಏನೆಂದರೆ ಈ ವರ್ಷದ ಬಜೆಟ್ ನೋಡಿದಾಗ ಸ್ಪಿಲ್ ಓವರ್ ವರ್ಕ್‌ಗೆ ೫.೬ ಕೋಟಿ ರೂಪಾಯಿ ಮತ್ತು ಇತರೇ ಕೆಲಸಗಳಿಗೆ ೫-೬ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದನ್ನು ನೋಡಿದರೆ ಬಹಳ ಬೇಜಾರು ಆಗುವ ವಿಚಾರವಾಗಿದೆ. ಎಷ್ಟೋ ಕಾಮಗಾರಿಗಳನ್ನು ಮಾಡಬೇಕೆಂದು ನಾನು ಪಿ.ಡಬ್ಲ್ಯು.ಡಿ. ಮಂತ್ರಿಗಳಿಗೆ ಹೇಳಿರುತ್ತೇವೆ. ನಮ್ಮ ಕ್ಷೇತ್ರದಲ್ಲಿ ಎಷ್ಟು ಕೆಲಸಗಳು ಆಗಬೇಕು, ಮತ್ತು ಎಷ್ಟು ಕೆಲಸಗಳು ಆಗಬೇಕಾದ್ದು ಇದೆ. ಈ ಬಗ್ಗೆ ಹೊಸ ಬಜೆಟ್ ನೋಡಿದಾಗ ನನ್ನ ಕ್ಷೇತ್ರಕ್ಕೆ ೨ ಲಕ್ಷ ರೂಪಾಯಿಗಳ ಕೆಲಸಗಳಿಗೆ ಮಾತ್ರ ಕೊಟ್ಟಿದ್ದಾರೆ. ಇದನ್ನು ನೋಡಿದಾಗ ನನಗೆ ಬಹಳ ಬೇಜಾರಾಯಿತು. ಅದಕ್ಕಾಗಿ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಶಾಸಕರಾಗಿ ನಮ್ಮನ್ನು ಆ ಜನಗಳು ಆರಿಸಿ ಇಲ್ಲಿಗೆ ಕಳುಹಿಸಿರುವುದರಿಂದ ನಮ್ಮ ಮಾನ ಮತ್ತು ಮರ್ಯಾದೆ ಉಳಿಸಿಕೊಳ್ಳಬೇಕಾಗಿದೆ. ಆದುದರಿಂದ ಈ ಪಿ.ಡಬ್ಲ್ಯು.ಡಿ. ಗೆ ಹೆಚ್ಚು ಹಣ ಕೊಟ್ಟು ನಮ್ಮ ಕ್ಷೇತ್ರದಲ್ಲಿ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಒಂದುವೇಳೆ ಈ ಸಾರಿ ಆಗದೇ ಹೋದರೆ ಮುಂದಿನ ವರ್ಷದಲ್ಲಾದರೂ ಕೂಡ ಅಂದರೆ ೧೯೭೪ ನೇ ಇಸವಿ ಬಜೆಟ್‌ನಲ್ಲಾದರೂ ಕೂಡ ನಮ್ಮ ಕ್ಷೇತ್ರಕ್ಕೆ ಹೆಚ್ಚು

ಹಣ ಕೊಟ್ಟು ನಮಗೆ ಅನುಕೂಲ ಮಾಡಿಕೊಡುತ್ತಾರೆಂದು ತಿಳಿದುಕೊಂಡಿದ್ದೇನೆ. ಸ್ವಾಮಿ, ಶ್ರೀ ರಾಮಚಂದ್ರ ರೆಡ್ಡಿಯವರು ಮಾತನಾಡುತ್ತಾ ಟೆಕ್ನಿಕಲ್ ವಿಚಾರವಾಗಿ ಹೇಳಿದರು. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಸ್ವಲ್ಪ ಟೆಕ್ನಿಕಲ್ ಮ್ಯಾನ್ ಆಗಿದ್ದರಿಂದ ಹೇಳಿದ್ದಾರೆ. ನಾನು ಹೇಳುವುದು ಇಷ್ಟೆ ಮಲೆನಾಡು ಭಾಗವಾದ ಸೊರಬ್ ಇನ್ನು ಇತರ ಭಾಗಗಳಿಗೆ, ಕೆಲವಾರು ಕ್ಷೇತ್ರಗಳಿಗೆ ಸ್ವಲ್ಪ ಜಾಸ್ತಿ ಹಣ ಕೊಡಬೇಕು ಎಂದು ಹೇಳುತ್ತೇನೆ. ಮಲೆನಾಡು ಭಾಗಕ್ಕೆ ಪಿ.ಡಬ್ಲ್ಯು.ಡಿ. ಯವರು ಬಡ್ಜೆಟ್ ಆಲೋಕೇಷನ್ ಮಾಡುವಾಗ ಜಾಸ್ತಿ ಹಣ ಕೊಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಕಾರಣವೂ ಇದೆ. ಕಾರಣ ಏನೆಂದರೆ ಮಲೆನಾಡು ಭಾಗದಿಂದ ಅನೇಕ ತರಹ ವಾಗಿ ಉಪಯೋಗ ಪಡೆದಿದ್ದೀರಿ. ಆದರಿಂದ ಕೊಡಬೇಕು, ಮಳೆಗಾಲದಲ್ಲಿ ಅಲ್ಲಿ ತಿರುಗಾಡುವುದಕ್ಕೇ ಕಷ್ಟ. ಇನ್ನು ಇತರ ಭಾಗಗಳಲ್ಲಿ ಅಣೆಕಟ್ಟೆಗಳನ್ನು ಕಟ್ಟಿಕೊಂಡು ಉಪಯೋಗ ಪಡೆದಿದ್ದಾರೆ. ಈ ರಸ್ತೆ ಮತ್ತು ಸೇತುವೆಗಳಿಗೆ ಹೆಚ್ಚು ಹಣ ನಮ್ಮ ಭಾಗಕ್ಕೆ ಕೊಟ್ಟು ಕೆಲಸ ಮಾಡಿಸದೇ ಹೋದರೆ ಮಳೆಗಾಲದಲ್ಲಿ ೬ ತಿಂಗಳು ಕಾಲ ಅಲ್ಲಿ ತಿರುಗಾಡುವುದಕ್ಕೆ ಆಗುವುದಿಲ್ಲಾ. ಮೇಲಾಗಿ ತಮಗೆ ಹೇಳ ಬೇಕಾದರೆ ಎಷ್ಟೋ ಊರುಗಳಲ್ಲಿ ದೀಪಗಳೇ ಇರುವುದಿಲ್ಲಾ, ಆದುದರಿಂದ ಆ ರಸ್ತೆಗಳಲ್ಲಿ ತಿರು ಗಾಡುವುದಕ್ಕೆ ಮಳೆಗಾಲದಲ್ಲಿ ಯೋಗ್ಯವಾಗಿರುವುದಿಲ್ಲ. ಈ ಕಾರಣದಿಂದ ಮಲೆನಾಡಿನ ಭಾಗದ ಎಲ್ಲಾ ರಸ್ತೆಗಳನ್ನೂ ಕೂಡ ಕೊನೇ ಪಕ್ಷ ಆಸ್ಫಾಲ್ಟಿಂಗ್ ಕೆಲಸಗಳನ್ನಾದರೂ ಮಾಡಿಕೊಟ್ಟು ಆ ಭಾಗದ ಜನಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಆದ್ದರಿಂದ ಎಲ್ಲಾ ಮಲೆನಾಡಿನ ರಸ್ತೆಗಳನ್ನು ಸಾರ್ವತ್ರಿಕವಾಗಿ ಆಸ್‌ಫಾಲ್ಟ್ ಮಾಡಬೇಕು. ತಮ್ಮ ಮಾಸ್ಟರ್ ಪ್ಲಾನ್ ಪ್ರಕಾರ ನಮ್ಮಲ್ಲಿ ಕೆಲಸಗಳು ಆಗುವುದಿಲ್ಲ. ಮಲೆನಾಡಿಗೆ ತಾವು ಒಂದು ಸ್ಪೆಷಲ್ ಸ್ಕೀಮನ್ನುಮಾಡಿ ಎಲ್ಲಾ ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಅಲ್ಲಿರುವ ಮೋರಿಗಳನ್ನು ಸೇತುವೆಗಳನ್ನು ತಾವು ಶೀಘ್ರದಲ್ಲಿಯೇ ಕಟ್ಟಿಸು ವುದಕ್ಕೆ ವ್ಯವಸ್ಥೆ ಮಾಡಬೇಕು ಬೇರೆ ಕಡೆಗಳಲ್ಲಿಯಾದರೆ, ಶುಗರ್‌ಕೇನ್ ರಸ್ತೆಗಳು ಇಲ್ಲದಿದ್ದರೆ, ನ್ಯಾಷನಲ್ ಹೈವೇಗಳು, ರೈಲ್ವೇ ಲೈನುಗಳು, ಮತ್ತು ವಿಮಾನ ನಿಲ್ದಾಣಗಳು ಇರುತ್ತವೆ. ಆದರೆ ಮಲೆನಾಡಿನಲ್ಲಿ ಇಂಥ ಯಾವ ಅನುಕೂಲಗಳೂ ಇರುವುದಿಲ್ಲ. ಆದ್ದರಿಂದ ಈ ಭಾಗಕ್ಕೆ ತಾವು ಹೆಚ್ಚಿನ ಹಣವನ್ನು ಒದಗಿಸಿ ಅಲ್ಲಿಯ ರಸ್ತೆ, ಸೇತುವೆಗಳನ್ನು ಕಟ್ಟಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳು ತ್ತೇನೆ. ಮಾಸ್ಟರ್ ಪ್ಲಾನ್‌ನ್ನು ಏನು ತಾವು ಮಾಡಿದ್ದೀರಿ ಅದರಲ್ಲಿ ಕೆಲವು ಕೆಲಸಗಳನ್ನು ಮಾಡಿ ಕೊಟ್ಟಿದ್ದೀರಿ. ಆದರೆ ಇದರಲ್ಲಿ ಎಷ್ಟು ಬ್ರಿಡ್ಜಸ್‌ಗಳನ್ನು ನಮೂದು ಮಾಡಿದ್ದೀರೋ ಅಷ್ಟನ್ನು ಮೊದಲು ನಮ್ಮ ಭಾಗದಲ್ಲಿ ಮಾಡಿಕೊಡಬೇಕು. ಏಕೆಂದರೆ ಬ್ರಿಡ್ಜಸ್ ಇಲ್ಲದಿದ್ದರೆ ನಮ್ಮ ಭಾಗದಲ್ಲಿ ಸಂಚಾರವ್ಯವಸ್ಥೆಯೇ ಇಲ್ಲದಂತಾಗುತ್ತದೆ. ತಾವೂ ಮಲೆನಾಡಿನ ಭಾಗದಿಂದ ಬಂದವರಾದ್ದರಿಂದ ನಾನು ಇದರ ಅವಶ್ಯಕತೆಯನ್ನು ಒತ್ತಿ ಹೇಳುವ ಹಾಗಿಲ್ಲ. ರಸ್ತೆಗಳ ಬಗ್ಗೆಯೂ ಹೊಸದಾಗಿ ರಸ್ತೆಗಳನ್ನು ಮಾಡುವುದಕ್ಕಿಂತ ಈಗಿರುವಂಥ ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಿ ಸೇತುವೆಗಳನ್ನು ಕಟ್ಟಲು ನಿರ್ದೇಶನ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇತ್ತೀಚೆಗೆ ವಿಲೇಜ್ ಲಿಮಿಟ್ಸ್‌ಗಳಲ್ಲಿ ನಮ್ಮ ಭಾಗದಲ್ಲಿ ಟಾರ್ ಹಾಕುವುದನ್ನೂ ನಿಲ್ಲಿಸಿಟ್ಟಿದ್ದಾರೆ. ಈ ಸಂದರ್ಭದಲ್ಲಿ ನನ್ನ ಸಲಹೆಯಾದರೂ ಎಲ್ಲೆಲ್ಲಿ ಊರುಗಳು ಬರುತ್ತವೆ ಅಲ್ಲಿಯಾದರೂ ಟಾರ್ ಹಾಕು ವಂಥ ವ್ಯವಸ್ಥೆಯನ್ನು ಮಾಡಬೇಕು ಬಸ್‌ಹೋದ ತಕ್ಷಣವೇ ಧೂಳು ಮನೆಗಳಲ್ಲಿ ಹೋಗುವಂಥ ಪರಿಸ್ಥಿತಿ ಇರುವುದರಿಂದ ಊರುಗಳ ಹತ್ತಿರವಾದರೂ ಟಾರ್ ಹಾಕುವಂಥ ವ್ಯವಸ್ಥೆಯನ್ನು ತಾವು ಮಾಡಿ ಕೊಡ ಬೇಕು, ಈಗಿರುವಂಥ ಟಾರ್ ರಸ್ತೆಗಳ ಅಕ್ಕಪಕ್ಕದಲ್ಲಿ ೩-೪ ಅಡಿಗಳ ಟಾರ್‌ನ್ನು ಹಾಕಿಸುವಂಥ ವ್ಯವಸ್ಥೆ ಯನ್ನು ಮಾಡಬೇಕು ಎಂದು ನಾನು ಇನ್ನೊಂದು ಸಲಹೆ ಕೊಡುತ್ತೇನೆ.

ಇನ್ನು ನ್ಯಾಷನಲ್ ಹೈವೇಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ, ನ್ಯಾಷನಲ್ ಹೈವೇಸ್ ಮಾಡತಕ್ಕ ಸ್ಕೀಂ ಏನು ಇದೆ ಇದು ಒಳ್ಳೆಯದು. ಈ ರಸ್ತೆಗಳಲ್ಲಿ ನಮ್ಮಂಥ ಸಣ್ಣಪುಟ್ಟ ಕಾರಿನವರು ಓಡಾಡುವುದೇ ಬಹಳಕಷ್ಟ. ದೊಡ್ಡ ದೊಡ್ಡ ಲಾರಿಗಳವರು, ಬಸ್ಸಿನವರು ರಾತ್ರಿಹೊತ್ತು ಡಿಂ-ಡಿಪ್ ಮಾಡದೆ ವಾಹನಗಳನ್ನು ಓಡಿಸುತ್ತಾರೆ. ಇದರ ಬಗ್ಗೆ ನಾನು ಹೇಳುವುದಾದರೆ, ಈ ನ್ಯಾಷನಲ್ ಹೈವೇಸ್‌ಗಳನ್ನು ಡಬ್ಬಲ್‌ರೋಡ್ಸ್ ಮಾಡಿದರೆ ಹೋಗುವವರಿಗೂ ಬರುವವರಿಗೂ ಯಾವ ತೊಂದರೆಯೂ ಇಲ್ಲದೆ ಆಗತಕ್ಕ ಅನಾಹುತಗಳನ್ನು ತಪ್ಪಿಸಬಹುದು. ಎಲ್ಲಾ ನ್ಯಾಷನಲ್ ಹೈವೇಗಳನ್ನು ಡಬಲ್ ರೋಡ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಊರುಗಳ ರಸ್ತೆಗಳಿಗೆ ಸರ್ಕಾರದವರು ಬೈ–ಪಾಸ್ ರೋಡನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಬೈ-ಪಾಸ್ ರೋಡುಗಳನ್ನು ಮಾಡದೇ ಇದ್ದರೆ ಜನರಿಗೆ ಅನೇಕ ರೀತಿಯಿಂದ ತೊಂದರೆಗಳು ಆಗುತ್ತವೆ. ಈಗ ಪ್ರತಿ ಊರುಗಳಲ್ಲಿಯೂ ಜನಸಂಖ್ಯೆ ಜಾಸ್ತಿ ಇರುವುದರಿಂದ ವಾಹನಗಳ ಸಂಚಾರ ಜಾಸ್ತಿಯಾಗಿ ಜನರು ಓಡಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಪ್ರತಿ ರೋಡಿಗೂ ಬೈ–ಪಾಸ್ ರೋಡುಗಳನ್ನು ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ತಮ್ಮ ಇಲಾಖೆಯಲ್ಲಿ ಅಡಿಗಲ್ಲು ಹಾಕಿ ಕೆಲಸಗಳನ್ನು ಪ್ರಾರಂಭ ಮಾಡದೆ ಬಿಟ್ಟಂಥ ಕೆಲಸಗಳು ಅನೇಕ ವರ್ಷಗಳಿಂದ ಪೆಂಡಿಂಗ್ ಇವೆ ಎಂದು ನಾನು ಕೇಳಿದ್ದೇನೆ. ಮಾನ್ಯಸದಸ್ಯರುಗಳು ಅನೇಕರು ಇದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ದಿಸೆಯಲ್ಲಿ ತಾವು ಪ್ರಾರಂಭ ಮಾಡಿದಂಥ ಕೆಲಸಗಳನ್ನು ಶೀಘ್ರವಾಗಿ ಮುಗಿಸಬೇಕು ಎಂದು ನಾನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಎರಡು ಸೇತುವೆಗಳು ಕಳೆದ ಹತ್ತು ವರ್ಷದಿಂದ ಕೆಲಸವಾಗದೆ ಹಾಗೆಯೇ ನಿಂತಿವೆ. ಈ ಕೆಲಸಗಳನ್ನು ಮಾಡಲಿಕ್ಕೆ ೧೯೭೨ನೇ ಇಸವಿಯಲ್ಲಿ ಸರ್ಕಾರದವರು ಹಣವನ್ನು ಒದಗಿಸಿದ್ದರೂ ಸಹ ಕೆಲಸ ಆಗಿಲ್ಲ. ತಾವು ಈ ಕನ್‌ಸ್ಟ್ರಕ್ಷನ್ ಕಂಪನಿಗೆ ಕೆಲಸಗಳನ್ನುಕೊಡುವುದರಿಂದ ನಿಜವಾಗಿಯೂ ಬಹಳಷ್ಟು ಹಣ ಹಾಳಾಗಿ ಹೋಗುತ್ತದೆ. ಆದ್ದರಿಂದ ತಾವು ಈ ಕನ್‌ಸ್ಟ್ರಕ್ಷನ್ ಕಂಪನಿಯನ್ನು ರದ್ದು ಮಾಡಿ ಕಂಟ್ರಾಕ್ಟರುಗಳ ಮೂಲಕವೊ ಅಥವಾ ಡಿಪಾರ್ಟ್‌ಮೆಂಟ್ ಮೂಲಕವೋ ಕೆಲಸಗಳನ್ನು ಮಾಡುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ,

ತಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಗ್ಯಾಂಗ್ ಕೂಲಿಗಳನ್ನು ಐದು ವರ್ಷದಲ್ಲಿ ಕನ್‌ಫರ್ಮ್ ಮಾಡುತ್ತೇವೆನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಒಂದು ಒಳ್ಳೆಯ ಕೆಲಸಕ್ಕೆ ನಾನು ಅವರನ್ನು ಅಭಿನಂದಿಸಬೇಕಾಗಿದೆ. ನಮ್ಮ ಭಾಗದಲ್ಲಿ ಶಿವಮೊಗ್ಗ ಮಂಗಳೂರು ರೋಡಿನಲ್ಲಿ ಪ್ರವಾಹ ಬಂದಾಗ ೨–೩ ತಿಂಗಳಲ್ಲಿ ೮–೧೦ ಸಾರಿ ವಾಹನಗಳ ಸಂಚಾರ ನಿಂತು ಹೋಗಿರುವುದು ತಮಗೆ ಗೊತ್ತಿದೆ. ಅದಕ್ಕೋಸ್ಕರ ತಾವು ಈ ರಸ್ತೆಯನ್ನು ಎಂಬ್ಯಾಕ್‌ಮೆಂಟ್ ಹಾಕಿ ರೈಸ್ ಮಾಡಿ ಸರ್ವಕಾಲದಲ್ಲಿಯೂ ವಾಹನಗಳು ಸಂಚಾರ ಮಾಡುವಂತೆ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಡಬೇಕು. ಇದಕ್ಕೋಸ್ಕರ ಬಡ್ಜೆಟ್ಟಿನಲ್ಲಿ ಯಾವ ಒಂದು ಅವಕಾಶವನ್ನೂ ಮಾಡಿಲ್ಲ. ಇದು ಮಾನ್ಯ ಮಂತ್ರಿಗಳಿಗೆ ಮರೆತು ಹೋಗಿದೆಯೋ ಏನೋ ಗೊತ್ತಿಲ್ಲ. ಮಾನ್ಯಮಂತ್ರಿಗಳು ಮುಂದಿನ ಸಾರಿಯಾದರೂ ಈ ರೋಡು ಎಂಥ ಪ್ರವಾಹ ಬಂದರೂ ಸಹ ಮುಳುಗಡೆಯಾಗದಂತೆ ಸರ್ವಋತು ರಸ್ತೆಯಾಗಿ ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ಮಾನ್ಯಮಂತ್ರಿಗಳು ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ,

ಕುದುರೆಮುಖ—ಶಿವಮೊಗ್ಗ ನ್ಯಾಷನಲ್‌ಹೈವೇ ಇದನ್ನು ಸೇರಿಸಬೇಕು ಎಂದು ಒಂದು ಯೋಜನೆ ಇತ್ತು; ಇದನ್ನು ಮಾನ್ಯಮಂತ್ರಿಗಳು ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ಇದನ್ನು ಕಾರ್ಯಗತ ಮಾಡಿಕೊಡಬೇಕು. ಇದರ ಅಂದಾಜು ಸಹ ಸರ್ಕಾರದ ಬಳಿ ಇದೆಯೆಂದು ನಾನು ಕೇಳಿದ್ದೇನೆ. ಇದರ ಬಗ್ಗೆ ಗಮನಕೊಟ್ಟು ಅವಶ್ಯಕತೆಯಾಗಿರುವ ಈ ಕೆಲಸಗಳನ್ನು ಮಾಡಿಸುತ್ತಾರೆಂದು ನಾನು ತಿಳಿದಿದ್ದೇನೆ.

ಎಸ್.ವಿ.ಎಚ್.ಪಿ, ರೋಡು ಮತ್ತು ಐ.ಸಿ.ಆರ್.ಪಿ. ರೋಡ್ ಕೆಲಸಗಳನ್ನು ಸರ್ಕಾರದವರು ಪ್ರಾರಂಭ ಮಾಡಿಬಿಟ್ಟಿದ್ದಾರೆ. ನಮ್ಮಭಾಗದಲ್ಲಿ ಮಳೆ ಬಂದಾಗ ಈ ರಸ್ತೆಗಳಲ್ಲಿ ಕೊಚ್ಚಿಕೊಂಡು ಹೋಗುತ್ತವೆ. ವಾಹನ ಸಂಚಾರವೆಲ್ಲ ಮನುಷ್ಯರು ಓಡಾಡುವುದಕ್ಕೂ ಕಷ್ಟವಾಗಿದೆ. ಆದ್ದರಿಂದ ಎಸ್.ವಿ.ಎಚ್.ಪಿ. ರೋಡುಗಳನ್ನು ಪೂರ್ತಿಯಾಗಿ ಕಾಮಗಾರಿ ಇಲಾಖೆಯವರು ತೆಗೆದುಕೊಂಡು ಮೇಂಟೇನ್ ಮಾಡಬೇಕು ಎಂದು ನಾನು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಕಡೆಯದಾಗಿ ಪಿ.ಎಚ್.ಇ. ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಎಲ್ಲಿ ಹೋದರೂ ಮೊದಲು ಬರತಕ್ಕ ಕಂಪ್ಲೇಂಟ್ ಈ ಬೋರ್ ವೆಲ್‌ಗಳು ಸರಿಯಾಗಿಲ್ಲವೆನ್ನುವುದು ಹ್ಯಾಂಡ್ ಪಂಪು ಸರಿಯಾಗಿಲ್ಲವೆನ್ನುವುದು, ಲೋ ಕ್ವಾಲಿಟಿ ಪೈಪುಗಳನ್ನು ಇದಕ್ಕೆ ಹಾಕಿರುವುದರಿಂದ ನೀರೂ ಸಹ ಈ ಪೈಪುಗಳಲ್ಲಿ ಸರಿಯಾಗಿ ಬರದೆ ಜನಗಳಿಗೆ ತೊಂದರೆಯಾಗಿದೆ. ಇದಕ್ಕೆ ಸರ್ಕಾರದವರು ಒಂದು ಸ್ಪೆಷಲ್ ವ್ಯವಸ್ಥೆಯನ್ನು ಮಾಡದೇ ಹೋದರೆ ಈ ಬೋರ್‌ವೆಲ್‌ಗಳನ್ನೇ ಸರ್ಕಾರದವರು ಮಾಡುವುದು ಬೇಡ ಎಂದು ನಾನು ಹೇಳುತ್ತೇನೆ. ಇವುಗಳಿಂದ ಜನರಿಗೆ ಒಂದು ನಯಾಪೈಸೆಯೂ ಕೂಡ ಉಪಯೋಗ

ವಿಲ್ಲ ಮಲೆನಾಡು ಭಾಗದಲ್ಲಿ ಈ ಬೋರ್‌ವೆಲ್‌ಗಳು ಸಕ್ಸಸ್ ಆಗುತ್ತದೆಯೋ ಎಂದು ಜಿಯಾಲಜಿಸ್ಟ್‌ಗಳಿಂದ ತಿಳಿದು ಕೆಲಸ ಮಾಡಬೇಕು, ಇಲ್ಲದೇಹೋದರೆ ಓಪನ್ ವೆಲ್‌ಗಳನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಾವು ಈಗ ಮಾಸ್ಟರ್‌ಪ್ಲಾನ್ ಏನು ಮಾಡಿದ್ದೀರಿ ಅದಕ್ಕೆ ಕೇಂದ್ರ ಸರ್ಕಾರದಿಂದ ಗ್ರಾಂಟ್ ಪಡೆದಾದರೂ ಅಥವಾ ವಿಶ್ವಬ್ಯಾಂಕಿನಿಂದ ನೆರವು ಪಡೆದಾದರೂ ಎಲ್ಲಾ ಕೆಲಸಗಳನ್ನು ಪೂರ್ತಿಮಾಡಿ ತಾವು ಒಳ್ಳೆಯ ಹೆಸರನ್ನು ಪಡೆಯಬೇಕು ಎಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಕಕ್ಕಿಲ್ಲಾಯ (ವಿಠಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈಗ ಸಭೆಯಲ್ಲಿ ಇಲ್ಲ. ಅವರು ಮೊದಲು ಈ ಕಡೆ ಇದ್ದರು. ಈ ಕಡೆ ಇದ್ದಾಗ ಲೋಕೋಪಯೋಗಿ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಮತ್ತು ಆಗಬೇಕಾಗಿರುವ ಕೆಲಸಗಳ ಬಗ್ಗೆ ಬಹಳ ಚೆನ್ನಾಗಿ ಆಧಾರ ಸಹಿತವಾಗಿ ಮತ್ತು ಬಹಳ ರಸವತ್ತಾಗಿ ಹೇಳುತ್ತಿದ್ದರು. ಈಗ ಆ ಕಡೆಗೆ ಹೋದ ಮೇಲೆ ರಸ್ತೆಗಳ ಬಗ್ಗೆ ಒಂದು ಮಾಸ್ಟರ್ ಪ್ಲಾನನ್ನು ಮಾಡಿ ನಮಗೆಲ್ಲಾ ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಆರ್ವರ್ಗಂ ಅವರು ನಮ್ಮೆಲ್ಲರ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಆದಕಾರಣ ನಾನು ಮತ್ತೆ ಅಭಿನಂದನೆ ಕೊಡಬೇಕಾಗಿಲ್ಲ. ಇದರಲ್ಲಿ ಏನು ಹೇಳಿದ್ದಾರೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರುವ ರಸ್ತೆಗಳನ್ನು ದುರಸ್ತಿ ಮಾಡುವ ಬಗ್ಗೆ ಮತ್ತು ಹೊಸ ರಸ್ತೆಗಳನ್ನು ಮಾಡುವುದರ ಬಗ್ಗೆ ನನಗೆ ಬಹಳ ಕಾಳಜಿ ಇತ್ತು, ಅದನ್ನೆಲ್ಲಾ ಕಾರ್ಯಗತಗೊಳಿಸುವುದಕೋಸ್ಕರ ಮಾಸ್ಟರ್ ಪ್ಲಾನನ್ನು ತಯಾರು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದರಲ್ಲಿ ಹೇಳಿರುವ ಪ್ರಕಾರ ಕೆಲಸಕಾರ್ಯಗಳು ಆಗುತ್ತವೆಯೋ ಎಂಬುದು ಈಗ ನಮ್ಮ ಮುಂದಿರುವ ಸಮಸ್ಯೆ. ಇದಕ್ಕೆ ಇಪ್ಪತ್ತು ವರ್ಷಗಳ ಅವಧಿ ಇದೆ. ಇವರು ಮಾಸ್ಟರ್ ಪ್ಲಾನನ್ನು ಮಾಡಿದ ಮೇಲೆ ಈ ವಿಚಾರದಲ್ಲಿ ಕೇಂದ್ರದ ಮಂತ್ರಿಗಳು ಒಂದು ಮಾಸ್ಟರ್ ಪ್ಲಾನನ್ನು ಮಾಡಿಕೊಡಿಎಂದು ಎಲ್ಲಾ ರಾಜ್ಯಗಳಿಗೆ ತಿಳಿಸಿದ್ದಾರೆ. ಅಂದರೆ ಈಗ ಆಗಬೇಕಾದಂಥ ಕೆಲಸಗಳನ್ನು ಹಿಂದಕ್ಕೆ ಹಾಕುವುದಕ್ಕಾಗಿ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಏನಾದರು ತೀರ್ಮಾನ ಮಾಡಿದ್ದಾರೆಯೋ ಎಂದು ನನಗೆ ಭಯವಾಗುತ್ತಿದೆ. ಎಲ್ಲಾ ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಲು ೯೪೫ ಕೋಟಿ ರೂ. ಗಳು ಬೇಕಾಗುತ್ತದೆಂದು ಮಾಸ್ಟರ್ ಪ್ಲಾನಿನಲ್ಲಿ ಹೇಳಿದ್ದಾರೆ. ಆದರೆ ಈ ಹಣವನ್ನು ಯಾವ ರೀತಿ ಒದಗಿಸುತ್ತಾರೆ. ರಾಜ್ಯ ಸರ್ಕಾರದವರು ಎಷ್ಟು ಹಣ ಕೊಡುತ್ತಾರೆ, ಕೇಂದ್ರಸರ್ಕಾರದಿಂದ ಇದಕ್ಕೆ ಎಷ್ಟು ಹಣ ಪಡೆಯುತ್ತಾರೆಂಬ ಬಗ್ಗೆ ವಿವರಗಳನ್ನು ಇದರಲ್ಲಿ ಕೊಟ್ಟಿಲ್ಲ. ಈ ಕೆಲಸಕ್ಕೆ ವಿಶ್ವ ಬ್ಯಾಂಕ್‌ನಿಂದ ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಳ್ಳಲಾಗುತ್ತದೆಂದು ಹೇಳಿದ್ದಾರೆ. ಅವರು ಹಣ ಸಾಲ ಕೊಡಬೇಕಾದರೆ ಅದಕ್ಕೆ ಭಧ್ರತೆ ಇದೆಯೋ ಎಂದು ನೋಡುತ್ತಾರೆ ಈ ಬಗ್ಗೆ ಇದರಲ್ಲಿ ಯಾವ ವಿವರಗಳೂ ಇಲ್ಲ. ಆದಕಾರಣ ಇದನ್ನು ಆಧಾರವಾಗಿಟ್ಟುಕೊಂಡು ನಾವು ನಮ್ಮ ಕ್ಷೇತ್ರದ ಪ್ರಜೆಗಳಿಗೆ ಉತ್ತರ ಕೊಡುವುದಕ್ಕೂ ಆಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಿನ ದರದಲ್ಲಿ ಎಷ್ಟು ಹಣ ಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ತಾವು ಹೇಳುವುದನ್ನು ನಾನು ಒಪ್ಪುತೇನೆ. ಕೆಲಸ ತೆಗೆದುಕೊಳ್ಳುವುದೇನಾದರೂ ನಿಧಾನವಾದರೆ ಇದರ ಎರಡರಷ್ಟು ಹಣ ಬೇಕಾಗುತ್ತದೆ. ಮತ್ತು ಕೆಲಸ ಪೂರ್ತಿಯಾಗುವುದರೊಳಗೆ ಇದರ ಖರ್ಚು ಎಷ್ಟಾಗುತ್ತದೆಂದು ಯಾರಿಗೂ ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಈ ಕೆಲಸಕ್ಕೆ ಹಣ ಒದಗಿಸಲು ಏನು ಏರ್ಪಾಡು ಮಾಡಿದ್ದಾರೆಂಬ ಬಗ್ಗೆ ಯಾವಸೂಚನೆಯೂ ಇದರಲ್ಲಿ ಇಲ್ಲ ನನಗನ್ನಿಸುತ್ತದೆ ಏನೆಂದರೆ ನಾವು ರಸ್ತೆಗಳು ಆಗಬೇಕೆಂದು ಕೇಳುವುದರಿಂದ ಅದಕ್ಕಾಗಿ ಮಾಸ್ಟರ್ ಪ್ಲಾನನ್ನು ತಯಾರಿಸಿದ್ದೇವೆಂದು ಉತ್ತರ ಕೊಡಲು ಮಾನ್ಯ ಮಂತ್ರಿಗಳು ಇದನ್ನು ತಯಾರಿಸಿದ್ದಾರೆಂದು ಕಾಣುತ್ತದೆ ಇಷ್ಟರಿಂದ ನಮಗೆ ಸಮಾಧಾನವಾಗುವುದಿಲ್ಲವೆಂದು ಖಂಡಿತವಾಗಿ ಹೇಳಬೇಕಾಗಿದೆ.

ಇನ್ನು ಈ ಇಲಾಖೆಯ ಕೆಳಗೆ ೬೨.೩೨೫ ಕಿಲೋಮಿಟರ್ಸ್‌ನಷ್ಟು ರಸ್ತೆಗಳಿವೆ. ೩೦,೬೫೪ ಕಿಲೋಮೀಟರ್ಸ್‌ನಷ್ಟು ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ರಸ್ತೆಗಳಿವೆ. ೧೪,೧೪೬ ಕಿಲೋಮೀಟರ್ಸ್‌ನಷ್ಟು ನಾನ್-ಮೆಟಲ್ಡ್ ರೋಡ್ಸ್ ಇದೆ. ಇದೇ ರೀತಿ ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನೆಲ್ಲಾ ಲೆಕ್ಕ ಹಾಕಿ ನೋಡಿದರೂ ಸಹ ಹಳ್ಳಿಗಳಿಗೆ ಸಂಪರ್ಕವೇರ್ಪಡಿಸುವಂತಹ ರಸ್ತೆಗಳು ಜಾಸ್ತಿ ಇಲ್ಲದಿರುವುದು ಕಂಡು ಬರುತ್ತದೆ. ನಮಗೆ ಸ್ವಾತಂತ್ರ್ಯ ಬಂದು ೩೨ ವರ್ಷಗಳಾದ ಮೇಲೂ ಸಹ ಗ್ರಾಮಾಂತರ ಪ್ರದೇಶಗಳಿಗೆಲ್ಲಾ ಸಂಪರ್ಕಸಾಧನವನ್ನು ಕಲ್ಪಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಈಗಲೂ ಕೂಡ ಕೆಲವು ಹಳ್ಳಿ

ಗಳಿಗೆ ಹೋಗಲು ರಸ್ತೆಗಳೇ ಇಲ್ಲ. ಸರ್ವರುತು ರಸ್ತೆಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲ, ಒಟ್ಟಿನಲ್ಲಿ ೫೧ ಪರ್ಸೆಂಟಿನಷ್ಟು ಗ್ರಾಮಗಳಿಗೆ ಸರಿಯಾದ ರಸ್ತೆ ಸಂಪರ್ಕವಿಲ್ಲವೆಂದು ಹೇಳಬಹುದು. ಇದೆಲ್ಲಾ ಇವರು ಕೊಟ್ಟಿರುವ ಅಂಕಿಅಂಶಗಳಿದ ತಿಳಿದುಬರುತ್ತದೆ. ಇದನ್ನೆಲ್ಲಾ ಸರಿಪಡಿಸುವ ಬಗ್ಗೆ ಮಾಸ್ಟರ್ ಪ್ಲಾನಿನಲ್ಲಿ ಯಾವುದೇ ಸೂಚನೆ ಕೊಡದಿರುವುದನ್ನು ನೋಡಿದರೆ ಮಾನ್ಯ ಮಂತ್ರಿಗಳಿಗೆ ಮೊದಲಿದ್ದ ಕಾಳಜಿ ಎಲ್ಲಿ ಹೋಯಿತು ಎಂದು ನನಗನ್ನಿಸುತ್ತದೆ. ಇಲ್ಲಿ ಅಂಕಿಅಂಶಗಳನ್ನು ಕೊಡುವಾಗ ಗ್ರೋತ್ ಸೆಂಟರ್ ಎಂದು ಇದರಲ್ಲಿ ನಿಗದಿ ಮಾಡಿದ್ದಾರೆ. ಬೇರೆ ಜಿಲ್ಲೆಗಳ ಬಗ್ಗೆ ನನ್ನ ಹತ್ತಿರ ಅಷ್ಟುಮಾಹಿತಿ ಇಲ್ಲ ಆದರೆ ದಕ್ಷಿಣಕನ್ನಡ ಜಿಲ್ಲೆಯ ಬಗ್ಗೆ ಹೇಳಬೇಕೆಂದರೆ, ಉಡುಪಿ ಮತ್ತು ಕುಂದಾಪುರ ಎರಡನ್ನು ಬಿಟ್ಟರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಬೇರೆ ಯಾವುದೇ ಗ್ರೋತ್ ಸೆಂಟರ್ ಇಲ್ಲವೆನ್ನುವ ತೀರ್ಮಾನಕ್ಕೆ ನಿಮ್ಮ ಅಧಿಕಾರಿಗಳು ಬಂದಿರುವಂತೆ ಕಾಣುತ್ತಿದೆ. ನಿಮ್ಮ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ಈ ಒಂದು ತೀರ್ಮಾನಕ್ಕೆ ಬಂದಿದಾರೆಂದು ಹೇಳಬಹುದು ಈಗ ನಮ್ಮ ಜಿಲ್ಲೆಯಲ್ಲಿ ಹೊಸದಾಗಿ ಕೆಲವು ಕೈಗಾರಿಕೆಗಳು ಬರುತ್ತಿವೆ. ತೋಟಗಾರಿಕೆ ಫಾರಂಗಳು ಅಭಿವೃದ್ಧಿಯಾಗುತ್ತಿವೆ. ಅರಣ್ಯ ಪ್ರದೇಶಗಳನ್ನು ವೃದ್ಧಿಪಡಿಸಲಾಗುತ್ತಿದೆ. ಸರ್ಕಾರದವರು ಅಲ್ಲಿಯ ಅರಣ್ಯ ಪ್ರದೇಶದಲ್ಲಿ ಅಮೂಲ್ಯವಾದಂಥ ವೃಕ್ಷಗಳನ್ನು ಬೆಳೆಸಲು ಯೋಜನೆ ಹಾಕಿಕೊಂಡಿದ್ದಾರೆ. ಅಲ್ಲಿ ದೊಡ್ಡ ರಸಗೊಬ್ಬರದ ಕಾರ್ಖಾನೆ ಇದೆ, ಇಂಡಸ್ಟ್ರಿಯಲ್ ಎಸ್ಟೇಟ್‌ಗಳಿವೆ ಇದಕ್ಕೆ ಸಂಬಂಧಪಟ್ಟಂತೆ ಅನೇಕ ರಸ್ತೆಗಳಿವೆ. ಈಗ ಬಂಟ್ವಾಳದಿಂದ ಚಿಕ್ಕಮಗಳೂರಿಗೆ ಹೋಗಬೇಕಾದರೆ ಚಾರ್ಮುಡಿ ಘಾಟ್ ಮೂಲಕವೇ ಹೋಗಬೇಕು: ಮಂಗಳೂರಿನಿಂದ ಹಾಸನಕ್ಕೆ ಶಿರಾಡಿ ಘಾಟ್ ಮೂಲಕ ಹೋಗಬೇಕು ಮೈಸೂರಿನಿಂದ ಮಡಕೇರಿಗೆ ಹೋಗುವ ರಸ್ತೆ, ಕೇರಳಾದಿಂದ ಕಾಸರಗೋಡಿಗೆ ಹೋಗುವ ರಸ್ತೆ, ಕನ್ಯಾಕುಮಾರಿಯಿಂದ ಮುಂಬೈನ ಹೈ-ವೇಗೆ ಹೋಗತಕ್ಕಂಥ ರಸ್ತೆ ಹಾಗೂ ಇನ್ನಿತರ ಪ್ರಮುಖವಾದಂಥ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಇವರ ಗಮನಕ್ಕೆ ಬರಲಿಲ್ಲವೇ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ. ಉಡುಪಿ ಮಾತ್ರ ಗ್ರೋತ್ ಸೆಂಟರ್ ಎಂದು ಇವರು ತಿಳಿದುಕೊಂಡಿರುವಂತೆ ಕಾಣುತ್ತಿದೆ. ಆ ಜಿಲ್ಲೆಯ ಇನ್ನಿತರ ರಸ್ತೆಗಳು ಇವರ ಲೆಕ್ಕಕ್ಕೇ ಬಂದಿಲ್ಲ. ಪ್ರಮುಖ ವ್ಯಾಪಾರ ಕೇಂದ್ರಗಳಿಗೆ ಹಾಗೂ ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ಅನೇಕ ರಸ್ತೆಗಳು ಇದ್ದರೂ ಸಹ ಉಡುಪಿಯೊಂದೇ ಇವರಿಗೆ ಸುಂದರವಾಗಿ ಕಾಣುತ್ತಿದೆ, ಇದಕ್ಕೆ ಕಾರಣ ಅಲ್ಲಿ ಮಣಿಪಾಲ್ ಮೆಡಿಕಲ್ ಕಾಲೇಜು ಇದೆ, ಅಲ್ಲಿ ಪ್ರಭಾವಶಾಲಿ ವ್ಯಕ್ತಿಗಳಿದ್ದಾರೆಂಬ ದೃಷ್ಟಿಯಿಂದ ಇವರಿಗೆ ಅದು ಗ್ರೋತ್ ಸೆಂಟರ್ ಆಗಿ ಕಂಡಿರಬಹುದು. ಇದೆಲ್ಲಾ ನಮಗೆ ಬೇಕಾಗಿಲ್ಲ. ವ್ಯವಸಾಯಗಾರರ ಹಿತದೃಷ್ಟಿಯಿಂದ ಕೈಗಾರಿಕೆಗಳು ಬೆಳೆಯಬೇಕೆಂಬ ಹಿತದೃಷ್ಟಿಯಿಂದ ರಸ್ತೆಗಳ ಸೌಲಭ್ಯವನ್ನು ಎಲ್ಲ ಕಡೆಯಲ್ಲಿಯೂ ಮಾಡಿಕೊಡಬೇಕೆಂಬ ಉದ್ದೇಶ ಈ ಇಂಜಿನಿಯರುಗಳಿಗೆ ಇರುವಂತೆ ಕಂಡುಬರುತ್ತಿಲ್ಲ. ಇವರ ದೃಷ್ಟಿ ಬಡವರ ಕಡೆಗೆ ಇರಬೇಕು. ಈ ಮಾಸ್ಟರ್ ಪ್ಲಾನಿನಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರವೇ ಕೆಲಸ ಮಾಡುವುದಾದರೆ ಇದನ್ನೇ ಸರ್ಕಾರದವರು ಆಧಾರವನ್ನಾಗಿಟ್ಟುಕೊಂಡರೆ ನಮ್ಮ ಹಳ್ಳಿಗಳಿಗೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಮಾರ್ಕೆಟ್ ಸೆಂಟರ್ಸ್ ಬಗ್ಗೆ ಇಲ್ಲಿ ಹೇಳಿದ್ದಾರೆ. ಕಾರ್ಕಳ, ಬಂಟ್ವಾಳ, ಪುತ್ತೂರು ಈ ಸ್ಥಳಗಳಲ್ಲಿ ಪ್ರಮುಖವಾದಂಥ ಮಾರುಕಟ್ಟೆಗಳಿಲ್ಲ. ಯಾವ ಆಧಾರ ಇಟ್ಟುಕೊಂಡು ಈ ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದಾರೆಂದು ನನಗೆ ಅರ್ಥವಾಗುವುದಿಲ್ಲ. ಮಾರ್ಕೆಟ್ ಸೆಂಟರ್ಸ್ ಬಗ್ಗೆ ಇವರು ಆರಿಸಿಕೊಂಡಿರುವ ವಿಚಾರಗಳು ಸಾಧುವಾದುದಾಗಿಲ್ಲ. ಮತ್ತು ಆಯಾ ಸ್ಥಳದ ಅವಶ್ಯಕತೆಯನ್ನು ನೋಡಿಕೊಂಡು ಇದನ್ನು ತಯಾರು ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಮಾಸ್ಟರ್ ಪ್ಲಾನನ್ನು ತಯಾರು ಮಾಡುವಾಗ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೆ ಹೆಚ್ಚಿನ ಮಹತ್ವ ಕೊಡಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಮಾತನಾಡಿದ್ದೆ. ಅದೇ ರೀತಿ ಮಲೆನಾಡು ಮತ್ತು ಕರಾವಳಿ ಪ್ರದೇಶಕ್ಕೆ ಹಚ್ಚಿನ ಮಹತ್ವ ಕೊಟ್ಟಿದ್ದಾರೆ. ಈ ಸಂದಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಕರಾವಳಿ ಪ್ರದೇಶದಲ್ಲಿ ಮಲೆನಾಡಿನಲ್ಲಿ ನೆರೆ ಬರುತ್ತದೆ. ವರ್ಷದಲ್ಲಿ ಪ್ರತಿಯೊಂದು ಮಳೆಗಾಲದಲ್ಲೂ ಕೂಡ ನೆರೆ ಬರುತ್ತದೆ. ನೆರೆಯು ಮುಖ್ಯ ಕೇಂದ್ರ ಹಾಗೂ ಪಟ್ಟಣಗಳ ಮೂಲಕ ಹೋಗುತ್ತದೆ. ಇದರಿಂದ ಸಾರಿಗೆ ಸಂಪರ್ಕ ಕಡಿದುಹೋಗುತ್ತದೆ. ಬೆಂಗಳೂರಿನಿಂದ ಮಂಗಳೂರಿಗೆ ಹೋಗಬೇಕಾದರೆ ಕೂಡ ದಾರಿಯಲ್ಲಿ ನಿಲ್ಲಬೇಕಾಗುವ ಫ್ಲಡ್ ಎಸ್‌ಕೇಪ್ ರೋಡ್‌ಗಳನ್ನು ಮಾಡಬೇಕು ಮತ್ತು ಹತೋಟಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಷ್ಟೋ ಸಮಯದಿಂದ ನಾವು ಒತ್ತಾಯ ಮಾಡುತ್ತಿದ್ದೇವೆ. ನೆರೆಯ ಹಾವಳಿಯಿಂದ ರಸ್ತೆಗಳನ್ನು ರಕ್ಷಣೆ ಮಾಡತಕ್ಕಂತಹ ಯೋಜನೆಯನ್ನು ತೆಗೆದುಕೊಂಡಿಲ್ಲ.

೪,೩೦ ಪಿ.ಎಂ.

ನ್ಯಾಷನಲ್ ಹೈವೇ ಮತ್ತು ಸ್ಟೇಟ್‌ಹೈವೇಗಳು ಹಾಗೂ ಡಿಸ್ಟ್ರಿಕ್ಟ್ ರಸ್ತೆಗಳನ್ನು ರಸ್ತೆ ಮಾಡುವುದಕೆ ಬೇಕಾದಂತಹ ಸೂಚನೆಗಳನ್ನು ಈ ಒಂದು ವಾರ್ಷಿಕ ವರದಿಯಲ್ಲಿ ಕೊಟ್ಟಿಲ್ಲ. ಬಂಟವಾಳ ಪ್ರತಿವರ್ಷ ಅಪಾಯದಲ್ಲಿರುತ್ತದೆ. ನೆರೆ ಬಂದು ೧,೨೦೦ ಮನೆಗಳ ಒಂದು ತಾಲ್ಲೂಕಿನಲ್ಲಿ ಮುಳುಗಿ ಹೋಗಿವೆ. ಅಲ್ಲಿಗೆ ಒಂದು ಬೈಪಾಸ್ ರಸ್ತೆಯನ್ನು ಮಾಡಬೇಕು. ನೆರೆ ಬಂದರೆ ಜನರು ತಮ್ಮ ಸಾಮಾನುಗಳನ್ನು ಜಾನುವಾರುಗಳನ್ನು ತೆಗೆದುಕೊಂಡು ತಪ್ಪಿಸಿಕೊಂಡು ಹೋಗುವುದಕ್ಕೆ ಅನುಕೂಲಕರವಾದ ಒಂದು ಬೈಪಾಸ್ ರೋಡನ್ನು ಮಾಡಬೇಕು. ಗಂಡಾಂತರದಿಂದ ಪಾರಾಗುವಂತಹ ಸಣ್ಣ ರಸ್ತೆಯನ್ನು ಮಾಡಿ ಕೊಡಬೇಕು. - ಈ ಬೈಪಾಸ್ ಗಸ್ತೆ ಮಾಡುವುದಕ್ಕ ಮಾಸ್ಟರ್ ಪ್ಲಾನ್‌ನಲ್ಲಾಗಲಿ, ಬಡ್ಜೆಟ್ಟಿನಲ್ಲಾಗಲಿ ಯಾವ ಪ್ರಪೋಸಲ್ಲಾಗಲೀ ಇಲ್ಲ. ಮಿನಿಮಮ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ರಸ್ತೆಗಳು ಇಲ್ಲದಂತ ಈ ಗ್ರಾಮಗಳಿಗೆ ರಸ್ತೆಗಳನ್ನು ಒದಗಿಸುವಂತಹ ಒಂದು ಕಾರ್ಯಕ್ರಮವನ್ನು ಬಡ್ಜೆಟ್‌ನಲ್ಲಿ ಹಾಕಿದ್ದಾರೆ. ಈ ರಸ್ತೆಗಳ ಕಾರ್ಯಕ್ರಮಕ್ಕೋಸ್ಕರವಾಗಿ ಹೋದ ವರ್ಷ ಮೀಸಲಾಗಿಟ್ಟಿದ್ದ ಹಣವನ್ನು ಖರ್ಚ ಮಾಡಿಲ್ಲ. ಮಿನಿಮಮ್ ನೀಡ್ಸ್‌ಗೆ ಸೇರಿದಂತಹ ರಸ್ತೆಗಳನ್ನು ಮಾಡಿಸಿಲ್ಲ. ರಸ್ತೆ ಇತ್ಯಾದಿ ಕೆಲಸ ಕಾರ್ಯಗಳನ್ನು ಮಾಡಿಸುವುವಕ್ಕೆ ಈ ಸದನದಲ್ಲಿ ಹಣಕ್ಕೆ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾರೆ ಬಡ್ಜೆಟ್‌ನಲ್ಲಿ ಹಣ ಇರುತ್ತದೆ ಆದರೆ ಇದನ್ನು ಏತಕ್ಕೆ ಖರ್ಚು ಮಾಡುವುದಿಲ್ಲ ಅಧಿಕಾರಿಗಳ ಜೊತೆ ಶಾಮೀ ಲಾಗಿರತಕ್ಕ ಕಂಟ್ರಾಕ್ಟರುಗಳಿಗೆ ಒಳ್ಳೆಯದು ವ ಡುವುದಕೋಸ್ಕರ ಹಣವನ್ನು ಹೊಡೆಯುವುದಕೋಸ್ಕರ ಮಣ್ಣು ರಸ್ತೆಗಳನ್ನು ತೆಗೆದುಕೊಳ್ಳುತ್ತಾರೆ. ಈ ಹಣದ ಬಹು ಅಂಶವನ್ನು ಆ ಒಂದು ಕಾರ್ಯಕ್ಕಾಗಿ ಉಪಯೋಗಿಸುತ್ತಾರೆ. ಎಲ್ಲಿ ಜನರಿಗೆ ರಸ್ತೆಗಳ ಅವಶ್ಯಕತೆ ಇದೆ ಅಲ್ಲಿ ರಸ್ತೆಗಳನ್ನು ಮಾಡಿಕೊಡುತ್ತಾ ಇಲ್ಲ. ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡುತ್ತೇನೆ. ಈ ಸದನದಲ್ಲಿ ಯಾವುದೇ ಅಧಿಕಾರಿಗಳ ಹೆಸರನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ರಸ್ತೆಗಳನ್ನು ಮಾಡಿಸುವುದಕ್ಕೆ ಹಣವಿದ್ದರೆ ಯಾವ ತರಹ ಮಾಡುತ್ತಾರೆ ಎನ್ನುವ ಬಗ್ಗೆ ಶ್ರೀಮಾನ್ ಎಂ. ಸಿ. ಬಸಪ್ಪನವರು ಸವಿಸ್ತಾರವಾಗಿ ಹೇಳಿದ್ದಾರೆ. ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಟೆಂಡರ್ ಕರೆದು ಕೆಲಸವನ್ನು ಕೊಡಬೇಕು. ಇದಕ್ಕೆ ಕಾರ್ಪೊರೇಷನಲ್ಲಿ ಯಾವ ಸರಿಯಾದ ವ್ಯವಸ್ಥೆಯೂ ಇಲ್ಲ. ಇಲ್ಲಿ ಕಂಟ್ರಾಕ್ಟರುಗಳಿಗೆ ಮಡ್ ವರ್ಕ್‌ಗಳನ್ನು ಕೊಡುತ್ತಾರೆ. ಈ ಕಾಂಟ್ರಾಕ್ಟರುಗಳು ಮಣ್ಣಿನ ಕೆಲಸವನ್ನು ತೆಗೆದುಕೊಂಡು ಬಹಳ ಮುತುವರ್ಜಿ ಯಿಂದ ಮಾಡಿಸುತ್ತಾರೆ. ಯಾವ ರಸ್ತೆಗೆ ಸಿಮೆಂಟ್ ಹಾಕಬೇಕು, ಯಾವ ರಸ್ತೆಗೆ ಜಲ್ಲಿ ಹಾಕಬೇಕು ಎಂದು ಒಂದು ಸರಿಯಾದ ಕಾರ್ಯಕ್ರಮ ಇಲ್ಲದಾಗಿದೆ. ಇದನ್ನು ಉದ್ದೇಶಪೂರ್ವಕವಾಗಿ ಮಾಡಿಸಿ ಹಣವನ್ನು ಪೋಲು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ. ಮಿನಿಮಮ್ ನೀಡ್ಸ್‌ಗೆ ಹೋದವರ್ಷ ಇಟ್ಟಿದ್ದ ಹಣವನ್ನು ಉಪಯೋಗ ಮಾಡದೇ ಈ ವರ್ಷ ಅದನ್ನು ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಮಿನಿ ಮಮ್ ನೀಡ್ಸ್ ಪ್ರಕಾರ ಎಷ್ಟು ಖರ್ಚು ಮಾಡಬೇಕೆಂದು ನಿಗದಿ ಮಾಡಿ ಅಷ್ಟು ಹಣವನ್ನು ಖರ್ಚು ಮಾಡಿ ಕನಿಷ್ಟ ಅವಶ್ಯಕತೆ ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ೫೦ ಕಿ.ಮೀ. ರಸ್ತೆಯನ್ನು ಮಾಡುತ್ತೇವೆಂದು ಅವರ ಕಾಲದಲ್ಲಿ ತೆಗೆದುಕೊಂಡರು. ಇದು ಏನಾಯಿತು ಎಂದರೆ ಈ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಬಡ್ಜೆಟ್ಟಿನ ಪ್ರಕಾರ ಒದಗಿಸಿದ ಹಣವನ್ನು ಖರ್ಚು ಮಾಡಲಿಲ್ಲ. ಅದನ್ನು ಸರಿಪಡಿಸುವುದಕ್ಕೆ ಮತ್ತೆ ಯಾವ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಶ್ರೀಮಾನ್ ಬಂಗಾರಪ್ಪನವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿ ಬಂದ ಮೇಲೆ ಒಂದೊಂದು ತಾಲ್ಲೂಕಿ ನಲ್ಲಿ ೫ ಕಿ. ಮಿ, ರಸ್ತೆಯನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸಿದರು. ಅದೂ ಕೂಡ ಮಾಡಲಿಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರು ಈಗಿರತಕ್ಕಂತಹ ರಸ್ತೆಗಳನ್ನು ದುರಸ್ತು ಮಾಡಲಿಲ್ಲ ಒಂದು ಕಿ.ಮಿ. ರಸ್ತೆಯನ್ನು ದುರಸ್ತೆ ಮಾಡುವುದಕ್ಕೆ ೧,೫೦೦ ರೂಪಾಯಿಯನ್ನು ಒದಗಿಸಿ ಯೋಜನೆ ಯನ್ನು ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ. ಇವರು ವರದಿಯಲ್ಲಿ ಹಾಕಿಕೊಂಡಿರತಕ್ಕ ಯೋಜನೆಗಳನ್ನು ನೋಡಿದರೆ ಒಂದಕ್ಕೊಂದಕ್ಕೊ ಸಂಬಂಧವೇ ಇಲ್ಲ. ಐ.ಸಿ.ಆರ್.ಸಿ ರಸ್ತೆಗಳನ್ನು ದುರಸ್ತಿ ಮಾಡಿಸುವುದಕ್ಕೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ಈ ರಸ್ತೆಗಳನ್ನು ದುರಸ್ತಿ ಮಾಡುವವರೇ ಇಲ್ಲ. ಒಂದು ಉದಾಹರಣೆ ಹೇಳುತ್ತೇನೆ ನನ್ನ ಕ್ಷೇತ್ರದಲ್ಲಿ ಒಂದು ರಸ್ತೆ ಮಾಡುವುದಕ್ಕೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟಿದ್ದಾರೆ. ಆ ರಸ್ತೆಯನ್ನು ಅರ್ಧಂಭರ್ಧ ಮಾಡಿದ್ದಾರೆ. ಎಷ್ಟು ದಿವಸಗಳು ಆದರೂ ಕೂಡ ಆ ಕೆಲಸವನ್ನು ಪೂರ್ತಿ ಮಾಡಿಲ್ಲ. ಕೆಲಸವನ್ನು ಆರಂಭ ಮಾಡಿ ಅಲ್ಲಿನ ಮಣ್ಣನ್ನು ರಸ್ತೆಯ ದಡದಲ್ಲಿ ಹಾಕಿದ್ದಾರೆ. ಮಳೆ ಬಂದಾಗ ನೀರು ಬಂದು ಎಲ್ಲಾ ಕೊಚ್ಚಿ ಹೋಗುತ್ತದೆ.

ಈ ಕೆಲಸವನ್ನು ಕಾರ್ಯಗತ ಮಾಡುವ ಬಗ್ಗೆ ಕಂಟ್ರಾಕ್ಟರ್ ಕೇಳಿದರೆ ಇಂಜಿನಿಯರ್ ಮೇಲೆ ಹೇಳುತ್ತಾರೆ. ಇಂಜನಿಯರ್ ಕೇಳಿದರೆ ಕಂಟ್ರಾಕ್ಟರ್ ಮೇಲೆ ಹೇಳುತ್ತಾರೆ. ಕಂಟ್ರಾಕ್ಟರ್ ಕೆಲಸವನ್ನು ಸಮಯಕ್ಕೆ ಸರಿಯಾಗಿ ಪೂರ್ತಿ ಮಾಡುವುದಿಲ್ಲ ಮಾಡಿದ ಕೆಲಸ ಕೂಡ ಉಪಯೋಗವಾಗದೆ ಜನಗಳಿಗೆ ತೊಂದರೆ ಬರುವ ರೀತಿಯಲ್ಲಿ ಕೆಲಸವನ್ನು ಮಾಡುವುದನ್ನು ನಾವು ನೋಡುತ್ತಿದ್ದೇವೆ. ಇಂತದ್ದನ್ನು ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತ್ತಿದ್ದಾರೆ. ಈ ಬಗ್ಗೆ ಏನು ಹೇಳಬೇಕೋ ಗೊತ್ತಿಲ್ಲ. ಬಹಳ ಮುಖ್ಯವಾಗಿ ಒಂದು ವಿಷಯದಲ್ಲಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ತಮ್ಮ ಅಧಿಕಾರಿಗಳನ್ನು ನಾನು ಅಭಿನಂದಿಸುವುದಿಲ್ಲ. ರಾಷ್ಟ್ರಕವಿ ಕುವೆಂಪು ಅವರು ಹೇಳಿದ ಹಾಗೆ ಇಡೀ ಇಲಾಖೆಯಲ್ಲಿ ಅವರು ಕುಳಿತುಕೊಂಡಿರತಕ್ಕ ಆಫೀಸು ಏನಿವೆ ಅವೆಲ್ಲವು ಕೂಡ ಬಡ ಬೋರೇಗೌಡನ ಎಲುಬಿನ ಮೇಲೆ ಕಟ್ಟಿರುವುದು. ಎಂಬುದನ್ನು ಈ ಅಧಿಕಾರಿಗಳು ಮರೆತ್ತಿದ್ದಾರೆ, ಬಡ ಬೋರೇಗೌಡನ ಕೂಗು ಇನ್ನೂ ನಿಂತಿಲ್ಲ. ಆ ಒಂದು ಕೂಗು ಎಲ್ಲಿಂದ ಬರುತ್ತದೆ ಎಂಬುದು ಇವರ ಹೃದಯಕ್ಕೆ ಇನ್ನೂ ಬಂದಿಲ್ಲ. ಈ ಲೋಕೋಪಯೋಗಿ ಇಲಾಖೆಯಲ್ಲಿ ೨೪,೦೦೦ ಗ್ಯಾಂಗ್ ಮೆನ್ ಹಾಗೂ ವರ್ಕ್ ಚಾರ್ಜ್ ಎಂಪ್ಲಾಯಿಸ್ ಇದ್ದಾರೆ. ಅವರ ಒಂದು ಸಮಸ್ಯೆಯನ್ನು ಪರಿಹರಿಸುತ್ತೇವೆ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುತ್ತೇವೆಂದು ಶ್ರೀಮಾನ್ ಚನ್ನಬಸಪ್ಪನವರು ಈ ಸದನದಲ್ಲಿ ಹೇಳಿದ್ದರು. ಈಗ ಅವರು ಈ ಸದನದಲ್ಲಿ ಇಲ್ಲ. ಆದ್ದರಿಂದ ನಾವು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಬಂಗಾರಪ್ಪನವರು ಅಧಿಕಾರಕ್ಕೆ ಬಂದಮೇಲೆ ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸುತ್ತೆವೆಂದು ಹೇಳಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟದ್ದಾರೆ. ಅದಕ್ಕೋಸ್ಕರವಾಗಿ ಶ್ರೀಮಾನ್ ಬಂಗಾರಪ್ಪ ನವರನ್ನು ಆ ೨೪,೦೦೦ ಜನ ಕಾರ್ಮಿಕರ ಪರವಾಗಿ ಅಭಿನಂದಿಸುತ್ತೇನೆ. ತಮ್ಮ ಒಂದು ಇಚ್ಛೆ ಏನಿದೆ ಅದನ್ನು ನೆರವೇರಿಸವುದಕ್ಕೆ ಅಧಿಕಾರಿಗಳು ಬಿಡುವುದಿಲ್ಲವೆಂದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ಕಾರ್ಯವನ್ನು ಮಾಡುವಾಗ ಅಧಿಕಾರಿಗಳು ಅಡ್ಡ ಬಂದರೆ ಅವರನ್ನು ಹತೋಟಿಯಲ್ಲಿ ಇಟ್ಟು ತಮ್ಮ ಇಚ್ಛೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸದಸ್ಯರ ಅಭಿಪ್ರಾಯವನ್ನು, ಜನತೆಯ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ತರುವುದಕ್ಕೆ ತಾವು ನಿರ್ದೇಶನ ಕೊಡಬೇಕು. ಇದನ್ನು ನಾನು ಇಷ್ಟು ಕಠಿಣವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ ಹಿಂದೆ ರಾಜ್ಯಗಳ ಪುನರ್ ವಿಂಗಡಣೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದ ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಬಂದ ಮೇಲೆ ಈ ವರ್ಕ್ ಚಾರ್ಜ್ ಎಂಪ್ಲಾಯೀಸ್‌ಗೆ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರಿಗೆ ಏನು ಸವಲತ್ತುಗಳು ಸಿಗುತ್ತದೆಯೋ ಅವೆಲ್ಲವನ್ನೂ ಕೂಡ ಇವರಿಗೆ ಕೊಟ್ಟಿದ್ದಾರೆ. ನಾರಾಯಣ್ ಪೈ ಕಮೀಷನ್ ಪ್ರಕಾರ ೪ನೇ ದರ್ಜೆಯ ನೌಕರರಿಗೆ ಕೊಟ್ಟ ಸೌಲತ್ತುಗಳನ್ನು ಹೈದರಾಬಾದ್ ಕರ್ನಾಟಕದಿಂದ ಬಂದಂತಹ ನೌಕರರಿಗೂ ಕೊಟ್ಟಿದ್ದಾರೆ. ಆದರೆ ಬೇರೆ ಬೇರೆ ಭಾಗಗಳಿಂದ ಕರ್ನಾಟಕಕ್ಕೆ ಬಂದ ಈ ವರ್ಕ್ ಚಾರ್ಜ್ ನೌಕರರಿಗೆ ಏತಕ್ಕೆ ಕೊಡಲಿಲ್ಲ. ಹೈದರಾಬಾದ್ ಕರ್ನಾಟಕದಿಂದ ಬಂದಂತಹ ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್ ನೌಕರರಿಗೆ ಏನು ಸವಲತ್ತನ್ನು ಕೊಟ್ಟಿದ್ದೀರೋ ಆ ಸವಲತ್ತನ್ನು ಬೇರೆ ಬೇರೆ ಭಾಗಗಳಿಂದ ಬಂದಿರತಕ್ಕ ನೌಕರರಿಗೂ ಕೊಡಿ ಎಂದರೆ ಅದನ್ನು ಕೊಡುವುದಕ್ಕೆ ಇಲ್ಲಿಯ ತನಕ ಅಧಿಕಾರಿಗಳು ಅವಕಾಶ ಕೊಟ್ಟಿಲ್ಲ. ಅವರು ಅವಕಾಶ ಕೊಡಲಿಲ್ಲ. ತಮಗಿಂತ ಮುಂಚೆ ಇದ್ದಂಥ ಶ್ರೀಮಾನ್ ಶ್ರೀಕಂಠಯ್ಯನವರು ಇದರ ಬಗ್ಗೆ ಒಂದು ಯೋಜನೆ ತಯಾರು ಮಾಡಿದ್ದರು. ಆದರೆ ಈ ಅಧಿಕಾರಿಗಳು ಅವರನ್ನು ಖಾಯಂಗೊಳಿಸಲಿಕ್ಕೆ, ಸವಲತ್ತುಗಳನ್ನು ಕೊಡಲಿಕ್ಕೆ ಬಿಡಲಿಲ್ಲ. ಇದು ಆದರೆ ನಮ್ಮ ಹಣ ದಿವಾಳಿಯಾಗುತ್ತದೆ ಮಾಡಬೇಡಿ ಎಂದು ಹಲವಾರು ರೀತಿಯಲ್ಲಿ ಹೇಳಿ ಅವರಿಗೆ ಮಾಡಲಿಕ್ಕೆ ಬಿಡಲಿಲ್ಲ. ಇವತ್ತಿನವರೆಗೂ ಅವರು ಸರ್ಕಾರಿ ನೌಕರರಲ್ಲ. ತಾವು ಕಾನೂನು ಬಲ್ಲವರು. ತಮಗೆ ಗೊತ್ತಿದೆ, ಸರ್ಕಾರಿ ನೌಕರರಲ್ಲ ಎನ್ನುವುದನ್ನು ಇಷ್ಟರ ತನಕ ಹೇಳುತ್ತಿದ್ದರು. ಇಷ್ಟರತನಕ ರೋಡ್ ಕನ್‌ಸ್ಟ್ರಕ್ಷನ್ ಮಾಡುವಂಥ ಕೆಲಸಗಾರರು ಬಿಲ್ಡಿಂಗ್, ರೋಡ್ ಕನ್‌ಸ್ಟ್ರಕ್ಷನ್‌ನಲ್ಲಿ ಯಾರು ಕೆಲಸ ಮಾಡುತ್ತಾರೆ ಅವರಿಗೆ ಸರ್ಕಾರ ನಿಗದಿ ಮಾಡಿರುವಂಥ ಕನಿಷ್ಟ ವೇತನವನ್ನು ಕೊಡಲೇಬೇಕಾಗಿಲ್ಲ ಕೊಡಬೇಕು ಇಲ್ಲ ಅಂದರೆ ಸರ್ಕಾರಿ ನೌಕರರನ್ನಾಗಿ ನೇಮಕ ಮಾಡಬೇಕು. ಸರ್ಕಾರ ಕೆಲವು ವರ್ಷಗಳ ಹಿಂದೆ ನೋಟಿಫಿಕೇಷನ್ ಮಾಡಿದೆ. ನನಗೆ ಅದರ ವಿವರಣೆಗಳನ್ನು ಕೊಡಲಿಕ್ಕೆ ವೇಳೆ ಇಲ್ಲ. ಸರ್ಕಾರ ನೋಟಿಫೈ ಮಾಡಿದಂಥ ಮಿನಮಂ ವೇಜ್‌ರೇಟುಗಳನ್ನು ಬೆಂಗಳೂರು ಸಿಟಿಯೊಳಗೆ, ಬೆಂಗಳೂರು ಡಿವಿಜನ್‌ನಲ್ಲಿ, ಜಿಲ್ಲೆಯಲ್ಲಿ ಕೊಡುತ್ತಾ ಇಲ್ಲ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೆಲಸಗಾರರು ಸಂಘಟಿತರಾಗಿ ಹೋರಾಟ ಮಾಡಿದ ಮೇಲೆ ಅಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರರ್‌ವರು ಶಿಫಾರಸ್ಸು ಮಾಡಿ ಕನಿಷ್ಟವೇತನ ಹಳ್ಳಿಗಳಲ್ಲಿ ೬ ರೂಪಾಯಿ ಡಿಸ್ಟ್ರಿಕ್ ಹೆಡ್ ಕ್ವಾರ್ಟರ್ಸ್‌ನಲ್ಲಿ ೭ ರೂಪಾಯಿ ಕಾರ್ಪೊರೇಷನ್ ಏರಿಯಾನಲ್ಲಿ ೮ ರೂಪಾಯಿ ಕೊಡಬೇಕು ಎಂದು

ಇದ್ದುದನ್ನು ಅವರು ಜಾರಿಗೆ ತಂದರು. ಆ ಒಂದು ಜಿಲ್ಲೆಯಲ್ಲಿ ಮಾತ್ರ ಜಾರಿಗೆ ತಂದರು. ನಿಮ್ಮ ಚೀಫ್ ಇಂಜನಿಯರ್ ಸಾಹೇಬರು ಸೂಪರಿಂಟೆಂಡಿಂಗ್ ಇಂಜನಿಯರ್ ಸಾಹೇಬರು ಇದರ ಪ್ರಕಾರ ಬೇರೆ ಕಡೆಗಳಲ್ಲಿ ಏಕೆ ಮಾಡಲಿಲ್ಲ. ಬೆಂಗಳೂರು ಜಿಲ್ಲೆಯಲ್ಲಿ ನಾಲ್ಕೈದು ರೂಪಾಯಿಗಳಿಗೆ ದುಡಿಸುತ್ತಿದ್ದಾರೆ ಎಂದರೆ ಇದರ ಅರ್ಥ ಏನು ? ಕಂಟ್ರಾಕ್ಟರುಗಳು ಇಚ್ಛಾನುಸಾರ ಊರಿಂದೂರಿಗೆ ಓಡಿಸುತ್ತಿರುವುದು ತೀರ ಅನ್ಯಾಯ. ಯಾವ ಚೀಫ್ ಇಂಜನಿಯರ್ ಇದಕ್ಕೆ ಕಾರಣರಾಗಿದ್ದಾರೋ, ಈ ಕಾನೂನನ್ನು ತಮ್ಮ ಗಮನಕ್ಕೆ ತರದೇ ಮುಚ್ಚಿಟ್ಟು ನಾವು ತೋರಿಸಿದ ಮೇಲೂ ರೈಲ್ವೆಯವರಿಗೆ ಮಾತ್ರ, ರೋಡ್ ಕೆಲಸಗಾರರಿಗೆ ಆಗುವುದಿಲ್ಲ ಎನ್ನುವಂಥ ಅಧಿಕಾರಿಗಳನ್ನು ಇಟ್ಟುಕೊಂಡು ಹೇಗೆ ನಡೆಸುತ್ತಿದ್ದೀರಿ ಎಂದು ಕೇಳುತ್ತೇನೆ. ಕಾರ್ಮಿಕರ ಮೇಲೆ ಅನುಕಂಪ ಅಧಿಕಾರಿಗಳಲ್ಲಿ ಕೂಡ ಬರಬೇಕು. ಮಾನ್ಯ ಅಮರ್ಗಂರವರು ಒಂದು ಮಾತನ್ನು ಹೇಳಿದರು. ಐ.ಎ.ಎಸ್, ಅಧಿಕಾರಿಗಳಿಗೆ ಇವರ ಬಗ್ಗೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಕಳಿಸುವಂಥ ಅಧಿಕಾರ ಕೊಟ್ಟರೆ ಇವರ ಅಧಿಕಾರಕ್ಕೆ ಕುಂದು ಆಗುತ್ತದೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಅಸಿಸ್ಟೆಂಟ್ ಇಂಜನಿಯರುಗಳ ಸಂಪೂರ್ಣ ಹತೋಟಿ ಅವರ ಕೈಯಲ್ಲಿರಬೇಕು. ಏಕೆಂದರೆ ಅವರು ಟೆಕ್ನಿಕಲ್ ಎಲ್ಲಾ ವಿಚಾರಗಳನು ತಿಳಿದವರು. ಅವರ ಕೆಳಗಿನ ಅಧಿಕಾರಿಗಳ ಗುಪ್ತ ವರದಿಯನ್ನು ಸರ್ಕಾರಕ್ಕೆ ಕಳಿಸಬೇಕು. ಆದರೆ ಆ ಅಧಿಕಾರಿಗಳೂ ಕೂಡ ತಮ್ಮ ಕೈಕೆಳಗಿನವರು ಕೆಲಸಗಾರರು, ನೌಕರರು, ಮನುಷ್ಯರು ಎನ್ನುವುದನ್ನು ತಿಳಿದುಕೊಂಡು ಮಾನವೀಯತೆಯಿಂದ ವರ್ತಿಸಬೇಕು, ಈ ಇಲಾಖೆಯಲ್ಲಿ ಕೆಳಗಿನಿಂದ ಮೇಲಿನತನಕ ಇರುವಂಥ ಅಧಿಕಾರಿಗಳು ತಾವು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಎನ್ನುವುದನ್ನು ತಿಳಿದುಕೊಂಡು ಮಾನವೀಯತೆಯಿಂದ ವರ್ತಿಸುವಂಥ ಮನೋಭಾವವನ್ನು ಅವರಲ್ಲಿ ಬೆಳೆಸಬೇಕು ಬೋಧನೆ ಮಾಡುವಂಥ ನಡೆಸುವಂಥ ಕಾರ್ಯ ಮಾನ್ಯ ಸಚಿವರದು, ಅವರು ಈ ಒಂದು ಕಾರ್ಯವನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ ಮಾನ್ಯ ಸಚಿವರು ಬಹಳ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡಿದ್ದಾರೆ. ಏನೆಂದರೆ ರಸ್ತೆಗಳನ್ನು ಸೇತುವೆಗಳನ್ನು ದುರಸ್ತಿಮಾಡುವ ಮೊದಲು ಇಲಾಖೆಯನ್ನು ದುರಸ್ತಿ ಮಾಡಲಿಕ್ಕೆ ಕೈ ಹಾಕಿದ್ದಾರೆ, ಸಂತೋಷ. ಅವರು ನಮ್ಮ ಜೊತೆಯಲ್ಲಿದ್ದಾಗ ಹಲವಾರು ವಿಚಾರಗಳನ್ನು ಏನು ಪ್ರಕಟ ಮಾಡಿದ್ದರೋ ಅವನ್ನು ದಿಟ್ಟತನದಿಂದ ಕಾರ್ಯಗತ ಮಾಡುವುದಕ್ಕೆ, ಅವರ ಕನ್‌ವಿಕ್ಷನಲ್ಲಿ ಈ ಸದನದಲ್ಲಿ ಎರಡೂ ಕಡೆಯ ಸದಸ್ಯರು ಕೂಡ ಸಂಪೂರ್ಣವಾಗಿ ತಮ್ಮ ಹಿಂದೆ ಇದ್ದಾರೆ, ತಾವು ಏನು ಯೋಜನೆ ಹಾಕಿಕೊಂಡಿದ್ದೀರೋ ಅದನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ನಿಮ್ಮ ಇಲಾಖೆಯ ದುರಸ್ತಿ ಕಾರ್ಯ ತಾವು ಮಾಡುವಾಗ ಸಂಪೂರ್ಣವಾಗಿ ತಮ್ಮ ಜೊತೆಯಲ್ಲಿ ನಾವೆಲ್ಲಾ ಇದ್ದೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ನನ್ನ ಪರವಾಗಿ ಮಾತ್ರ ಕೊಡಬಲ್ಲೆ. ಮತ್ತು ಎರಡೂ ಕಡೆಯ ಸದಸ್ಯರು ತಮ್ಮ ಜೊತೆಯಲ್ಲಿದ್ದಾರೆ ಎನ್ನುವ ವಿಶ್ವಾಸ ನನಗೆ ಇದೆ. ಆದುದರಿಂದ ತಮ್ಮ ಉದ್ದೇಶ ಈಡೇರಲಿ ಎಂದು ಹಾರೈಸಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಾದಯ್ಯ(ಸಂತೇಮಾರಹಳ್ಳಿ).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಮಾನ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗೆ ನನ್ನ ಸಂಪೂರ್ಣ ಅನುಮೋದನೆಯನ್ನು ಹೇಳುತ್ತಾ ನಮ್ಮ ಕ್ಷೇತ್ರದಲ್ಲಿ ಆಗಿರತಕ್ಕ ಅನೇಕ ಅನಾನುಕೂಲಗಳನ್ನು ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ. ಸುಮಾರು ೧೯೭೮ನೇ ಇಸವಿಯಲ್ಲಿ ಸುವರ್ಣಾವತಿ ನದಿಗೆ ಒಂದು ಪಿಕಪ್ ಕಟ್ಟಿದರು ಆ ಪಿಕಪ್‌ಕಟ್ಟಿದರ ದೆಸೆಯಿಂದ ಕಣ್ಣೆಗಾಲ ಊರಿನಜನರು ಈ ಹೊಳೆಯನ್ನು ಏನು ದಾಟಿ ಹೋಗುತ್ತಿದರು ಆ ಜಾಗದಲ್ಲಿ ದಾರಿ ಇಲ್ಲದೆ, ತೊಡೆಮಟ್ಟದವರೆಗೆ ನೀರು ಹರಿಯುವುದರಿಂದ ಜಮೀನುಗಳಿಗೆ ದನಕರುಗಳು ಹೋಗಿ ಬರುವುದಕ್ಕೆ ತೊಂದರೆಯಾಗತ್ತಿದೆ ಎಂದು ಆಲಾಗಾಯ್ತು ನಾಲ್ಕಾರು ವೇಳೆ ಮಾನ್ಯಮಂತ್ರಿಗಳಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ನನ್ನ ಅಹವಾಲನ್ನು ಹೇಳಿಕೊಂಡೆ. ಇದನ್ನು ಹೇಗಾದರೂ ನಡೆಯುವಂತೆ ಮಾಡಿಕೊಡುತ್ತೇನೆ ಎಂದು ಅವರು ಹೇಳಿದ್ದರೂ ಕೂಡ ಆ ಕೆಲಸ ಆಗಲಿಲ್ಲ ಮಾನ್ಯ ಮುಖ್ಯ ಮಂತ್ರಿಗಳಿಗೂ ಮಾನ್ಯ ಕಾಮಗಾರಿ ಮಂತ್ರಿಗಳಿಗೂ ಎರಡು ಸಾರಿ ಕಾಗದಗಳನ್ನು ಬರೆದಿದ್ದೇನೆ. ಅದರಲ್ಲಿ ದಿಸ್ ವಿಲ್ ಬಿ ಕನ್ಸಿಡರ್ಡ್ ಎಂದು ಬರೆದಿದ್ದರೂ ಕೂಡ ಹೋದವರ್ಷವೂ ಮಾಡಲಿಲ್ಲ. ಈ ವರ್ಷದ ಬಡ್ಜೆಟೆಗಾದರೂ ಸೇರಿಸುತ್ತಾರೆ ಎಂದರೆ ಸೇರಿಸಿಲ್ಲ, ಆದರಿಂದ ತುಂಬಾ ಅನ್ಯಾಯವಾಗಿದೆ. ಜನಗಳು ನಿಮಗೆ ಏಕಾದರೂ ಓಟು ಕೊಟ್ಟೆವೋ ಎಂದು ಹೇಳುತ್ತಾರೆ ಎಂದು ಮಾನ್ಯ ರಾಮಚಂದ್ರರೆಡ್ಡಿಯವರು ಹೇಳಿದರು ನಮಗೂ ಅದೇ ರಿವಾರ್ಡ್ ಜನಗಳು ಕೊಡುತ್ತಿದ್ದಾರೆ. ಚಂದಕವಾಡಿಯಿಂದ ಕಾಗಲವಾಡಿಗೆ ಹೋಗತಕ್ಕ ರಸ್ತೆ ೧೪–೧೫ ಬಸ್‌ಗಳು ತಿರುಗತಕ್ಕ ರಸ್ತೆ. ಅಲ್ಲಿ

ಮೂರು ನಾಲ್ಕು ಮೈಲಿ ದೂರ ಬ್ಲ್ಯಾಕ್ ಕಾಟನ್ ಸಾಯಿಲ್‌ನಲ್ಲಿ ಹಾದು ಹೋಗುತ್ತಾ ಇದೆ ಪ್ರತಿ ವರ್ಷ ಪೆಟ್ಟಿ ರಿಪೇರ್ಸ್ ಮಾಡಿದರೂ ಕೂಡ ಮಳೆಗಾಲದಲ್ಲಿ ಗಾಡಿ ಚಕ್ರಗಳು ಉರುಳಿ ಉರುಳಿ ಹೋಗಿಬಿಡುತ್ತದೆ. ರೋಡ್ ಸರ್ಫೇಸ್ ದಿಕ್ಕಾಪಾಲಾಗುತ್ತಿದೆ. ಆ ರಸ್ತೆಯನ್ನು ಬೇಗ ಮಾಡಿಕೊಡಿ ಎಂದು ಹೋದವರ್ಷ ಕೇಳಿಕೊಂಡರೂ ಕೂಡ ಹೋದವರ್ಷದ ಬಡ್ಜೆಟ್‌ನಲ್ಲಿ ಸೇರಿಸಿಲ್ಲ, ಈ ವರ್ಷದ ಬಡ್ಜೆಟ್‌ನಲ್ಲೂ ಸೇರಿಲ್ಲ. ನಮ್ಮ ಕಾನ್‌ಸ್ಟಿಟ್ಯೂಯನ್ಸಿ ಏನು ಅನ್ಯಾಯ ಮಾಡಿದೆಯೋ ಕಾಣುತ್ತಾ ಇಲ್ಲ. ಇಷ್ಟೆಲ್ಲಾ ತೊಂದರೆ ಗಳನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಇದರ ಕಡೆ ನಿಗಾವಹಿಸಲಿಲ್ಲ. ಆ ರಸ್ತೆಯಲ್ಲಿ ಲಕ್ಷಾಂತರ ರೂಪಾಯಿ ವೆಹಿಕಲ್ ಟ್ರ್ಯಾಕ್ಸ್ ಬರುತ್ತಾ ಇದೆ. ಇಂತಹ ಸಂದರ್ಭದಲ್ಲಿ ಈ ಕೋರಿಕೆಯನ್ನು ನಿರಾಕರಿಸಿದರೆ ಸರ್ಕಾರವನ್ನು ನಂಬಿರುವುದಾದರೂ ಏತಕ್ಕೆ. ಆದುದರಿಂದ ಮಾನ್ಯಮಂತ್ರಿಗಳು ಈ ಕೆಲಸಗಳನ್ನು ಈ ವರ್ಷ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಸೇರಿಸಿ ಮಾಡಿಸಿಕೊಡಬೇಕು ಎಂದು ಕಳಕಳಿಯಿಂದ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ನಾವು ಜನಗಳಿಗೆ ನ್ಯಾಯವನ್ನು ಒದಗಿಸಿಕೊಟ್ಟ ಹಾಗೆ ಆಗುವುದಿಲ್ಲ. ಇನ್ನೂ ಅನೇಕ ಕೆಲಸಗಳಿವೆ. ದೊಡ್ಡ ದೊಡ್ಡ ಪಟ್ಟಿಗಳನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದೆ, ಆ ಪಟ್ಟಿಯಲ್ಲಿರುವುದರಲ್ಲಿ ಒಂದನ್ನಾದರೂ ಬಡ್ಜೆಟ್ಟನಲ್ಲಿ ಸೇರಿಸಿಲ್ಲ. ಇನ್ನೊಂದು ಸಾರಿ ಆ ಪಟ್ಟಿಗಳನ್ನು ಕೊಡುತ್ತೇನೆ. ಅತಿ ಮುಖ್ಯವಾದಂಥ ಕಲ್ವರ್ಟ್ ಕೆಲಸಗಳನ್ನು ರಸ್ತೆ ಕೆಲಸಗಳನ್ನು ಮಾಡಿಸಬೇಕಾಗಿದೆ. ದಯವಿಟ್ಟು ಅವುಗಳನ್ನು ಮಾಡಿಸಿ ಕೊಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇದು ಅಲ್ಲದೆ ಚಾಮರಾಜನಗರ ಎಗ್ಜಿಕ್ಯುಟಿವ್ ಇಂಜಿನಿಯರ್‌ರವರ ಆಫೀಸನಲ್ಲಿ ಮತ್ತು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಜನಗಳಿಗೆ ಆಗತಕ್ಕ ಕೆಲವು ತೊಂದರೆಗಳನ್ನು ಅನಾನುಕೂಲಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಮೊದಲನೆಯದಾಗಿ, ಬಡತನದಲ್ಲಿರತಕ್ಕ ಅಲ್ಪ ಸ್ವಲ್ಪ ಹಣಕಾಸನ್ನಿಟ್ಟುಕೊಂಡು ನಾವು ಏನಾದರೂ ಕೆಲಸ ಮಾಡಬೇಕು, ಚಿಕ್ಕ ಪುಟ್ಟ ಕಂಟ್ರ್ಯಾಕ್ಟ್ ಕೆಲಸಗಳನ್ನು ಮಾಡಬೇಕೆಂದು ಯಾರು ಆಸೆಯಿಂದ ಮುಂದೆ ಬರುತ್ತಾರೋ ಅಂಥವರಿಗೆ ಯಾರಿಗೂ ಪೆಟ್ಟಿ ವರ್ಕ್ ಕೊಡುತ್ತಿಲ್ಲ. ತಮಗೆ ಯಾರು ಬೇಕಾದ ವರು ಇದ್ದಾರೋ ಅಂಥವರಿಗೇ ಹೇಳಿ ಕಳುಹಿಸಿ ಕೆಲಸ ಕೊಡುತ್ತಿದ್ದಾರೆ. ಯಾರು ಶೆಡ್ಯೂಲ್ ಕ್ಯಾಸ್ಟ್ ಮತ್ತು ಟ್ರೈಬ್ಸ ಮತ್ತು ಹಿಂದುಳಿದ ವರ್ಗದ ಜನರಿದ್ದಾರೋ ಅಂಥವರು ಹೋದರೆ ಯಾವುದೇ ಕೆಲಸ ವನ್ನು ಕೊಡುತ್ತಿಲ್ಲ. ಮತ್ತೆ ಸಣ್ಣ ಪುಟ್ಟ ಕಂಟ್ರ್ಯಾಕ್ಟನ್ನು ಕೊಟ್ಟರೂ ಸಹ ಅವರು ಅಲ್ಲಿ ಕೆಲಸ ಎಲ್ಲಾ ಮುಗಿಸಿದ್ದರೂ ಇನ್‌ಸ್ಪೆಕ್ಷನ್ ಹಾಕಿ ಚಕ್ ಅಪ್ ಮಾಡಿ ಹಣವನ್ನು ರಿಲೀಜ್ ಮಾಡುವುದಿಲ್ಲ. ಆದರೆ ತಮಗೆ ಬೇಕಾದವರು ಯಾರು ಇರುತ್ತಾರೋ ಅಂಥವರ ಕೆಲಸಗಳಿಗೆ ಇನ್ಸ್‌ಪೆಕ್ಷನ್ ಹಾಕಿಕೊಳ್ಳದೇ ಹಣವನ್ನು ರಿಲೀಜ್ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಪೇಮೇಂಟ್ ಮಾಡಲು ಸಹ ತೊಂದರೆ ಯಾಗುತ್ತಿದೆ. ಈ ತೊಂದರೆಯನ್ನು ನಿವಾರಣೆ ಮಾಡಲು ಚೀಫ್ ಇಂಜಿನಿಯರ್ ಸಾಹೇಬರ್‌ರವರ ಮೂಲಕ ಒಂದು ಆಜ್ಞೆ ಹೊರಡಿಸಿ ಬಡವರ ಮತ್ತು ಸಣ್ಣಸಣ್ಣ ಕಂಟ್ರ್ಯಾಕ್ಟ್ ಕೆಲಸಗಳನ್ನು ಯಾರು ಮಾಡಿಸುತ್ತಿದ್ದಾರೆ ಅವರಿಗೆ ಆದಷ್ಟು ಬೇಗ ಪೇಮೆಂಟ್ ಮಾಡುವ ಬಗ್ಗೆ ಕ್ರಮ ತೆಗೆದು ಕೊಂಡು ತೊಂದರೆಯಾಗದ ರೀತಿಯಲ್ಲಿ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅನೇಕ ರಸ್ತೆ ರಿಪೇರಿ ಕೆಲಸಗಳಲ್ಲಿ ಸಾಮಾನ್ಯವಾಗಿ ನಮ್ಮ ಶ್ರೀ ಕಕ್ಕಿಲಾಯರವರು ಹೇಳಿದ ಹಾಗೆ ಹೆಚ್ಚಿನ ಯಾವುದೋ ಐಟಂ ತೋರಿಸಿಬಿಟ್ಟು, ಆ ಮೇಲೆ ಬರೀ ಮಣ್ಣು ಕೆಲಸ ಮಾಡಿ ಅದರ ಮೇಲೆ ಜಲ್ಲಿ ವಗೈರೆ ಹಾಕತಕ್ಕ ಕೆಲಸವನ್ನು ಮಾಡದೆ ಹಣವನ್ನು ಪಡೆದಿರತಕ್ಕ ಸನ್ನಿವೇಶಗಳು ಇವೆ. ಇದರಿಂದ ಮಳೆಗಾಲದಲ್ಲಿ ಆ ರಸ್ತೆಗಳು ಹಾಳಾಗಿ ವಾಹನ ಸಂಚಾರ ಮಾಡಲೂ ಸಹ ಆಗದೇ ಇರುವಂಥಾ ಪರಿಸ್ಥಿತಿಯಲ್ಲಿ ಇವೆ ಇಂಥಾದ್ದಕ್ಕೆಲ್ಲಾ ದುಡ್ಡು ಕೊಟ್ಟಿದ್ದಾರೆ, ಈ ರೀತಿ ಆಗವಂಥಾದ್ದನ್ನೆಲ್ಲಾ ಸ್ವಲ್ಪ ಅವಾಯ್ಡು ಮಾಡಬೇಕು, ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ನಮ್ಮ ಕ್ಷೇತ್ರದಲ್ಲಿ ಏನೇನು ಕೆಲಸಗಳನ್ನು ತಗೆದುಕೊಳ್ಳುತ್ತಾರೋ ಆಗ ಆಯಾಯಾ ಕ್ಷೇತ್ರದ ಎಂ.ಎಲ್ ಎ. ಗಳನ್ನು ಕನ್‌ಸಲ್ಟ್ ಮಾಡುವುದು ಉತ್ತಮ. ಏತಕ್ಕೆಂದರೆ ಎಷ್ಟೋ ರೋಡ್ ರಿಪೇರಿ ಮಾಡಿಸಿದ್ದೇ ವೆಂದು ಹೇಳುತ್ತಾರೆ, ಆದರೆ ರೋಡುಗಳು ಹೇಗಿದ್ದವೋ ಹಾಗೆ ಇರುತ್ತದೆ, ಕಾರಣ ಕೇಳಿದರೆ ನಾವು ಆಗಲೇ ಮಾಡಿದ್ದೆವು ಮಳೆ ಬಂದು ಹಾಳಾಗಿ ಹೋಗಿದೆ ಎಂದು ಹೇಳಿ ಬಿಡುತ್ತಾರೆ. ಇದರಿಂದಾಗಿ ನಮಗೆ ಅಲ್ಲಿ ರಿಪೇರಿ ಆಗಿತ್ತೋ ಇಲ್ಲವೋ ಎಂಬುದು ತಿಳಿಯದ ಹಾಗೆ ಆಗಿ ಬಿಡುತ್ತದೆ. ಇನ್ನು ಹೊಸ ದಾಗಿ ನಾನಾ ಕಡೆ ಹೊಸ ರಸ್ತೆಗಳನ್ನು ಬಿ.ಡಿ.ಒ. ರವರೇನು ಮಾಡಿಸಿದ್ದಾರೆ ಅವುಗಳನ್ನು ಮೇಯಿಂಟೆ

ನೆನ್ಸ್‌ಗೋಸ್ಕರವಾಗಿ ನಿಮ್ಮ ಇಲಾಖೆಯವರು ತೆಗೆದುಕೊಂಡಿದ್ದಾರೆ ಅವುಗಳನ್ನು ತೆಗೆದುಕೊಂಡಿದ್ದಾರೆಯೇ ಹೊರತು ಆ ರೋಡ್‌ಗಳಿಗೆ ಯಾವ ವಿಧವಾದ ರಿಪೇರಿ ವಗೈರೆ ಕೆಲಸಗಳನ್ನು ಮಾಡಿಸಿರುವುದಿಲ್ಲ. ಅವೆಲ್ಲಾ ಮಣ್ಣು ರಸ್ತೆಗಳಾದುದರಿಂದ, ಮಳೆಗೆ ಅವು ಒಂದೆರಡು ವರ್ಷಗಳಲ್ಲಿ ರಿಪೇರಿ ಮಾಡಿಸದೇ ಇರುವುದರಿಂದ ಹಾಳಾಗಿ ಹೋಗಿ ಬಿಟ್ಟಿರುತ್ತವೆ, ಎಲ್ಲಾ ವಾಶ್‌ಅಪ್ ಆಗಿ ಬಿಟ್ಟಿರುತ್ತದೆ. ರಸ್ತೆಯಲ್ಲೆಲ್ಲಾ ದೊಡ್ಡ ದೊಡ್ಡ ಡ್ರೇನ್ ಫಾರಂ ಆಗಿಬಿಟ್ಟಿರುತ್ತದೆ. ಆದುದರಿಂದ ಇದನ್ನು ತಪ್ಪಿಸಬೇಕಾದರೆ ಸರ್ಕಾರದವರು ಮೊದಲು ಯಾವ ರೋಡುಗಳು ಕಚ್ಚಾ ರೋಡುಗಳಿರುತ್ತವೆಯೋ ಅವುಗಳನ್ನು ಮಾರನೆಯ ವರ್ಷವೇ ಮೆಟಲ್ ಹಾಕಿ ಸರಿಯಾದ ರೋಡ್ಸ್‌ಗಳನ್ನಾಗಿ ಮಾಡಿದರೆ ಅದರಿಂದ ಮುಂದೆ ಆಗತಕ್ಕ ಅನಾಹುತಗಳನ್ನು ತಪ್ಪಿಸಬಹುದಾಗಿದೆ, ಹೀಗೆ ಮಾಡದಿದ್ದರೆ ಆ ರಸ್ತೆಗಳು ಉಳಿಯುವುದಿಲ್ಲ. ಮತ್ತು ಅದರಿಂದ ಸರ್ಕಾರಕ್ಕೂ ತುಂಬಾ ನಷ್ಟವಾಗುತ್ತದೆ. ಆದುದರಿಂದ ಆ ರಸ್ತೆಗಳನ್ನು ಅತಿ ಶೀಘ್ರವಾಗಿ ರಿಪೇರಿ ಮಾಡಿಸಿಕೊಟ್ಟು ಅದರಿಂದ ಎಲ್ಲರಿಗೂ ಅನುಕೂಲ ಮಾಡಿ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಿಮ್ಮ ಪಿ.ಡಬ್ಲ್ಯೂ.ಡಿ. ಆಫೀಸಿಗೆ ಎಲ್ಲಿಗೇ ಹೋಗಲೀ ಅಲ್ಲೆಲ್ಲಾ ಸಿಕ್ಕಾಪಟ್ಟೆ ನಿಮ್ಮ ವಾಹನಗಳು ಐಡಲ್ ಆಗಿ ನಿಂತು ಬಿಟ್ಟಿರುತ್ತವೆ. ಅವನ್ನೆಲ್ಲಾ ಎತಕ್ಕೆ ಅಷ್ಟೊಂದು ಇಟ್ಟುಕೊಂಡಿರುತ್ತೀರಿ ? ಎಂಬುದೇ ಅರ್ಥವಾಗುತ್ತಿಲ್ಲ. ಒಂದುವೇಳೆ ಅವುಗಳಲ್ಲಿ ಯಾವುದಾದರೂ ವಾಹನಗಳು ಯೂಜಲೆಸ್ ಇದ್ದರೆ ಅಂಥವುಗಳನ್ನು ಮಾರಾಟ ಮಾಡಿಬಿಡಿ ಅದರಿಂದ ಸರ್ಕಾರಕ್ಕೂ ಲಾಸ್ ಆಗುವುದು ತಪ್ಪುತ್ತದೆ ಮತ್ತು ಹಣವೂ ಬರುತ್ತದೆ, ಇದರಿಂದ ಆ ವಾಹನಗಳ ನೌಕರರಿಗೆ ಸಂಬಳವೇನು ಅನ್ಯಾಯವಾಗಿ ಕೊಡುತ್ತಿದ್ದೀರಿ ಅದೂ ಸಹ ತಪ್ಪುತ್ತದೆ ಇಂಥಾದ್ದನ್ನೆಲ್ಲಾ ಆದಷ್ಟು ಅವಾಯ್ಡ್ ಮಾಡಬೇಕೆಂದು ಸಲಹೆ ಕೊಡಬಯಸುತ್ತೇನೆ.

ನಮ್ಮ ಎಸ್.ಸಿ ಮತ್ತು ಎಸ್.ಟಿ ನೌಕರರು ನಿಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ೧೮ ಪರ್ಸಂಟ್ ರಿಜರ್ವೇಷನಂತೆ ಪ್ರಮೋಷನ್ ಕೊಡುತ್ತೇವೆಂದು ತಾವು ಕಳೆದ ಸಾರಿಯೇ ಹೇಳಿದ್ದೀರಿ, ೧೧೬೭ ಅಸಿಸ್ಟೆಂಟ್ ಎಗ್ಜಿಕ್ಯುಟಿವ್ ಇಂಜಿನಿಯರ್ ಪೋಸ್ಟ್‌ನಲ್ಲಿ ನಮ್ಮವರು ಇರತಕ್ಕಂಥದ್ದು ಕೇವಲ ೬ ಜನ ಇದ್ದಾರೆ ಚೀಫ್ ಇಂಜಿನಿಯರರವರು ಒಬ್ಬರೂ ಇಲ್ಲ, ಹೇಗೆ ನಮಗೆ ಜನಾಂಗದವರಿಗೆ ಏನು ರಿಜರ್ವೇಷನ್ ಪ್ರಕಾರ ಪ್ರಮೋಷನ್ ಕೊಡಬೇಕಾಗಿತ್ತೋ ಅದಕ್ಕಾಗಿ ಇನ್ನೊಂದು ಸ್ಪೆಷಲ್ ರೆಕ್ರೂಟಮೆಂಟ್ ಮಾಡುತ್ತೇವೆಂದು ಹೇಳಿದ್ದೀರಿ ಆದರೆ ಇದುವರೆಗೂ ಎತಕ್ಕೋ ಮಾಡಿಲ್ಲ ಆದುದರಿಂದ ಇನ್ನು ಮುಂದಾದರೂ ಆದಷ್ಟು ಜಾಗ್ರತೆ ಮಾಡಿ ಪ್ರಮೋಷನ್ ಸಿಕ್ಕದೇ ಕೆಳಗಡೆ ಬಿದ್ದು ಒದ್ದಾಡುತ್ತಿರುವಂಥವರನ್ನು ಮೇಲಕ್ಕೆ ತಾವು ಆದಷ್ಟುಬೇಗನೆ ತರುವುದಕ್ಕೆ ಶೀಘ್ರದಲ್ಲಿಯೇ ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯಮಂತ್ರಿಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ೩೦ ಜನ ಚೀಫ್ ಇಂಜಿನಿಯರ್‌ರರವರ ಪೈಕಿ ಒಬ್ಬರೂ ಎಸ್‌ಸಿ. ಎಸ್.ಟಿ–ಬ್ಯಾಕ್‌ವರ್ಡ್‌ನವರು ಇಲ್ಲ. ೭೦ ಜನ ಸೂಪರಿನ್‌ಟೆಂಡಿಂಗ್ ಇಂಜಿನಿಯರ್‌ಗಳ ಪೈಕಿ ೭ ಜನ ಸೂಪರಿನ್‌ಟೆಂಡಿಂಗ್ ಇಂಜಿನಿಯರ್ ಇದ್ದಾರೆ ಬಾಕಿ ಅಷ್ಟು ಪೋಸ್ಟ್‌ಗಳು ಖಾಲಿ ಬಿದ್ದಿದ್ದರು ನಮ್ಮವರನ್ನು ಅಲ್ಲಿ ಭರ್ತಿ ಮಾಡದೇ ಹೋದರೆ ನಮ್ಮ ಎಸ್.ಸಿ.ಎಸ್.ಟಿ. ಯವರಿಗೆ ಏನು ಚಾನ್ಸ್ ಸಿಗಬೇಕೋ ಅದು ಸಿಕ್ಕುವ ಹಾಗೆ ಕಾಣುತ್ತಿಲ್ಲ. ಅದು ಬರೀ ಕನ್ನಡಿಯಲ್ಲಿರುವ ಗಂಟಿನಹಾಗೆ ಆಗುತ್ತಿದೆ. ಆದುದರಿಂದ ಆ ರೀತಿ ಮಾಡದೆ ಇದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್.ಡಿ. ಚೌಡಯ್ಯ (ಕೆರೆಗೋಡು).—ಸನ್ಮಾನ್ಯ ಅಧ್ಯಕ್ಷರೇ ಈಗ ನಮ್ಮ ಮುಂದಿರತಕ್ಕ ಬೇಡಿಕೆಗಳ ಪೈಕಿ ೪ನೇ ಬೇಡಿಕೆಯನ್ನು ಎನಿಟ್ಟಿದ್ದಾರೆ, ೪೫ನೇ ಡಿಮ್ಯಾಂಡ್ ಎನಿದೆ ಅದನ್ನು ಎತಕ್ಕೆ ಇಟ್ಟಿದ್ದಾರೋ ಎಂಬುದು ಅರ್ಥವಾಗುತ್ತಿಲ್ಲವೆಂದು ಬಹಳ ವಿಶಾದದಿಂದ ಹೇಳಬೇಕಾಗಿದೆ. ಕಳೆದ ಸಾರಿ ಈ ಬೇಡಿಕೆಯ ಬಗ್ಗೆ ಚರ್ಚೆಯಾದ ನಂತರ ಸನ್ಮಾನ್ಯ ಮಂತ್ರಿಗಳವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಕೆಲವೊಂದು ಆಶ್ವಾಸನೆಗಳನ್ನು ಭರವಸೆಗಳನ್ನು ಕೊಟ್ಟಿದ್ದರು. ಅವುಗಳ ಮೇಲೆ ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ಎನ್ನತಕ್ಕದನ್ನು ಅವರು ತಮ್ಮ ವರದಿಯಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು ಸ್ವಾಮಿ ಹೋದ ವರ್ಷ ಸನ್ಮಾನ್ಯ ಬಂಗಾರಪ್ಪನವರು ಈ ಬೇಡಿಕೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ನಾನು ಬಹಳ ಮನಸ್ಸಿಟ್ಟು ಕೇಳಿದೆ, ಜೋಗ್ ಜಲಪಾತದಲ್ಲಿ ಯಾವ ರೀತಿಯಾಗಿ ನೀರು ಜರ್ಜರಿತವಾಗಿ ಬೀಳುತ್ತದೆಯೋ ಆ ರೀತಿ ಅವರ ಭಾಷಣವಿತ್ತು. ಅದನ್ನು ಕೇಳಿದ ಮೇಲೆ ನಾನು ಅನೇಕ ಸ್ನೇಹಿತ

ರಿಗೆ ಹೇಳಿದ್ದೆ, ಏನೋ ಈ ಲೋಕೋಪಯೋಗಿ ಇಲಾಖೆಗೆ ನಿಜವಾಗಿಯೂ ಕೂಡ ಜನರಿಗೆ ಉಪಯೋಗ ವಾಗಬೇಕಾದರೆ ಒಳ್ಳೆಯವರ ಕೈಯಲ್ಲಿ ಇಲಾಖೆ ಬಂದು ಬಿಟ್ಟಿದೆ ಹಾಗಂತ ನಾನು ಅನೇಕ ಸ್ನೇಹಿತರ ಹತ್ತಿರ ಹೇಳಿದ್ದೇನೆ, ಕೇವಲ ಶಾಸಕರ ಹತ್ತಿರವಲ್ಲ, ಸಾರ್ವಜನಿಕರ ಹತ್ತಿರವೂ ಕೂಡ ಹೇಳಿದ್ದೇನೆ, ಆದರೆ ಇತ್ತೀಚೆಗೆ ಬರಬರುತ್ತಾ ಕೇವಲ ಒಂದು ವರ್ಷದಲ್ಲಿ ಇಡೀ ಇಲಾಖೆಯಲ್ಲಿ ಒಂದು ಕತ್ತಲು ಆವರಿಸಿ ಕೊಂಡು ಬಿಟ್ಟಿದೆ ಎಂದು ಬಹಳ ವಿಶಾದದಿಂದ ಈ ಸಂಗತಿಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ, ಆಗ ಅವರು ಉತ್ತರ ಕೊಡತಕ್ಕ ಕಾಲದಲ್ಲಿ ಹೇಳಿದ್ದರು, ರಾಜ್ಯದಲ್ಲಿರತಕ್ಕ ಎಲ್ಲಾ ಅಸಿಸ್ಟೆಂಟ್ ಎಗ್ಜಿಕ್ಯುಟಿವ್ ಇಂಜಿನಿಯರ್‌ರವರು ಆಫೀಸ್‌ಗಳಿಗೂ ಟೆಲಿಫೋನ್ ಸೌಕರ್ಯ ಒದಗಿಸುತ್ತೇವೆಂದು ಹೇಳಿದ್ದರು, ಅದು ಒಂದು ಪಾಲಿಸಿ ಡಿಸಿಷನ್ ಅಂತ ಹೇಳಿದ್ದರು, ಅದನ್ನು ಈ ಸದನದಲ್ಲಿಯೇ ಘೋಷಣೆ ಮಾಡಿದ್ದರು ಆದರೆ ಇದುವರೆಗೂ ಅದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಈಗಲಾದರೂ ಅವರು ತಮ್ಮ ಉತ್ತರದಲ್ಲಿ ಅಲ್ಲ ಅದರ ಅವಶ್ಯಕತೆ ಇದೆಯೋ ಇಲ್ಲವೋ ಎನ್ನತಕ್ಕದ್ದನ್ನು ಹೇಳಬೇಕು.

೫-೦೦ ಪಿ.ಎಂ.

ಈಗಲಾದರೂ ತಾವು ತಮ್ಮ ಉತ್ತರದಲ್ಲಿ ಅವಶ್ಯಕತೆ ಇದೆಯೋ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕು. ಕಳೆದ ಜೂನ್-ಜುಲೈ ತಿಂಗಳಲ್ಲಿ ಶಾಸಕರುಗಳಿಗೆ ಪತ್ರ ಬರೆದು ೫ ಕಿಲೋ ಮೀಟರ್ ಉದ್ದದ ಒಂದು ಅಥವಾ ಎರಡು ರಸ್ತೆಗಳನ್ನು ಹಾಗೂ ಸಿ.ಡಿ. ವರ್ಕ್ಸ್ ಅನ್ನು ಸೂಚಿಸಬೇಕೆಂದು ಹೇಳಿದ್ದೀರಿ. ಆ ಪ್ರಕಾರ ಸೂಚಿಸಿ ಒಂದು ವರ್ಷವಾದರೂ ಕೂಡ ಆ ಬಗ್ಗೆ ಏನೂ ಕ್ರಮ ಕೈಗೊಳ್ಳದೆ ಇರತಕ್ಕದ್ದು ನಿಜವಾಗಿಯೂ ವಿಷಾದನೀಯವಾದ ಸಂಗತಿ ಎಂದು ಹೇಳಬೇಕಾಗಿದೆ. ನೀವು ಏನು ಹೇಳಿದರೂ ನಾವು ಸ್ಥಳೀಯ ಮುಖಂಡರೊಡನೆ ಜನಸಾಮಾನ್ಯರೊಡನೆ ಸಮಾಲೋಚಿಸಿ ವಿಚಾರಗಳನ್ನು ತಿಳಿದುಕೊಂಡಿದ್ದೇವೆ. ಈಗ ಏನಾಗಿದೆ ಎಂದರೆ, ಕುರುಡ-ಕುರುಡನಿಗೆ ದಾರಿ ತೋರಿಸಿದಂತಾಗಿದೆ. ಇದನ್ನು ವಿಷಾದದಿಂದ ಹೇಳಬೇಕಾಗಿದೆ. ಇನ್ನು ಈ ವರ್ಷ ಫೆಬ್ರುವರಿ ೩ ರಂದು ಶಾಸನಸಭೆ ಇತ್ತು ; ಆಗ ವಿರೋಧ ಪಕ್ಷದವರಾದ ನಾವೆಲ್ಲ ಹೊರಗಡೆ ಇದ್ದೆವು ಆಗ ಆ ಸಂದರ್ಭದಲ್ಲಿ, ಪತ್ರಗಳನ್ನು ಬರೆದು ಜಿಲ್ಲಾವಾರು ಶಾಸಕರುಗಳ ಸಭೆಯನ್ನು ನಡೆಸಿ ಪ್ರೈಯಾರಿಟಿ ಆಧಾರದ ಮೇಲೆ ಲಿಸ್ಟ್ ಕೇಳಿದ್ದಿರಿ ; ಮತ್ತು ಅದರಲ್ಲಿ ಒಂದೆರಡು ಕೆಲಸಗಳನ್ನು ಸೂಚಿಸಿ ಎಂದಿರಿ. ನಾವು ಸೂಚಿಸಿದಂತಹ ಒಂದೊಂದು ಕೆಲಸವನ್ನು ಕಟ್ ಪೀಸ್ ಮಾಡಿ, ಅಂದರೆ ನಾವು ೩ ಲಕ್ಷ ಕೇಳಿದ್ದರೆ ಒಂದೂವರೆ ಲಕ್ಷ ಮಾಡಿ ಅದರಲ್ಲಿ ೫೦ ಸಾವಿರ ರೂಪಾಯಿ ಗ್ರಾಂಟ್ ಎಂದು ಕೊಟ್ಟಿದ್ದೀರಿ. ೫೦ ಸಾವಿರ ರೂಪಾಯಿಗಳಲ್ಲಿ ಕೆಲಸ ಶುರು ಮಾಡಿದರೆ ಬರುವ ಮಳೆಗಾಲದಲ್ಲಿ ಕೆಲಸ ನಿಲ್ಲುತ್ತದೋ, ಆಗುತ್ತದೋ ಹೇಳುವುದಕ್ಕಾಗುವುದಿಲ್ಲ. ಆ ರೀತಿ ಖಂಡಿತ ಆಗಬಾರದು. ಇನ್ನೊಂದು ದೊಡ್ಡ ದೋಷವೇನೆಂದರೆ, ಈ ವರ್ಷದ ಬಡ್ಜೆಟ್ ಎಸ್ಟಿಮೇಟ್ ಪುಸ್ತಕವನ್ನೇನು ನಮಗೆ ಕೊಟ್ಟಿದ್ದೀರಿ, ಅದರಲ್ಲಿ ಕಳೆದ ವರ್ಷ ತಮ್ಮ ಇಲಾಖಾಧಿಕಾರಿಗಳು ಸ್ಥಳೀಯ ಅವಶ್ಯಕತೆಗಳನ್ನು ನೋಡಿ ನಿಮಗೆ ಶಿಫಾರಸ್ಸು ಮಾಡಿರುವುದನ್ನು ತಾವು ಸೇರಿಸಿಲ್ಲ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಶುಗರ್ ಕೇನ್ ಬೆಳೆಯುತಕ್ಕ ಏರಿಯಾಗಳೆಂದರೆ, ಮಂಡ್ಯ ಮದ್ದೂರು, ಮಳವಳ್ಳಿ ಪ್ರದೇಶಗಳು ಕವರ್ ಆಗುತ್ತವೆ. ಅಲ್ಲಿ ಬರತಕ್ಕ ೮ ರಸ್ತೆಗಳನ್ನು ಸ್ಪೆಷಲ್ ಇಂಪ್ರೂವ್‌ಮೆಂಟ್ಸ್‌ಗೋಸ್ಕರ ೧೯೭೮-೭೯ನೇ ಸಾಲಿನ ಬಡ್ಜೆಟ್ ನಲ್ಲಿ ಸೇರಿಸಿ ಅಲಾಟ್‌ಮೆಂಟ್ ಕೂಡ ಕೊಟ್ಟಿದ್ದೀರಿ. ಆದರೆ ಈ ಲಾಗಾಯ್ತು ಕೆಲಸವನ್ನು ತೆಗೆದುಕೊಂಡಿಲ್ಲ. ಅದಕ್ಕೆ ಕಾರಣ, ನಿಮ್ಮ ಅಧಿಕಾರಿಗಳು. ಸಕಾಲದಲ್ಲಿ ಅವರು ಅಂದಾಜುಗಳನ್ನು ಮೇಲಿನ ಕಛೇರಿಗಳಿಗೆ ಕಳುಹಿಸಿ ಆಡಳಿತ ಮಂಜೂರಾತಿಯನ್ನು ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆಯದೆ ಇದ್ದುದರಿಂದ ಆ ಕೆಲಸಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸಿದ್ದೀರಿ ಆದರೆ ಅಲಾಟ್‌ಮೆಂಟ್ ಕೊಟ್ಟಿಲ್ಲ. ಇದರ ಉದ್ದೇಶವಾದರು ಏನು, ಗೂಡಾರ್ಥವಾದರು ಏನು ಎಂಬುದು ಅರ್ಥವಾಗಲಿಲ್ಲ, ಅವುಗಳನ್ನು ೧೯೭೯-೮೦ನೇ ಸಾಲಿನ ಬಡ್ಜೆಟ್‌ಗೆ ಸೇರಿಸಿ ಗ್ರಾಂಟ್ ಕೊಡದೆ ಇರಬೇಕಾದರೆ ಕಾರಣವಾದರು ಏನು ? ಸಾಮಾನ್ಯವಾಗಿ ಸೇರಿಸಿರುವರನ್ನು ಕೂಡ ಏನೋ ನೆಪ ಮಾತ್ರಕ್ಕೆ ಸೇರಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರೆಂದು ನನಗನ್ನಿಸುತ್ತದೆ. ಇನ್ನು ಪಿ.ಸಿ. ಡಿವಿಜನ್ನಿಗೆ ಸಂಬಂಧಪಟ್ಟ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ಕಳೆದ ವರ್ಷ ಏನೊಂದು ಗ್ರಾಂಟನ್ನು ಕೊಟ್ಟಿದ್ದಿರಿ ಅಷ್ಟನ್ನಾದರೂ ಕೂಡ ಈ ವರ್ಷ ಕೊಟ್ಟು ಕೆಲಸ ಮುಂದುವರಿಸತಕ್ಕ ಸಹಾಯ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮಂಡ್ಯ -ಮೇಲುಕೋಟೆ ರಸ್ತೆಯಲ್ಲಿ (ಮೇಲುಕೋಟೆಗೆ ಹೋಗುವ ದಾರಿಯಲ್ಲಿ ಒಂದು ಹೈಲೆವೆಲ್ ಕಾಸ್‌ವೇ ಮಾಡುವುದಕ್ಕೆ ಕಳೆದ ಸಾಲಿನಬಡ್ಜೆಟ್‌ನಲ್ಲಿ ಒಂದು ಲಕ್ಷದ ೫೦ ಸಾವಿರ)

ರೂಪಾಯಿಗಳನ್ನು ಅಂದಾಜು ಮಾಡಲಾಗಿತ್ತು, ಆದರೂ ಕೂಡ ಆ ಕೆಲಸವನ್ನು ಪ್ರಾರಂಭಿಸಲಿಲ್ಲ. ಅದನ್ನು ಈ ಸಾರಿ ಬಡ್ಜೆಟ್‌ನಲ್ಲೂ ಸೇರಿಸಿದ್ದಾರೆ, ಆದರೆ ಅಲಾಟ್‌ಮೆಂಟ್ ಕೊಟ್ಟಿಲ್ಲ. ಇದಕ್ಕೆ ಕಾರಣ ವೇನು ಎಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಯುವುದಕ್ಕೆ ಇಷ್ಟಪಡುತ್ತೇನೆ, ಇನ್ನೊಂದು ವೈಚಿತ್ರವೇನೆಂದರೆ ಬಡ್ಜೆಟ್ಟಿನಲ್ಲಿ ಒಂದು ಕಾಸ್‌ವೇಗೆ ಒಂದು ಲಕ್ಷದ ೨೫ ಸಾವಿರ ರೂಪಾಯಿ ಎಸ್ಟಿಮೇಟೆಡ್ ಕಾಸ್ಟ್ ಇದ್ದರೆ ಕೇವಲ ೨೫ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಮಂಡ್ಯದಲ್ಲಿ ಯಾವ ತಾಲ್ಲೂಕಿನಲ್ಲಿ ನೋಡಿದ್ದರೂ ಅಲ್ಲೆಲ್ಲ. ಹಾರ್ಡ್ ಸಾಯಿಲ್ಸ್ ಇದೆ ಅಂಥ ಕಡೆ ಒಂದು ಲಕ್ಷದ ೨೫ ಸಾವಿರ ರೂಪಾಯಿ ಒಂದು ಕಾಸ್‌ವೇಗೆ ಎಸ್ಟಿಮೇಟೆಡ್ ಕಾಸ್ಟ್ ಇದ್ದರೆ ಕೇವಲ ೨೫ ಸಾವಿರ ರೂಪಾಯಿ ಗಳನ್ನು ಕೊಟ್ಟಿದ್ದೀರಿ. ಈ ಪ್ರಮಾಣದಲ್ಲಿ ಆ ಕೆಲಸ ಮುಗಿಯ ಬೇಕಾದರೆ ೫ ವರ್ಷ ಬೇಕಾಗುತ್ತದೆ. ೫ ವರ್ಷದಲ್ಲಿ ಮುಗಿಸುವುದು ನಿಮ್ಮ ಒಂದು ಪದ್ಧತಿ ; ಆದರೆ ಆ ಕೆಲಸವನ್ನು ಮುಗಿಸಬೇಕಾದರೆ ೬ ತಿಂಗಳು ಸಾಕೇ ಅಥವಾ ಒಂದು ವರ್ಷದಲ್ಲಿ ಮುಗಿಸ ಬಹುದೆ ಎಂಬುದನ್ನು ಯೋಚಿಸಬೇಕು. ಅಥವಾ ಸ್ಥಳೀಯ ಅಧಿಕಾರಿಗಳು ಟೆಂಡರ್ ಕರೆಯತಕ್ಕ ಕಾಲದಲ್ಲಿ ಟೆಂಡರ್ ಷೆಡ್ಯೂಲಿಗೆ ೫ ವರ್ಷ ಎಂದು ಕೊಡು ತ್ತೀರಾ ಹೇಗೆ ? ಇದರ ಉದ್ದೇಶ ಏನು ಎಂಬುದು ಅರ್ಥವಾಗಲಿಲ್ಲ. ಇದನ್ನು ಎಲ್ಲ ನೋಡಿದರೆ ನನಗನ್ನಿಸುತ್ತದೆ, ಬಿಚ್ಚು ಮನಸ್ಸಿನಿಂದ ಹೇಳಬೇಕು ಎಂದು. ಬಡ್ಜೆಟ್ ಪ್ರೋಸೆಸ್ ಮಾಡತಕ್ಕ ಸಂದರ್ಭದಲ್ಲಿ ೨-೩ ಬಾರಿ ನಾನು ತಮ್ಮನ್ನು ನೋಡಲ್ಲಿಕ್ಕೆ ಬಂದೆ. ಆದರೆ ನನ್ನ ದುರಾದೃಷ್ಟವೋ ಏನೋ ತಾವು ಟೂರ್‌ನಲ್ಲಿದ್ದಿರಿ ಬಹುಶಃ ಈ ಲೋಕೋಪಯೋಗಿ ಇಲಾಖೆಯ ಕಾರ್ಯಾಲಯ ಏನಿದೆ ಇಲ್ಲಿರತಕ್ಕ ಅಧಿಕಾರಿಗಳು ಕೆಳಗಡೆಯಿಂದ ಅಂದರೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್, ಸೂಪರಿಂಟೆಂಡಿಂಗ್ ಎಂಜಿನಿಯರ್, ಚೀಫ್ ಎಂಜಿನಿಯರ್‌ಗಳಿಂದ ಬಂದಿರತಕ್ಕಂತಹ ಪ್ರೊಪೋಸಲ್‌ಗಳು ಏನಿವೆ ಅವಕ್ಕೂ ಕೂಡ ತಾಂತ್ರಿಕ ಮನ್ನಣೆ ಕೊಟ್ಟಿಲ್ಲವೆಂದು ನನ್ನ ಅಭಿಪ್ರಾಯ. ಆದರೆ ಮೇಲ್ಗಡೆ ಇರತಕ್ಕ ಮಂತ್ರಿಗಳು ಇದನ್ನೆಲ್ಲ ಫಾಲೋ ಅಪ್ ಮಾಡುವುದಕ್ಕೆ ಆಗಿಲ್ಲವೋ ಏನೋ ಗೊತ್ತಿಲ್ಲ. ೨+೨ =೪-೧=೧ ಎಂದು ಲೆಕ್ಕಾಚಾರ ಹಾಕಿ ಕೆಲಸ ಮಾಡಿದ್ದಾರೆ. ಈ ರೀತಿ ಆಗಬಾರದು. ಈ ರೀತಿ ಯಾದರೆ ಯಾವ ಕೆಲಸವನ್ನು ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ದಯವಿಟ್ಟು ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಕಳಕಳಿಯಿಂದ ಮಾನ್ಯ ಮಂತ್ರಿಗಳನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಕ್ಲಾಸಿಫಿಕೇಷನ್ ಆಫ್ ರೋಡ್ಸ್‌ನಲ್ಲಿ ನ್ಯಾಷನಲ್ ಹೈವೇಗಳಿಗೆ ಕೇಂದ್ರ ಸರ್ಕಾರದವರು ಪೂರಾ ಹಣವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಈಗ ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿ ಏನೆಂದರೆ ಸ್ಟೇಟ್ ಹೈವೇಸ್, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್, ಆದರೆ ಡಿಸ್ಟ್ರಿಕ್ಟ್ ರೋಡ್ಸ್ ವಿಲೇಜ್ ರೋಡ್ಸ್ ಮತ್ತು ರೂರಲ್ ರೋಡ್ಸ್ ಮಾಡುವುದು ಮಾತ್ರ ನಾನು ಕಳೆದ ವರ್ಷ ಮಾತನಾಡತಕ್ಕ ಸಂದರ್ಭದಲ್ಲಿ ಈ ಬಗ್ಗೆ ಕೊಡತಕ್ಕ ಮೆಯಿಂಟೆನೆನ್ಸ್ ಗ್ರಾಂಟ್ ಏನಿದೆ ಅದನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದೆ, ಆದರೆ ತಾವು ಕೊಟ್ಟಿರತಕ್ಕ ಆನ್ಯುಯಲ್ ರಿಪೋರ್ಟಿನಲ್ಲಿ ೭ ನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾಸ್ತಿ ಮಾಡುವುದಕ್ಕೆ ಪ್ಲಾನಿಂಗ್ ಕಮೀಷನ್ನಿಗೆ ಹೇಳಿದ್ದೇವೆಂದು ಹೇಳಿದ್ದೀರಿ ೭ ನೇ ಪಂಚವಾರ್ಷಿಕ ಯೋಜನೆ ಎಂದರೆ ಇನ್ನೂ ೪½ ವರ್ಷಗಳು ಕಾಯಬೇಕಾಗುತ್ತದೆ. ಆದ್ದರಿಂದ, ದಯಮಾಡಿ ಈಗಲೇ ಪ್ರತಿ ಕಿಲೋಮೀಟರ್‌ಗೆ ಇರತಕ್ಕ ಕ್ವಾಂಟಮ್ ಆಫ್ ಮೆಯಿಂಟೆನೆನ್ಸ್ ಗ್ರಾಂಟಿನ ಪ್ರಮಾಣವನ್ನು ಜಾಸ್ತಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಹೆದ್ದಾರಿ ವಿಷಯದಲ್ಲಿ ಹೇಳುವುದಾದರೆ, ಬೆಂಗಳೂರು ಮೈಸೂರು ಸ್ಟೇಟ್ ಹೈವೇ ಏನಿದೆ ಅದು ಬಹಳ ವರ್ಷಗಳ ಹಿಂದೆಯೇ ನ್ಯಾಷನಲ್ ಹೈವೇ ಆಗಬೇಕಿತ್ತು. ಅಲ್ಲಿ ಎಷ್ಟೊಂದು ಹೆವಿ ಟ್ರಾಫಿಕ್ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರಿನಿಂದ ಮೈಸೂರಿಗೆ ಇರತಕ್ಕದ್ದು ಕೇವಲ ೮೦ ಮೈಲಿ. ಇದನ್ನು ಈ ವರ್ಷವಾದರೂ ಕೂಡ ನ್ಯಾಷನಲ್ ಹೈವೇ ಆಗಿ ಪರಿ ವರ್ತಿಸತಕ್ಕ ತ್ವರಿತ ಕ್ರಮವನ್ನು ಕೇಂದ್ರ ಸರ್ಕಾರದ ಜೊತೆ ಕೈಗೊಳ್ಳ ಬೇಕೆಂದು ಹೇಳುತ್ತೇನೆ. ಇನ್ನು ಸ್ಥಳೀಯ ಲೋಕೋಪಯೋಗಿ ಇಲಾಖೆಯ ಕಛೇರಿಯಲ್ಲಿ ದಿನನಿತ್ಯದ ಕೆಲಸ ಕಾರ್ಯಗಳನ್ನು ಕಾರ್ಯಗತ ಮಾಡುವುದಕ್ಕೆ ತೊಡಕುಗಳಿವೆ ಎಂದು ತಿಳಿದುಬಂದಿದೆ. ಆ ಬಗ್ಗೆ ನಾನು ಚೀಫ್ ಎಂಜಿನಿಯರ್ ಅವರೊಡನೆ ಕೂಡ ಮಾತನಾಡಿದ್ದೇನೆ. ಉದಾಹರಣೆಗೆ ಬೆಂಗಳೂರಿನಿಂದ ಮೈಸೂರಿಗೆ ಹೋಗತಕ್ಕ ದಾರಿಯಲ್ಲಿ ಮಂಡ್ಯದಿಂದ ೮ ಮೈಲಿ ದೂರ ಹೋದರೆ ಒಂದು ಕ್ವಾರಿ ಇದೆ. ಅದು ಬಹಳ ಹತ್ತಿರ ಇರತಕ್ಕದ್ದಾದ್ದ ರಿಂದ ಅಲ್ಲಿಂದ ಗ್ರಾನೈಟ್ ಜಲ್ಲಿ, ದಪ್ಪ ಜಲ್ಲಿ, ಬೇಬಿ ಜಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗೆ ಸರಬರಾಜು ಆಗಬೇಕು. ಆದರೆ ಕಳೆದ ೨-೩ ವರ್ಷಗಳಿಂದ ಏನು ಕಾರಣವೋ ಏನೋ ಅಲ್ಲಿ ಒಬ್ಬರೂ ಕಲ್ಲು ಒಡೆಯುತ್ತಿಲ್ಲ, ಹೀಗಾಗಿ ಸರ್ಕಾರ ಕೊಡತಕ್ಕ ಗ್ರಾಂಟನ್ನು ಅಲ್ಲಿ ಖರ್ಚು ಮಾಡತಕ್ಕದ್ದೇ ಬಹಳ ಕಷ್ಟ ವಾಗಿದೆ. ಆದಕಾರಣ, ಈಗ ಸ್ಥಳೀಯ ಅಧಿಕಾರಿಗಳು ಹೇಳುತ್ತಾರೆ. ಬೇರೆ ಕಡೆ ಕ್ವಾರಿಗಳಿಂದ ಜಲ್ಲಿ

ಯನ್ನು ತರಬೇಕಾದರೆ ಬಹಳ ಕಷ್ಟವಾಗುತ್ತದೆ, ಆಡಿಟ್ ಅಬ್‌ಜಕ್ಷನ್ ಬರುತ್ತದೆ, ಕೈಯಿಂದ ಕೊಡ ಬೇಕಾಗುತ್ತದೆ ಎಂದು. ಈ ಬಗ್ಗೆ ನಾನು ಚೀಫ್ ಎಂಜಿನಿಯರ್‌ಗೆ ಕೂಡ ಒಂದೆರಡು ಸಾರಿ ಹೇಳಿದ್ದೇನೆ.

೮೦ ಸಾವಿರ ಅಥವಾ ೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಸ್ಟೋನ್ ಕ್ರಷರನ್ನು ಒದಗಿಸಿದ್ದೇ ಆದರೆ ಇದರಿಂದ ನಮ್ಮ ವಿ.ಸಿ. ಡಿವಿಜನ್‌ಗೆ ಮತ್ತು ಮಂಡ್ಯ ಡಿವಿಜನ್‌ಗೆ ತುಂಬಾ ಸಹಾಯ ಮಾಡಿದಂತಾಗುತ್ತದೆ. ಇದನ್ನು ಸ್ಟೋರ್ಸ್ ಅಂಡ್ ಎಕ್ವಿಪ್‌ಮೆಂಟ್ಸ್ ಕೆಳಗೆ ಒದಗಿಸಬೇಕು. ಎಂದು ನಾನು ಹೇಳಿದ್ದೇನೆ. ಅದಕ್ಕೆ ಅವರು ಆಗಲಿ ಎಂದು ಹೇಳಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಸ್ಟೋನ್ ಕ್ರಷರನ್ನು ಮತ್ತು ಒಂದೆರಡು ರೋಡ್‌ರೋಲರ್ಸನ್ನು ಒದಗಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಮಾಸ್ಟರ್ ಪ್ಲಾನ್ ಬಗ್ಗೆ ಹೇಳಬಯಸುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗಿರತಕ್ಕಂಥ ಸ್ಫೂರ್ತಿ, ಆಸಕ್ತಿಯನ್ನು ನೋಡಿ ನಾನು ನಿಜವಾಗಿಯೂ ಅವರನ್ನು ಅಭಿನಂದಿಸುತ್ತೇನೆ. ಆದರೆ ಇದನ್ನು ತಯಾರು ಮಾಡಿರ ತಕ್ಕಂಥ ವೈಖರಿ ಹಾಗೂ ಕ್ರಮವನ್ನು ನೋಡಿದರೆ ಇದು ನಿಜವಾಗಿಯೂ ವಿಷಾದಪಡಬೇಕಾದ ವಿಚಾರ ವಾಗಿದೆ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮಾಸ್ಟರ್‌ಪ್ಲಾನನ್ನು ಸಂಪೂರ್ಣವಾಗಿ (ಎ) ಟು ಜಡ್‌ವರೆಗೆ ನಾನು ಓದಿದ್ದೇನೆ. ನನಗೆ ಅಲ್ಲಿ ಗೊತ್ತಿಲ್ಲದೇ ಇರತಕ್ಕಂಥ ಗ್ರಾಮ ಇಲ್ಲ. ರಸ್ತೆ ಇಲ್ಲ. ಅದರಲ್ಲಿ ಇರತಕ್ಕಂಥ ಪ್ರತಿಯೊಂದು ಕ್ಲಾಸಿಫಿಕೇಷನ್ ಸಹ ನನಗೆ ಗೊತ್ತು. ಅದರಲ್ಲಿ ಶೇಕಡ ೬೦-೬೫ ಭಾಗ ದಷ್ಟು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಬಹುಶಃ ಇದು ತಮಗೆ ಗೊತ್ತಿದೆಯೋ ಇಲ್ಲವೋ, ನನಗೆ ಗೊತ್ತಿಲ್ಲ. ತಾವು ತಿಳಿದುಕೊಳ್ಳಬಹುದು ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡ್ ಅಧ್ಯಕ್ಷ ರಾಗಿದ್ದರು, ಈಗ ಶಾಸಕರಾಗಿ ಬಂದಿದ್ದಾರೆ, ಇವರಿಗೆ ಮಾಹಿತಿ ಗೊತ್ತಿದೆಯೋ ಇಲ್ಲವೋ ಎಂದು ನನಗೆ ಈ ಬಗ್ಗೆ ಪೂರ್ಣ ಮಾಹಿತಿ ಗೊತ್ತಿದೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ ಇದನ್ನು ಫೈನಲೈಸ್ ಮಾಡಿ ಕಳಿಸುವುದಕ್ಕೆ ಪೂರ್ವಭಾವಿಯಾಗಿ ತಮ್ಮ ಅಧಿಕಾರಿಗಳು ಸ್ಥಳೀಯ ಮುಖಂಡರೊಡನೆ, ಸ್ಥಳೀಯ ಶಾಸಕರೊಡನೆ ಸಮಾಲೋಚನೆ ಮಾಡಿ, ಒಂದಲ್ಲ ೪ ಮೀಟಿಂಗ್‌ಗಳನ್ನು ಮಾಡಿ ಅವರ ಒಪ್ಪಿಗೆ ಪಡೆದು ಕಳಿಸಿದ್ದರೆ ಚೆನ್ನಾಗಿ ಇತ್ತು. ಅದರಲ್ಲಿ ಏನು ವ್ಯತ್ಯಾಸಗಳು ಇದೆಯೆಂದರೆ ಕೆಲವು ಹೋಬಳಿಗಳನ್ನು ಪಲವು ಹಳ್ಳಿಗಳನ್ನು ಬಿಟ್ಟುಬಿಟ್ಟಿದ್ದಾರೆ, ಇನ್ನೊಂದು ಬಹುಮುಖ್ಯವಾದ ವಿಚಾರವೇನೆಂದರೆ ನನ್ನ ತಾಲ್ಲೂಕಿನಲ್ಲಿ ಕೆಲವು ಜನ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಬರುತ್ತಾರೆ. ಅವರ ಜ್ಯೂರಿಸ್ ಡಿಕ್ಷನ್ ಇಲ್ಲದೇ ಇರುವುದರಿಂದ ಫಾರಂ ನಂಬರ್ ೩ರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ರುಜು ಮಾಡಿದ್ದಾರೆ. ಇದರ ಅರ್ಥ ಏನು ಎಂಬುದನ್ನು ತಾವು ಯೋಚನೆ ಮಾಡಬೇಕು. ಇವರು ಈ ವಿಚಾರದಲ್ಲಿ ಅಂಕಿಅಂಶಗಳನ್ನು ಕಲೆಕ್ಟ್ ಮಾಡಿ ತಮಗೆ ಒದಗಿಸತಕ್ಕಂಥಾದ್ದು ಕೂಡ ಪರಿಪೂರ್ಣ ವಾಗಿಲ್ಲ. ಇದರಲ್ಲಿ ಬಹಳ ಲೋಪದೋಷ ಇವೆ. ಆದ್ದರಿಂದ ಇದನ್ನು ಆಯಾಯ ತಾಲ್ಲೂಕುಗಳಿಗೆ ವಾಪಸ್ ಕಳಿಸಿ ತಮ್ಮ ಅಧಿಕಾರಿಗಳಿಗೆ ೨-೩ ತಿಂಗಳು ಟೈಮ್ ಕೊಟ್ಟು, ಈ ಅವಧಿಯಲ್ಲಿ ಅವರು ಅಲ್ಲಿಯ ಸ್ಥಳೀಯ ಶಾಸಕರೊಡನೆ ಹಾಗೂ ಮುಖಂಡರೊಡನೆ ಸಮಾಲೋಚನೆ ಮಾಡಿ ಇದನ್ನು ಪುನರ್ ವಿಮರ್ಶೆ ಮಾಡತಕ್ಕಂಥಾದ್ದು ಸೂಕ್ತವೆಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ. ಮಾನ್ಯ ಕಕ್ಕಿಲಾಯರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರದವರು ಇಟ್ಟು ಕೊಂಡಿರತಕ್ಕಂಥ ಹಣ ಹಾಗೂ ಸಂಪನ್ಮೂಲ ಬಹಳ ಕಡಿಮೆ ಇದೆಯೆಂದು ಹೇಳಿದರು. ಇದನ್ನು ಕಾರ್ಯಗತ ಮಾಡಬೇಕಾದರೆ ಬೇಕಾದ ಸಂಪನ್ಮೂಲಗಳನ್ನು ಎಲ್ಲಿಂದ ತರುವುದು ಎಂದು ತಾವು ಆಧೈರ್ಯಪಡಬೇಕಾದ್ದು ಇಲ್ಲ. ವರ್ಲ್ಡ್ ಬ್ಯಾಂಕಿನಿಂದ ಈ ಸಂಪನ್ಮೂಲ ಗಳನ್ನೆಲ್ಲಾ ಪಡೆದು ಈ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಸೂಚನೆ ಕೊಡಬಯಸುತ್ತೇನೆ. ಈ ಮಾಸ್ಟರ್ ಪ್ಲಾನ್ ಏನಿದೆ ಇದರ ಜಯ ತಮಗೆ ಕೀರ್ತಿಯನ್ನು ತರುತ್ತದೆ. ಇದರ ಅಪಜಯ ತಮಗೆ ಅಪಕೀರ್ತಿಯನ್ನು ತರುತ್ತದೆ. ತಮ್ಮ ರಾಜಕೀಯ ಜೀವನದಲ್ಲಿ ಇದು ತಮಗೆ ಅಪಕೀರ್ತಿ ಯನ್ನು ತರತಕ್ಕಂಥಾದ್ದು ಬೇಡ. ಅದಕ್ಕೆ ಬದಲಾಗಿ ಸ್ಫೂರ್ತಿಯನ್ನು ತರಲಿ, ಧೈರ್ಯವನ್ನು ತರಲಿ, ಈ ಮಾಸ್ಟರ್ ಪ್ಲಾನ್ ಈ ರಾಜ್ಯದಲ್ಲಿ ನೂರಕ್ಕೆ ನೂರು ಭಾಗ ಕಾರ್ಯಗತವಾಗಿ ಈ ರಾಜ್ಯಕ್ಕೆ ಒಳ್ಳೆಯ ದಾಗಲಿ, ಕಲ್ಯಾಣವಾಗಲಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ಯೋಜನೆಗೆ ಬಡ್ಜೆಟ್‌ನಲ್ಲಿ ಬಹಳ ಕಡಿಮೆ ಹಣವನ್ನು ಒದಗಿಸಿರುವುದರಿಂದ, ನಾನೊಬ್ಬನೇ ಅಲ್ಲ, ಅನೇಕಜನ ಮಾನ್ಯಸದಸ್ಯರುಗಳು ಕುಪಿತರಾಗಿದ್ದಾರೆ. ಇದನ್ನು ಸರಿಪಡಿಸಿಕೊಳ್ಳಲು ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಕೂಡ ಹೆಚ್ಚು

ಹಣವನ್ನು ಒದಗಿಸಿಕೊಂಡು ಅಥವಾ ಆಯಾಯ ತಾಲ್ಲೂಕುಗಳಿಂದ ವಂತಿಗೆಯನ್ನು ತೆಗೆದುಕೊಂಡು ಈ ಯೋಜನೆಯಲ್ಲಿ ಪೂರ್ಣ ಮನಸ್ಕರಾಗಿ ಇದನ್ನು ಕಾರ್ಯಗತ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಸ್.ಮಹಾಜನಶೆಟ್ಟಿ. (ಹುಕ್ಕೇರಿ).— ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಲೋಕೋಪಯೋಗಿ ಖಾತೆಯ ಮಾನ್ಯ ಮಂತ್ರಿಯವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ ಈ ವರ್ಷ ಈ ಲೋಕೋಪಯೋಗಿ ಖಾತೆಯ ಬೇಡಿಕೆಯಲ್ಲಿ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ನಮ್ಮ ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಹಳ್ಳಿಗಳನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಬೇಕೆಂದು ಬಹಳವಾಗಿ ಯೋಚನೆ ಮಾಡಿದ್ದಾರೆ, ಆದರೆ ಇದರಲ್ಲಿ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ ಎಂದರೆ ಹಳ್ಳಿಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಇದರಿಂದ ತೊಂದರೆಯಾಗಿದೆ ಎಂಬುದಾಗಿ ನಾನು ವಿಚಾರ ಮಾಡುತ್ತೇನೆ. ಈಗ ನಮ್ಮ ಬೆಳಗಾಂ ಜಿಲ್ಲೆಯ ಹುಕ್ಕೇರಿ ಕ್ಷೇತ್ರ ಎಷ್ಟು ಹಿಂದುಳಿದಿದೆ ಎನ್ನುವುದನ್ನು ಮಾನ್ಯಮಂತ್ರಿಯವರು ನಮ್ಮ ಕ್ಷೇತ್ರಕ್ಕೆ ಬಂದಿದ್ದಾಗ ನೋಡಿದ್ದಾರೆ. ಆ ಒಂದು ಸಂದರ್ಭದಲ್ಲಿ ನಾನು ಅವರನ್ನು ನಮ್ಮ ಕ್ಷೇತ್ರದ ಒಂದು ಭಾಗಕ್ಕೆ ಕರೆದುಕೊಂಡು ಹೋಗಿದ್ದೆ, ಏಕೆಂದರೆ ನಮ್ಮ ಭಾಗ ಎಷ್ಟು ಹಿಂದುಳಿದಿದೆ ಎಂಬುದನ್ನು ತೋರಿಸುವುದಕ್ಕಾಗಿ. ಆದರೆ ಪ್ರಾರಂಭದಲ್ಲಿ ನಾನು ಮಾನ್ಯಮಂತ್ರಿಯವರಲ್ಲಿ 'ನಮ್ಮ ಭಾಗಕ್ಕೆ ಬರಬೇಕು ಎಂದು ಕೇಳಿಕೊಂಡಾಗ ಅವರ ಅಧಿಕಾರಿಗಳು 'ಅಲ್ಲಿ ರೋಡ್ ಸರಿಯಿಲ್ಲ, ಅವರು ಬರುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಾನು ಆಗ 'ಅಲ್ಲಿ ರಸ್ತೆಗಳು ಸರಿಯಿಲ್ಲದಿರುವುದರಿಂದ ಅದನ್ನು ಮಾನ್ಯ ಮಂತ್ರಿಯವರಿಗೆ ತೋರಿಸಬೇಕು ಎನ್ನುವ ದೃಷ್ಟಿಯಿಂದಲೇ ಅವರನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೇನೆ. ಎಂದು ಹೇಳಿದೆ. ಮಾನ್ಯ ಮಂತ್ರಿಯವರು ಅದಕ್ಕೆ ಒಪ್ಪಿ ಅಲ್ಲಿಗೆ ಬಂದು ಆ ಭಾಗವನ್ನು ನೋಡಿದರು. ಅದು ೨೧ ಕಿಲೋಮೀಟರ್ ಉದ್ದದ ಒಂದು ರಸ್ತೆ, ಆ ರಸ್ತೆಯ ಮಧ್ಯೆದಲ್ಲಿ ಒಂದು ಹಳ್ಳಕ್ಕೆ ಕಟ್ಟಿದ್ದ ಸೇತುವೆ ಬಿದ್ದು ಹೋಗಿದೆ ಹೀಗಾಗಿ ಅಲ್ಲಿ ೨ ವರ್ಷಗಳಿಂದ ಬಸ್‌ಗಳ ಸಂಪರ್ಕ ತಪ್ಪಿಹೋಗಿದೆ. ಈ ಒಂದು ಪರಿಸ್ಥಿತಿಯನ್ನು ನೋಡಿದಮೇಲೆ ಮಾನ್ಯಮಂತ್ರಿಯವರು 'ಇದು ಒಳ್ಳೆಯ ರಹದಾರಿ ಇದೆ, ಇದನ್ನು ಆಧುನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸೋಣ 'ಎಂದು ಹೇಳಿದರು. ಅದಲ್ಲದೇ ಬೆಳಗಾಂನಲ್ಲಿ ಒಂದು ಸಲ ಫಂಕ್ಷನ್‌ನಲ್ಲಿ ಭಾಷಣ ಮಾಡುತ್ತಾ 'ಇಂತಹ ಒಂದು ಹಿಂದುಳಿದ ಭಾಗವನ್ನು ನಾನು ನೋಡಿದ್ದು ಇದೇ ಮೊದಲು, ಇದನ್ನು ನೋಡಿ ನನಗೆ ಬಹಳ ದುಃಖವಾಗಿದೆ, ಇದನ್ನು ಅಭಿವೃದ್ಧಿ ಪಡಿಸೋಣ ಎಂದು ಸಹ ಹೇಳಿದರು. ಆದರೆ ಬಜೆಟ್‌ನಲ್ಲಿ ಇದು ಸೇರಲಿಲ್ಲ. ಅಲ್ಲಿಯ ಜನರಿಗೆ ಏನೊಂದು ಆಶ್ವಾಸನೆಯನ್ನು ಅವರು ಕೊಟ್ಟಿದ್ದರೋ ಅದು ಈಡೇರಲಿಲ್ಲ ಅಲ್ಲಿರತಂಥ ಪೈಪುಗಳಿಗೆ ಹುಡುಗರು ಕಲ್ಲು ಹೊಡೆದು ಹಾಳು ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತಿದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ನಮ್ಮ ಕಡೆ ಇರತಕ್ಕಂಥ ರಸ್ತೆಗಳು ವ್ಯವಸ್ಥಿತ ರೀತಿಯಲ್ಲಿ ಅಭಿವೃದ್ಧಿಯಾಗಿಲ್ಲ. ೫-೬ ವರ್ಷಗಳ ಹಿಂದೆ ಹೇಗೆ ಇದ್ದವೋ ಈಗಲೂ ಹಾಗೆಯೇ ಇವೆ. ಈ ರಸ್ತೆಗಳನ್ನು ಐ.ಸಿ.ಆರ್.ಸಿ ರೋಡ್ಸ್ ಎಂದು ಪರಿಗಣಿಸಿಲ್ಲ. ಈ ರಸ್ತೆಗಳು ಅಭಿವೃದ್ಧಿಯಾಗಿಲ್ಲದೇ ಇರುವುದರಂದ ನಮ್ಮ ಭಾಗದಲ್ಲಿ ಹಳ್ಳಿಗಳೂ ಸಹ ಅಭಿವೃದ್ಧಿಯಾಗಿಲ್ಲ. ಮೊದಲನೆಯದಾಗಿ ಈ ಹಿಂದುಳಿದ ಹಳ್ಳಿಗಳನ್ನು ಮುಂದಕ್ಕೆ ತರಬೇಕಾದರೆ ಅದಕ್ಕೆ ಮುಖ್ಯವಾಗಿ ರಸ್ತೆಗಳ ಅವಶ್ಯಕತೆ ಇದೆ. ನಮ್ಮ ಹಿಂದುಳಿದ ಭಾಗದ ಸುಧಾರಣೆಯಾಗಬೇಕಾದರೆ ಹಳ್ಳಿಗಳಲ್ಲಿ ಉನ್ನತ ಮಟ್ಟದ ರಸ್ತೆಗಳು ಬೇಕು. ನಮ್ಮಲ್ಲಿ ಇರತಕ್ಕಂಥ ೨೧ ಕಿಲೋಮೀಟರ್ ರೋಡಿನ ಸುತ್ತಮುತ್ತ ೨೦ ಹಳ್ಳಿಗಳು ಇವೆ. ಈ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸತಕ್ಕಂಥ ಸೇತುವೆ ಬಿದು ಹೋದಮೇಲೆ ಆ ಹಳ್ಳಿಗಳಿಗೆ ಸಂಪರ್ಕ ಇಲ್ಲದಂತಾಗಿದೆ. ಜನರು ಬಜಾರಿಗೆ ಹೋಗಿ ಸರಕು ಒಯ್ಯಬೇಕಾದರೆ ತುಂಬಾ ತೊಂದರೆಯಾಗುತ್ತಿದೆ, ಪಟ್ಟಣಕ್ಕೆ ಹೋಗಬೇಕಾದರೆ. ಸರಕು ಒಯ್ಯಬೇಕಾದರೆ ೧೫-೨೦ ಕಿಲೋಮೀಟರ್ ನಡೆದು ಹೋಗುವ ಪರಿಸ್ಥಿತಿ ಇದೆ, ಆದ್ದರಿಂದ ಸರ್ಕಾರದವರು ಇಂತಹ ಸೇತುವೆಗಳನ್ನು ಮೊದಲು ಅವಶ್ಯವಾಗಿ ಅಭಿವೃದ್ಧಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಮೇಲೆ ಹುಕ್ಕೇರಿ ಬೆಳಗಾಂ ಮಾರ್ಗದಲ್ಲಿ ಒಂದು ಡಿಸ್ಟ್ರಿಕ್ಟ್ ರೋಡ್ ಇದೆ. ಹಿರಣ್ಯಕೇಶಿ ಎಂಬಲ್ಲಿ ಒಂದು ನದಿಯ ಮೇಲೆ ಒಂದು ಸೇತುವೆ ಇದೆ. ವರ್ಷದಲ್ಲಿ ೨-೩ ತಿಂಗಳ ಕಾಲ ಈ ನದಿ ತುಂಬಿ ಹರಿಯುತ್ತಿರುತ್ತದೆ. ಈ ಸೇತುವೆ ಮೇಲೆ ಪ್ರತಿನಿತ್ಯ ೨೦-೩೦ ಬಸ್‌ಗಳು ಓಡಾಡುತ್ತಿರುತ್ತವೆ. ಇದು ಮಳೆಗಾಲದಲ್ಲಿ ಬಂದ್ ಆಗುವುದರಿಂದ ಜನರಿಗೆ ತುಂಬಾ ತೊಂದರೆಯಾಗುತ್ತಿದೆ ಈ ಕಡೆಗೆ ಅಧಿಕಾರಿಗಳು ಲಕ್ಷ್ಯ ಕೊಟ್ಟಂತೆ ಕಾಣುತ್ತಿಲ್ಲ. ಆದುದರಿಂದ ಮೊದಲು ಸೇತುವೆಯನ್ನು ಎತ್ತರಿಸಬೇಕೆಂದು ಹೇಳುತ್ತೇನೆ. ಹಾಗೆ ಇನ್ನೊಂದು ಕಡೆ ಕೃಷ್ಣಾ ನದಿಗೆ

ಅಡ್ಡಲಾಗಿ ಬರುವ ಒಂದು ಸೇತುವೆ ಇದೆ. ಇದು ವರ್ಷದಲ್ಲಿ ಆರು ತಿಂಗಳು ಬಂದ್ ಆಗಿರುತ್ತದೆ. ಮಳೆಗಾಲ ಪ್ರಾರಂಭವಾದ ಮೇಲೆ ನವಂಬರ್ ತಿಂಗಳ ತನಕ ಇದು ಮುಚ್ಚಲ್ಪಟ್ಟಿರುತ್ತದೆ. ಇದನ್ನು ಮುಗಿಸಲು ಸರ್ಕಾರದ ಹಣದ ಕೊರತೆ ಇರಬಹುದು. ಆದರೂ ಕೇಂದ್ರ ಸರ್ಕಾರದವರಿಂದ ಹಣವನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ಇದನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ, ಇಂತಹ ಸೇತುವೆಗಳು ನಮ್ಮ ಭಾಗದಲ್ಲಿ ಬಹಳ ಇವೆ. ರಾಯಭಾಗ್‌ನಿಂದ ಬರುವ ರಸ್ತೆ ಎಷ್ಟು ಕೆಟ್ಟಿದೆ ಎಂದರೆ. ಬಸ್ಸಿನವರಾರೂ ಅಲ್ಲಿಗೆ ಬರುವುದಕ್ಕೆ ತಯಾರಿಲ್ಲ. ರಾಯಭಾಗನಿಂದ ಬೆಂಗಳೂರಿಗೆ ಬರುವಲ್ಲಿ ಕನ್ನೂರು ಮತ್ತು ಬೆಲ್ಲದ ಬಾಗೇವಾಡಿಯಲ್ಲಿ ಎರಡು ನಾಲೆಗಳು ಸಿಗುತ್ತವೆ. ಆದರೆ ಅವುಗಳಿಗೆ ಸೇತುವೆಗಳನ್ನು ನಿರ್ಮಿಸಿಲ್ಲ. ಮಳೆ ಬಂದರೆ, ಬಸ್ಸುಗಳು ಆ ಮಾರ್ಗದಲ್ಲಿ ಬರುವುದಕ್ಕಾಗುವುದಿಲ್ಲ ಅಲ್ಲೇ ನಿಲ್ಲಬೇಕಾಗುತ್ತದೆ. ಆದುದರಿಂದ, ಇಂತಹ ದೂರದ ಊರುಗಳಿಗೆ ಹೋಗುವ ರಸ್ತೆಗಳಿಗೆ ಅಗತ್ಯ ಸೇತುವೆಗಳನ್ನು ಆದಷ್ಟು ಬೇಗನೆ ನಿರ್ಮಿಸಿಕೊಡಬೇಕೆಂದು ಹೇಳುತ್ತೇನೆ.

ಮಾನ್ಯ ಸಚಿವರು ನಮ್ಮ ಜಿಲ್ಲೆಯ ಶಾಸಕರನ್ನೆಲ್ಲ ಕರೆದು ನಮ್ಮ ಭಾಗದಲ್ಲಿರುವ ರಸ್ತೆಗಳ ನಿರ್ಮಾಣಕ್ಕಾಗಿ ಬಡ್ಜೆಟ್‌ನಲ್ಲಿ ಸೇರಿಸಲು ವಿವರವನ್ನು ಪಡೆದುದು ಬಹಳ ಸ್ತುತ್ಯಾರ್ಹವಾದುದು ಆದರೆ ಯಾವ ರಸ್ತೆಗಳು ಜಾಗ್ರತೆ ಆಗಬೇಕೆಂದು ಅಂದು ಶಾಸಕರು ಹೇಳಿದರು ಅವೊಂದೂ ಬಡ್ಜೆಟ್‌ನಲ್ಲಿಲ್ಲ. ಇಂತಹ ರಸ್ತೆಗಳನ್ನು ಬಡ್ಜೆಟ್‌ನಲ್ಲಿ ಹಾಕಿಸಿ ಎಂದು ಮಾನ್ಯ ಸಚಿವರಿಗೆ ಹೇಳಿದ್ದೇವೆ ಎಂದು ನಾವೆಲ್ಲ ನಮ್ಮ ಭಾಗದ ಜನರಿಗೆ ಹೇಳಿಬಿಟ್ಟೆವು. ಆದರೆ ಒಂದು ರಸ್ತೆ ಸಹ ಇಲ್ಲವಲ್ಲ. ಬಹುಶಃ ದುಡ್ಡಿನ ಕೊರತೆಯಿಂದಾಗಿ ಈ ರೀತಿಯಾಗಿರಬೇಕೆಂದು ನಾನು ತಿಳಿಯುತ್ತೇನೆ.

ನಮ್ಮ ಭಾಗದಲ್ಲಿರುವ ಹಿಡ್ಕಲ್ ಅಣೆಕಟ್ಟಿನಲ್ಲಿ ಕಳೆದ ಸುಮಾರು ಏಳು ವರ್ಷಗಳಿಂದ ದಿನಗೂಲಿ ಮೇಲೆ ಅನೇಕ ಜನರು ದುಡಿಯುತ್ತಿದ್ದಾರೆ. ಮಾನ್ಯ ಸಚಿವರು ಅಲ್ಲಿಗೆ ಬಂದಿದ್ದಾಗ ಆ ಜನರೆಲ್ಲ, ಅವರನ್ನು ಖಾಯಂಗೊಳಿಸಬೇಕೆಂದು ಪ್ರಾರ್ಥಿಸಿದ ಮನವಿ ಪತ್ರವೊಂದನ್ನು ಕೊಟ್ಟರು. ಆದರೆ, ಅದರ ಬಗ್ಗೆ ಏನೂ ಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ಅಲ್ಲಿನ ಸಂಬಂಧ ಪಟ್ಟವರು ನಮಗೆ ಸರ್ಕಾರದಿಂದ ಆಜ್ಞೆ ಬಂದಿಲ್ಲವೆಂದು ಹೇಳುತ್ತಾರೆ. ಅಂತೂ ಅದು ಹೀಗೆ ಕಾಲ ತಳ್ಳುತ್ತಾ ಬಂದಿದೆಯೇ ಹೊರತು ಕಾರ್ಯಗತವಾಗಿಲ್ಲ. ಇದರ ಸಲುವಾಗಿ ಮಾನ್ಯ ಸಚಿವರು ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗದೆ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† SRI B. B. SAYANAK (Belgaum).—Mr. Speaker, Sir, with great pain I want to say that you are doing injustice to the Members of the Maharashtra Ekikarana Samithi. The Chair gives us chance always in the end...

MR. SPEAKER.—I will give the hon. member first chance when the other demands are taken up for discussion...

SRI B. B. SAYANAK.—The Speaker is the custodian of this August House. So, the Speaker must be impartial and judicious. You are showing partiality. Sir, I am very sorry. The Chair should give chances to the Members belonging to different parties. Time should be allotted according to the party basis...

ಶ್ರೀ ಜಿ. ಕೆ. ತೆಕ್ಕೇಡ್.—ಮಾನ್ಯ ಸದಸ್ಯರು, ಮಾನ್ಯ ಅಧ್ಯಕ್ಷರ ಮೇಲೆ ಗಂಭೀರವಾದ ಆರೋಪಗಳನ್ನು ಮಾಡುತ್ತಿರುವರು. ಮಾನ್ಯ ಅಧ್ಯಕ್ಷರು ಅನ್ಯಾಯ ಮಾಡುತ್ತಿರುವುದಾಗಿಯೂ ಮತ್ತು ಪಕ್ಷಪಾತ ತೋರಿಸುತ್ತಿರುವರೆಂದು ಅವರು ಹೇಳುತ್ತಿದ್ದಾರೆ. ಅದನ್ನವರು ಸಿದ್ಧ ಮಾಡಿಕೊಡಬೇಕು. ಅವರು ಮಾನ್ಯ ಅಧ್ಯಕ್ಷರ ಕುರಿತು ಉಪಯೋಗಿಸಿದ ಶಬ್ದಗಳನ್ನು ಕೇಳಿ ನಾವು ತುಂಬ ವ್ಯಸನಪಟ್ಟಿದ್ದೇವೆ. ಆದುದರಿಂದ, ಅವರು ತಮ್ಮ ಆರೋಪಗಳನ್ನು ಸಿದ್ಧಮಾಡಿಕೊಟ್ಟ ನಂತರ, ಭಾಷಣ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಲಕ್ಷ್ಮೀಸಾಗರ್.---ಮಾನ್ಯ ಸದಸ್ಯರು ಸಾಕಷ್ಟು ಸಮಯ ಸಿಕ್ಕಲಿಲ್ಲವೆಂದು ತಮ್ಮ ದುಃಖವನ್ನು ತೋಡಿಕೊಂಡಿದ್ದಾರೆ. ಅದನ್ನು ಅರ್ಥಮಾಡಿಕೊಳ್ಳದೆ, ಅವರು ಹೇಳಿದ್ದನ್ನು ದೊಡ್ಡದನ್ನಾಗಿ ಮಾಡಬುವುದು ಬೇಡ.

SRI MALLIKARJUNA KHARGE.—Hon. Member Sri B. B. Sayanak was casting aspersions against tha Chair. Those words must be removed from the proceedings...

MR. SPEAKER.--I do not think any injustice is being done to teh M.E.S. party...

SRI B. B. SAYANAK.—Sir, you are always permitting us to speak in the end. It is not injustice ?

MR. SPEAKER.—You cannot say like that. You don't know the reasons. To-day you have sent the list very late. I will go according to the list received earlier...

SRI B. B. SAYANAK.—Mr. Speakar, Sir, Sri Arumugham has sent the chit after I have submitted the chit to you. Still you have given me the chance in the end...

MR. SPEAKER —Sri Arumugham had contacted me personally. I have already explained the position. Now, you can commence your speech.

5-30P.M.

SRI B. B. SAYANAK.—If you allot time on party basis, I have no objection. We have decided this at the Business Advisory Committee.

MR. SPEAKER.—Now the hon member cannot say like that. For some time he was keeping quite and later on he has sent his name.

SRI B. B. SAYANAK.—Mr. Arumugham has sent his name last. but you have given him priority.

SRI MALLIKARJUNA KHARGE.—I want to know whether those words are to be expunged from the proceedings or not.

MR. SPEAKER.—I think it is not the intention of the hon. Member Sri Sayanak to offend the Chair ?

SRI B. B. SAYANAK.—No, Sir. I rise to oppose the Demand made by the Hon. Minister for Public Works.

I heartily congradulate Shri Madhu Dandavathe, the Union Railway Minister, because he has made a hatrick in Parliament without increasing the passenger fare. He is the only Central Minister to place surplus budgets before the Parliament for three years. Whatever promise he has given to Hon. Minister Sri Bangarappa so far as Karnataka is concerned, he has fulfilled. I request both of them to convert the meter gauge between Miraj to Bangalore to broad gauge

I hope the Hon. Minister Sri Bangarappa will speak to Madhu Dandavathe in this behalf ; I shall also see him in this connection because he is a good friend of mine.

The Hon. Minister has assured last year regarding the regularisation of the services of gangman. He stated categorically that within one year he would do it but he has not fulfilled his promise and he is again giving an assurance that within one or two months he is going to do it. I request the Hon. Minister to fulfil his promise in this behalf.

There was only one Chief Engineer formerly. Now there are 30 Chief Engineers. Half of the budget is spent for maintenance of the staff and only half for the good of the people. I request the Hon. Minister to spend atleast this money for the good of the people.

The P.W.D. is the most corrupt department from top to bottom. No doubt, there are some officers. But by and large there is lot of corruption and I request the Hon. Minister to set up enquiry commission and see that these corrupt officers are booked because I find that so many Junior Engineers have constructed two or three bunglows and they are maintaining cars and scooters.

Regarding the problems of my constituency, I have to state that he has mentioned almost all the national highways except National Highway No. 4A *i.e.* from Belguam to Goa. This road was constructed in the year 1946 by the then Bombay Government and that was a cement-concreate road from Belguam to Kanapur. After the Reorganisationof States, this road is the wrost road. Since the last 8 years the people here are complaining that the Government must construct this road but nothing has been done so far. There is a bridge near Kanapur and this is the worst and dangerous bridge. There have been accidents every fortnight and there have been one or two deaths. We have been requesting the engineers to construct this bridge but there is no use. In Karwar, the Karwar Bridge which was started 12 years ago is not completed yet. The work was entrusted to one contractor Hindustan Construction but he has run away and you have given the work to another contractor by name Ganaman and Company. He is doing the work and I hope he will do the work within two or three years and if this project is completed within the Hon. Minister's regime I will certainly compliment him.

There is one road from Belgaum to Kanakumbi which is 40 miles long. If this road is completed, the distance from Belgaum to Panaji will be reduced to 75 miles from the present 100 miles. This is a backward area and there is neither bridge nor road there, I have gone to this place for taluk board election. To travel 40 miles the car has

taken three hours. Such is the condition of the road. I request the Hon. Minister to improve the condition of this road. The Kanapur–Jamakoti Road is also in a worst condition and I request him to take up this work also. Last year the Belguam–Kadodi Road was constructed but with only 9 ft width. The Governor had gone there to inagurate a school. He saw this Road with his own eyes and asked who has constructed this road. I told him that it was constructed by the P.W.D This road requires to be widened. In reply to a starred question you have promised to widen it. You must widen this road and do justice to the Kadodi people. Then on the Belgaum-Dhamne Road there is a nalla and there is a cry from the people to construct bridge since 22 years and also a road. But no road has been constructed and no bridge has been built. Why this attitude in this border area ? Are we not paying assessment and land revenue to the Government ? Why the Government is so indifferent to our area ?

Regarding Karnataka Roads and Bridges Fund, you have collected money from the A.P.M.C. Belguam Taluk. Rs. 26 lakhs has been collected from the sellers but this amount is not spent in Belguam Taluk. Where has this money gone ? According to me the money that you collect must be utilised to construct the road near the A.P.M.C. or Belaguam Taluk but nothing has been done.

The Hon. Minister had called a meeting of M.L.A's. Some of us have gone and discussed about formation of roads. Our Member from Nippani has gone to the Minister and has given the names of roads to be taken up. But the Minister has taken up the road in Chikkodi constituency and not from Nippani. I request the Minister to take up atleast one or two roads in our constituencies. There is one road, Kurli–Batnagar which requires to be taken up. Construction on two bridges was started but the work is not yet completed. I request the Hon. Minister to take up the two roads I mentioned and complete the work of two bridges within the end of this year.

With these words I thank the Chair and conclude my speach.

† ಶ್ರೀ ಡಿ. ಟಿ. ರಾಮು (ಚನ್ನಪಟ್ಟಣ). — ಮಾನ್ಯ ಸಭಾಧ್ಯಕ್ಷರೆ, ಪಿ.ಡಬ್ಲ್ಯೂ.ಡಿ. ಸಚಿವರು ಮಂಡಿಸಿರತಕ್ಕಂತಹ ಈ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ಯಾವುದೇ ಒಂದು ರಾಷ್ಟ್ರದ ಚರಿತ್ರೆಯನ್ನು ತೆಗೆದುಕೊಂಡಾಗ ಅದರಲ್ಲಿರ ತಕ್ಕಂತಹ ಸೌಧಗಳು, ನಾಗರೀಕತೆಯ ಮಟ್ಟ ಯಾವರೀತಿ ಇತ್ತು ಎನ್ನುವುದನ್ನು ಗಣನೆಗೆ ತೆಗೆದುಕೊಳ್ಳು ತ್ತೇವೆ. ಇತಿಹಾಸವನ್ನು ನಾವು ಓದುವಾಗ ಹರಪ್ಪ ಮತ್ತು ಮೆಹಂಜೋದಾರ ಉದಾಹರಣೆಗಳನ್ನು ತೆಗೆದುಕೊಳ್ಳುತ್ತೇವೆ. ಮೆಹಂಜೋದಾರದಲ್ಲಿ ಭವ್ಯ ಸೌಧಗಳು ಇದ್ದವು. ನಾಜೂಕಾದಂತಹ ರಸ್ತೆಗಳು ಇದ್ದವು, ಒಳ್ಳೆಯ ಚರಂಡಿಗಳು ಇದ್ದುದನ್ನು ನಾವು ಕಾಣುತ್ತೇವೆ. ಅಂತಹ ಇಲಾಖೆಯನ್ನು ಮಾನ್ಯ ಬಂಗಾರಪ್ಪನವರು ಹೊಂದಿದ್ದಾರೆ. ಅದರಿಂದ ನನಗೆ ಬಹಳ ಸಂತೋಷವಾಗಿದೆ. ಏಕೆಂದರೆ ಈ ಇಲಾಖೆ ಒಂದು ಕಟ್ಟಾವಾದಿ ಕೈಯಲ್ಲಿ ಸಿಕ್ಕಿದೆ ಎಂದು ನಮ್ಮ ಸಮಾಧಾನ ವಿಷಯ. ಆದರೆ ಈ ಇಲಾಖೆಯ

ಆಡಳಿತ ವ್ಯವಸ್ಥೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎನ್ನುವ ಭಾವನೆ ನನ್ನದು. ಈಗ ಈ ಇಲಾಖೆಯ ಬಗ್ಗೆ ಹೇಳುವುದಾದರೆ ಈ ಇಲಾಖೆಯಲ್ಲಿ ಬರತಕ್ಕದ್ದು ರಸ್ತೆಗಳು, ಕಟ್ಟಡಗಳು, ಸೌಧಗಳು, ಸೇತುವೆಗಳು. ಇವೆಲ್ಲಕ್ಕೂ ಇವರೇ ಜವಾಬ್ದಾರರಾಗುತ್ತಾರೆ. ಆದಕಾರಣ ಎಲ್ಲಾ ಇಲಾಖೆಗಳಿಗಿಂತಲೂ ಈ ಇಲಾಖೆಗೆ ಹೆಚ್ಚು ಮಹತ್ವವಿದೆ ಎಂದು ನನ್ನ ಭಾವನೆ. ಇನ್ನು ಎರಡು ಸಹಸ್ರ ವರ್ಷಗಳಾದ ಮೇಲೆ ಈ ವಿಧಾನ ಸೌಧ ಕೂಡ ಈ ಇಲಾಖೆಗೆ ಸೇರುತ್ತದೆ. ಈ ವಿಧಾನಸೌಧದ ರಚನೆ ಹೇಗೆ ಇತ್ತು ಎಂದು ಮುಂದಿನ ಭವಿಷ್ಯ ಶಿಲ್ಪಿಗಾರರು ಹೇಳುತ್ತಾ ಕರ್ನಾಟಕ ರಾಜ್ಯದ ಇತಿಹಾಸದ ಬಗ್ಗೆ ಒಂದೆರಡು ಪುಟಗಳನ್ನು ಬರೆಯುವಷ್ಟು ಅವಕಾಶ ಅವರಿಗೆ ದೊರೆಯುತ್ತದೆ, ಇನ್ನು ನಮ್ಮ ರಾಜ್ಯದ ಮಟ್ಟಿಗೆ ಹೇಳಬೇಕು ಅಂದರೆ ಈ ನೆರೆಹಾವಳಿಗೆ ಸಿಕ್ಕಿ ಅನೇಕ ಅನಾಹುತಗಳು ಆಗುತ್ತದೆ. ನದಿಗಳಲ್ಲಿ ಪ್ರವಾಹ ಹೋದಾಗ ಅದರಿಂದ ಸಾಕಷ್ಟು ನಷ್ಟವಾಗುತ್ತದೆ, ನನ್ನ ಕ್ಷೇತ್ರದಲ್ಲಿ ಕಣ್ವ ನದಿ ಇದೆ. ಇದು ತುಂಬಾ ಪ್ರವಾಹ ದಲ್ಲಿ ಬಂದಾಗ ಆ ಪ್ರವಾಹಕ್ಕೆ ಸಿಕ್ಕಿದ ವಸ್ತುಗಳನ್ನೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಇನ್ನು ರಸ್ತೆಗಳ ಗುರುತು ಸಿಕ್ಕುವುದಿಲ್ಲ. ಆದಕಾರಣ ರಾಜ್ಯದಲ್ಲಿ ವಿಪತ್ತಿಗೆ ಸಿಕ್ಕತಕ್ಕ ಎಲ್ಲಾ ನದಿಗಳ ಬಗ್ಗೆ ಒಂದು ಫ್ಲಡ್ ಕಂಟ್ರೋಲ್ ಬೋರ್ಡ್ ರಚಿಸಬೇಕೆಂದು ಹೇಳುತ್ತೇನೆ, ಅದಕ್ಕೆ ಒಂದು ನಿರ್ದಿಷ್ಟವಾದಂತಹ ಬೋರ್ಡ್ ಇರಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಹೇಳ ಬೇಕು ಅಂದರೆ ಈ ಇಲಾಖೆಯಲ್ಲಿರತಕ್ಕ ಅವ್ಯವಸ್ಥೆಯ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರ ರೆಡ್ಡಿಯವರು ಹೇಳಿದ್ದಾರೆ. ಈಗ ಜನಾರೋಗ್ಯ ಇಲಾಖೆ ಎಂದು ಇದೆ ಆದರೆ ಕೆಲಸ ಮಾಡತಕ್ಕದ್ದು ಗ್ರಾಮಾಭಿವೃದ್ಧಿ ಇಲಾಖೆ. ಇನ್ನು ಎರಡನೆಯ ಇಲಾಖೆ ಅಂದರೆ ನ್ಯಾಷನಲ್ ರೂರಲ್ ವಾಟರ್‌ಸಪ್ಲೈ ಸ್ಕೀಮ್ ಎಂದು ಇರುವುದು ಮೈನರ್ ಇರಿಗೇಷನ್ ಹೋಗುತ್ತದೆ. ಇನ್ನು ಮೂರನೆಯದು ಅದರಲ್ಲಿರ ತಕ್ಕಂತಹ ನೌಕರರನ್ನು ವರ್ಗ ಮಾಡತಕ್ಕದ್ದು ಜನರಲ್ ಚೀಫ್ ಇಂಜಿನಿಯರ್ ಅವರಿಗೆ ಬರುತ್ತದೆ. ಹೀಗೆ ಮೂರು ಯೋಜನೆಗಳನ್ನು ಈ ಇಲಾಖೆ ಹೊಂದಿದೆ. ಆದುದರಿಂದ ಈ ಮೂರು ವಿಭಾಗಗಳನ್ನು ಸೇರಿಸಿ ಅದಕ್ಕೆ ಒಂದು ಇಲಾಖೆ ಮಾಡಿ ಅದಕ್ಕೆ ಒಬ್ಬ ಚೀಫ್ ಇಂಜಿನಿಯರ್ ನೇಮಿಸಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳಬೇಕು ಅಂದರೆ ಬಹಳಷ್ಟು ರಸ್ತೆಗಳು ಅವ್ಯವಸ್ಥೆಯಿಂದ ಕೂಡಿವೆ, ಒಳ್ಳೆಯ ಮಜಭೂತವಾದ ವಾಹನವನ್ನು ಪರೀಕ್ಷೆ ಮಾಡಬೇಕು ಅಂದರೆ ಒಳ್ಳೆಯ ಮೆಕ್ಯಾನಿಕ್ ಬ್ಯಾಡ್ ರೋಡ್‌ನಲ್ಲಿ ಮೊದಲು ತೆಗೆದುಕೊಂಡು ಹೋಗುತ್ತಾನೆ. ಇವೊತ್ತು ಏನಾ ದರೂ ಹೊಸ ವಾಹನ ತೆಗೆದುಕೊಂಡು ನಮ್ಮ ಚನ್ನಪಟ್ಟದಿಂದ ಹಲಗೂರಿಗೆ ಹೋಯಿತು ಅಂದರೆ ಸಾಯಂಕಾಲ ದೊಳಗೆ ಆ ವಾಹನದಲ್ಲಿರತಕ್ಕಂತಹ ನೆಟ್ಟು, ಬೋಲ್ಟು ಎಲ್ಲಾ ಉದುರಿ ಹೋಗಿರುತ್ತವೆ. ಅಲ್ಲಿ ರಸ್ತೆಗಳು ಚೆನ್ನಾಗಿಲ್ಲ, ಆದುದರಿಂದ ಅಲ್ಲಿರತಕ್ಕ ರಸ್ತೆಗಳನ್ನು ಅಭಿವೃದ್ಧಿ ಪಡಿಸಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ಮಾನ್ಯ ಬಂಗಾರಪ್ಪ ನವರು ಇಡೀ ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ಮಾಸ್ಟರ್ ಪ್ಲಾನ್ ತಂದಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಭಿನಂದನಾರ್ಹರು. ಇದು ಸಾವಿರಾರು ಕೋಟಿ ರೂಪಾಯಿಯ ಯೋಜನೆ ಆದುದರಿಂದ ಹೆಚ್ಚು ಹಣ ಬೇಕಾಗುತ್ತದೆ. ಅದರ ಬಗ್ಗೆ ವರ್ಲ್ಡ್ ಬ್ಯಾಂಕಿನಿಂದಲಾದರೂ ಸಾಲ ಮಾಡಿ ತಂದು ಈ ಗುರಿ ಯನ್ನು ಮುಟ್ಟಿಸಿದರೆ ನಿಜವಾಗಿಯೂ ಸಹ It will be feather in his cap ಎನ್ನುವುದು ನನ್ನ ಭಾವನೆ. ಮಾನ್ಯ ಬಂಗಾರಪ್ಪನವರು ಸಮಾಜವಾದದಿಂದ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಎಲ್ಲಿಗೆ ಹೋದರು ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಶಂಕುಸ್ಥಾಪನೆಯನ್ನು ಮಾಡಿಸುತ್ತಾರೆ. ಅಲ್ಲಿ ಯಾರೇ ಸೂಟುಧಾರಿಗಳು ಇದ್ದರು ಅವರನ್ನು ಬಿಟ್ಟು ಸಾಮಾನ್ಯ ಮನುಷ್ಯ ಯಾರು ಚಡ್ಡಿ ಬಟ್ಟೆ ಹಾಕಿ ಕೊಂಡು ನಿಂತಿರುತ್ತಾನೆ, ಅವನನ್ನು ಹಿಡಿದು ಅವನ ಕೈಯಲ್ಲಿ ಗುದ್ದಲಿ ಪೂಜೆ ಮಾಡಿಸುತ್ತಾರೆ. ಇದ ರಿಂದ ಅವರಲ್ಲಿರತಕ್ಕ ಒಂದು ವಿಶಾಲ ಹೃದಯ ಗೊತ್ತಾಗುತ್ತದೆ ಸಾಮಾನ್ಯ ವ್ಯಕ್ತಿಯಿಂದ ಈ ರೀತಿ ಗುದ್ದಲಿ ಪೂಜೆ, ಶಂಕುಸ್ಥಾಪನೆಗಳನ್ನು ಮಾಡಿಸುವುದರಿಂದ ಸಾಮಾನ್ಯ ಮನುಷ್ಯರಲ್ಲಿ ಹೃದಯ ವಿಶಾಲ ವಾಗುತ್ತದೆ. ಈ ತರಹ ಕಟ್ಟಡಗಳಿಗೆ ಶಂಕುಸ್ಥಾಪನೆ ಸಾಮಾನ್ಯ ಜನರಿಂದ ಮಾಡಿಸುವಾಗ ಜನರಲ್ಲಿ ಪ್ರೀತಿ ಬರುತ್ತದೆ. ಇವನ ಹಸ್ತಗುಣದಿಂದ ಇದು ಬಂದಿದೆ. ಎನ್ನುವ ಒಂದು ಪ್ರೀತಿ ಸಹಕಾರ ಮನೋ ಭಾವ ಸಾಮಾನ್ಯ ಜನರಲ್ಲಿ ಉದ್ಭವವಾಗುತ್ತದೆ. ಅಂತಹ ಕೆಲಸವನ್ನು ಮಾನ್ಯ ಬಂಗಾರಪ್ಪನವರು ಮಾಡುತ್ತಿದ್ದಾರೆ. ಇನ್ನು ನಿಮ್ಮ ಇಲಾಖಾ ಅಧಿಕಾರಿಗಳ ಬಗ್ಗೆ ಹೇಳಬೇಕು ಅಂದರೆ ಅವರು ಬಹಳ ಚುರುಕಾಗಿದ್ದಾರೆ. ಅವರು ಬಹಳ ಚುರುಕಾಗಿರುವುದರಿಂದಲೇ ಎಲ್ಲಾ ಸರಿಹೋಗಿರುವುದು. ಅವರು ಚುರುಕಾಗದೆ ಹೋಗಿದ್ದರೆ ಈ ಇಲಾಖೆಯ ಮುಖ್ಯಸ್ಥರಾದ ತಮಗೆ ಬಹಳಷ್ಟು ಕೆಟ್ಟ ಹೆಸರು ತರುವುದಕ್ಕೆ

ಅನುವಾಗುತ್ತಿತ್ತು. ಇದರ ಜೊತೆಗೆ ತಾವು ಎಲ್ಲ ಶಾಸನ ಸಭಾ ಸದಸ್ಯರನ್ನೂ ಕರೆದು ಪ್ರತಿಯೊಬ್ಬ ಸದಸ್ಯರ ಕ್ಷೇತ್ರಗಳಲ್ಲೂ ೩೨ ಕಿಲೋಮೀಟರ್ ಉದ್ದದ ರಸ್ತೆ, ಹಾಗೂ ಒಂದೆರಡು ಸೇತುವೆಗಳ ಕೆಲಸ ಮಾಡಿಸಿಕೊಡುವುದಾಗಿ ವಾಗ್ದಾನ ಮಾಡಿದ್ದಿರಿ. ಆದರೆ ತಮ್ಮ ವಾಗ್ದಾನ ಇದುವರೆಗೂ ಕಾರ್ಯಗತವಾಗಲಿಲ್ಲ. ತಾವು ಹೇಳಿದ ಮಾತು ಕನಸಾಗಿದೆ. ಆದರೆ ಈಗ ಆ ಕನಸಿನ ಮಾತು ನನಸಾಗುತ್ತದೆಂದು ನಾನು ನಂಬಿದ್ದೇನೆ. ತಮ್ಮ ಅಂದಿನ ವಾಗ್ದಾನ ಇಂದು ಈಡೇರಬಹುದು ಎಂದು ತಿಳಿದುಕೊಂಡಿದ್ದೇನೆ. ಸಾವಂತಿ ಪುರದ ಬಳಿ ಕಣ್ವ ನದಿಗೆ ಅಡ್ಡಲಾಗಿ ಸೇತುವೆಯನ್ನು ಕಟ್ಟಬೇಕೆಂದು ಕಳೆದ ೮–೧೦ ವರ್ಷಗಳ ಹಿಂದೆ ಆ ಪ್ರದೇಶದಲ್ಲಿ ಕಲ್ಲು, ಜೆಲ್ಲಿ, ಮರಳು, ಇದನ್ನೆಲ್ಲಾ ತಂದು ಸುರಿದರು. ಆ ಕೆಲಸ ಪೂರ್ತಿ ಮಾಡದೆ ಅಲ್ಲಿ ಹಾಕಿದ್ದ ಜೆಲ್ಲಿ, ಕಲ್ಲು, ಮರಳು ಎಲ್ಲಾ ವೇಸ್ಟ್ ಆಯಿತು. ಇದನ್ನು ನೋಡಿದರೆ ಈ ಇಲಾಖೆಯನ್ನು ಪಬ್ಲಿಕ್ ಎಕ್ಸ್‌ಚೆಕರ್ ವೇಸ್ಟ್ ಡಿಪಾರ್ಟ್‌ಮೆಂಟ್ ಎಂದು ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಜನಗಳಲ್ಲಿ ತಪ್ಪು ಅಭಿಪ್ರಾಯ ಮೂಡದಂತೆ ಇದರ ಬಗ್ಗೆ ಸೂಕ್ತ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಮತ್ತು ಬೆಂಗಳೂರು–ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ನನ್ನ ಕ್ಷೇತ್ರದಲ್ಲಿ ಕಳೆದ ೪ ವರ್ಷಗಳಿಂದ ಒಂದು ಸೇತುವೆಯನ್ನು ಕಟ್ಟುತ್ತಲೇ ಇದ್ದಾರೆ. ಇನ್ನೂ ಪೂರ್ತಿಯಾಗಿಲ್ಲ. ಈ ವರ್ಷವಾದರೂ ಆ ಸೇತುವೆಯನ್ನು ಪೂರ್ತಿಗೊಳಿಸುತ್ತಿರೆಂದು ನಂಬಿದ್ದೇನೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಈ ಸೇತುವೆ ಸರಿಯಾಗಿಲ್ಲದ್ದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಅದೇ ರೀತಿಯಲ್ಲಿ ಚಿಕ್ಕಮಳೂರು ಎಂಬಲ್ಲಿ ಒಂದು ಸೇತುವೆ ಇದೆ. ಇದು ಬಹಳ ಕರ್ವ್ ಆಗಿರುವುದರಿಂದ ಇಲ್ಲೂ ಕೂಡ ಅನೇಕ ಜನ ಗಾಡಿಗಳನ್ನು ಹೊಡೆದು ಕೊಂಡು ಬರುವಾಗ, ಸೈಕಲ್ ಮೇಲೆ ಬರುವಾಗ ಅಲ್ಲಿಂದ ಕೆಳಗೆ ಬಿದ್ದು ಸತ್ತು ಹೋಗಿದ್ದಾರೆ. ಈ ಕೆಲಸ ಅತ್ಯಗತ್ಯವಾಗಿ ಆಗಬೇಕಾದ್ದರಿಂದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನೂ ಆ ಸ್ಥಳಕ್ಕೆ ಒಂದುಸಾರಿ ಕರೆದುಕೊಂಡು ಹೋಗಿ ತೋರಿಸಿದೆ. ಅವರು ನೋಡಿಬಂದಮೇಲೆ ಈ ಕಾಮಗಾರಿಯನ್ನು ಈ ವರ್ಷದ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಿದ್ದಾರೆ. ಇದೇ ರೀತಿ ನುನ್ನೂರು ಬಳಿ ಕೂಡ ಒಂದು ಸೇತುವೆ ಇದೆ. ಇದನ್ನೂ ದುರಸ್ತಿ ಮಾಡಿಸಿಕೊಡಬೇಕು. ಇನ್ನು ಇಗ್ಗಲೂರು ಅಣೆಕಟ್ಟಿಗೆ ಈಗಾಗಲೇ ಹಣಕಾಸಿನ ಮಂಜೂರಾತಿ ದೊರೆತಿರುವುದರಿಂದ ಇದನ್ನು ತಮ್ಮ ಕಾಲದಲ್ಲೇ ಮುಗಿಸಿ ತಾವು ಒಳ್ಳೆಯ ಹೆಸರನ್ನು ಗಳಿಸಬೇಕೆಂದು ತಿಳಿಸುತ್ತಾ ಒಟ್ಟಿನಲ್ಲಿ ನಮ್ಮ ತಾಲ್ಲೂಕಿನಲ್ಲಿರತಕ್ಕ ರಸ್ತೆಗಳು, ಹಾಗೂ ಸೇತುವೆಗಳನ್ನು ಅಸ್ತಿತ್ವಕ್ಕೆ ತರಲು ಹೆಚ್ಚಿನ ನಿಗಾವನ್ನು ಕೊಡಬೇಕೆಂದು ಪ್ರಾರ್ಥಿಸಿ ಮಾನ್ಯ ಅಧ್ಯಕ್ಷರು ಬೆಲ್ ಬಾರಿಸಿ ನನ್ನನ್ನು ಕುಳಿತುಕೊಳ್ಳಿ ಎಂದು ಹೇಳುವುದಕ್ಕೆ ಮುಂಚಿತವಾಗಿಯೇ ನನ್ನ ಭಾಷಣವನ್ನು ಮುಗಿಸಿ, ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI M. ABDUL LATHEEF (Kolar).—Mr. Speaker, Sir, I am extremely thankful to you for the opportunity given to me to say a few words. There is a wise saying that: 'A stich in time saves nine'. But the Publc Works Department dose not believe in it. The maintenance grant varies from Rs. 4,500/- to a State Highway to Rs.750/- for a village road which is felt inadequat even by the department itself. So, I request that this grant may please be enhanced so that the good work that has been done is being undone for this shortage of funds. Even for special repairs the grant is too meagre and this grant for special repairs may be enhanced.

I fully endorse the views expressed by my hon. friend Sri B. V. Kakkilaya that the gangmen in P.W.D. have been working for 20 to25 years without the benefit of service conditions. I understand that the Governments of Maharashtra and Tamil Nadu have done something about this, and I hope our Public Works Department will also do something for them.

Sir, the avenue trees have been handed over to the Public Works Department from the Forest Department. I believe and they are in a hopeless state of maintenance. People living nearby these trees chop the trunk and make them to stand on cones and one fine day the whole tree will collapse and it is utilised for fuel. So, they have neither the men nor the technique to look after these trees. In the interest of these trees and in the interest of forest wealth, I request that these trees may be handed over again to the Forest Department, who have both technique and men to look after these trees. In Haryana the Highways are planted with fiive rows of trees. Such a scheme should be taken up here and afforstation should be done.

I am sure my hon. friend Sri C. M. Arumugham will agree with me the road between Kolar and K.G.F. is a very important road because there are two very big factories of Central Government, the Bharat Gold Mines Ltd., and the Bharat Earth Movers Ltd., On this road there is heavy traffic an heavy machines will be moving on this road. So, it is better to hand-over this road to the Central Government as a National Highway. This 30 Kms. bit between Kolar and K.G.F. could be a link to National Highway No. 4 and the Department may please take necessary steps to make this a National Highway. Apart from this, this road connects Kuppam in Andhra Pradesh, which is also an inter-state Road. I hope necessary steps will be taken by the department to make this a National Highway.

Sir, we legislators had meetings in Chambers of the Hon'ble Minister for Public Works, and it was a gentleman's agreement that some road works of our constituency will be taken, and we had given a list of works in our constituency. Unfortunately, 90 percent of the constituency works have been dropped. I have already written and personally represented to the Hon'ble Minister to take up the Managatta road, which is a very essential road in my constituency. I hope and sincerely believe that this road will be taken up and completed as early as possible.

Thank you, Sir.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ಈಗ ೬ ಗಂಟೆಯಾಗಿದೆ, ನಾಳೆ ಬೆಳಿಗ್ಗೆ ಇನ್ನೂ ಒಂದು ಗಂಟೆ ಮುಂಚಿತವಾಗಿ ಕುಳಿತುಕೊಂಡು ಡಿಮ್ಯಾಂಡ್ ಪಾಸ್ ಮಾಡೋಣ. ದಯವಿಟ್ಟು ಈಗ ಅಡ್ಜರ್ನ್ ಮಾಡಿ.

ಅಧ್ಯಕ್ಷರು.—ಈ ರೀತಿ ತಾವು ಕೂಗಾಟ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಮನೆಯ ಕೆಲಸ ಆಗುವುದು ಬೇಡವೇ ? ತಾವು ದಯವಿಟ್ಟು ಕುಳಿತುಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

೭.೦೦ ಪಿ.ಎಂ.

† ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಇಲಾಖೆ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯ ಬಗ್ಗೆ ಮಂಡಿಸಿರತಕ್ಕ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರುಗಳನೇಕರು ಬಹಳ ಉತ್ತಮವಾದ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ನಾನು ಒಂದು ವಿಧದಲ್ಲಿ ಸಂತೋಷ ಪಡ ಬೇಕಾಗಿದೆ. ಏಕೆಂದರೆ, ಒಪ್ಪತಕ್ಕ ಮಾತನ್ನು ಬಹಳ ಒಪ್ಪವಾಗಿ ಸಭೆಯ ಮುಂದಿಟ್ಟಿದ್ದಾರೆ. ನನ್ನ ಕಾರ್ಯಕ್ಷೇತ್ರದಲ್ಲಿರತಕ್ಕ ಜವಾಬ್ದಾರಿಯನ್ನು ಟೀಕೆಯ ಕೆಲವು ಮಾತುಗಳಿಂದ ಪುನಃ ಕೆಣಕಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಸದಸ್ಯರನ್ನು ಅಭಿನಂದಿಸಬೇಕಾಗಿದೆ. ಆಡಳಿತದ ಒಂದು ಅಂಗವಾಗಿರತಕ್ಕ ಈ ಇಲಾಖೆಯ ಬಗ್ಗೆ ಮಾತನಾಡುವ ಕಾಲದಲ್ಲಿ ಮಾನ್ಯ ಸದಸ್ಯರುಗಳು ತಮ್ಮ ಅನುಭವದಿಂದ ಒಡಮೂಡಿ ಬಂದಿರತಕ್ಕ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಇಲಾಖೆ ಮಾಡಿರತಕ್ಕ ಕೆಲಸ ಕಾರ್ಯಗಳನ್ನು ಕಾನೂನು ಚೌಕಟ್ಟಿನಲ್ಲಿ ಒರೆಹಚ್ಚಿ ನೋಡತಕ್ಕ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಆಗಬೇಕಾದ ತ್ವರಿತ ಕಾರ್ಯ ಕ್ರಮಗಳು ಆಗದೇ ಇದ್ದಾಗ, ಕೆಲವೊಮ್ಮೆ ಈ ಕಾರ್ಯಕ್ರಮಗಳು ಆದಾಗ ಬಹಳ ವೈವಿಧ್ಯಮಯ ವಾಗಿರುತ್ತವೆ ವಿಭಿನ್ನತೆಯಿಂದ ಕೂಡಿರುತ್ತವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ತ್ವರಿತವಾಗಿ ಆಗತಕ್ಕಂಥ ಕೆಲಸಕಾರ್ಯಗಳು ಕೆಲವೊಂದು ಆದಾಗ ಅಭಿಪ್ರಾಯಗಳು ವೈವಿಧ್ಯಮಯವಾಗಿ ಇರುತ್ತದೆ, ವಿಭಿನ್ನವಾಗಿ ಕೂಡಿರುತ್ತದೆ ಎನ್ನುವ ಮಾತನ್ನು ನಾವು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಅದು ಸಹಜ, ಧರ್ಮ ಸತ್ಯವಾಗಿ ಇರತಕ್ಕಂಥದ್ದು ಸಹಿತವೆಂದು ನಾನು ತಮ್ಮ ಮೂಲಕ ಈ ಸದನ ದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಥ ಒಂದು ಆಲೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ಅದರ ಹಿನ್ನೆಲೆ, ಅದರ ಅರ್ಥವನ್ನು ನೋಡೋಣ. ತಾವು ಎಲ್ಲ ಮಾತನಾಡಿದ್ದೀರಿ, ತಾವು ಯಾವ ಭಾವನೆ ಯಿಂದ ಮಾತನಾಡಿದ್ದೀರಿ ತಮ್ಮೆಲ್ಲ ಭಾವನೆಗಳನ್ನು ಮಾತುಗಳನ್ನು ಆಲಿಸಿ ಇದ್ದೇನೆ. ಈ ಒಂದು ಹಿನ್ನೆಲೆಯಲ್ಲಿ ಈ ಇಲಾಖೆಯು ನಡಿಸಿದಂಥ ಕಾರ್ಯಕ್ರಮಗಳು, ನಡೆಸಬೇಕಾದ ಕಾರ್ಯಕ್ರಮಗಳನ್ನು ಒಂದು ಚೌಕಟ್ಟಿನಲ್ಲಿ ಇಡುತ್ತೇನೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ.

ನಾನು ಇಲಾಖೆಯನ್ನು ವಹಿಸಿಕೊಂಡಮೇಲೆ ಎರಡನೆಯಬಾರಿಗೆ ಮಾನ್ಯ ಸದಸ್ಯರ ಅಭಿಪ್ರಾಯ. ಗಳನ್ನು ಆಯವ್ಯಯ ಪತ್ರದ ಮುಖಾಂತರ ಕೇಳುತ್ತಾ ಇದ್ದೇನೆ. ಕಳೆದ ಸಾರಿ ನಾನು ಬೇಡಿಕೆಗಳನ್ನು ತಮ್ಮೆಲ್ಲರ ಒಪ್ಪಿಗೆಗಾಗಿ ಸದನದ ಮುಂದೆ ಮಂಡಿಸಿದಾಗ ಬಹಳ ಒಳ್ಳೆಯ ಮಾತುಗಳನ್ನು ನನ್ನ ಬಗ್ಗೆ ಆಡಿದ್ದೀರಿ. ಸಮಾಜವಾದದ ಹಿನ್ನೆಲೆಯಲ್ಲಿರತಕ್ಕಂಥ ನಾನು ರಾಜಕೀಯ ಚಟುವಟಿಕೆಗಳ ಆಧಾರದ ಮೇಲೆ ಇಲಾಖೆ ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ ಎನ್ನುವ ನಂಬಿಕೆ ನಾವೆಲ್ಲರೂ ಇಟ್ಟಿದ್ದೇ ವೆಂದು ಹೇಳಿದ್ದೀರಿ. ನಾನು ಆಗ ಪುಳಕಿತಗೊಂಡಿದ್ದೆ. ಈಗಲೂ ಕೂಡ ಆ ಮಾತನ್ನು ಹೇಳಿದಾಗ ಪುನಃ ನಾನು ನನ್ನ ಕಾರ್ಯ ಕ್ಷೇತ್ರದಲ್ಲಿರತಕ್ಕಂಥ ಜವಾಬ್ದಾರಿಯ ಬಗ್ಗೆ ಎಚ್ಚರ ವಹಿಸಿಕೊಂಡು ಮತ್ತು ಸಮಾಜವಾದದ ಹಿನ್ನೆಲೆಯಲ್ಲಿ ಪುಳಕಿತಗೊಳ್ಳುವಂಥ ಅಭಿಪ್ರಾಯವನ್ನು ಮತ್ತೊಮ್ಮೆ ಮಗದೊಮ್ಮೆ ಇಟ್ಟರೆ ತಾವು ಎಲ್ಲರೂ ತಪ್ಪಾಗಿ ಭಾವಿಸಲಾರಿರಿ ಎಂದು ತಿಳಿದುಕೊಂಡು ಬಹಳ ಸಂತೋಷ ಪಡುತ್ತೇನೆ ಈವತ್ತಿನದಿವಸ ಚರ್ಚೆಯಲ್ಲಿ ಮಾನ್ಯ ಸದಸ್ಯರು ತಮ್ಮ ಭಾವನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿ ಸಲು ಕಾಲವಿದ್ದಿದ್ದರೆ ಅವರ ಅಭಿಪ್ರಾಯಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತುವೆಂದು ಭಾವಿಸುತ್ತೇನೆ. ಆದರೆ ಅನಿವಾರ್ಯ ನಮ್ಮ ಇಲಾಖೆಯಷ್ಟೇ ಅಲ್ಲ ಹಲವಾರು ಇಲಾಖೆಗಳ ಬೇಡಿಕೆಗಳನ್ನೂ ಈ ಸದನದಲ್ಲಿ ಇಡಬೇಕಾಗಿದೆ. ಈ ಒಂದು ಮಿತಿಯ ಚೌಕಟ್ಟಿನಲ್ಲಿ ಮಾನ್ಯ ಅಧ್ಯಕ್ಷರೇ ನನ್ನ ಶಕ್ತಿಮೀರಿ ಪ್ರಯತ್ನ ಪಡುತ್ತೇನೆಂದು ಹೇಳಿರತಕ್ಕ ಹಿನ್ನಲೆಯಲ್ಲಿ ಮಾನ್ಯ ಸದಸ್ಯರು ಒಪ್ಪಿಗೆ ಕೊಟ್ಟಿರತಕ್ಕಂಥ ಅಭಿಪ್ರಾಯಗಳ ಬಗ್ಗೆ, ಮಾಡಿರತಕ್ಕಂಥ ಭಾಷಣಗಳ ಬಗ್ಗೆ ಇವೆರಡನ್ನೂ ಗಮನದಲ್ಲಿಟ್ಟುಕೊಂಡು ನನ್ನ ಎರಡು ಅಭಿ ಪ್ರಾಯಗಳನ್ನು, ತಾವು ಕೊಟ್ಟಿರತಕ್ಕಂಥ ಅಭಿಪ್ರಾಯಗಳಿಗೆ ಉತ್ತರ ರೀತಿಯಲ್ಲಿ ಕೊಡುವುದಕ್ಕೆ ಸಾಧ್ಯ ವಾದಮಟ್ಟಿಗೆ ಪ್ರಯತ್ನ ಪಡುತ್ತೇನೆಂದು ಹೇಳುತ್ತೇನೆ.

ಕಳೆದ ಅಧಿವೇಶನದಲ್ಲಿ ನಮ್ಮ ಇಲಾಖೆಯ ಚರ್ಚೆಯನ್ನು ಒಪ್ಪತಕ್ಕಂಥ ಸಂದರ್ಭದಲ್ಲಿ, ನಾನು ಹಲವಾರು ಆಶ್ವಾಸನೆಗಳನ್ನು ಕೊಟ್ಟಿದೇನೆಂದು ಹೇಳುವ ಮಾತನ್ನು ತಾವು ಹೇಳಿದ್ದೀರಿ. ನಿಜವಾಗಿಯೂ ಹಲವಾರು ಅಂದರೆ ಎಷ್ಟೋ ಆಶ್ವಾಸನೆಗಳನ್ನು ಕೊಟ್ಟಿದ್ದೇನೇ ಎನ್ನುವ ಪಟ್ಟಿಯನ್ನು ಮರೆಯದೆ ಕೈ ಯಲ್ಲಿ ಇಟ್ಟುಕೊಂಡು ಹೇಳುತ್ತಿದ್ದೇನೆ. ಏತಕ್ಕೆಂದರೆ ನನ್ನ ಸ್ವಭಾವ ತಾವು ಮೆಚ್ಚಿದ್ದೀರಿ. ಹಾಗೂ

ಅನುಮಾನವನ್ನೂ ಪಟ್ಟಿದ್ದೀರಿ. ಹೀಗೆ ಅನುಮಾನವನ್ನು ಪಡುವುದಕ್ಕೆ ಕೆಲವು ಕಾರಣಗಳಿಂದ ಹಾಗೆ ವಡೆಯಿತು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತ ಇರತಕ್ಕಂಥ ವಿಷಯವನ್ನು ತಮ್ಮ ಮುಂದೆ ಸ್ಪಷ್ಟ ವಾಗಿ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಮಾನ್ಯ ಅಧ್ಯಕ್ಷರೆ ಕಳೆದಸಾರಿ ಅಧಿವೇಶನದಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆ, ಬಹುಶಃ ನಾನು ಹಿಂದೆ ಆ ಕಡೆ ಕೂತಾಗ ನನ್ನ ಸನ್‌ಮಿತ್ರರು ನೆನಪು ಮಾಡಿಕೊಟ್ಟಿದ್ದಾರೆ, ಅದನ್ನು ನಾನು ಮರೆತಿಲ್ಲ. ಅಲ್ಲಿದ್ದಾಗ ಆಕಡೆಯಲ್ಲಿ ಇದ್ದಾಗ ಈ ಕಡೆಯಲ್ಲಿ ನನ್ನ ಜವಾಬ್ದಾರಿ ಏನು ಇತ್ತು ಅದನ್ನು ನಾನು ಮರೆತಿಲ್ಲ. ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ ಜನತೆಯ ಆರ್ಥಿಕ ಪರಿಸ್ಥಿತಿ ಮತ್ತು ಪ್ರಗತಿ ಹಲವಾರು ಕಾರಣಗಳಿಂದ ಹಿಂದುಳಿದಿರುವುದಕ್ಕೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆನೆ. ಕರ್ನಾಟಕ ರಾಜ್ಯದಲ್ಲಿ ನಾವು ಇಲ್ಲಿರಬಹುದು ಸಚಿವನಾಗಿರಬಹುದು, ನಾಳೆ ಬೇರೆ ಒಂದು ಪಕ್ಷ ಇರಬಹುದು, ಮತ್ತೊಂದು ಮಗದೊಂದು ಪಕ್ಷ ಅಧಿಕಾರಕ್ಕೆ ಬರಬಹುದು. ಅದು ಪ್ರಜಾ ಪ್ರಭು ತ್ವದ ಲಕ್ಷಣ. ರಾಜ್ಯದ ಜನತೆ ಎಲ್ಲಿಯವರೆಗೆ ಬೆಂಬಲಕೊಟ್ಟು ಇರು ಎಂದು ಹೇಳುತ್ತಾರೆ ಅಲ್ಲಿಯವರೆಗೆ ಇರಬಹುದು. ಅದನ್ನು ಬಿಟ್ಟು ಯಾರನ್ನು ಯಾರು ತೆಗೆದುಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಒಂದು ಧರ್ಮ, ನೀತಿಯಾಗಿರುತ್ತದೆ.

ತಾವೆಲ್ಲರೂ ಯೋಚನೆ ಮಾಡಿದ್ದೀರಿ, ಕರ್ನಾಟಕ ರಾಜ್ಯದಲ್ಲಿ ಹಳ್ಳಿಗಳಿಗೆ ಸಂಪರ್ಕ ಸಾಧನೆ, ರಸ್ತೆ ಗಳು, ಸೇತುವೆಗಳು ಸ್ವಾತಂತ್ರ ಬಂದು ಇಷ್ಟು ವರ್ಷಗಳು ಕಳೆದರು ವ್ಯವಸ್ಥೆಯಾಗಲಿಲ್ಲವೆಂದು. ಈವತ್ತು ನಾವು ಹಳ್ಳಿಗಳಿಗೆ ಹೋಗುತ್ತೇವೆ, ಶಾಸಕರು ಹೋಗುತ್ತಾರೆ, ಹಾಗೆಯೇ ಅಧಿಕಾರಿಗಳು ಹೋಗುತ್ತಾರೆ. ಅಲ್ಲಿ ತಂಗಿದಾಗ ಎಲ್ಲ ಜನರು ನಮ್ಮ ಮೇಲೆ ಒಂದು ನಂಬಿಕೆಯನ್ನಿಟ್ಟು ಅನೇಕ ಅರ್ಜಿಗಳನ್ನು ಬರೆದುಕೊಟ್ಟಿದ್ದಾರೆ ಹೀಗೆ ಅವರು ಬರೆದುಕೊಟ್ಟಂಥ ಅರ್ಜಿಗಳಲ್ಲಿ ಅವರು ವ್ಯಕ್ತ ಪಡಿಸಿರತಕ್ಕಂಥ ಭಾವನೆಗಳು ಏನು ಇರುತ್ತವೆ ಅವುಗಳನ್ನು ಸಮರ್ಪಕವಾಗಿ ಉತ್ತರವನ್ನು ನಾವು ಯಾವಾಗ ಕೊಡಬೇಕು ಎನ್ನುವುದು ತಲೆಯಲ್ಲಿ ಕಾಡುತ್ತಿರುತ್ತದೆ. ಅವರು ಒಂದು ರಸ್ತೆಕೇಳಿದರೆ, ನಾವು ರಸ್ತೆಯನ್ನು ರಚನೆ ಮಾಡಿಕೊಡಬೇಕು ಅದು ಮೂಲಭೂತವಾಗಿ ಇರುವ ಪ್ರಶ್ನೆ. ಅದಕ್ಕಾಗಿ ಕೊಡುತ್ತೇವೆ, ಮಾಡುತ್ತೇವೆ ಎನ್ನುವ ಪ್ರಶ್ನೆಯನ್ನು ಹೇಳುವ ಬದಲು ನಿರ್ದಿಷ್ಟವಾಗಿ ಒಂದು ಕಾಲದ ಮಿತಿಯನ್ನು, ಕಾರ್ಯಕ್ರಮವನ್ನು ಏತಕ್ಕೆ ಹಾಕಿಕೊಳ್ಳಬಾರದು ಎನ್ನುವ ಅಭಿಪ್ರಾಯ ಸರ್ವಸಾಮಾನ್ಯ ವಾಗಿ ಒಪ್ಪಿಕೊಳ್ಳತಕ್ಕಂಥ ವಿಷಯವಾಗಿರುತ್ತದೆ. ಅದಕ್ಕಾಗಿ ಒಂದು ಯೋಜನೆಯನ್ನು ತಯಾರು ಮಾಡಬೇಕು ಅಂದಾಜು ತಯಾರು ಮಾಡಬೇಕು ಕರ್ನಾಟಕ ರಾಜ್ಯದಲ್ಲಿ ಮೂಲೆ ಮೂಲೆಯಲ್ಲಿರ ತಕ್ಕಂಥ ಹಳ್ಳಿಹಳ್ಳಿಗೂ ರಸ್ತೆ, ಸೇತುವೇ, ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಂತೆ ಮನೆಗಳು, ಮೈದಾನ ಪ್ರದೇಶದಲ್ಲಿ ನೀರಾವರಿ ಬಾವಿಗಳು ಇವೆಲ್ಲ ಕನಿಷ್ಟ ಸೌಲಭ್ಯಗಳನ್ನಾದರೂ ಒದಗಿಸಿಕೊಡ ಬೇಕೆಂಬುದು ನಮ್ಮ ಇಚ್ಛೆಯಾಗಿರುತ್ತದೆ. ಈ ದೃಷ್ಟಿಯಿಂದ ನಾವು ಯೋಚನೆ ಮಾಡಿ ಇಷ್ಟೇ ದಿವಸ ಗಳಲ್ಲಿ ಒಂದು ಊರಿಗೆ ಸಂಪರ್ಕಸಾಧನೆಯನ್ನು ಕೊಡುತ್ತೇವೆ ಎನ್ನುವ ಸಾಧನೆಯನ್ನು ಮಾಡಬೇಕಾಗಿದೆ. ಒಂದು ಅರ್ಜಿ ಬಂದರೆ ತೀವ್ರಗತಿಯಲ್ಲಿ ಆಗಬೇಕಾದ ಕೆಲಸ, ನಿಧಾನವಾಗಿ ಆಗಬೇಕಾದ ಕೆಲಸ ಯಾವುದು ಎನ್ನುವುದನ್ನು ನಾವು ಯೋಚನೆ ಮಾಡಿ ಮಾಡಬೇಕಾಗಿರುತ್ತದೆ. ಕೆಲವು ಸಾರಿ ಅನೇಕ ಮಾನ್ಯ ಸದಸ್ಯರು ತಮ್ಮ ಶಂಕೆಯನ್ನು ವ್ಯಕ್ತಪಡಿಸಿರುತ್ತಾರೆ. ಅವರ ಶಂಕೆಯಲ್ಲಿ ನಾನು ಕೂಡ ಭಾಗಿಯಾಗು ತ್ತೇನೆ.

ಇದಕ್ಕೆ ಕಾರಣವೆಂದರೆ ಇದು ೯೪೯ ಕೋಟಿ ರೂಪಾಯಿಗಳ ಬೃಹತ್ ಯೋಜನೆಯಾಗಿರುವುದು. ಇಷ್ಟು ಹಣವನ್ನು ಎಲ್ಲಿಂದ ತರಬೇಕೆನ್ನುವ ಪ್ರಶ್ನೆ ಮಾನ್ಯ ಸದಸ್ಯರ ಶಂಕೆಯ ಮೂಲವನ್ನು ಕೆದಕುತ್ತದೆ. ಶಂಕೆ ಸಹಜವಾಗಿ ಬರುವುದಕ್ಕೆ ಕಾರಣವೂ ಇದೆ ಎಂದು ನಾನು ತಿಳಿಯುತ್ತೇನೆ. ಈ ಯೋಜನೆಯನ್ನು ತಯಾರು ಮಾಡಿರುವುದರ ಬಗ್ಗೆ ಮಾನ್ಯ ಸದಸ್ಯರು ಇಲಾಖೆಯನ್ನು ಮನಸಾರೆ ಮೆಚ್ಚಿದ್ದಾರೆ, ಅಭಿ ನಂದಿಸಿದ್ದಾರೆ, ಅದಕ್ಕಾಗಿ ನಾನು ಅವರನ್ನು ಪ್ರತಿವಂದಿಸುತ್ತೇನೆ. ನಮ್ಮ ನಿಮ್ಮ ಅಭಿಪ್ರಾಯ ಒಂದೇ. ನಮ್ಮ ಕರ್ನಾಟಕ ರಾಜ್ಯದಲ್ಲಿ ಉದಾಹರಣೆಗೆ ಸಾವಿರ ಹಳ್ಳಿಗಳಿವೆ ಎಂದು ಇಟ್ಟುಕೊಂಡರೆ, ಆ ಹಳ್ಳಿಗಳಲ್ಲಿ ರುವ ಬೇಡಿಕೆ ಏನು, ಮುಖ್ಯವಾಗಿ ಮಾಡ ಬೇಕಾದ ಕೆಲಸಗಳೇನು, ತ್ವರಿತವಾಗಿ ಆಗಬೇಕಾದ ಕೆಲಸ ಗಳಾವುವು, ಎಂದೆಲ್ಲ ವಿವರಗಳೂ ಇದರಲ್ಲಿವೆ. ಆ ಕಾರ್ಯಗಳನ್ನು ಈ ವರ್ಷ ಜಾರಿಗೆ ಕೊಡುಬಹುದು, ಮುಂದಿನ ವರ್ಷ ಕೊಡಬಹುದು ಅಥವಾ ಹದಿನೈದು ವರ್ಷದಲ್ಲಿ ಕೊಡಬಹುದು ಅಥವಾ ಇಪ್ಪತ್ತು ವರ್ಷದಲ್ಲಿ ಜಾರಿಗೆ ಕೊಡಬಹುದು. ನಾಲ್ಕು ಪಾಚ ವಾರ್ಷಿಕ ಯೋಜನಾ ಅವಧಿಯಲ್ಲಿ ಮುಗಿಸ

ಬೇಕಾದ ಕಾರ್ಯಕ್ರಮವಿದು ಎಂಬ ಸೂಕ್ಷ್ಮ ಮಾತನ್ನು ಅದಕ್ಕಾಗಿಯೇ ಪುಸ್ತಕದಲ್ಲಿ ಹೇಳಲಾಗಿದೆ. ೯೪೯ ಕೋಟಿ ರೂಪಾಯಿಗಳನ್ನು ಯಾವ ರೀತಿ ತರಬೇಕಾಗಿದೆ ಎನ್ನುವುದಕ್ಕಾಗಿಯೇ ೨೦ ವರ್ಷಗಳು ಅವಧಿ ನಿಗದಿ ಮಾಡಿರುವುದಕ್ಕೆ ಕಾರಣವಾಗಿದೆ. ಈ ಯೋಜನೆಗೆ ಬೇಕಾದ ಹಣವನ್ನು ಹುಡುಕಿ ತರುವುದು ಹೇಗೆ ? ವಿಶ್ವಬ್ಯಾಂಕ್ ಮತ್ತಿತರ ಹಣ ಸಹಾಯ ನೀಡುವ ಮೂಲಗಳಿಂದ ಸಹಾಯ ತರಲು ಪ್ರಯತ್ನ ಮಾಡಲಾಗುವುದೆಂದು ಪುಸ್ತಕದಲ್ಲಿ ಹೇಳಲಾಗಿದೆ. ಎಷ್ಟು ಹಣ ಸಿಕ್ಕುತ್ತದೆ, ಯಾವ ರೀತಿ ಸಿಕ್ಕುತ್ತದೆ ಮತ್ತು ಅದನ್ನು ಮರುಪಾವತಿ ಮಾಡುವುದು ಹೇಗೆ ಎನ್ನುವುದನ್ನೆಲ್ಲ ನಾವು ವಿಚಾರ ಮಾಡಬೇಕಾಗುತ್ತದೆ. ಈ ಯೋಜನೆಗೆ ಸುಮಾರು ಐನೂರು ಕೋಟಿ ರೂಪಾಯಿಗಳಷ್ಟಾಗಬಹುದುದೆಂದು ನಾನು ಕಳೆದ ಅಧಿವೇಶನದಲ್ಲಿ ಹೇಳಿದ್ದೆ. ಆದರೆ, ಈಗ ನನ್ನ ವಿಚಾರಕ್ಕೂ ಮೀರಿ ಜಾಸ್ತಿಯಾಗಿದೆ. ಈ ದೃಷ್ಟಿಯಿಂದ ಹಣವನ್ನು ಪಡೆಯುವ ಸಲುವಾಗಿ ನಾವು ಮನಸ್ಸಿಟ್ಟು ಪ್ರಾರಂಭಮಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ನೆನಸಿಕೊಳ್ಳಬೇಕಾಗಿದೆ. ಮಾಸ್ಟರ್‌ಪ್ಲಾನ್ ಅಭಿಪ್ರಾಯವನ್ನು ನಾನವರ ಮುಂದೆ ಇಟ್ಟಾಗ, ''ಮೊದಲು ಹಣವನ್ನು ತರುವುದು ಹೇಗೆ'' ಎಂದು ಕೇಳಿದರು. ಆಗ ನಾನು, 'ನಾನು ಮತ್ತು ನನ್ನ ಇಲಾಖೆಯ ಅಧಿಕಾರಿಗಳು ಈ ವಿಷಯದಲ್ಲಿ ಪ್ರಯತ್ನಪಟ್ಟರೆ ಸಾಧ್ಯವಾಗುತ್ತದೆ'' ಎನ್ನುವ ನಂಬಿಕೆಯನ್ನು ವ್ಯಕ್ತಪಡಿಸಿದೆನು,

ಅಧ್ಯಕ್ಷರು.—ಇಂತಹ ಯೋಜನೆಗಳಿಗೆ ಹಣ ಸಹಾಯ ನೀಡುವ ಮೂಲಗಳಿಂದ ಹಣವನ್ನು ಹೇಗೆ ಸಂಗ್ರಹಿಸುತ್ತಾರೆನ್ನುವ ಬಗ್ಗೆ ಜಪಾನಿನಲ್ಲಿ ನೋಡಬೇಕು.

ಶ್ರೀ ಎಸ್. ಬಂಗಾರಪ್ಪ.—ಆಗ ಮಾನ್ಯ ಮುಖ್ಯ ಮಂತ್ರಿಗಳು ''ಹಣವನ್ನು ಹುಡುಕುವ ಪ್ರಯತ್ನ ಮಾಡೋಣ, ಮೊದಲು ಯೋಜನೆ ತಯಾರು ಮಾಡಿ'' ಎಂದು ಹೇಳಿದರು. ಅದಕ್ಕಾಗಿ ಈ ಯೋಜನೆಗೆ ನಾವು ಕೈಹಾಕಿದ್ದೇವೆ. ಈ ಯೋಜನೆಯನ್ನು ಸಿದ್ಧಮಾಡಿದ ಅಧಿಕಾರಿಗಳನ್ನು ನಾನು ಅಭಿನಂದಿಸಬೇಕಾಗಿದೆ. ಈ ಯೋಜನೆ ಅತಿ ಕಡಿಮೆ ಕಾಲದಲ್ಲಿ ತಯಾರಾಗಿದ್ದರೂ ಎಚ್ಚರ ತಪ್ಪಿ ಕೆಲಸ ಮಾಡಿದ್ದಲ್ಲ. ಇದರಲ್ಲಿನ ಕೆಲವು ಅಂಕಿ-ಅಂಶಗಳು ಆಧಾರರಹಿತವೆಂದು ಮಾನ್ಯ ಮಾದೇಗೌಡರು ಹೇಳಿದರು. ಈ ಯೋಜನೆಯನ್ನು, ಕೂಲಂಕಷವಾಗಿ ವಿಮರ್ಶಿಸಿ, ಅಭ್ಯಾಸ ಮಾಡಿ ತಯಾರಿಸಲಾಗಿದೆ. ಒಂದು ವೇಳೆ ತಪ್ಪುಗಳಿದ್ದರೆ ತಪ್ಪುಗಳಿವೆ ಎಂದು ನೇರವಾಗಿ ಹೇಳೋಣ. ಅಲ್ಲದೆ, ಮಂಡ್ಯ ಜಿಲ್ಲೆಯ ಮಾನ್ಯ ಸದಸ್ಯರ ತಾಲ್ಲೂಕಿಗೆ ಸಂಬಂಧಪಟ್ಟಂತೆ ತಪ್ಪುಗಳಾಗಿದ್ದರೆ ಅದನ್ನು ಈಗಲೂ ಸರಿಪಡಿಸಬಹುದು. ಆದ್ದರಿಂದಲೇ ಈ ಯೋಜನೆಯನ್ನು ಒಟ್ಟಿಗೆ ಮುದ್ರಿಸುವುದರ ಬದಲು ಪ್ರತಿ ತಾಲ್ಲೂಕು ಪ್ರಕಾರ ಮುದ್ರಿಸಿರುವುದು. ನೋಡಿ, (ಒಂದು ಪುಸ್ತಕವನ್ನು ತೋರಿಸುತ್ತಾ) ಈ ಪುಸ್ತಕ ಒಂದು ತಾಲ್ಲೂಕಿಗೆ ಸಂಬಂಧಪಟ್ಟಿದ್ದು; ಇಡೀ ರಾಜ್ಯಕ್ಕಲ್ಲ. ಒಂದು ಸಂಪೂರ್ಣ ಚಿತ್ರವನ್ನು ಕೊಡುವ ಮಾಸ್ಟರ್ ಪ್ಲಾನ್‌ನ್ನು ಅಚ್ಚು ಹಾಕಿಸಿ ಸದಸ್ಯರೆಲ್ಲರಿಗೂ ಕೊಡಲಾಗಿದೆ. ನಮ್ಮ ಇಲಾಖೆಯ ಬೇಡಿಕೆ ಚರ್ಚೆಗೆ ಬರುವ ಮುನ್ನವೇ ಈ ಪುಸ್ತಕಗಳನ್ನು ತಲುಪಿಸಬೇಕೆಂದು ಎರಡು-ಮೂರು ದಿವಸಗಳ ಮುಂಚೆಯೇ ಹಂಚಿಕೆ ಪ್ರಯತ್ನ ಮಾಡಲಾಯಿತು. ಈ ಮಾಸ್ಟರ್ ಪ್ಲಾನ್‌ನ ಪುಸ್ತಕಗಳನ್ನು ಕ್ಷೇತ್ರವಾರು ಅಚ್ಚು ಹಾಕಿಸಿಲ್ಲ, ತಾಲ್ಲೂಕುವಾರು ಅಚ್ಚು ಹಾಕಿಸಲಾಗಿದೆ. ಒಂದು ತಾಲ್ಲೂಕಿನಲ್ಲಿ ಎರಡು ಕ್ಷೇತ್ರಗಳಿದ್ದರೆ, ಎರಡು-ಮೂರು ತಾಲ್ಲೂಕುಗಳು ಸೇರಿ ಒಂದು ಕ್ಷೇತ್ರವಾಗಿರುವುದೂ ಉಂಟು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಉಡುಪಿ ತಾಲ್ಲೂಕು ಮೂರೂವರೆ ಕ್ಷೇತ್ರವಾಗಿದೆ :

ಶ್ರೀ ಎಸ್. ಬಂಗಾರಪ್ಪ.—ಆದುದರಿಂದ, ಇನ್ನು ಯಾವ ಸದಸ್ಯರಿಗೆ ತಲುಪಿಲ್ಲ, ಅವರಿಗೆ ಕೆಲವೇ ದಿವಸಗಳಲ್ಲಿ ಹೊಸದಾಗಿ ಅಚ್ಚುಹಾಕಿಸಿ ಪುಸ್ತಕಗಳನ್ನು ಹಂಚಲಾಗುವುದು. ಈ ಯೋಜನೆಯು ವೈಜ್ಞಾನಿಕವಾಗಿ ತಯಾರಾಗಿದೆ. ಮಾನ್ಯ ಎಂ. ಸಿ. ಬಸಪ್ಪನವರು ಇದನ್ನು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಒಂದು ಗ್ರಾಮಕ್ಕೆ ಸಂಬಂಧಪಟ್ಟಂತೆ ಒಂದು ಸೇತುವೆ ಅಥವಾ ಒಂದು ರಸ್ತೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ತಯಾರಿಸಿಲ್ಲ. ಒಂದು ಊರು ಎಂದರೆ, ಅದರ ಸಂಪೂರ್ಣ ಚಿತ್ರವನ್ನು ಕೊಡುವುದಕ್ಕೆ ಇಲ್ಲಿ ಪ್ರಯತ್ನ ಮಾಡಲಾಗಿದೆ. ಪೋಸ್ಟ್ ಆಫೀಸ್, ಶಾಲೆ, ಆಸ್ಪತ್ರೆ, ಜನಸಂಖ್ಯೆ, ಗ್ರಾಮದಲ್ಲಿ ಹಾದು ಹೋಗುವ ರಾಜ್ಯದ ಹೆದ್ದಾರಿ ಅಥವಾ ರಾಷ್ಟ್ರೀಯ ಹೆದ್ದಾರಿ ಅಥವಾ ಮೇಜರ್ ಡಿಸ್ಟ್ರಿಕ್ಟ್ ಹೈವೆ ಅಥವಾ ತಾಲ್ಲೂಕು ಬೋರ್ಡ್ ರಸ್ತೆ ಅಥವಾ ಗ್ರಾಮ ಪಂಚಾಯತಿ ರಸ್ತೆ–ಎನ್ನುವ ವಿವರಗಳನ್ನೆಲ್ಲ ಇದರಲ್ಲಿ ಕೊಡಲಾಗಿದೆ. ಆದುದರಿಂದ, ಇದು ಒಂದು ತಾಲ್ಲೂಕಿನ ಅಥವಾ ಒಂದು ಕ್ಷೇತ್ರದ ಸಂಪೂರ್ಣ ಚಿತ್ರ ಕೊಡುವ ಕೈದೀವಿಗೆ ಎಂದು ನಾನು ತಿಳಿದಿದ್ದೇನೆ, ಇದನ್ನೆಲ್ಲ

ಬಹಳ ಕಷ್ಟಪಟ್ಟು ತಯಾರು ಮಾಡಲಾಗಿದೆ ಈಗ ಅಷ್ಟೇ ಕಷ್ಟಪಟ್ಟು ಹಣ ಹುಡುಕಬೇಕಾಗಿದೆ. ರಸ್ತೆಗಳ ಬಗ್ಗೆ ಯೋಜನಾ ಆಯೋಗದವರು ಒಪ್ಪಲಿಲ್ಲ; ಇದು ಅನುತ್ಪಾದಕವೆಂದರು. ಇದು ಅನುತ್ಪಾದಕವಾದುದರಿಂದ ಆದ್ಯತೆ ಪಟ್ಟಿಯಲ್ಲಿ ಇದನ್ನು ಇಡುವುದಕ್ಕಾಗುವುದಿಲ್ಲವೆಂದು ಅವರು ಹೇಳಿದರು. ಇದನ್ನೇ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಇಂತಹದಕ್ಕೆ ಹೆಚ್ಚಿಗೆ ಹಣ ನಿಗದಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಅರ್ಥ ಬರುತ್ತದೆ. ಆದರೂ ನಾನು ಯೋಜನಾ ಆಯೋಗದವರೊಡನೆ ಮಾತನಾಡುವಾಗ, ಕೇಂದ್ರ ಸರ್ಕಾರದ ಶ್ರೀ ಚಾಂದರಾಂ ಅವರೊಡನೆ ಮಾತನಾಡುವಾಗ ಮತ್ತು ಸಾರಿಗೆ ಸಚಿವರ ಸಮ್ಮೇಳನ ನಡೆದಾಗ ಕೆಲವು ವೈಜ್ಞಾನಿಕ ಕಾರಣಗಳನ್ನಿಟ್ಟು ನಾನು ಅಭಿಪ್ರಾಯವನ್ನು ಮಂಡನೆ ಮಾಡಿದ್ದೇನೆ. ತಮಿಳುನಾಡಿನಲ್ಲಿ ಮಂಡಪಂನಿಂದ ರಾಮನಾಥಪುರಕ್ಕೆ ಒಂದು ರಸ್ತೆ ಇದೆ. ಇದರ ಬಗ್ಗೆ ಸಮೀಕ್ಷೆ ನಡೆಸಿ ಅಂಕಿ-ಅಂಶಗಳನ್ನು ಕೊಡಲಾಗಿದೆ. ಇಂತಹ ರಸ್ತೆಗಳನ್ನು ಅಭಿವೃದ್ಧಿಪಡಿಸದಿದ್ದರೆ ಉತ್ಪತ್ತಿ ಕಡಮೆಯಾಗುತ್ತದೆಂದು ವೈಜ್ಞಾನಿಕವಾಗಿ ಅದರಲ್ಲಿ ಸಮರ್ಥಿಸಲಾಗಿದೆ. ಈ ಆಧಾರವನ್ನಿಟ್ಟುಕೊಂಡು ನಾನು ವಾದ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈವೊತ್ತು ಘಟಪ್ರಭಾ, ಮಲಪ್ರಭಾ, ಅಪ್ಪರ್‌ಕೃಷ್ಣ ಅಥವಾ ಕಾವೇರಿ ಜಲಾನಯನದ ಯಾವ ಪ್ರದೇಶವನ್ನೇ ತೆಗೆದುಕೊಳ್ಳಿ, ಇಲ್ಲಿ ಯಾವ ಯೋಜನೆ ಇದೆ ಈ ಪ್ರದೇಶದಲ್ಲಿ ಒಂದು ಎಕರೆ ೩೫ ಪಲ್ಲ ಭತ್ತವನ್ನು ಆ ರೈತರು ಬೆಳೆಯುತ್ತಾರೆ. ಆದರೆ ಈ ರೀತಿ ಬೆಳೆದಂಥಾ ಭತ್ತವನ್ನು ಮಾರ್ಕೆಟಿಗೆ ತಲುಪಿಸಬೇಕಾದರೆ ಅವರಿಗೆ ಸರಿಯಾದ ರಸ್ತೆಗಳು ಇಲ್ಲದೇ ಇರುವುದರಿಂದ ಅದನ್ನು ಮಾರ್ಕೆಟ್ಟಿಗೆ ತರಬೇಕಾದರೆ ಸಾರಿಗೆ ಸೌಕರ್ಯಗಳ ಸೌಲಭ್ಯಗಳು ಕಡಿಮೆ. ಆದುದರಿಂದ ಅವರಿಗೆ ಆ ಭತ್ತಕ್ಕೆ ಸರಿಯಾದ ರೇಟ್ ಬರುವುದಿಲ್ಲಾ. ಇದನ್ನು ಹೇಳಿದರೆ ಯಾರೂ ಒಪ್ಪುವುದಿಲ್ಲಾ. ಮತ್ತು ಈ ಅಗ್ರಿಕಲ್‌ಚರಲ್ ಆಕ್ಟಿವಿಟೀಸ್ ಏನು ಇದೆ ಇದು ತನ್ನಷ್ಟಕ್ಕೆ ತಾನೇ ಬರಬೇಕು. ಅವರಿಗೆ ಬೇಕಾದ ಗೊಬ್ಬರಗಳು ಸಮಯಕ್ಕೆ ಸರಿಯಾಗಿ ಕಡಿಮೆ ರೇಟಿನಲ್ಲಿ ಸಿಗುವ ಹಾಗೆ ಮಾಡಬೇಕು. ಅಲ್ಲದೆ ಇನ್ನೂ ಇತ್ಯಾದಿ ಸೌಕರ್ಯಗಳು ಅವರಿಗೆ ದೊರಕುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಅವರಿಗೆ ಈ ಸೌಕರ್ಯಗಳೆಲ್ಲಾ ಸಮಯಕ್ಕೆ ಸರಿಯಾಗಿ ಏತಕ್ಕೆ ಸಿಗುವುದಿಲ್ಲ ಎಂದರೆ ಅಲ್ಲಿ ಸರಿಯಾದ ರೋಡ್ ಇಲ್ಲದೇ ಇರುವುದರಿಂದ ಅವರಿಗೆ ಸರಿಯಾದ ರಸ್ತೆ ಮಾಡಿಸಿಕೊಟ್ಟಿದ್ದರೆ ತತ್‌ಕ್ಷಣವಾಗಿ ಯಾವ ಸಾಮಾನುಗಳು ಬೇಕೋ ಅವೂ ಲಾರಿಗಳಲ್ಲಿ ಇನ್ನು ಇತರ ವಾಹನಗಳಲ್ಲಿ ತೆಗೆದುಕೊಂಡು ಹೋಗಿ ಸರಬರಾಜು ಮಾಡುತ್ತಾರೆ, ದರವು ಕೂಡ ಕಡಿಮೆ ಬೀಳುತ್ತದೆ. ರಸ್ತೆ ಸೌಕರ್ಯ ಅಲ್ಲಿ ಇಲ್ಲದೇ ಇರುವುದರಿಂದ ಆ ಸಾಮಾನುಗಳು ಸರಿಯಾದ ಟೈಂಗೆ ಅವರಿಗೆ ಹೋಗಿ ಮುಟ್ಟುವುದಿಲ್ಲ, ಆದರಿಂದ ದರವೂ ಕೂಡ ಸ್ವಲ್ಪ ಮಟ್ಟಿಗೆ ಜಾಸ್ತಿಯಾಗುತ್ತದೆ ತಮಗೆ ಹೇಳಬೇಕಾದರೆ ಅಲ್ಲಿಯ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಎತ್ತಿನ ಗಾಡಿಗಳು ಹೋಗಬೇಕಾದರೆ ಕಷ್ಟ, ಮಳೆಗಾಲದಲ್ಲಿ ಒಂದೊಂದು ಸಲ ಜನಗಳು ನಡೆದುಕೊಂಡು ಹೋಗಬೇಕಾದರೂ ಕಷ್ಟ. ಹೀಗಿರಬೇಕಾದರೆ ಆ ರೈತರಿಗೆ ಯಾವರೀತಿಯಾದ ಹೆಚ್ಚಿನ ಬೆಲೆ ಬರುತ್ತದೆ ನೋಡಿ. ಅಲ್ಲಿ ಯಾವಾಗ ಸಾರಿಗೆ ಸೌಕರ್ಯಗಳು ಚೆನ್ನಾಗಿ ಇರುವುದಿಲ್ಲವೋ ಅಂಥಾಕಡೆ ಆತನಿಗೆ ತಾನು ತೆಗೆದುಕೊಳ್ಳತಕ್ಕಂಥಾ ಗೊಬ್ಬರ ಇತ್ಯಾದಿ ಸಾಮಾನುಗಳಿಗೆ ದರ ಹೆಚ್ಚು ಬೀಳುತ್ತದೆ, ಆದರೆ ಅವನು ಬೆಳೆದಂಥಾ ಬೆಳೆಗೆ ರೇಟ್ ಮಾತ್ರ ಕಡಿಮೆ ಇರುತ್ತದೆ, ಹೆಚ್ಚು ಬೆಲೆ ಬರುವುದಿಲ್ಲ. ಅವನಿಗೆ ತಾನು ಕೊಂಡುಕೊಳ್ಳತಕ್ಕಂಥಾ ಸಾಮಾನುಗಳಿಗೆ ಯಾವರೇಟ್ ಕೂಡ ಕಡಿಮೆಯಾಗುವುದಿಲ್ಲ ಎಂದು ವೈಜ್ಞಾನಿಕರೇ ಹೇಳಿದ್ದಾರೆ. ಆದುದರಿಂದ ಈ ಬಗ್ಗೆ ನಮ್ಮ ಯೋಜನೆಯನ್ನು ಯೋಜನಾ ಆಯೋಗಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ತಿಳಿಸಿದ್ದೇವೆ. ನಾವು ಪ್ಲಾನಿಂಗ್ ಕಮೀಷನ್ ಮೇಲೆ ಫೋರ್ಸ್ ಎಕ್ಸರ್ಟ್ ಮಾಡಿದ್ದೇವೆ. ನೀವು ಯಾವುದೇ ರೀತಿಯಲ್ಲಾದರೂ ಕೂಡ ನಮಗೆ ಹೆಚ್ಚು ಕೊಡಬೇಕು ಎಂದು ಹೇಳಿದ್ದೇವೆ. ಈ ಬಗ್ಗೆ allotment of funds for providing these fecilities 8% ಇತ್ತು. ಇದರಿಂದಹೆಚ್ಚು ರೋಡ್ಸ್ ಆಗುತ್ತಿರಲಿಲ್ಲಾ. ರಾಜ್ಯದ ಎಲ್ಲಾ ಕಡೆಯಲ್ಲೂ ಕೂಡ ಈ ಒಂದು ಕೆಲಸ ಕುಸಿದು ಬಿದ್ದುದರಿಂದ ಮೊದಲು ರಾಜ್ಯಕ್ಕೆ ಇವರು ೨ ಪರ್ಸೆಂಟ್ ಸಂಥಿಂಗ್ ಏನು ಇತ್ತು ಅದು ಈ ವರ್ಷ ೩ ಪರ್ಸೆಂಟ್ ಸಂಥಿಂಗ್ ಆಗಿದೆ. ಈ ಸಾರಿ ಸ್ವಲ್ಪ ಜಾಸ್ತಿ ಹಣವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ ಮುಂದಿನ ಬಡ್ಜೆಟ್ ತಯಾರಾಗುವ ಹೊತ್ತಿಗೆ ಅಂದರೆ ೧೯೮೦-೮೧ ರ ಬಡ್ಜೆಟ್ ತಯಾರು ಮಾಡುವ ಹೊತ್ತಿಗೆ ನಮ್ಮ ರಾಜ್ಯದ ಯೋಜನೆಗೆ ಹಣವನ್ನು ೫ ಪರ್ಸೆಂಟ್ ಮಾಡಬೇಕು ಅಂತ ಹೇಳಿದ್ದೇವೆ ಮತ್ತು ನಮಗೆ ಅವರಿಂದ ಹಣ ಜಾಸ್ತಿ ಸಿಕ್ಕದಂತೆಲಾ ಇನ್ನೂ ಅನೇಕ ಯೋಜನೆಗಳನ್ನು ಮಾಡುವುದಕ್ಕೆ ಇಟ್ಟಿದ್ದೇವೆ, ಎಂದು ತಿಳಿಸಿದ್ದೇವೆ. ಇದಕ್ಕೆ ಮಾನ

ಮುಖ್ಯಮಂತ್ರಿಗಳೂ ಕೂಡ ಬೆಂಬಲ ಕೊಟ್ಟಿದ್ದಾರೆ. ಈ ಒಂದು ಹಿನ್ನೆಲೆಯಲ್ಲಿ ಮಾಡಬೇಕಾದಂಥಾ ವಿಶೇಷವಾದ ಯೋಜನೆಗಳು ಮತ್ತು ಹಣವನ್ನು ದೊರಕತಕ್ಕಂಥಾ ಪ್ರಯತ್ನಗಳನ್ನು ಕಷ್ಟಪಟ್ಟು ಮಾಡುತ್ತಿದ್ದೇವೆ ಆ ಬಗ್ಗೆ ನಾವು ನಂಬಿಕೆಯನ್ನು ಸಹ ಇಟ್ಟುಕೊಂಡಿದ್ದೇವೆ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಾವು ಎಷ್ಟೇ ಪ್ರಯತ್ನಪಟ್ಟರೂ ಕೂಡ ಎಲ್ಲವನ್ನು ಒಂದೇಸಾರಿ ಮಾಡುವುದಕ್ಕಾಗುವುದಿಲ್ಲಾ. ಆದುದರಿಂದ ಮೊದಲು ಯಾವುದು ಅರ್ಜೆನ್ಸಿ ಇದೆಯೋ ಅದನ್ನು ಮೊದಲು ೫ ವರ್ಷದೊಳಗೆ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಹೀಗೆ ಸ್ವಲ್ಪ ಸ್ವಲ್ಪ ಕೆಲಸಗಳನ್ನು ತೆಗೆದುಕೊಂಡು ೨೦ ವರ್ಷದ ಹೊತ್ತಿಗೆ ಎಲ್ಲಾ ಕೆಲಸಗಳನ್ನು ಆದಷ್ಟು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಲ್ಲಾ ಯೋಜನೆಗಳನ್ನೂ ಕೂಡ ಒಂದೇ ಸಾರಿ ತೆಗೆದುಕೊಳ್ಳಬೇಕಾದರೆ ಒಟ್ಟು ೯೫೦ ೧೦೦೦ ಕೋಟಿ ರೂಪಾಯಿಗಳಷ್ಟು ಹಣಬೇಕಾಗುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಯಾವಕೆಲಸ ಗಳನ್ನು ಜಾಗ್ರತೆ ತೆಗೆದುಕೊಳ್ಳಬೇಕೋ ಅದನ್ನು ಜಾಗ್ರತೆ ತೆಗೆದುಕೊಂಡು ಯಾವ ಕೆಲಸಗಳನ್ನು ನಿದಾನ ವಾಗಿ ತೆಗೆದುಕೊಳ್ಳಬೇಕೋ ಅದನ್ನು ನಿದಾನವಾಗಿ ತೆಗೆದುಕೊಂಡು ಆ ಕೆಲಸಗಳನ್ನೆಲ್ಲಾ ಪೂರೈಸಬೇಕೆಂದು ಮಾಡಿದ್ದೇವೆ. ಈ ಬಗ್ಗೆ ಒಂದು ಪ್ರಾವಿಷನಲ್ ಲಿಸ್ಟ ಮಾಡಿದ್ದೇವೆ. ಈ ಒಂದು ಯೋಜನೆಗೆ ತಾವೆಲ್ಲಾ ಸಂಪೂರ್ಣ ಸಹಕಾರ ಕೊಟ್ಟಿದ್ದಕ್ಕಾಗಿ ಮತ್ತು ಈ ಇಲಾಖೆಯೂ ಸಹ ನನಗೆ ಸಹಕಾರ ಕೊಟ್ಟಿದ್ದಕ್ಕಾಗಿ ನಾನು ಅಭಿನಂಧಿಸುತ್ತೇನೆ. ಈ ಬಗ್ಗೆ ತಮ್ಮ ಅಭಿಪ್ರಾಯ ಏನು ಕೊಟ್ಟಿದ್ದೀರೋ ಅದನ್ನು ನನ್ನ ಮನಸಾರೆ ಸ್ವೀಕಾರ ಮಾಡುತ್ತೇನೆ. ಮತ್ತು ಇದಕ್ಕೆ ಬೇಕಾಗುವ ಹಣವನ್ನು ಹೆಚ್ಚಾಗಿ ಒದಗಿಸುವುದಕ್ಕೆ ತಾವೆಲ್ಲಾ ಏನು ಸಲಹೆಯನ್ನು ಕೊಟ್ಟಿದ್ದಿರೋ ಅದನ್ನು ಸ್ವೀಕಾರ ಮಾಡಿ ನನ್ನ ಮಾತನ್ನು ಮುಂದು ವರೆಸುತ್ತೇನೆ.

ಮಾನ್ಯ ಅಧ್ಯಕ್ಷರೇ, ನಾನು ಕಳೆದ ಸಾರಿ ತಮ್ಮ ಹತ್ತಿರ ಏನು ಒಂದು ಮಾತನ್ನು ಹೇಳಿದ್ದೇನೆ; ಆ ಬಗ್ಗೆ ಮಾನ್ಯ ಸದಸ್ಯರನೇಕರು ತಮ್ಮ ಆಂತಕವನ್ನು ಮತ್ತು ತಮ್ಮ ಅನುಮಾನವನ್ನು ಸಹ ವ್ಯಕ್ತ ಪಡಿಸಿದ್ದಾರೆ. ಆ ಬಗ್ಗೆ ಸುಮಾರು ೪ ಕೋಟಿ ರೂಪಾಯಿ ಯೋಜನೆಗಳನ್ನು ತಯಾರು ಮಾಡಿದ್ದೇನೆ. ಪ್ರತಿ ತಾಲ್ಲೂಕಿಗೂ ಕನಿಷ್ಟಪಕ್ಷ ೫ ಕಿಲೋ ಮೀಟರ್ ರಸ್ತೆಯಾಗಲಿ ಅಥವಾ ಒಂದು ಲಕ್ಷ ರೂಪಾಯಿ ಅಂದಾಜು ಒಳಗಿನ ಒಂದುಸೇತುವೆಯನ್ನಾಗಲಿ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಈ ಬಗ್ಗೆ ಅನೇಕ ಮಾನ್ಯ ಸದಸ್ಯರೂ ಸಹ ತಮ್ಮ ಆಂತಕವನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ನಾನು ಈ ಹಿಂದೆ ಕೊಟ್ಟಂಥಾ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಈಗಾಗಲೇ ಕ್ರಮಗಳನ್ನು ತೆಗೆದುಕೊಳ್ಳ ಲಾಗಿದೆ. ಈ ಕೆಲಸಮಾಡಲೇ ಬೇಕು ಅನ್ನುವ ಒಂದು ಅಂತಿಮ ತೀರ್ಮಾನಕ್ಕೆ ಬರಬೇಕಾದರೆ ತಾವು ಈ ಬಗ್ಗೆ ಹೇಳಿರತಕ್ಕಂಥಾ ಅಭಿಪ್ರಾಯಗಳನ್ನು ಸಹ ಅದು ಟೀಕಾಕಾರವಾಗಿದ್ದರೂ ಸಹ ಅದನ್ನು ನಾನು ಒಂದು ಸಲಹೆಯಂತೆ ಪರಿಗಣಿಸಿ ತಾವು ಹೇಳಿದ ವಿಷಯಗಳನ್ನು ಮನಸಾರೆ ಸ್ವೀಕಾರ ಮಾಡಿ ನನ್ನ ಕರ್ತವ್ಯದಲ್ಲಿ ಅದನ್ನು ಮಾಡಿಕೊಂಡು ಬರುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಆದುದರಿಂದ ಆ ಯೋಜನೆಗಳು ನಿರರ್ಥಕವಾಗಿ ಹೋಗಿಲ್ಲಾ ಎಂದು ಹೇಳುತ್ತೇನೆ. ಆದರೆ ನಮಗೆ ಬೇರೆ ಒಂದು ಹಣಕಾಸಿನ ಒಂದು ಅಡ್ಜಸ್ಟ್‌ಮೆಂಟ್ ಏನು ಇದೆ ಅಂದರೆ ನಮಗೆ ಬರಬೇಕಾದಂಥಾ ದುಡ್ಡು ಪ್ಲಾನಿಂಗ್ ಅಲೋಕೇಷನ್‌ನಿಂದಾ ಮತ್ತು ಫೈನಲ್ ಕಮೀಷನ್‌ನಿಂದಾಗಲಿ ಬರುವುದು ಹೆಚ್ಚು ಕಡಿಮೆ ಆಗಿರು ವುದರಿಂದ ರಾಜ್ಯದಲ್ಲಿ ಎಲ್ಲಾ ಕಡೆಯೂಸಹ ಹೀಗಾಗಿದೆ. ತಕ್ಕಡಿ ಸರಿಯಾಗಿ ಏಳುತ್ತಾ ಇಲ್ಲಾ. ಆದುದರಿಂದ ನಮ್ಮ ಯೋಜನೆಯೂ ಕೂಡ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಾ ಇದೆ. ಆದರೆ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿದು ನನ್ನ ಮಾತನ್ನು ಉಳಿಸಿಕೊಳ್ಳಬೇಕುಎಂದು ಮನಸ್ಸು ಮಾಡಿದ್ದೇನೆ. ಆ ಪ್ರಕಾರವಾಗಿ ಪ್ರತಿ ತಾಲ್ಲೂಕಿಗೂ ೪–೫ ಕಿಲೋ ಮೀಟರ್ ರಸ್ತೆಯನ್ನಾಗಲಿ ಅಥವಾ ಒಂದುಲಕ್ಷ ರೂಪಾಯಿ ಅಂದಾಜಿನ ಒಂದು ಸಣ ಸೇತುವೆಯನ್ನಾಗಲಿ ಮಾಡಿಸಿಕೊಡುವುದಕ್ಕೆ, ಆ ಪ್ರಕಾರ ನನ್ನ ಮಾತನ್ನು ಉಳಿಸಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಆದರೆ ಇದನ್ನು ಮಾಡಲು ಇನ್ನೂ ಕೆಲವು ದಿವಸಗಳು ಬೇಕಾಗುತ್ತದೆ. ಈ ಸಂಬಂಧವಾಗಿ ನಾನು ಶಾಸಕರೆಲ್ಲರಿಗೂ ಒಂದು ಪತ್ರ ಬರೆದಿದ್ದೇನೆ ನಮ್ಮ ಇಲಾಖೆಯ ಅಭಿಪ್ರಾಯ ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಚಿವ ರೊಂದಿಗೂ ಸಹ ಈ ಬಗ್ಗೆ ಮಾತನಾಡಿ ವಿಚಾರ ವಿನಿಮಯ ನಡೆಸಿದ್ದೇನೆ: ಆ ಪ್ರಕಾರವಾಗಿ ಯಾವ್ಯ ಯಾವುದಕ್ಕೊ ಆದ್ಯತೆ ಕೊಡಬೇಕೋ ಆ ರೀತಿ ಕೊಟ್ಟು ಈ ಬಡ್ಜೆಟ್ಟಿನಲ್ಲಿ ಸೇರಿಸಿದ್ದೇವೆ. ಕೆಲವು ಮಾನ್ಯ ಸದಸ್ಯರು ಹೇಳಿದರು, ಕೆಲವು ಮಾನ್ಯ ಸದಸ್ಯರು ಇರುವ ಕ್ಷೇತ್ರದಲ್ಲಿ ಪ್ರಭಾವವಿರುವಂಥಾವರ ಕ್ಷೇತ್ರದಲ್ಲಿ ೫–೬ ಕೆಲಸಕ್ಕೆ ದುಡ್ಡು ಕೊಟ್ಟಿದ್ದೀರಿ ಕೆಲವು ಕಡೆ ಎರಡನ್ನೂ ಕೊಟ್ಟಿಲ್ಲಾ ಎನ್ನುವ ಅಭಿಪ್ರಾಯವನ್ನು

ವ್ಯಕ್ತಪಡಿಸಿದ್ದಾರೆ. ನಾನು ಅವರಿಗೆ ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ಅವರ ಕ್ಷೇತ್ರ, ಇವರ ಕ್ಷೇತ್ರ ಅನ್ನುವ ವಕ್ಕಣೆ ಮಾಡುವಂಥಾ ಭೇದಭಾವನೆ ಇಲ್ಲಾ. ಹಣ ಸಿಕ್ಕಿದಂತೆಲ್ಲಾ ತಾವು ಕೊಟ್ಟಿರತಕ್ಕಂಥಾ ಕೆಲಸಕಾರ್ಯಗಳ ಒಂದು ಅಂದಾಜು ನೋಡಿಕೊಂಡು ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ನೋಡಿ ಕೊಂಡು ಆ ಹಣಕ್ಕೆ ತಕ್ಕಂತೆ ಆ ಯೋಜನೆಗಳನ್ನು ಸೇರಿಸಿ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ಕೆಲವು ಸಾರಿ ಕೊಟ್ಟಿದ್ದರಲ್ಲಿ ಸ್ವಲ್ಪ ಹೆಚ್ಚುಕಡಿಮೆ ಒಂದು ಎಸ್ಟಿಮೇಟಿನ ಅಂದಾಜಿನಲ್ಲಿ ವ್ಯತ್ಯಾಸವಾಗಿದೆ. ಇದರಿಂದ ಹಣದವ್ಯತ್ಯಾಸ ಆಗುವುದಕ್ಕೂ ಸಾಧ್ಯಇದೆ ಈ ದೃಷ್ಟಿಯಿಂದ ಒಂದು ವೇಳೆ ಮಾನ್ಯಸದಸ್ಯರುಗಳು ಆಯಾಯ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಈ ರೀತಿ ಮಾತನಾಡಿರಬಹುದು. ತಮಗೆ ನಿಜವಾಗಿ ಹೇಳಬೇಕಾದರೆ ಕರ್ನಾಟಕ ರಾಜ್ಯದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪ್ರತಿ ತಾಲ್ಲೂಕಿಗೂ ಈ ಬಗ್ಗೆ ಹಣವನ್ನು ಸಮನಾಗಿ ಹಂಚುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದರೆ ಕೆಲವೊಮ್ಮೆ ಏನಾಗುತ್ತದೆ ಎಂದರೆ ಈ ಕಪ್ಪು ಭೂಮಿ ಇರುವ ಪ್ರದೇಶದಲ್ಲಿ ಸ್ವಲ್ಪ ಹೆಚ್ಚು ಹಣ ಖರ್ಚು ಮಾಡಬೇಕಾದ ಸಂದರ್ಭ ಬರುತ್ತದೆ. ಈ ಬಗ್ಗೆ ಮಾನ್ಯ ಪ್ರಭಾಕರ್ ತೇಲ್ಕರ್‌ರವರು ಒಂದು ಪ್ರಶ್ನೆ ಕೇಳಿದ್ದರು. ಇನ್ನು ಕೆಲವು ಸದಸ್ಯರು ಈ ಬಗ್ಗೆ ಕೇಳಿದ್ದಾರೆ. ಅವರು ಯಾರೂ ಈಗ ಈ ಸಭೆಯಲ್ಲಿ ಇಲ್ಲಾ. ಶ್ರೀ ಪ್ರಭಾಕರ್ ತೇಲ್ಕರ್‌ರವರು ಏನು ಕೇಳಿದರು ಎಂದರೆ ಮಲೆನಾಡು ಭಾಗಕ್ಕೆ ಯಾವರೀತಿಯಾದ ಒಂದು ವೈಟೇಜ್ ಕೊಡುತ್ತಿರೋ ಅದೇರೀತಿಯಾಗಿ ನಮ್ಮ ಭಾಗಕ್ಕೂ ಕೊಡಿಎನು ವ ಒಂದು ಪ್ರಶ್ನೆಕೇಳಿದರು. ನಾನು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲೂ ಕೂಡ ಪ್ರವಾಸ ಮಾಡಿ ಬಂದಿದ್ದೇನೆ. ನನಗೆ ಆ ಪ್ರದೇಶದ ಅನುಭವ ಚೆನ್ನಾಗಿ ಗೊತ್ತು. ಅಲ್ಲಿ ಕೆಲವುಕಡೆ ಕಪು ಭೂಮಿ ಇರುವುದನ್ನು ನಾನು ನೋಡಿದ್ದೇನೆ, ಕೆಲವು ಸದಸ್ಯರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಸಹ ಕೊಟ್ಟಿದ್ದಾರೆ ಈ ವಿಚಾರದಲ್ಲಿ ನಾನು ಹೇಳಬೇಕಾದರೆ ಈ ಕಪ್ಪುಭೂಮಿ ಇರತಕ್ಕಂಥಾ ಪ್ರದೇಶದಲ್ಲಿ ರೋಡ್ ಮಾಡುವುದು ಬಹಳಕಷ್ಟ. ಹಾಗೆಯೇ ಮಲೆನಾಡು ಭಾಗದಲ್ಲೂ ಕೂಡ ರೋಡ್‌ಮಾಡುವುದು ಸ್ವಲ್ಪ ಕಷ್ಟಇದೆ ಅನ್ನುವುದು ನನಗೆ ಗೊತ್ತಿದೆ. ಆದುದರಿಂದ ಈ ಮಲೆನಾಡು ಪ್ರದೇಶಕ್ಕೆ ೧೯೭೮–೭೯ ನೇ ಸಾಲಿನಲ್ಲಿ ನಾವು ೨೫ ಪರ್ಸೆಂಟ್ ಹಣವನ್ನು ವೈಟೇಜ್ ಆಗಿ ಕೊಟ್ಟಿದ್ದೇವೆ. ಹಾಗೆಯೇ ಕಪ್ಪುಭೂಮಿ ಇರುವ ಪ್ರದೇಶಕ್ಕೂ ಕೂಡ ಕೆಲವೊಮ್ಮೆ ಅವರಿಗೆ ಕಿಲೋಮೀಟರ್‌ಗೆ ಯಾವರೀತಿಯಾಗಿ ಹಣ ಕೊಟ್ಟಿದ್ದೇವೋ ಅದೇರೀತಿ ಕೊಟ್ಟಿದ್ದೇವೆ. ಆದರೆ ಅದು ಸಾಲದು ಎನ್ನುವ ಭಾವನೆ ಇದೆ. ಅಲ್ಲಿ ಕೊಟ್ಟಿರುವ ಹಣಸಾಲದು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಅದುಸತ್ಯ. ಅದೇ ರೀತಿಯಾಗಿ ಮಲೆನಾಡು ಭಾಗದಲ್ಲೂ ಹಣ ಜಾಸ್ತಿ ಕೊಡಬೇಕಾಗುತ್ತದೆ. ಏತಕೆಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೋಡ್ಸ್ ಮಾಡಬೇಕಾದರೆ, ರಸ್ತೆರಿಪೇರಿ ಕೆಲಸ ಮಾಡಬೇಕಾದರೆ, ಬಹಳ ಹಣ ಖರ್ಚಾಗುತ್ತದೆ. ಏತಕ್ಕೆಂದರೆ ಮಳೆಗಾಲದಲ್ಲಿ ಅಲ್ಲಿ ಹೋಗಿ ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕೆಲವುಸೇತುವೆಗಳು ಕೆಲವು ರಸ್ತೆಗಳು ಕುಸಿದುಬಿದ್ದು ಹೋಗಿರುತ್ತವೆ ಇದರಿಂದ ಸರ್ಕಾರಕ್ಕೆ ಬಹಳನಷ್ಟವಾಗಿರುತ್ತದೆ ಅನೇಕವೇಳೆ ಫ್ಲಡ್ ಬಂದಾಗ ಅಲ್ಲಿ ಹೋಗಿ ನೋಡಿದರೆ ಆಗ ರಸ್ತೆಗಳು ಮತ್ತು ಸೇತುವೆಗಳು ಕಾಣುವುದು ಇಲ್ಲ. ಇದರಿಂದ ಆ ರಸ್ತೆಗಳಲ್ಲಿ ಕುಸಿದು ಬಿದ್ದು ಆ ರಸ್ತೆಗಳಲ್ಲಿ ಎತ್ತಿನಗಾಡಿಯೂ ಕೂಡ ಹೋಗು ವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲ ಜನಗಳೂ ಕೂಡ ಕೆಲವು ರಸ್ತೆಗಳಲ್ಲಿ ತಿರುಗಾಡುವುದು ಬಹಳ ಕಷ್ಟ ಮಲೆನಾಡು ಸೀಮೆಯಲ್ಲಿ ಮತ್ತು ಬಯಲುಸೀಮೆಯಲ್ಲಿ ಮಳೆಬಂದಾಗ ಅನೇಕ ಭಾಗಗಳಲ್ಲಿ ಹೋಗಿ ನೋಡಿದರೆ ಅಲ್ಲಿರುವ ಮಣ್ಣನ್ನು ಕೊಚ್ಚಿಕೊಂಡು ಹೋಗಿರುತ್ತದೆ. ಕಾರಣ ಆ ಮಣ್ಣು ಲೂಸ್ ಸಾಯಿಲ್ ಆದುದರಿಂದ ಅಲ್ಲಿ ಮಣ್ಣನ್ನು ಕೊಚ್ಚಿಕೊಂಡು ಹೋಗುತ್ತದೆ. ಅದುಏನೇ ಇರಲಿ ನಾವು ಪ್ರಕೃತಿಯ ಒಂದು ನಿಯಮಕ್ಕನುಗುಣವಾಗಿ ನಡೆಯಬೇಕಾಗಿದೆ, ಅದಕ್ಕನುಸಾರವಾಗಿ ಹಣವನ್ನು ಹೊಂದಿಸಿಕೊಂಡು ನಡೆದುಕೊಳ್ಳಬೇಕಾಗಿದೆ, ಅಂಥಾ ಕೆಲಸಗಳನ್ನು ಪುನಃ ನಾವು ಮಾಡಿಸಲೇಬೇಕಾಗುತ್ತದೆ ಎಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಅನೇಕ ಸದಸ್ಯರು ನಮ್ಮ ಕ್ಷೇತ್ರದಲ್ಲಿರುವ ಕೆಲವು ಕೆಲಸಗಳನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲಾ ಎಂದು ಹೇಳಿದರು ಇನ್ನು ಕೆಲವು ಸದಸ್ಯರುಗಳು ನಮ್ಮ ನಮ್ಮ ಕ್ಷೇತ್ರದಲ್ಲಿಯಾವ ಕೆಲಸಕಾರ್ಯಗಳೂ ಆಗಿಲ್ಲಾ ಅನ್ನುವ ಮಾತನ್ನು ಹೇಳಿದರು ಈ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುವುದೇನೆಂದರೆ ಇದರಲ್ಲಿ ಸ್ವಲ್ಪ ಹಣವನ್ನು ತೆಗೆದುಕೊಂಡು ಕಡೇಪಕ್ಷ ಅವರವರ ಕ್ಷೇತ್ರದಲ್ಲಿ ಒಂದೊಂದು ಕೆಲಸವನಾದರೂ ಮಾಡಿಸಿ ಕೊಡಬೇಕು ಅಂತ ಇಟ್ಟುಕೊಂಡಿದ್ದೇನೆ. ಈ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ.

ಮಾನ್ಯ ಅಧ್ಯಕ್ಷರೇ, ನಾನು ಕಳೆದ ಸಾರಿ ಮಾತನಾಡುವಾಗ ಒಂದು ಮಾತನ್ನು ಹೇಳಿದ್ದೆ. ತಾಲೂಕ ವಾರು ರಸ್ತೆಗಳನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ಒಂದು ಹೈಪವರ್ ಕಮಿಟಿಯನ್ನು ಮಾಡ ಬೇಕು ಎನ್ನುವ ಮಾತನ್ನು ಹೇಳಿದ್ದೆನು. ಇದಕ್ಕೆ ಸಂಬಂಧಪಟ್ಟ ಹಾಗೆ ತಾಂತ್ರಿಕ ವಿಷಯ, ಆಡಳಿತದ ವಿಷಯ ಇದನ್ನೆಲ್ಲಾ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾವು ಈಗಾಗಲೇ ಈ ಹೈಪವರ್ ಕಮಿಟಿಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರಾದ ರಾಮಚಂದ್ರ ರೆಡ್ಡಿಯವರು ನಮ್ಮ ನಿಯಮಾವಳಿ ಯಲ್ಲಿರುವ ಕ್ಲಾಸ್-೯(ಎ) ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವರು ಎಂ.ಇ., ಗ್ರಾಜುಯೇಟ್, ಮತ್ತು ಕಂಟ್ರಾಕ್ಟಗೆ ಸಂಬಂಧಪಟ್ಟ ಹಾಗೆ ಹಲವಾರು ವಿಷಯಗಳನ್ನು ಅಧ್ಯಯನ ಮಾಡಿದ್ದಾರೆ. ಇದು ಬಹಳ ಸಂತೋಷದ ವಿಷಯ. ಅವರು ಕೊಟ್ಟಿರತಕ್ಕ ಹಲವಾರು ಸಲಹೆಗಳು ನಮಗೆ ಉಪಯುಕ್ತವಾಗಿವೆ. ನಾನು ಮೊದಲೇ ಹೇಳಿದ ಹಾಗೆ ಈ ಹೈಪವರ್ ಕಮಿಟಿಯನ್ನು ನಾವು ೨-೧-೧೯೭೯ರಲ್ಲಿ ಕಾನ್ಸ್‌ಟಿಟ್ಯೂಟ್ ಮಾಡಿದ್ದೇವೆ. ಇದರಲ್ಲಿ ಈ ಕೆಳಕಂಡವರು ಇದ್ದಾರೆ :

The Commissioner and Secretary to Govt. PWD-Chairman of the Committee.

The Commissioner and Secretary to Govt. Finance Dept.,

The Secretary to Government, Planning Department.

The Special Secretary, Irrigation Department,

The Secretary, Law and Parliamentary Affairs Dept.,

The Chief Engineer, C&B.,

The Special Officer, Finance Cell, PWD and Electricity Department.

6-30 P.M.

ಆದರೆ ಇನ್ನೊಂದು ಅಭಿಪ್ರಾಯ, ಇದರಲ್ಲಿ ಬರೀ ಅಧಿಕಾರಿಗಳೇ ಇದ್ದಾರೆ. ಇದರಲ್ಲಿ ಖಾಸಗಿಯವರು ಕೆಲವರನ್ನು ಸೇರಿಸಬೇಕು ಎನ್ನತಕ್ಕದ್ದು ಇದೆ. ಈ ವಿಷಯವನ್ನು ನಾನು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ. ಅವರೂ ಸಹ ಆ ರೀತಿಯಾಗಿ ಮಾಡಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಸಧ್ಯದಲ್ಲಿಯೇ ನಾವು ಇದರ ಬಗ್ಗೆ ಒಂದು ಆರ್ಡರನ್ನೂ ಸಹ ಹೊರಡಿಸುವವರಿದ್ದೇವೆ. ಈ ರೀತಿಯಾಗಿ ಮಾಡುವಾಗ ನಮ್ಮಲ್ಲಿರತಕ್ಕ ಬಿ.ಇ. ಓದಿದ ಸದಸ್ಯರನ್ನು ಮಾನ್ಯ ರೆಡ್ಡಿಯವರನ್ನು ಏಕೆ ಈ ಒಂದು ಕಮಿಟಿಯಲ್ಲಿ ಹಾಕಬಾರದು ಎನ್ನುವ ವಿಚಾರವನ್ನು ನಾವು ಆಲೋಚನೆ ಮಾಡುತ್ತಿದ್ದೇವೆ.

ಕಳೆದ ನಾನು ಸಭೆಯಲ್ಲಿ ಸಾಲುಮರಗಳ ಬಗ್ಗೆ ಮಾತನಾಡಿದ್ದೆನು. ಕಾನೂನು ಪ್ರಕಾರ ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಇದರಲ್ಲಿ ಒಂದು ಬದಲಾವಣೆಯಾಗಿದೆ. ಈ ರೋಡ್ ಸೈಡ್ ಟ್ರೀಸ್ ಏನು ಇವೆ, ಅವುಗಳನ್ನು ಅರಣ್ಯ ಇಲಾಖೆಗೆ ಕೊಡಬೇಕು ಎನ್ನುವ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ. ಕೆಲವು ಸಾರಿ ಇವುಗಳನ್ನು ಅರಣ್ಯ ಇಲಾಖೆಗೆ ಕೊಡಬೇಕೆಂದೂ, ಕೆಲವು ಸಾರಿ ಇವುಗಳನ್ನು ರೆವಿನ್ಯೂ ಇಲಾಖೆಗೆ ಕೊಡಬೇಕೆಂದೂ ಇದು ಸುತ್ತು ಹಾಕುತ್ತಿದೆ. ಅವರ ನೀತಿಗೆ ಅನುಗುಣವಾಗಿ ಮರಗಳನ್ನು ಬೆಳೆಸುವುದಕ್ಕೆ ಒಂದು ಕಿ.ಮೀ. ದೂರದವರೆಗೆ ೬೬೦ ರೂಪಾಯಿಗಳನ್ನು ಕೊಡಬೇಕು ಎಂದು ಮಾಡಿದ್ದಾರೆ. ಇವರು ಈ ಮಾತನ್ನು ಹೇಳಿದ ಮೇಲೆ ನಾವು ಒಂದು ಅಂತಿಮ ತೀರ್ಮಾನ ವನ್ನು ತೆಗೆದುಕೊಳ್ಳಬೇಕಾಗಿದೆ. ಇವುಗಳನ್ನು ನಾವು ಅರಣ್ಯ ಇಲಾಖೆಗೆ ವಹಿಸುವುದರಿಂದ ಅವರಿಗೆ ಒಂದು ಕಿಲೋಮೀಟರ್ ದೂರಕ್ಕೆ ೬೬೦ ರೂಪಾಯಿಗಳು ಸಿಕ್ಕುತ್ತದೆ. ಆದ್ದರಿಂದ ನಾವು ಇದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಇನ್ನು ಉಳಿದಿರತಕ್ಕ ಜಿಲ್ಲಾ ಹೈವೇಗಳು, ಡಿಸ್ಟ್ರಿಕ್ಟ್ ರೋಡುಗಳು ಟಿ.ಡಿ.ಬಿ ರೋಡುಗಳು ಮತ್ತು ವಿಲೇಜ್ ಪಂಚಾಯತಿ ರೋಡುಗಳಲ್ಲಿರುವ ಮರಗಳು. ಈ ದಿಸೆಯಲ್ಲಿ ನಾನು ಕೊಟ್ಟಿರತಕ್ಕ ಮಾತನ್ನು ಉಳಿಸಿಕೊಳ್ಳುವುದಕ್ಕೆ ನಾನು ಯಾವ ರೀತಿಯಲ್ಲಿ ಪ್ರಯತ್ನವನ್ನುಮಾಡಿದ್ದೇನೆ. ಆದರಿಂದ ನನಗೆ ಸಮಾಧಾನವಾಗಬೇಕಾದರೆ ತಮಗೂ ಕೂಡ ಅದು ಸ್ವಲ್ಪ ಗೊತ್ತಾಗಬೇಕಾಗಿದೆ. ಪ್ರತಿ

ತಾಲ್ಲೂಕಿನಲ್ಲೂ ೫ ಕಿಲೋಮೀಟರ್ ದೂರದವರೆಗೂ ಮರಗಳನ್ನು ನೆಡಸತಕ್ಕದು ಎಂದು ಹೇಳಿದ್ದೆನು ಈ ಸಾರಿಯೂ ನಾನು ಅದರಂತೆ ಮರಗಳನ್ನು ನೆಡಿಸಿದ್ದೇನೆ. ಪ್ರಯಾಣ ಮಾಡುವ ಕಾಲದಲ್ಲಿ ಪ್ರಯಾಸ ಇಲ್ಲದಂತೆ ಪ್ರಯಾಣ ಆಗಬೇಕು ಎನ್ನುವ ದೃಷ್ಟಿಯಿಂದ ಹುಣಸೇ ಮರಗಳನ್ನು, ಮತ್ತು ಮಲೆನಾಡಿನ ಭಾಗದಲ್ಲಿ ಹಣ್ಣಿನ ಮರಗಳನ್ನು ನೆಡೆಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಬೇಸಿಗೆಯ ಕಾಲದಲ್ಲಿ ಸಾಕಷ್ಟು ಮಳೆಯಾಗದೆ ಇದ್ದುದರಿಂದ ನೆಟ್ಟ ಗಿಡಗಳಿಗೆ ಸಾಕಷ್ಟು ನೀರು ಸಿಕ್ಕದೆ ಕೆಲವು ಕಡೆಗಳಲ್ಲಿ ಗಿಡಗಳು ಹಾಳಾಗಿ ಹೋಗಿವೆ, ಇನ್ನು ಕೆಲವು ಕಡೆ ದನಕರುಗಳು, ಕುರಿಗಳು, ಮೇಕೆಗಳು, ತಿಂದು ಹಾಕಿ ಹಾಳಾಗಿ ಹೋಗಿವೆ. ಇನ್ನು ಕೆಲವು ಕಡೆ ಈ ಗಿಡಗಳು ಸರಿಯಾಗಿ ಬಂದಿವೆ. ಇದನ್ನು ನಾವು ತಡೆಗಟ್ಟಬೇಕು ಎಂದು ನಾವು ಅನೇಕ ಕಡೆಗಳಲ್ಲಿ ಗಿಡಗಳ ಸುತ್ತ ಫೆನ್ಸಿಂಗ್ ಮಾಡಿದ್ದೇವೆ. ಅನೇಕ ಕಡೆಗಳಲ್ಲಿ ನಮ್ಮ ಪೂರ್ವಿಜರು ಹಾಕಿದಂಥ ಮರಗಳು ಸೂರ್ಯನ ಬೆಳಕು ಪ್ರಯಾಣಿಕರ ಮೇಲೆ ಬೀಳದಂತೆ ಬೆಳೆದಿವೆ. ನಾವೂ ಅದೇ ರೀತಿಯಲ್ಲಿ ಸಂಪದ್ಭರಿತವಾಗಿ ಮರಗಳನ್ನು ಬೆಳೆಸಬೇಕು ಎಂದು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಐದು ಕಿಲೋಮೀಟರ್‌ವರೆಗೆ ಮರಗಳನ್ನು ಹಾಕಿಸತಕ್ಕ ಪ್ರಯತ್ನವನ್ನು ಈಗಾಗಲೇ ಮಾಡಿದ್ದೇವೆ. ನಂತರ ಮಾನ್ಯ ಸದಸ್ಯರುಗಳು ರೆಗ್ಯುಲೇಟೆಡ್ ಮಾರ್ಕೆಟ್ ಸೆಸ್ ವಿಷಯದಲ್ಲಿ ಮಾತನಾಡಿದ್ದಾರೆ. ಕೆಲವು ಕಡೆ ಮಾರ್ಕೆಟ್ ಕಮಿಟಿಯವರು ಹಣವನ್ನು ವಸೂಲು ಮಾಡಿದ್ದಾರೆ. ಅದು ಖರ್ಚಾಗಿಲ್ಲ. ಇನ್ನು ಕೆಲವು ಕಡೆ ಖರ್ಚುಮಾಡಿ ಕೆಲಸಕಾರ್ಯಗಳನ್ನು ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಏತನ್ಮಧ್ಯೆ ಇದರ ಬಗ್ಗೆ ಒಂದು ಹೈಕೋರ್ಟ್ ಜಡ್ಜ್‌ಮೆಂಟ್ ಸಹ ಆಯಿತು ಏನೆಂದರೆ, ಸರ್ಕಾರದವರು ಈ ಹಣವನ್ನು ಮಾರ್ಕೆಟ್ ಕಮಿಟಿಯವರಿಂದ ವಸೂಲು ಮಾಡಿದ್ದುದು ತಪ್ಪು, ಮತ್ತೆ ಹಣವನ್ನು ಅವರಿಗೆ ವಾಪಸ್ ಕೊಡಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಮತ್ತೆ ಸುಪ್ರೀಂ ಕೋರ್ಟ್‌ಗೆ ಅಪೀಲು ಹಾಕಿದ್ದೇವೆ. ಈ ಅಪೀಲು ತೀರ್ಮಾನವಾದಮೇಲೆ ಏನು ಮಾಡಬೇಕು ಎನ್ನುವ ತೀರ್ಮಾನವನ್ನು ನಾವು ಇಟ್ಟುಕೊಂಡಿದ್ದೇವೆ. ಇದಲ್ಲದೆ ಇದಕ್ಕೆ ಸೂಕ್ತ ತಿದ್ದುಪಡಿಯನ್ನು ಕಾನೂನಿನಲ್ಲಿಯೇ ಅಳವಡಿಸಬೇಕು ಎಂದು ಹೇಳುವಂಥ ಇನ್ನೊಂದು ಅಭಿಪ್ರಾಯವನ್ನು ನಾವು ಹೊಂದಿದ್ದೇವೆ. ಕನಿಷ್ಟಪಕ್ಷ ಕಲೆಕ್ಟ್ ಆಗಿರತಕ್ಕ ಹಣದ ೭೫ ಪರ್ಸೆಂಟ್‌ನ್ನು ವಸೂಲು ಮಾಡಿರತಕ್ಕ ಪ್ರದೇಶದಲ್ಲಿಯೇ ಸಂಪರ್ಕ ಸಾಧನಗಳನ್ನು ಒದಗಿಸುವುದಕ್ಕೆ ಖರ್ಚು ಮಾಡಬೇಕು ಎನ್ನುವುದನ್ನು ನಾನು ತತ್ವಶಃ ಒಪ್ಪಿಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಬಹಳ ಕಳಕಳಿಯಿಂದ ಇಲಾಖೆಯಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಆಮ್ಮುಗಂ ಅವರೂ ಸಹ ಇದರ ಬಗ್ಗೆ ಮಾತನಾಡಿದ್ದಾರೆ. ಅದಕ್ಕಾಗಿ ನಾವು ನಮ್ಮ ಇಲಾಖೆಯಲ್ಲಿರುವ ೧೧ ಸಾವಿರ ಗ್ಯಾಂಗ್‌ಮನ್‌ಗಳನ್ನು ೧೩ ಸಾವಿರ ವರ್ಕ್‌ಚಾರ್ಜ್‌ನಲ್ಲಿ ಕೆಲಸ ಮಾಡುತ್ತಿರುವವರನ್ನು ಐದು ವರ್ಷಗಳ ಕಾಲಮಿತಿಯನ್ನು ಹಾಕಿ ನಾವು ರೆಗ್ಯುಲರೈಸ್ ಮಾಡುತ್ತಿದ್ದೇವೆ. ಇದು ಏಕೆ ತಡವಾಯಿತು, ಈ ಕೆಲಸ ಆಗುತ್ತದೆಯೋ ಇಲ್ಲವೋ ಎಂಬ ಶಂಕೆಯನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ನಾನು ಇವರ ಬಗ್ಗೆ ಅನೇಕ ಸಲ ಹೇಳಿದ್ದೇನೆ. ಮತ್ತು ಈ ದಿಸೆಯಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ. ವಾರಕ್ಕೊಂದು ಬಾರಿಯಾದರೂ ಇಂಥ ಸಮಸ್ಯೆಗಳ ಬಗ್ಗೆ ನಾನು ಅವಲೋಕನ ಮಾಡುವುದು ಉಂಟು. ಕೆಲವಾರು ಸಕಾರಣಗಳಿಂದ ಇದು ತಡವಾಗಿದೆ. ಈ ಕೆಲಸವನ್ನು ಮಾಡುವುದಕ್ಕೆ ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್‌ನಿಂದ, ಪಬ್ಲಿಕ್ ಹೆಲ್ತ್ ಇಂಜನಿಯರಿಂಗ್ ಇಲಾಖೆಗಳಿಂದ ಅಂಕಿಅಂಶಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ಇಲ್ಲಿ ಏನಾಗಿದೆಯೆಂದರೆ, ಕೆಲವರು ನೌಕರರು ಮಧ್ಯದಲ್ಲಿ ಬಿಟ್ಟು ಹೋಗಿದ್ದಾರೆ. ಕೆಲವರು ಮತ್ತೆಬಂದು ಸೇರಿದ್ದಾರೆ. ಇವರುಗಳ ಸೀನಿಯಾರಿಟಿಯನ್ನು ಸಹ ನಾವು ನೋಡಬೇಕಾಗುತ್ತದೆ ರಾಜ್ಯದಲ್ಲಿರುವ ಗ್ಯಾಂಗ್‌ಮನ್ ಅಸೋಸಿಯೇಷನ್‌ನಿಂದಲೂ ಸಹ ನಾವು ಅಂಕಿಸಂಖ್ಯೆಗಳನ್ನು ಮತ್ತು ಅವರ ನೆರವನ್ನು ಕೂಡ ನಾವು ಪಡೆದಿದ್ದೇವೆ. ಇದಕ್ಕೆ ನಮ್ಮ ಹಣಕಾಸಿನ ಇಲಾಖೆಯವರು ಸಹ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅತಿ ಶೀಘ್ರದಲ್ಲಿಯೇ ಅಂದರೆ, ಒಂದೆರಡು ತಿಂಗಳಲ್ಲಿಯೇ ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಹೊರಡಿಸುತ್ತೇವೆ. ಮತ್ತು ಇವರೆಲ್ಲರನ್ನೂ ಸಹ ಖಾಯಂ ಆಗಿ ಮಾಡುತ್ತೇವೆ.

ಯಾರು ೧೫ ರಿಂದ ೨೦ ವರ್ಷಗಳ ಕಾಲ ಸರ್ವಿಸ್ ಮಾಡಿದ್ದಾರೆ, ಅಂತಹವರನ್ನು ಮೊದಲನೆಯ ವರ್ಷ, ಯಾರು ೧೦ ರಿಂದ ೧೨ ವರ್ಷಗಳ ಕಾಲ ಸರ್ವಿಸ್ ಮಾಡಿದ್ದಾರೆ, ಅಂತಹವರನ್ನು ಎರಡನೆಯ ವರ್ಷ, ಯಾರು ೭ ರಿಂದ ೯ ವರ್ಷಗಳ ಕಾಲ ಸರ್ವಿಸ್ ಮಾಡಿದ್ದಾರೆ, ಅಂತಹವರನ್ನು ಮೂರನೆಯ ವರ್ಷ, ಯಾರು ೫ ವರ್ಷಗಳ ಕಾಲ ಸರ್ವಿಸ್ ಮಾಡಿದ್ದಾರೆ ಅಂತಹವರನ್ನು ನಾಲ್ಕನೆಯ ವರ್ಷ,

ಇದಕ್ಕೂ ಕಡಿಮೆ ಸರ್ವಿಸ್ ಮಾಡಿದವರನ್ನು ಐದನೆಯ ವರ್ಷದಲ್ಲಿ ಖಾಯಂ ಮಾಡಲಾಗುತ್ತದೆ. ಇದರಿಂದ ಎರಡೂವರೆ ಕೋಟಿ ರೂ.ಗಳಷ್ಟು ಖರ್ಚು ಬರುತ್ತದೆ. ಎಲ್ಲರನ್ನೂ ಒಂದೇ ವರ್ಷದಲ್ಲಿ ಖಾಯಂ ಮಾಡಬೇಕೆಂದು ಯಾರೂ ಹೇಳಿಲ್ಲ. ಈಗಿನ ಸರ್ಕಾರದ ನಿರ್ಧಾರವನ್ನು ಎಲ್ಲರೂ ಸ್ವಾಗತ ಮಾಡಿದ್ದಾರೆ. ಇದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ಈಗಾಗಲೆ ವ್ಯಕ್ತಪಡಿಸಿದ್ದೇನೆ. ಈ ಜನರ ಒಂದು ದೊಡ್ಡ ನಿಯೋಗವನ್ನು ಮಾನ್ಯ ಕಕ್ಕಿಲಾಯ ಅವರು ನನ್ನ ಮನೆಗೆ ತಂದಿದ್ದರು. ಅವರು ಬಾವುಟ ಹಿಡಿದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಸರ್ಕಾರದ ತೀರ್ಮಾನ ಕೇಳಿ ಅವರು ಬಹಳ ಸಂತೋಷಪಟ್ಟರು. ಇದು ಎಲ್ಲರಿಗೂ ಗೊತ್ತಿದೆ. ಈಗಲೂ ಸಹ ನಾನು ಕಾರಿನಲ್ಲಿ ಎಲ್ಲಿಯಾದರೂ ಹೋಗುತ್ತಿರಬೇಕಾದರೆ, ಈ ಜನರು ನಮ್ಮನ್ನು ಬಹಳ ಸಂತೋಷ ದಿಂದ ಕಾಣುತ್ತಾರೆ. ನಮಗೂ ಅಷ್ಟೇ ಸಂತೋಷವಾಗುತ್ತದೆ. ಮತ್ತು ಎಲ್ಲರೂ ಈ ಒಂದು ಸಂತೋಷದಲ್ಲಿ ಪಾಲ್ಗೊಂಡಿದ್ದಾರೆ. ಒಟ್ಟಿನಲ್ಲಿ ನಾನು ಹೇಳಿದಂಥ ಮಾತನ್ನು ಉಳಿಸಿಕೊಳ್ಳುತ್ತೇನೆಂದು ಈ ಸಂದರ್ಭದಲ್ಲ ತಿಳಿಸುತ್ತೇನೆ. ಇವರನ್ನು ಖಾಯಂ ಮಾಡುವಂತಹ ವಿಷಯದಲ್ಲಿ ಆರ್ಥಿಕ ಇಲಾಖೆ ಯವರ ಒಪ್ಪಿಗೆ ಪಡೆದುಕೊಳ್ಳಲು ಫೈಲನ್ನು ತಾ|| ೧೨-೩-೧೯೭೯ರಲ್ಲಿ ಕಳುಹಿಸಲಾಗಿತ್ತು. ಈಗ ಈ ವಿಷಯದಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆದುಕೊಳ್ಳಬೇಕೆಂಬ ಪ್ರಶ್ನೆ ಬಂದಿದೆ. ಒಟ್ಟಿನಲ್ಲಿ ಈ ವಿಚಾರದಲ್ಲಿ ನಾವು ಸಧ್ಯದಲ್ಲಿಯೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಇನ್ನು ಸಣ್ಣಪುಟ್ಟ ಹರಿಜನ ಮತ್ತು ಗಿರಿಜನ ಕಂಟ್ರಾಕ್ಟರ್‌ಗಳಿಗೆ ಏನಾದರೂ ಪರಿಹಾರ ಕೊಡ ಬೇಕೆಂದು ಮತ್ತು ಇವರಿಗೆ ಕುಮ್ಮಕ ಕೊಡುವಂತಹ ರೀತಿಯಲ್ಲಿ ಕಾನೂನನ್ನು ಮಾಡಿ ಎಂದು ಹೇಳಿ ದ್ದಾರೆ. ಈ ಹರಿಜನ ಮತ್ತು ಗಿರಿಜನರು ಸೇರಿಕೊಂಡು ಒಂದು ಕೋಆಪರೇಟಿವ್ ಸೊಸೈಟಿ ಮಾಡಿ ಕೊಂಡಿದ್ದಾರೆ. ಇವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆಂದು ನಾನು ಕಳೆದ ಸಲವೂ ಹೇಳಿದ್ದೆ. ಅದರಂತೆ ಕೊಟ್ಟಿದ್ದೇವೆ. ಅರ್ನೆಸ್ಟ್ ಮನಿ ಡಿಪಾಜಿಟನ್ನು ಒಂದು ಮಿತಿಗೆ ಒಳ ಪಟ್ಟು ತೆಗೆದುಕೊಳ್ಳಬೇಕು, ಜಾಸ್ತಿ ತೆಗೆದುಕೊಳ್ಳಬಾರದೆಂದು ಆಜ್ಞೆ ಹೊರಡಿಸಿದ್ದೇವೆ. ಇಂತಹವರಿಗೆ ವಿಶೇಷವಾದಂಥ ರಿಯಾಯಿತಿ ತೋರಿಸಬೇಕೆಂದು ಮಾನ್ಯ ರಾಮಚಂದ್ರ ರೆಡ್ಡಿಯವರು ಸಹ ಹೇಳಿದ್ದಾರೆ. ಅವರು ಹೇಳಿದ ಪ್ರಕಾರ ಅನುಕೂಲ ಮಾಡಿಕೊಟ್ಟಿದ್ದೇವೆ. ಇದೇ ಮಾನ್ಯ ಸದಸ್ಯರು ಮಾತನಾಡು ವಾಗ 'ಎ' ಗ್ರೇಡ್ ಕಂಟ್ರಾಕ್ಟರ್ ಕಡೆಯಿಂದ ಅರ್ನೆಸ್ಟ್ ಮನಿ ಡಿಪಾಜಿಟನ್ನು ಕಡಿಮೆ ತೆಗೆದುಕೊಳ್ಳು ವುದು ಸರಿಯಲ್ಲವೆಂದು ಹೇಳಿದರು. ಇದು ಪರಿಶೀಲನೆಗೆ ಯೋಗ್ಯವಾಗಿದೆ. ಪರಿಶೀಲನೆ ಮಾಡು ತ್ತೇವೆ ಮತ್ತು ಇದರ ಒಂದು ಪ್ರೊಸ್ ಅಂಡ್ ಕಾನ್ಸ್ ಏನು ಎಂದು ನೋಡಬೇಕಾಗಿದೆ.

ಇನ್ನು ಲೆಟರ್ ಆಫ್ ಕ್ರೆಡಿಟ್ ಸಿಸ್ಟಮ್ ಬಹಳ ಒಳ್ಳೆಯದೆಂದು ಹೇಳಿದ್ದಾರೆ. ಫೈನಾನ್ಸಿಯಲ್ ಡಿಸಿಪ್ಲಿನ್ ತರಬೇಕಾದರೆ ಇದು ಒಳ್ಳೆಯದೆಂದು ಮಾನ್ಯ ಬಸಪ್ಪನವರು ಹೇಳಿದ್ದಾರೆ. ಈ ಮೊದಲು ಕೆಲವು ಕಡೆಗಳಲ್ಲಿ ಜಾಸ್ತಿ ಕೆಲಸಗಳಾಗುತ್ತಿತ್ತು. ಮತ್ತೆ ಕೆಲವು ಕಡೆಗಳಲ್ಲಿ ಕೆಲಸಗಳೇ ಆಗುತ್ತಿರಲಿಲ್ಲ. ಈ ಒಂದು ಪದ್ಧತಿಯನ್ನು ಜಾರಿಗೆ ತಂದ ಮೇಲೆ ಕೆಲಸಗಳು ಚೆನ್ನಾಗಿ ಆಗುತ್ತಿದೆ ಎಂಬ ಅಭಿಪ್ರಾಯ ವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ವರ್ಷದ ಕೊನೆಯಲ್ಲಿ ಬಿಲ್‌ಗಳು ಪಾಸಾಗುವುದಿಲ್ಲ. ಬಹಳ ಕಾಲ ಪೆಂಡಿಂಗ್ ಇರುತ್ತವೆ ಎಂದು ಹೇಳಿದ್ದಾರೆ. ಕೆಲವು ಸಲ ಬಡ್ಜೆಟ್ ಪಾಸಾಗುವುದು ತಡವಾ ದರೆ ಬಿಲ್‌ಗಳು ಪಾಸಾಗುವುದು ನಿಧಾನವಾಗುತ್ತದೆ. ಈ ವಿಷಯದಲ್ಲಿ ನಿಗದಿಯಾಗಿರುವ ಕೆಲಸಗಳನ್ನು ಮಾತ್ರ ತೆಗೆದುಕೊಳ್ಳಬೇಕು. ಹೆಚ್ಚಿನ ಕೆಲಸಗಳನ್ನು ತೆಗೆದುಕೊಳ್ಳಬಾರದೆಂದು ಸಂಬಂಧಪಟ್ಟ ಅಧಿಕಾರಿ ಗಳಿಗೆ ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದೇವೆ. ನಾನು ಪ್ರವಾಸ ಹೋದ ಕಡೆಗಳಲ್ಲಿ ಸಹ ಮುಖ್ಯ ಇಂಜಿನಿ ಯರ್ ಅವರ ಮೂಲಕವೂ ಎಚ್ಚರಿಕೆ ಕೊಡಿಸಿದ್ದೇನೆ. ಇಲ್ಲಿ ನಿಗದಿಯಾಗಿರುವ ಕೆಲಸಗಳನ್ನು ಮಾಡಿಸಿದರೆ ಯಾವ ತೊಂದರೆಯೂ ಬರುವುದಿಲ್ಲ ; ಆದರೆ ಕೆಲವು ಸಲ ೫ ಕೆಲಸಗಳನ್ನು ಮಾಡಿಸುವುದಕ್ಕೆ ಬದಲು ೭ ಕೆಲಸಗಳನ್ನು ಮಾಡಿಸಿಬಿಡುತ್ತಾರೆ, ಆಗ ನಾವು ಎಲ್.ಒ.ಸಿ. ಕೊಡುವುದಕ್ಕಾಗುವುದಿಲ್ಲ. ಆದಕಾರಣ ಹೆಚ್ಚಿನ ಕೆಲಸ ಮಾಡಿಸಬಾರದೆಂದು ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿದ್ದೇವೆ. ಆದರೆ ಈ ವಿಚಾರದಲ್ಲಿ ಕೆಲ ವೊಮ್ಮೆ ಸಚಿವನಾಗಿ ನಾನೇ ತಪ್ಪನ್ನು ಮಾಡಿದ್ದೇನೆ. ಹೇಗೆಂದರೆ ಸಚಿವನಾಗಿ ನಾನು ಪ್ರವಾಸ ಹೋದ ಕಾಲಕ್ಕೆ ಜನರು ಯಾವುದೋ ಒಂದು ಕೆಲಸವನ್ನು ತೆಗೆದುಕೊಳ್ಳುವಂತೆ ಹೇಳುತ್ತಾರೆ. ಅವರು ಹೇಳುವ ಕೆಲಸ ಸಣ್ಣದಾದರೂ ಸಹ ಅದು ಮಂಜೂರಾಗಿರುವುದಿಲ್ಲ ; ಆ ಕೆಲಸವನ್ನು ತಕ್ಷಣವೇ ಮಾಡಿಸದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದಕಾರಣ ಅದು ಬಡ್ಜೆಟ್‌ನಲ್ಲಿ ಸೇರದಿದ್ದರೂ ಸಹ, ಅದನ್ನು ಜಾಗ್ರತೆ ತೆಗೆದುಕೊಳ್ಳಿ, ಅನಂತರ ಅದಕ್ಕೆ ಒಪ್ಪಿಗೆ ಕೊಡೋಣ ಎನ್ನುವ ದೃಷ್ಟಿಯಲ್ಲಿ ಅಧಿಕಾರಿಗಳಿಗೆ

ಹೇಳಿಬಿಡುತ್ತೇನೆ, ಆ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರೂ ಇರುತ್ತಾರೆ. ಅವರೂ ಸಹ ಮಾಡಿಸುವುದು ಒಳ್ಳೆಯದೆಂದು ಹೇಳುತ್ತಾರೆ. ಆಗ ನಾನು ಪರಿಸ್ಥಿತಿ ನೋಡಿ ಕೆಲಸ ಮಾಡಿ ಎಂದು ಹೇಳಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳು ತಪ್ಪು ಮಾಡಿದರೆಂದು ನಾವು ಹೇಳುವುದಕ್ಕಾಗುವುದಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ಒಂದು ಪದ್ಧತಿಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಅನಂತರ ಮಾನ್ಯ ರಾಮಚಂದ್ರರೆಡ್ಡಿಯವರು ಕ್ಲಾಸ್ (೯)ಎ ಅನ್ನು ತೆಗೆಯಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ಹೈಪವರ್ ಕಮಿಟಿ ರಚನೆ ಮಾಡಿದ್ದೇವೆ. ಅವರು ಇದನ್ನೆಲ್ಲಾ ಕೂಲಂಕುಷವಾಗಿ ವಿಚಾರ ಮಾಡಿ ನೋಡುತ್ತಾರೆ. ಆ ಕಮಿಟಿಯವರು ಇದರ ಬಗ್ಗೆ ಅಂತಿಮ ತೀರ್ಮಾನ ಮಾಡಬೇಕಾಗಿದೆ. ಇದನ್ನು ತೆಗೆಯಬೇಕೆಂಬ ಬಗ್ಗೆ ಅವರೂ ಕೂಡ ಒಂದು ತೀರ್ಮಾನಕ್ಕೆ ಬರಬಹುದೆಂಬ ಅಭಿಪ್ರಾಯವನ್ನು ನಾನು ಇಟ್ಟುಕೊಂಡಿದ್ದೇನೆ.

ಇನ್ನು ಕಳೆದ ಸಲ ನಾನು ರೈಲ್ವೇ ಲೈನ್‌ಗಳ ಬಗ್ಗೆ ಹೇಳಿದ್ದೆ. ನಮ್ಮ ರಾಜ್ಯದಲ್ಲಿ ಹೆಚ್ಚಿನ ರೈಲು ಮಾರ್ಗಗಳನ್ನು ಕೈಗೊಳ್ಳಬೇಕೆಂದು ಕೇಂದ್ರದ ಸಚಿವರಾದ ಶ್ರೀ ಮಧುದಂಡವತೆ ಅವರ ಬಳಿ ಅನೇಕ ರೀತಿಯಿಂದ ಒತ್ತಾಯ ಮಾಡಿದ್ದೇವೆ. ಈಗ ಆಫ್ಟದಿಂದ ರೋಹಾವರೆಗೆ ರೈಲ್ವೆ ಲೈನ್ ಆಗಿದೆ. ರೋಹಾದಿಂದ ಮಂಗಳೂರುವರೆಗೆ ರೈಲ್ವೆ ಲೈನ್ ಇನ್ನೂ ಮಂಜೂರಾಗಿಲ್ಲ. ಇದನ್ನು ಆದಷ್ಟು ಜಾಗ್ರತೆ ಮಂಜೂರು ಮಾಡಿ ಕೆಲಸವನ್ನು ಮಂಗಳೂರು ಕಡೆಯಿಂದ ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ. ಇದಕ್ಕೆ ಮಾನ್ಯ ಮಧುದಂಡವತೆ ಅವರು ಬೆಂಬಲ ರೂಪದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದಕಾರಣ ಸಂಮಾರಾಗಿ ಇದಕೆ ಅವರು ಶೀಘ್ರದಲ್ಲಿಯೇ ಒಪ್ಪಿಗೆ ಕೊಡುವರೆಂಬ ಆಸೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದೇ ರೀತಿ ಬೆಂಗಳೂರು ಮತ್ತು ಮೈಸೂರು ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಮಾಡಬೇಕೆಂದು ಬಹಳ ಕಾಲದಿಂದ ನಾವು ಒತ್ತಾಯ ಮಾಡುತ್ತಿದ್ದೇವೆ. ಈಗ ಇದು ಮಂಜೂರಾಗಿದೆ. ಇದರ ಉದ್ಘಾಟನೆ ನಾಳೆ ದಿವಸ ನಡೆಯಲಿದೆ. ಆದಕಾರಣ ನಾನು ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೊಂದು ಸಂತೋಷದ ವಿಷಯವೆಂದರೆ ಹಾಸನ–ಮಂಗಳೂರು ರೈಲ್ವೆ ಲೈನ್ ಕೆಲಸ ಮುಗಿದಿದ್ದು ಅದರ ಒಂದು ಉದ್ಘಾಟನೆಯೂ ಸಹ ಪಾಡಿದ್ದು ನಡೆಯಲಿದೆ. ಈ ಸಮಾರಂಭಕ್ಕೆ ಶ್ರೀ ಮಧುದಂಡವತೆ ಅವರು ಮತ್ತು ಜಾರ್ಜ್‌ಫರ್ನಾಂಡಿಸ್ ಅವರು ಬರುವವರಿದ್ದಾರೆ. ನಾನು ಸಹ ಅಂದು ಮಂಗಳೂರಿಗೆ ಹೋಗುತ್ತಿದ್ದೇನೆ. ಬೆಂಗಳೂರು–ಗುಂತಕಲ್ ಬ್ರಾಡ್‌ಗೇಜ್ ಲೈನ್ ಮಾರ್ಗವನ್ನು ಜಾಗ್ರತೆ ಮಾಡಿ ಮುಗಿಸಲು ಹಣ ಜಾಸ್ತಿ ಕೊಡಬೇಕೆಂದು ಕೇಂದ್ರದ ಮೇಲೆ ನಾವು ಹೆಚ್ಚಿನ ಒತ್ತಡ ತರುತ್ತಿದ್ದೇವೆ. ಕೆಲಸ ಈಗ ತಡವಾಗಿದೆ ಎಂದು ಕೆಲವರು ಹೇಳಿದ್ದಾರೆ. ಹೈದರಾಬಾದ್ ಕರ್ನಾಟಕದಿಂದ ಬರತಕ್ಕಂಥ ಸದಸ್ಯರು ತಾವು ೪೦೦–೫೦೦ ಮೈಲಿಗಳ ದೂರದಿಂದ ಇಲ್ಲಿಗೆ ಬರಬೇಕಾಗಿದೆ. ಆದಕಾರಣ ಈ ಮಾರ್ಗದ ಕೆಲಸ ಜಾಗ್ರತೆ ಅದರೆ ಒಳ್ಳೆಯದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಇದೊಂದೇ ಕಾರಣವಲ್ಲ. ಇನ್ನೂ ಅನೇಕ ಕಾರಣಗಳಿಂದ ಈ ಕೆಲಸ ಶೀಘ್ರವಾಗಿ ನಡೆಯಬೇಕಾಗಿದೆ, ಮಾನ್ಯ ಸೈನಿಕ್ ಅವರು ಮೀರಜ್‌ನಿಂದ ಬೆಂಗಳೂರುವರೆಗೆ ಬ್ರಾಡ್‌ಗೇಜ್ ಮಾರ್ಗವಾಗಬೇಕೆಂದು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈಗ ಮುಂಬೈನಿಂದ ಪೂನಾವರೆಗೆ ಬ್ರಾಡ್‌ಗೇಜ್ ಮಾರ್ಗವಿದೆ. ಪ್ರಯಾಣಿಕರ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಈ ಕೆಲಸವೂ ಸಹ ಜಾಗ್ರತೆ ಆಗುವುದು ಅಗತ್ಯವಿದೆ. ಹಾಗೆಯೇ ಕಾರವಾರ ಸರ್ವರುತುಬಂದರೆ ಆದಕಾರಣ ಅಲ್ಲಿಗೆ ಹುಬ್ಬಳ್ಳಿಯಿಂದ ಕಾರವಾರಕ್ಕೆ ರೈಲ್ವೆ ಲೈನ್ ಹಾಕುವ ಅಗತ್ಯವಿದೆ. ಇದೇ ವಿಚಾರದಲ್ಲಿ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಪದೇಪದೇ ಒತ್ತಾಯ ತರುತ್ತಿದ್ದಾರೆ. ಶೀಘ್ರವಾಗಿ ಇದರ ಬಗ್ಗೆ ಒಪ್ಪಿಗೆಯನ್ನು ಕೇಂದ್ರದಿಂದ ಪಡೆಯುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜ್ಯದ ಇನ್ನೂ ಅನೇಕ ಕಡೆಗಳಲ್ಲಿ ರೈಲ್ವೇ ಮಾರ್ಗಗಳು ಆಗುವುದು ಅಗತ್ಯವಿದೆ ಎಂದು ಅನೇಕ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಇದೇ ಸಂದರ್ಭದಲ್ಲಿ 'ಏರ್–ಪೋರ್ಟ್‌ಗಳ ಬಗ್ಗೆಯೂ ಕೆಲವು ಸಲಹೆಗಳು ಬಂದಿವೆ. ಮಂಗಳೂರಿನ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಮಂಗಳೂರಿನಲ್ಲಿರತಕ್ಕಂಥ' ಏರ್‌ಪೋರ್ಟ್‌ನಲ್ಲಿ ದೊಡ್ಡದೊಡ್ಡ ವಿಮಾನಗಳನ್ನು ಇಳಿಸುವುದಕೆ ಕಷ್ಟವೆಂದು ತಜ್ಞರು ತಾಂತ್ರಿಕವಾಗಿ ಅಭಿಪ್ರಾಯ ಕೊಟ್ಟಿದ್ದಾರೆ. ಈಗ ಅಲ್ಲಿ ಸ್ಥಳದ ಬಗ್ಗೆ ಜಿಜ್ಞಾಸೆ ಬಂದಿದೆ. ಅದು ಇನ್ನೂ ಬಗೆಹರಿದಿಲ್ಲ. ಜಾಗ ಯಾವುದೇ ಆಗಬಹುದು, ಆದರೆ ಈ ಬಗ್ಗೆ ತಾಂತ್ರಿಕ ತಜ್ಞರ ಜೊತೆಯಲ್ಲಿ ವಿಚಾರ ಮಾಡುವುದು ಅಗತ್ಯವಿದೆ. ಇದಕ್ಕಾಗಿ ಚೇಂಬರ್ ಆಫ್ ಕಾಮರ್ಸ್ ಅವರು ೫ ಎಕರೆ ಭೂಮಿ

ಯನ್ನು ಕೊಡಬಿದರೆ ಹತ್ತಿರ ಕೊಡುತ್ತೇವೆಂದು ಹೇಳಿದ್ದರು. ಆದರೆ ಅದು ಆಗುವುದಿಲ್ಲವೆಂದು ಟೆಕ್ನಿಕಲ್ ಒಪೀನಿಯನ್ ಬಂತು. ಆದ್ದರಿಂದ ಮತ್ತೊಂದು ಕಡೆ ಒಂದು ಒಳ್ಳೆಯ ರನ್‌ವೇ ಮಾಡಿ ದೊಡ್ಡ ವಿಮಾನಗಳು ಇಳಿಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮಾಡಿದ್ದಾರೆ. ಈಗ ಬೆಂಗಳೂರಿನಿಂದ ಮಂಗಳೂರು ವಿಮಾನ ಸಂಚಾರ ನಡೆಯುತ್ತಾ ಇಲ್ಲ. ಆದ್ದರಿಂದ ಕೆಲವರಿಗೆ ತೊಂದರೆಯಾಗಿದೆ. ಇನ್ನು ಕೆಲವು ದಿವಸಗಳಲ್ಲಿ ಅದು ಪ್ರಾರಂಭವಾಗುತ್ತದೆ. ಬೆಂಗಳೂರಿನಿಂದ ಮಂಗಳೂರು ಮತ್ತು ಬೆಂಗಳೂರಿನಿಂದ ಬಾಂಬೆ ಈಗ ಎರಡು ವಿಮಾನಗಳು ಓಡುತ್ತಿವೆ. ಗುಲ್ಬರ್ಗ, ಬೆಳಗಾಂ, ಹುಬ್ಬಳ್ಳಿ, ಬಿಜಾಪುರ. ಈ ಪ್ರದೇಶಗಳಲ್ಲಿ ವಿಮಾನ ನಿಲ್ದಾಣವನ್ನು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ.

ಶ್ರೀ ಎಮ್. ಎಮ್. ನಡಾಫ್—ಹುಬ್ಬಳ್ಳಿಯಲ್ಲಿ ಒಂದು ವಿಮಾನ ನಿಲ್ದಾಣ ಮಾಡಬೇಕೆಂದು ೪ ಎಕರೆ ಜಮೀನನ್ನು ಅದಕ್ಕಾಗಿ ತೆಗೆದಿಟ್ಟಿದ್ದಾರೆ. ಈಗಾಗಲೇ ಅಲ್ಲಿ ಪ್ರಿಲಿಮಿನರಿ ವರ್ಕ್ಸ್ ಆಗಿದೆ.

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ನಿಜವಾಗಿರಬಹುದು. ಆದರೆ ದಾವಣಗೆರೆ, ಬಿಜಾಪುರ, ಗುಲ್ಬರ್ಗ, ಹುಬ್ಬಳ್ಳಿ, ಧಾರವಾಡ, ಬೆಳಗಾಮ್ ಈ ಎಲ್ಲಾ ಕಡೆಗಳಲ್ಲೂ ಕೂಡ ವಿಮಾನ ನಿಲ್ದಾಣ ಮಾಡಬೇಕೆಂಬ ಉದ್ದೇಶ ಇದೆ. ಹಾಗೆಯೇ ಹಾಸನದಲ್ಲಿ ಒಂದು ವಿಮಾನ ನಿಲ್ದಾಣ ಮಾಡಿದರೆ ಅಲ್ಲಿಗೆ ಅನೇಕ ಪ್ರವಾಸಿಗರು ಬೇಲೂರು ಹಳೇಬೀಡುಗಳನ್ನು ನೋಡಲು ಬರುತ್ತಾರೆ. ಹೀಗೆ ಅನೇಕ ಕಡೆಗಳಲ್ಲಿ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರತಕ್ಕ ಪ್ರದೇಶಗಳಿಗೆ ವಿಮಾನ ಸಂಚಾರವನ್ನು ಒದಗಿಸಲು ವಿಮಾನ ನಿಲ್ದಾಣಗಳನ್ನು ನಿರ್ಮಿಸಬೇಕೆಂಬ ಉದ್ದೇಶವೂ ಇದೆ. ಇದರ ಬಗ್ಗೆ ಪತ್ರ ವ್ಯವಹಾರಗಳೂ ಮುಂದುವರಿಯುತ್ತಾ ಇವೆ. ಈಗ ಸದ್ಯಕ್ಕೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ವಿಮಾನ ನಿಲ್ದಾಣವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಮಾಡಬೇಕೆಂಬ ಬಹುದಿನದ ಬಯಕೆ ಈಡೇರಬಹುದು. ಈಗ ಮೊನ್ನೆ ತಾನೆ ಕೇಂದ್ರ ಸರ್ಕಾರದ ಸಚಿವರು ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಬೆಂಗಳೂರು ವಿಮಾನ ನಿಲ್ದಾಣವನ್ನು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಮಾಡಲು ಮಂಜೂರು ಮಾಡುತ್ತೇವೆ. ಅಲ್ಲಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ. ರನ್‌ವೇಗಳನ್ನು ವಿಸ್ತರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಮತ್ತು ಮಂಗಳೂರಿನ ವಿಮಾನ ನಿಲ್ದಾಣದಲ್ಲಿರುವ ಕಟ್ಟಡವನ್ನು ಸ್ವಲ್ಪ ಬದಲಾಯಿಸಿ. ರನ್‌ವೇಗಳನ್ನು ವಿಸ್ತರಿಸಿ ಬೋಯಿಂಗ್ ವಿಮಾನಗಳು ಹೋಗುವುದಕ್ಕೂ ಬರುವುದಕ್ಕೂ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಬೋಯಿಂಗ್-೭೩೭ ಇಳಿಯುವುದಕ್ಕೆ ಏನು ವ್ಯವಸ್ಥೆ ಬೇಕೋ ಅವೆಲ್ಲವನ್ನೂ ಮಾಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರು ವಿಮಾನ ನಿಲ್ದಾಣದ ಕೆಲಸ ಕಾರ್ಯಗಳು ಈಗಾಗಲೇ ನಡೆಯುತ್ತಿವೆ. ಅತಿ ಶೀಘ್ರದಲ್ಲಿಯೇ ನಾವು ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕಾಣಲಿದ್ದೇವೆ.

ಇನ್ನು ಮಾನ್ಯ ಸದಸ್ಯರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ದೂರವಾಣಿ ಸೌಲಭ್ಯ ಇಲ್ಲಾ ಎಂದು ಹೇಳಿದ್ದಾರೆ. ಕೆಲವು ಕಡೆ ಈ ಸೌಲಭ್ಯ ಇದೆ. ಎಲ್ಲೆಲ್ಲಿ ಆ ಸೌಲಭ್ಯ ಇಲ್ಲವೋ ಅದನ್ನು ಎಲ್ಲಾ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಒದಗಿಸಿಕೊಡಲು ಅದಕ್ಕೆ ಸಂಬಂದಪಟ್ಟ ಫೈಲನ್ನು ಹಣಕಾಸಿನ ಇಲಾಖೆಗೆ ಕಳುಹಿಸಿದ್ದೇವೆ. ಹಣದ ಸೌಲಭ್ಯ ದೊರೆತ ನಂತರ ಅದನ್ನು ನಾವು ವಿಚಾರ ಮಾಡುತ್ತೇವೆ. ಕುದುರೆಮುಖದಲ್ಲಿ ಇರತಕ್ಕಂಥಹ ಕಟ್ಟಡಗಳ ಬಗ್ಗೆ ಮತ್ತು ಹೈಕೋರ್ಟ್ ಕಟ್ಟಡಕ್ಕೆ ಬೆಂಕಿ ಬಿದ್ದ ಮೇಲೆ ಅದನ್ನು ಪುನರ್ ನಿರ್ಮಾಣ ಮಾಡಿದ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ ಕೆಲಸ ಕಾರ್ಯಗಳನ್ನು ನಾವು ಹೆಮ್ಮೆ ಪಡುವ ರೀತಿಯಲ್ಲಿ ಮಾಡಿದ್ದೇವೆ. ಇನ್ನೂ ಕೆಲವು ಅನೇಕ ಕೆಲಸ ಕಾರ್ಯಗಳು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ ಎಂದು ಹೇಳಿದ್ದಾರೆ. ಇವತ್ತು ನಾನು ಹೇಳುತ್ತೇನೆ ನಮ್ಮ ಇಲಾಖೆಯಲ್ಲಿ ಅನೇಕ ಕೆಲಸಕಾರ್ಯಗಳು ಇಡೀ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಾ ಇವೆ. ಆದರೆ ನನಗೆ ಗೊತ್ತಿರುವ ಹಾಗೆ ಯಾವ ಕೆಲಸವು ನೆನೆಗುದಿಗೆ ಬಿದ್ದಿಲ್ಲ ಎನ್ನುವ ಮಾತನ್ನು ನಾನು ಆಡುವುದಿಲ್ಲ. ನಾನು ಒಪ್ಪುತ್ತೇನೆ ಹಲವಾರು ಕಾರ್ಯಗಳು ನೆನೆಗುದಿಗೆ ಬಿದ್ದಿವೆ. ತಡ ಆಗಿದೆ ಕೆಲವು ಕೆಲಸಕಾರ್ಯಗಳು ನಡೆಯುತ್ತಾ ಇವೆ. ಕೆಲಸಗಳ ಕಡೆ ಹಣವನ್ನು ಡೈವರ್ಟ್ ಮಾಡಿ ಅವುಗಳನ್ನು ಮುಗಿಸಬೇಕು ಎಂದು ಬಜೆಟ್‌ನಲ್ಲಿ

ಹೇಳಿದ್ದೇವೆ. ಆ ಕೆಲಸಗಳು ಮುಗಿಯದ ಹೊರತು ಹೊಸ ಕೆಲಸಗಳನ್ನು ತೆಗೆದುಕೊಳ್ಳಬಾರದು ಎನ್ನುವ ಉದ್ದೇಶವಿದೆ. ಹಣ ಸಾಕಷ್ಟು ದೊರೆಯದೇ ಇದ್ದ ಕಾರಣ ಕೆಲವು ಕೆಲಸಗಳು ಉಳಿದುಕೊಳ್ಳುತ್ತವೆ. ಹಣದ ಲಭ್ಯತೆಯನ್ನು ನೋಡಿಕೊಂಡು ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಅನೇಕ ಮಾನ್ಯ ಸದಸ್ಯರು ಬೇರೆ ಬೇರೆ ವಿಚಾರಗಳನ್ನು ಸಹಾ ಪ್ರಸ್ತಾಪ ಮಾಡಿದ್ದಾರೆ. ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸುವಾಗ ಎಲ್ಲಾ ಕ್ಷೇತ್ರಗಳಿಗೂ ಸರಿಸಮನಾಗಿ ಹಣವನ್ನು ಒದಗಿಸಿಲ್ಲವೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಎಂ. ಸಿ. ಬಸಪ್ಪನವರು ಮತ್ತು ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ಯಾವ ಯಾವ ಡಿವಿಜನ್‌ಗೆ ಎಷ್ಟೆಷ್ಟು ಹಣವನ್ನು ಒದಗಿಸಿದೆ ಎನ್ನುವ ವಿಚಾರವನ್ನು ಸಹಾ ಪ್ರಸ್ತಾಪ ಮಾಡಿದ್ದಾರೆ. ಕೆ.ಆರ್. ನಗರ ಡಿವಿಜನ್‌ಗೆ ಜಾಸ್ತಿ ಹಣವನ್ನು ಕೊಟ್ಟಿದ್ದೀರ ಪಿರಿಯಾಪಟ್ಟಣ ಡಿವಿಜನ್‌ನ ಕಾಳಮರಿಗೌಡರ ಕ್ಷೇತ್ರಕ್ಕೆ ಹಣವನ್ನು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಸಾಧ್ಯವಾದಷ್ಟು ಎಲ್ಲಾ ಶಾಸಕರ ಕ್ಷೇತ್ರಗಳಿಗೂ ಏನೇನು ಕೆಲಸ ಆಗಬೇಕು ಎನ್ನುವುದರ ಬಗ್ಗೆ ಗಮನ ಕೊಟ್ಟು ಹಣವನ್ನು ಒದಗಿಸಿದ್ದೇವೆ. ಒಂದು ವೇಳೆಯಾವುದಾದರೂ ಕ್ಷೇತ್ರಕ್ಕೆ ಏನೂ ಕೆಲಸಗಳನ್ನು ಕೊಟ್ಟಿಲ್ಲ ಎನ್ನುವ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಗಮನ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸತಕ್ಕಂತಹ ಕಾಲದಲ್ಲಿ ಎಲ್ಲಾ ಕ್ಷೇತ್ರಗಳಿಗೂ ಸರಿಸಮನಾಗಿ ಹಂಚತಕ್ಕಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆನ್ನುವ ಮಾತನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಡಿ. ಟಿ. ರಾಮು ಅವರು ನನಗೆ ಒಂದು ಅಭಿನಂದನೆಯನ್ನು ಸಲ್ಲಿಸಿದರು. ನಾನು ಪ್ರವಾಸ ಮಾಡತಕ್ಕ ಕಾಲದಲ್ಲಿ ಅಡಿಗಲ್ಲು ಸಮಾರಂಭಕ್ಕೆ ಹೋದಾಗ ನಾನು ಮಂತ್ರಿಯಾದ ಮೇಲೆ ಒಂದೇ ಒಂದು ಕಟ್ಟಡದ ಶಂಕು ಸ್ಥಾಪನೆ ಮಾಡಿಲ್ಲ. ಆ ಸಾಂಪ್ರದಾಯಿಕ ಕೆಲಸವನ್ನು ಅಲ್ಲಿನ ಕಾರ್ಮಿಕ ಪ್ರತಿನಿಧಿ, ಅವನು ಹರಿಜನನಾಗಲಿ ಅಥವಾ ಬೇರೆ ಯಾವುದೇ ಜನಾಂಗದವರಾಗಿರಲಿ ಅವರನ್ನು ಕರೆದು ಚಡ್ಡಿ ಪ್ರಭುಗಳ ಕೈಯಲ್ಲಿ ಶಂಕು ಸ್ಥಾಪನೆ ಮಾಡಿಸಿದ್ದೇನೆ. ನಿಜವಾಗಿಯೂ ಈ ವಿಚಾರಕ್ಕೆ ನಾನು ಬಹಳ ಸಂತೋಷ ಪಟ್ಟಿದ್ದೇನೆ. ನಮ್ಮ ಇಲಾಖೆಯವರು ಸಂತೋಷ ಪಟ್ಟಿದ್ದಾರೆ. ಲಕ್ಷಾಂತರ ರೂಪಾಯಿಗಳ ಒಂದು ಕೆಲಸವನ್ನು ಮಾಡತಕ್ಕಂತಹ ಕಾಲದಲ್ಲಿ ಈ ಅಡಿಗಲ್ಲು ಹಾಕತಕ್ಕಂತಹ ಒಂದು ಕಾರ್ಯವನ್ನು ನಾನು ಈ ಕಾರ್ಮಿಕ ಪ್ರತಿನಿಧಿ ಚಡ್ಡಿ ಪ್ರಭುಗಳ ಕೈಯಲ್ಲಿ ಮಾಡಿಸಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರೂ ಕೂಡ ಸಂತೋಷ ಪಟ್ಟಿದ್ದಾರೆ. ಮೊನ್ನೆ ನಾನು ಈ ಅಡಿಗಲ್ಲು ಹಾಕಿದಂತಹವರ ಒಂದು ಹೆಸರುಗಳ ಪಟ್ಟಿಯನ್ನು ತರಿಸಿ ನೋಡಿದೆ. ಅದರಲ್ಲಿ ಹರಿಜನರಿದ್ದಾರೆ, ಬೇರೆ ಹಿಂದುಳಿದ ವರ್ಗದವರು ಇದ್ದಾರೆ, ಕುರುಬರು ಇದ್ದಾರೆ, ಲಿಂಗಾಯಿತರು ಇದ್ದಾರೆ, ಮುಸ್ಲಿಮರು ಇದ್ದಾರೆ ಎಲ್ಲರೂ ಎಲ್ಲಾ ಕೋಮಿನವರೂ ಇದ್ದಾರೆ ಈ ಶಂಕು ಸ್ಥಾಪನೆಯನ್ನು ಮಾಡುವಾಗ ಆ ಕಾರ್ಮಿಕ ಪ್ರತಿನಿಧಿ ಚಡ್ಡಿ ಪ್ರಭುವನ್ನು ಕರೆದರೂ ಬರುವುದಿಲ್ಲ, ಅಂತಹ ಸಂದರ್ಭದಲ್ಲಿ ಅವನನ್ನು ಹಿಡಿದು ತರೆಸಿ ಅವನಿಂದ ಆ ಕೆಲಸವನ್ನು ಮಾಡಿಸಿದ್ದೇನೆ, ಎಷ್ಟೋ ಸಾರಿ ಈ ಚಿತ್ರವನ್ನು ತೆಗೆದುಕೊಂಡು ಪತ್ರಿಕೆಯಲ್ಲೂ ಸಹಾ ಹಾಕಿದ್ದಾರೆ. ಇದನ್ನು ಸಾಮಾನ್ಯ ಜನರು ನೋಡಿ ಸಂತೋಷ ಪಟ್ಟಿದ್ದಾರೆ. ನನ್ನ ಉದ್ದೇಶ ಏನೆಂದರೆ ನಾವೇನೋ ಸರ್ಕಾರದ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೆ ಸ್ಥಾನಮಾನಗಳು ಇವೆ. ಆದರೆ ಆ ಸಾಮಾನ್ಯ ಕಾರ್ಮಿಕನಿಗೂ ಕೂಡ ತನಗೂ ಈ ಸರ್ಕಾರದಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ ಎನ್ನುವ ಭಾವನೆಯನ್ನು ಬೆಳೆಸುವುದಕೋಸ್ಕರವಾಗಿ ಈ ಒಂದು ಕಾರ್ಯಕ್ರಮವನ್ನು ನಾನು ಮಾಡಿಕೊಂಡು ಬಂದಿದ್ದೇನೆ. ಈ ಕಾರ್ಯಕ್ರಮವನ್ನು ಸಾರ್ವಜನಿಕರು ಮೆಚ್ಚಿ ಸಂತೋಷಪಟ್ಟಿದ್ದಾರೆ. ನಾನು ಇಲ್ಲಿಯವರೆಗೂ ಮಾನ್ಯ ಸದಸ್ಯರು ತಮ್ಮ ಚರ್ಚೆಯಲ್ಲಿ ಎತ್ತಿರತಕ್ಕಂತಹ ಅನೇಕ ವಿಷಯಗಳ ಬಗ್ಗೆ ನಾನು ಉತ್ತರ ಕೊಟ್ಟಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್ ಅವರು ನಾಳೆ ಉತ್ತರ ಕೊಟ್ಟರೆ ಒಳ್ಳೆಯದು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು.

೭-೦೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಅನುಕೂಲತೆ ನೋಡಿಕೊಂಡು ಯಾವಾಗಲಾದರೂ ಮಾಡಬಹುದು ಎಂದು ಹೇಳಿದೆ, ತಮ್ಮ ಉದ್ದೇಶವನ್ನು ಹೇಳಿದರು, ಆಗಬಹುದು ಎಂದೆ, ತಮ್ಮ ಅನಾನುಕೂಲವನ್ನು ಅವರು ಸೂಚಿಸಿದರು, ಆಗಬಹುದು ಎಂದೆ, ಅದಕ್ಕೋಸ್ಕರ ಇಲ್ಲಿ ಉಪಸ್ಥಿತನಿದ್ದೇನೆ.

ಶ್ರೀ ಎಸ್. ಬಂಗಾರಪ್ಪ .—ನನಗೆ ಒಂದು ಸಂತೋಷ ಏನೆಂದರೆ, ಮಾನ್ಯ ಸದಸ್ಯರು ನನಗೆ ಒಳ್ಳೆಯ ಸಹಕಾರವನ್ನು ಕೊಟ್ಟಿದ್ದಾರೆ. ನಾಳೆ ಕೇಂದ್ರ ಸರ್ಕಾರದ ಮಂತ್ರಿಗಳು ಬರುವವರಿದ್ದಾರೆ, ಬೇರೆ ಒಂದು ಕಾರ್ಯಕ್ರಮವಿದೆ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮೇಲೆ, ಅದಕ್ಕೆ ಬೆಂಬಲ ಕೊಟ್ಟರು, ಅದಕ್ಕಾಗಿ ಅವರಿಗೆ ನಾನು ಚಿರಋಣಿಯಾಗಿದ್ದೇನೆ.

ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಗಳನ್ನು ಜಾಸ್ತಿ ಮಾಡಬೇಕು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಕನ್‌ವರ್ಟ್ ಮಾಡಬೇಕು ಎಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ. ಇದರ ಬಗೆ ಕೇಂದ್ರ ಸರ್ಕಾರದ ಜೊತೆಗೆ ಪ್ರಯತ್ನ ಪಟ್ಟಿದ್ದೇವೆ, ಆ ಪ್ರಯತ್ನವನ್ನು ಮುಂದುವರೆಸುತ್ತೇವೆ. ಈಗಿರತಕ್ಕ ರಾಷ್ಟ್ರೀಯ ಹೆದ್ದಾರಿಗಳಿಗೆ ಕೇಂದ್ರ ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸಬೇಕು. ಅದು ಕನ್‌ಸ್ಟ್ರಕ್ಷನ್‌ಗೆ ಆಗಲೀ, ಮೇಂಟನೆನ್ಸ್‌ಗೆ ಆಗಲೀ, ರಿಪೇರ್ಸ್‌ಗೆ ಆಗಲೀ, ಕೇಂದ್ರ ಸರ್ಕಾರ ಜಾಸ್ತಿ ಹಣವನ್ನು ಒದಗಿಸಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಯಾವ ಒಂದು ಕಾರ್ಯಕ್ರಮವನ್ನು ಹಾಕಿಸಿಕೊಂಡಿದೆಯೋ ಅದಕ್ಕೆ ಅನುಸಾರವಾಗಿ ಎಷ್ಟು ಬರಬೇಕೊ ಅಷ್ಟು ಹಣ ಮಾತ್ರ ಬರುವುದಕ್ಕೆ ಸಾಧ್ಯವಾಗುತ್ತದೆ, ಆದರೂ ಕೂಡ ನಾವು ಪ್ರಯತ್ನ ಮಾಡುತ್ತೇವೆ ಮತ್ತೆ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೊಂದು ಯೋಚನೆ ನನಗೆ ಇದೆ. ಏನೆಂದರೆ, ಇವತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿವೆ. ಘಟಪ್ರಭ ಮಲಪ್ರಭ ಯೋಜನೆಗಳನ್ನು ಹೊಂದಿದ್ದೇವೆ. ಮಂಗಳೂರಿನಲ್ಲಿ ಒಳ್ಳೆಯ ಬಂದರನ್ನು ಪಡೆದಿದ್ದೇವೆ, ಅಲ್ಲಿ ಫರ್ಟಿಲೈಸರ್ ಫ್ಯಾಕ್ಟರಿ ಕೂಡ ಇದೆ. ರಾಷ್ಟ್ರೀಯ ಹೆದ್ದಾರಿಗಳನ್ನು ಮಾತಡಕ್ಕ ಕಾಲದಲ್ಲಿ ಜನಸಂಚಾರ ವಾಹನ ಸಂಚಾರ, ಸರಕು ಸಾಗಾಣಿಕೆಗೆ ಹೆಚ್ಚಿನ ಒಂದು ಒತ್ತಡ ಅಲ್ಲಿ ಬರಬಹುದು, ಅಲ್ಲಿ ನಾವು ಕೊಡಬೇಕಾಗುತ್ತದೆ. ಇವತ್ತು ಉತ್ಪನ್ನ ಮಾಡತಕ್ಕಂಥ ನೀರಾವರಿಯನ್ನು ಇಟ್ಟುಕೊಂಡು ಸರಿಯಾದ ಸಂಪರ್ಕ ಸಾಧನವನ್ನು ಕೊಡದೇಹೋದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ನ್ಯಾಷನಲ್ ಹೈವೇ ನಂಬರ್ ೧೩ ಅದು ಕಾರ್ಕಳದಿಂದ ಶುರುವಾಗಿ ಪಡುಬಿದ್ರೆ ಹತ್ತಿರ ಡೀವಿಯೇಷನ್ ಪ್ರಾರಂಭವಾಗಿ ನೆಮ್ಮಾರ್ ಶ್ರೀಂಗೇರಿ ತಾಲ್ಲೂಕಿಗೆ ಬರುತ್ತದೆ. ಅದರ ಮೂಲಕ ಶೃಂಗೇರಿ ಮಾನ್ಯ ಸದಸ್ಯರಾದ ದಿವಾಕರ್ ಅವರ ಕ್ಷೇತ್ರವಾದ ತೀರ್ಥಹಳ್ಳಿ. ಶಿವಮೊಗ್ಗ ನ್ಯಾಷನಲ್ ಹೈವೇ ನಂಬರ್ ೪ ಚಡಸದಿಂದ ಹುಬ್ಬಳ್ಳಿ ಹತ್ತಿರ ಹೋಗಿ ಕ್ರಾಸ್‌ಮಾಡಿ ಬಾಗಲಕೋಟೆ ನ್ಯಾಷನಲ್ ಹೈವೇ ನಂಬರ್ ೧೩ಿಗೆ ಸೇರತಕ್ಕ ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ಮಾಡತಕ್ಕ ವಿಚಾರವನ್ನು ನಾನು ಇಟ್ಟುಕೊಂಡಿದ್ದೇನೆ. ಮಲಪ್ರಭ, ಘಟಪ್ರಭ ಯೋಜನೆ ಇದ್ದು ರಾಷ್ಟ್ರೀಯ ಹೆದ್ದಾರಿ ಮಾಡದೇ ಹೋದರೆ ಸಾಗಾಣಿಕೆಗೆ ತೊಂದರೆ ಬರಬಹುದು. ಕರ್ನಾಟಕ ರಾಜ್ಯದ ನಕ್ಷೆ ಇಟ್ಟುಕೊಂಡು ವಿಚಾರಮಾಡಿ ಹೊಸ ರಾಷ್ಟ್ರೀಯ ಹೆದ್ದಾರಿಯನ್ನು ಮಾಡತಕ್ಕ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಮತ್ತೊಂದು ಸಲಹೆ ಇದೆ. ಏನೆಂದರೆ, ಬೆಂಗಳೂರು ಹೊನ್ನಾವರ ರಸ್ತೆಯನ್ನು ನ್ಯಾಷನಲ್ ಹೈವೇ ಮಾಡಬೇಕು ಎಂದು ಇದೆ, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲೂ ನ್ಯಾಷನಲ್ ಹೈವೇ ಮಾಡಬೇಕು ಎನ್ನುವ ಅಭಿಪ್ರಾಯ ಇದೆ, ಇದರ ಬಗ್ಗೆ ನಾವು ಪ್ರಯತ್ನವನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ನಮ್ಮ ಹೈದರಾಬಾದ್ ಕರ್ನಾಟಕ ಭಾಗದಿಂದ ಬಂದಂಥ ಮಿತ್ರರ ಬಗ್ಗೆ ಒಂದು ಮಾತನ್ನು ನಾನು ಆಡಬೇಕು, ಬಾರ್ಡರ್ ರೋಡ್ಸ್, ಇಂಟರ್ ಸ್ಟೇಟ್ ರೋಡ್ಸ್ ಏನಿದೆ ಅವು ಗೋವಾ ಕರ್ನಾಟಕ, ಮಹಾರಾಷ್ಟ್ರ ಕರ್ನಾಟಕ ತಮಿಳುನಾಡು ಕರ್ನಾಟಕದ ಕಡೆಯಿಂದ ಬರುತ್ತದೆ, ಅಥವಾ ಗೋವಾ ಕರ್ನಾಟಕ ಬರಬಹುದು ಕೇರಳ ಕರ್ನಾಟಕ ನಮಗೆ ಹೆಚ್ಚಾಗಿ ಬರಬಹುದು ಗೋವಾ ಕೇರಳ ಮತ್ತು ತಮಿಳುನಾಡು ನಮಗೆ ಹೆಚ್ಚಿಗೆ ಅಷ್ಟು ಬರುವುದಿಲ್ಲ. ಅಂತರ ರಾಜ್ಯ ರಸ್ತೆಗಳ ಸಂಪರ್ಕ ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಹೆಚ್ಚು ಬರುತ್ತದೆ ಆದರಲ್ಲೂ ಆಂಧ್ರದಲ್ಲಿ ಜಾಸ್ತಿ ಇದೆ. ಹೈದರಾಬಾದ್ ಕರ್ನಾಟಕ ಅಂದರೆ ಬೀದರ್. ಗುಲ್ಬರ್ಗ ಮತ್ತು ರಾಯಚೂರಿನಲ್ಲಿ ಸಂಪರ್ಕ ಸಾಧನ ಬಹಳ ಕಡಿಮೆ ಇದೆ ಜಾಸ್ತಿ ಮಾಡಬೇಕು ಎಂದು ಹೇಳಿದ್ದಾರೆ. ಆ ಭಾಗದಲ್ಲಿ ರಸ್ತೆಗಳು ಕಡಿಮೆ, ಟಾರ್ ರಸ್ತೆಗಳು ಕಡಿಮೆ, ಆಂಧ್ರ ಪ್ರದೇಶದಲ್ಲಿ ಚೆನ್ನಾಗಿ ಮಾಡಿದ್ದಾರೆ. ನಮ್ಮಲ್ಲಿ ಮಾಡಿಲ್ಲ ಎಂದು ಹೇಳಿದ್ದಾರೆ. ಆಂಧ್ರದವರು ಅನೇಕ ರಸ್ತೆಗಳನ್ನು ಚೆನ್ನಾಗಿ ಮಾಡಿದ್ದಾರೆ ನಿಜ. ನಮ್ಮ ಕಡೆಯಲ್ಲಿ ಮಾಡಬೇಕು. ಮೊದಲು ನಮ್ಮ ರಸ್ತೆಗಳು ಚೆನ್ನಾಗಿದ್ದವು. ಕರ್ನಾಟಕದವರು ಚೆನ್ನಾಗಿ ಮಾಡಿಬಿಟ್ಟಿದ್ದಾರೆ ಎಂದು ಆಂಧ್ರಪ್ರದೇಶದವರು ಮಾಡಿಬಿಟ್ಟರು, ಅವು ನಮಗಿಂತ ಚೆನ್ನಾಗಿ ಆಗಿವೆ. ನಮ್ಮದು ದುಸ್ಥಿತಿಯಲ್ಲಿದೆ ಎಂದು ಹೇಳಬೇಕು. ಅಂತರರಾಜ್ಯ ರಸ್ತೆಗಳು ಏನಿವೆ ಅವುಗಳಿಂದ

ಎಕನಾಮಿಕ್ ಇಂಪ್ರೂವ್‌ಮೆಂಟ್ಸ್ ಇರಬೇಕು. ಆರ್ಥಿಕವಾಗಿ ಪ್ರಾಮುಖ್ಯತೆಯುಳ್ಳ ಪಡೆದಿರತಕ್ಕಂಥ ರಸೆ ಗಳಿಗೆ ಸೇತುವೆಗಳಿಗೆ ಕೇಂದ್ರ ಸರ್ಕಾರದವರು ನಮಗೆ ಸಾಲದ ರೂಪದಲ್ಲಾಗಲೀ ಕೊಡತಕ್ಕಾಂಥಾದನ್ನು ನಾವು ಉಪಯೋಗ ಮಾಡಿಕೊಳ್ಳಬೇಕು. ಆಂಧ್ರಪ್ರದೇಶದ ಲೋಕೋಪಯೋಗಿ ಇಲಾಖೆಯ ಸಚಿವ ರೊಡನೆ ಇದರ ಬಗ್ಗೆ ಮಾತನಾಡಿದ್ದೇನೆ. ಆ ಸಚಿವರನ್ನು ಕರೆದು, ಹೈದರಾಬಾದ್-ಕರ್ನಾಟಕ ಭಾಗದ ಶಾಸಕರನ್ನು ಕರೆದು ಸಭೆ ಮಾಡಿ, ಅವರ ಅಭಿಪ್ರಾಯವನ್ನು ಪಡೆದು ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದೇನೆ. ಈ ಶಾಸನಸಭೆ ಮುಗಿದ ನಂತರ ಆಂಧ್ರದವರ ಜೊತೆ ಸಭೆಮಾಡಿ ತೀರ್ಮಾನ ತೆಗೆದುಕೊಂಡು ಹಣ ಒದಗಿಸತಕ್ಕ ಬಗ್ಗೆ ಪ್ರಯತ್ನಮಾಡುತ್ತೇನೆ. ಉಳಿದಿರತಕ್ಕ ಭಾಗಗಳಲ್ಲಿ ನಾನು ಪ್ರವಾಸಮಾಡಿ, ಅದರ ಪ್ರಾಮುಖ್ಯತೆಯನ್ನು ನೋಡಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸಯುನಕ್‌ರವರು ಮತ್ತು ಬೇರೆಯವರು ಕೂಡ ಒಂದು ಮಾತನ್ನು ಹೇಳಿದರು. ಕಾಳಿ ಪ್ರಾಜೆಕ್ಟ್ ನ್ಯಾಷನಲ್ ಹೈವೇ ೧೭ರಲ್ಲಿ ಇರತಕ್ಕಂಥಾದ್ದು. ಕಾಳಿನದಿ ಏನು ಒಂದು ಸಮುದ್ರಕ್ಕೆ ಸೇರುತ್ತದೆ ಅಲ್ಲಿ ಒಬ್ಬ ಇಂಜನಿಯರ್ ತೀರಿಕೊಂಡು ಹೋದರು. ಕಾಳಿನದಿ ಪ್ರಾಜೆಕ್ಟ್ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ. ೧೯೮೧ರ ಜುಲೈ ಹೊತ್ತಿಗೆ ಮುಗಿಸಬೇಕು ಎಂದು ಇದ್ದೇವೆ, ಕೆಲಸ ತೀವ್ರಗತಿಯಲ್ಲಿ ನಡೆಯುತ್ತಿದೆ. ಹೊಸ ನಮೂನೆಯ ಸೇತುವೆಯಾಗಿದೆ, ಮೇಲ್ಮಟದ ತಾಂತ್ರಿಕತೆಯಿಂದ ಕೂಡಿರತಕ್ಕಂಥಾದ್ದು. ಕೆಲಸಕಾರ್ಯಗಳು ಹಗಲು ರಾತ್ರಿ ೨೪ ಗಂಟೆ ಕೆಲಸ ನಡೆಯುತ್ತಿದೆ, ರಾತ್ರಿ ಹೊತ್ತು ದೀಪ ಹಾಕಿಕೊಂಡು ಕೆಲಸಮಾಡುತ್ತಿದ್ದಾರೆ. ಮಾನ್ಯ ಸಯುನಕ್‌ನವರು ನ್ಯಾಷನಲ್ ಹೈವೇ ೪ ಖಾನಾಪುರದ ಹತ್ತಿರ ಹೋಗುತ್ತದೆ ಎಂದು ಹೇಳಿದ್ದಾರೆ. ಈ ಸದನದಲ್ಲೇ ಆ ವಿಷಯ ಬಂದಿದ್ದು. ಅದರ ಬಗ್ಗೆ ನಾವು ಗಮನಕೊಟ್ಟು ಕೆಲಸಮಾಡುವ ಪ್ರಯತ್ನ ಮಾಡುತ್ತೇನೆ ಮಾನ್ಯ ಸದಸ್ಯರಾದ ಆಮುರ್ಗಂರವರು ಕೋಲಾರ ಕೆಜಿಎಫ್. ಕೊಪ್ಪಂಗೆ ಹೋಗತಕ್ಕಂಥ ಕಡೆ ಒಳ್ಳೆಯ ರಸ್ತೆಯನ್ನು ಮಾಡಬೇಕು ಎಂದು ಹೇಳಿದರು. ಕೊಪ್ಪಂ ರಸ್ತೆ ಆಂಧ್ರಪ್ರದೇಶಕ್ಕೆ ಹೋಗತಕ್ಕಂಥ ರಸ್ತೆ ಇದರ ಬಗ್ಗೆ ನಾನು ಕೇಂದ್ರಸರ್ಕಾರದ ಗಮನಕ್ಕೆ ತರುತ್ತೇನೆ. ಅವರಿಗೆ ವಹಿಸಿಕೊಡೋಣ ಇಲ್ಲದೇಹೋದರೆ ನಾವಾದರೂ ಹಣ ಜಾಸ್ತಿ ತೆಗೆದುಕೊಳ್ಳಬೇಕು. ಅಲ್ಲಿ ಜೆಮೆಲ್‌ನ ವಾಹನಗಳು ಓಡಾಡುತ್ತವೆ. ಹಿಂದೆ ಭಾರಿ ತೂಕ ಇರತಕ್ಕ ವಾಹನಗಳು ಓಡಾಡಲಿಕ್ಕೆ ಅನುಕೂಲವಾದ ಸೇತುವೆಯನ್ನು ಕಟ್ಟಲಿಲ್ಲ. ಹಿಂದೆ ಓಡಾಡತಕ್ಕ ವಾಹನಗಳ ತೂಕವನ್ನನುಸರಿಸಿ ಕಟ್ಟಿದೆವು. ಈಗ ಭಾರಿ ದೊಡ್ಡ ದೊಡ್ಡ ವಾಹನಗಳು ಹೋದರೆ ಸೇತುವೆ ಉಳಿಯಲಿಕ್ಕಿಲ್ಲ. ಈಗ ನಮ್ಮ ಇಲಾಖೆ ವತಿಯಿಂದ ಕಟ್ಟಿಸಬೇಕಾದರೆ ಹೆಚ್ಚು ಹಣ ಬೇಕಾಗುತ್ತದೆ. ಆದುದರಿಂದ ಕೇಂದ್ರದ ರಕ್ಷಣಾ ಮಂತ್ರಿಗಳಾದ ಶ್ರೀಮಾನ್ ಜಗಜೀವನರಾಂ ಅವರನ್ನು ಭೇಟಿಮಾಡಿ ದಯಮಾಡಿ ನೀವು ಹಣ ಕೊಡದೇ ಹೋದರೆ ಬಹಳ ಕಷ್ಟವಾಗುತ್ತದೆ ನಿಮ್ಮ ಯಂತ್ರಗಳನ್ನು ಓಡಾಡದಹಾಗೆ ಮಾಡಿ, ಇಲ್ಲದೇ ಹೋಹರೆ ಹಣ ಕೊಡಿ ಎನ್ನು ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಅದಕ್ಕೆ ಅವರು ಒಂದು ಬೋರ್ಡ್ ಇದೆ, ಅದರ ಮುಂದೆ ಈ ವಿಷಯವನ್ನಿಟ್ಟು ಹಣ ಜಾಸ್ತಿ ಕೊಡತಕ್ಕ ಪ್ರಯತ್ನವನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ. ಆದುದರಿಂದ ಈ ಪ್ರಯತ್ನವನ್ನು ನಾವು ಮುಂದುವರೆಸುತ್ತೇವೆ, ಸನ್ಮಾನ್ಯ ಮಿತ್ರರೂ ಕೂಡ ಸ್ವಲ್ಪ ಒತ್ತಡ ತರ ಬೇಕು ಎನ್ನುವಮಾತನ್ನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ಮಾತನಾಡುತ್ತಾ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಟೀಕೆ ಟಿಪ್ಪಣಿಗಳನ್ನು ಮಾಡಿ ಅನೇಕ ಒಳ್ಳೊಳ್ಳೆಯ ಹೋಲಿಕೆಗಳನ್ನು ಮಾಡಿದ್ದಾರೆ. ಅವರಿಗೆ ಇನ್ನು ಹೆಚ್ಚು ಕಾಲಾವಕಾಶವನ್ನು ಮಾತನಾಡುವುದಕ್ಕೆ ಕೊಟ್ಟಿದ್ದಿದ್ದರೆ ಇನ್ನು ಹೆಚ್ಚಿನ ಸಲಹೆ ಹಾಗೂ ಟೀಕೆಗಳನ್ನು ಮಾಡುತ್ತಿದ್ದರೆಂದು ನನಗನಿಸುತ್ತದೆ. ಅದು ಏನೇ ಆಗಲಿ ಅವರು ಮಾಡಿರತಕ್ಕ ಟೀಕೆಗಳೆಲ್ಲವೂ ಕೂಡ ಸದಭಿಪ್ರಾಯದಿಂದಲೇ ಕೂಡಿರುವಂಥಾದ್ದಾಗಿದೆ. ಅವರು ತಮ್ಮ ಭಾಷಣದ ಮಧ್ಯ ದ್ರೌಪದಿ, ಪಂಚಪಾಂಡವರು ಇತ್ಯಾದಿ ಪಥಗಳನ್ನು ಉಪಯೋಗಿಸಿದ್ದಾರೆ. ಸ್ವಾಮಿ, ನಮ್ಮ ಇಲಾಖೆಯು ದಿನೇ ದಿನೇ ಬೆಳೆಯುತ್ತಹೋಗುತ್ತಿದೆ ಅದಕ್ಕೆ ತಕ್ಕಂತ ಯೋಜನಾ ಆಯೋಗದವರು ನೀರಾವರಿ, ವಿದ್ಯುಚ್ಛಕ್ತಿ ಇತ್ಯಾದಿಗಳಿಗೆ ಹಣವನ್ನು ಕೊಟ್ಟಮೇಲೆ ನಾವೂ ಕೂಡ ಇದಕ್ಕಾಗಿ ಹೆಚ್ಚು ಕಾಲವನ್ನು ಮೀಸಲಿಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಇರಿಗೇಷನ್ ಸುಮಾರು ೪೦-೪೨ ಪರ್ಸೆಂಟ್ ಇರಬೇಕು. ಆದರೆ ಈಗ ಸುಮಾರು ೨೦ ಪರ್ಸೆಂಟ್‌ನಷ್ಟು ಇದೆ. ಇನ್ನೂ ೨೦-೨೨ ಪರ್ಸೆಂಟ್ ಇರಿಗೇಷನ್ ಪಡೆಯಬೇಕಾಗಿದೆ. ಈ ಸಂದರ್ಭದಲ್ಲಿ ಸಣ್ಣ ನೀರಾವರಿ, ದೊಡ್ಡ ನೀರಾವರಿ

ಮಧ್ಯಮ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಎಲ್ಲ ಕೆಲಸಗಳನ್ನೂ ಒಬ್ಬ ಇಂಜಿನಿಯರೇ ನೋಡಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಒಂದೊಂದಕ್ಕೂ ಒಬ್ಬೊಬ್ಬ ಇಂಜಿನಿಯರ್ ಇದ್ದರೆ ಒಳ್ಳೆಯದು. ಹಿಂದೆ ನಮ್ಮ ಮೈಸೂರು ರಾಜ್ಯ ಬಹಳ ಚಿಕ್ಕದಾಗಿತ್ತು. ಜನಸಂಖ್ಯೆ ಹೆಚ್ಚು ಇರಲಿಲ್ಲ. ಆದರೆ ಇವತ್ತು ಜನಸಂಖ್ಯೆ ಹೆಚ್ಚುತ್ತಿರುವುದರಿಂದ ನಾವು ಎಷ್ಟೇ ರಸ್ತೆಗಳನ್ನು ಮಾಡಿದರೂ, ಎಷ್ಟೇ ಕಟ್ಟಡಗಳನ್ನು ಕಟ್ಟಿದರೂ ಕೂಡ ಸಾಕಾಗುತ್ತಿಲ್ಲವಾಗಿದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಆಸ್ಪತ್ರೆಗಳನ್ನು ಜಾಸ್ತಿ ಕಟ್ಟಿಸಬೇಕೆಂದು ಹೇಳಿದರು. ಈ ಆಸ್ಪತ್ರೆಗಳನ್ನು ಕಟ್ಟುವ ಕೆಲಸ ನಮಗೆ ಸೇರಿದ್ದಲ್ಲ. ಆರೋಗ್ಯ ಇಲಾಖೆಯವರು ನಮಗೆ ಹಣ ಕೊಟ್ಟು ಕಟ್ಟಡ ಕಟ್ಟಿಕೊಡಿ ಎಂದು ಹೇಳಿದರೆ ಕಟ್ಟಿಕೊಡುತ್ತೇನೆ. ಇದೊಂದೇ ಇಲಾಖೆಯದಲ್ಲ ಯಾವುದೇ ಇಲಾಖೆಯವರಾಗಲಿ ನಮ್ಮ ಇಲಾಖೆಗೆ ಹಣ ಕೊಟ್ಟು ಇಂಥ ಕಡೆ ಕಟ್ಟಡಗಳನ್ನು ಕಟ್ಟಿ ಇಂಥ ಕಡೆ ರಸ್ತೆಗಳನ್ನು ಮಾಡಿ ಎಂದು ಹೇಳಿದರೆ ಮಾಡುತ್ತೇವೆ. ಇವತ್ತು ಜನಸಂಖ್ಯೆ ಎಷ್ಟು ಮಟ್ಟಿಗೆ ಬೆಳೆಯುತ್ತಿದೆ ಎಂದರೆ ನಾವು ಹೋಟೆಲಿಗೆ ಹೋದರೂ ಕ್ಯೂ ನಿಲ್ಲಬೇಕು. ಸಿನಿಮಾಕ್ಕೆ ಹೋದರೆ ಕ್ಯೂ ನಿಲ್ಲಬೇಕು, ಇಷ್ಟೇ ಅಲ್ಲ ನಾವು ಜನತಾ ಗೃಹಗಳನ್ನು ಕಟ್ಟಿ ಯಾರೋ ಒಬ್ಬನಿಗೆ ಅಲಾಟ್ ಮಾಡಿದರೆ, ಸ್ವಾಮಿ, ನನ್ನ ಅಣ್ಣನಿಗೆ ಮನೆ ಇರಲಿಲ್ಲ. ಅವನು ಬಂದು ಆ ಮನೆಯಲ್ಲಿ ಸೇರಿಕೊಂಡು ಬಿಟ್ಟಿದ್ದಾನೆ, ನನ್ನ ತಮ್ಮ ಬಂದು ಸೇರಿಕೊಂಡು ಬಿಟ್ಟಿದ್ದಾನೆ, ನನಗೆ ಮನೆ ಇಲ್ಲವಾಗಿದೆ, ಇನ್ನೊಂದು ಮನೆ ಅಲಾಟ್ ಮಾಡಿ ಎಂದು ಬರುತ್ತಾರೆ. ಅಂದರೆ ಅಷ್ಟು ಜನಸಂಖ್ಯೆ ನಮ್ಮಲ್ಲಿ ಬೆಳೆಯುತ್ತಿದೆ. ಮೊದಲು ನಮ್ಮ ಭಾರತದ ಜನಸಂಖ್ಯೆ ಸುಮಾರು ೩೩ ಕೋಟಿ ಇತ್ತು, ಆದರೆ ಇವತ್ತು ೬೪ ಕೋಟಿ ಇದೆ. ಜನಸಂಖ್ಯೆ ಇಷ್ಟು ವೇಗವಾಗಿ ಬೆಳೆಯುತ್ತಿರುವುದರಿಂದ ಅವರ ಸಮಸ್ಯೆಯನ್ನು ನಾವು ಪರಿಹರಿಸುವುದಕ್ಕಾಗುತ್ತಿಲ್ಲ. ಆದರೂ ನಮ್ಮ ಶಕ್ತಿಮೀರಿ ಈ ಸಮಸ್ಯೆಗಳನ್ನು ಪರಿಹರಿಸುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಹಿಂದೆ ನಮ್ಮ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿತ್ತು. ಇತ್ತೀಚೆಗೆ ನಮ್ಮ ಇಲಾಖಾ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ ಈಗ ಕುಡಿಯುವ ನೀರಿನ ಬಗ್ಗೆ ಕೂಗು ಸ್ವಲ್ಪ ಕಡಿಮೆಯಾಗಿದೆ, ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ರಾಮಚಂದ್ರ ರೆಡ್ಡಿಯವರು ಇನೇನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದೆಲ್ಲಕ್ಕೂ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಹೇಳಿರುವಂತೆಯೇ ನಾನು ಕೂಡ ಬಹಳಷ್ಟು ಉದಾರಣೆಗಳನ್ನು ಕೊಟ್ಟು ಹೇಳಬೇಕಾಗುತ್ತದೆ. ಅವರು ಛೀಫ್ ಇಂಜಿನಿಯರ್ ಹುದ್ದೆಯನ್ನು ಆದಷ್ಟು ಬೇಗ ಭರ್ತಿ ಮಾಡಿ ಎಂದು ಹೇಳಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ. ಮೊನ್ನೆತಾನೆ ಕೆಲವು ಇಂಜಿನಿಯರ್‌ಗಳನ್ನು ನೇಮಕ ಮಾಡಿಕೊಂಡಿದ್ದೇವೆ ಇನ್ನೂ ಸುಮಾರು ೪೦೦ ಜನ ಇಂಜಿನಿಯರ್‌ಗಳನ್ನು ಭರ್ತಿ ಮಾಡಬೇಕಾಗಿದೆ. ಅದಕ್ಕೆ ಈಗಾಗಲೇ ಅರ್ಜಿಗಳನ್ನೂ ಕೂಡ ಕರೆದಿದ್ದೇವೆ, ಇನ್ನು ಕಳೆದ ಸಾರಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ತುಂಬಾ ಮೇಧಾವಿಗಳನ್ನೇ ಆಯ್ಕೆ ಮಾಡಿದ್ದೇವೆ. ಈ ವಿಚಾರದಲ್ಲಿ ಬಹಳಷ್ಟು ಜನ ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ, ಈ ಸಾರಿಯೂ ಕೂಡ ಹಿಂದಿನ ಸಾರಿಯಂತೆಯೇ ಒಳ್ಳೆಯ ಅಭ್ಯರ್ಥಿಗಳನ್ನು ಆರಿಸುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಅರ್ಮುಗಂರವರು ಒಂದು ಪ್ರಮುಖವಾದ ವಿಷಯವನ್ನು ಏನು ಪ್ರಸ್ತಾಪ ಮಾಡಿದ್ದಾರೆಂದರೆ

> "the quota that has got to be set apart for Scheduled Castes/Scheduled Tribes."

ಎಂದು ಹೇಳಿದ್ದಾರೆ. ಹಿಂದೆ ಈ ವಿಚಾರದಲ್ಲಿ ಬಹಳ ಏರುಪೇರುಗಳಿದ್ದುದು ನಿಜ. ನಾನು ಇಲ್ಲಿಗೆ ಸಚಿವನಾಗಿ ಬಂದಮೇಲೆ ಈ ಏರುಪೇರುಗಳನ್ನು ಆದಷ್ಟೂ ಕಡಿಮೆ ಮಾಡಿದ್ದೇನೆ. ಇಲ್ಲಿ ನಿಮ್ಮ ವರ್ಗದವರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲದಿದ್ದುದರಿಂದ ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳನ್ನು ನೇರವಾಗಿ ನೇಮಕ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡು ಪಬ್ಲಿಕ್ ಸರ್ವೀಸ್ ಕಮಿಷನ್‌ನವರಿಗೆ ತಿಳಿಸಿದ್ದೇವೆ. ಇಲ್ಲಿ ಏನೊಂದು ತೊಡಕು ನಮಗೆ ಅಡ್ಡಿ ಬಂದಿದೆ ಎಂದರೆ ಡಾಕ್ಟರ್‌ಗಳನ್ನು ಅಪಾಯಿಂಟ್ ಮಾಡುವಾಗ ಅವರಿಗೆ ರಿಟನ್ ಟೆಸ್ಟ್ ಮಾಡುವುದಿಲ್ಲ. ಅದೇರೀತಿ ಈ ಇಂಜಿನಿಯರ್‌ಗಳಿಗೂ ರಿಟನ್ ಟೆಸ್ಟ್ ಇಡಬೇಕೇ ? ಬೇಡವೆ ? ಎಂಬುದು. ಈ ವಿಚಾರದಲ್ಲಿ ನಮಗೂ ಮತ್ತು

ಲೋಕಸೇವಾ ಆಯೋಗದವರಿಗೂ ಪತ್ರ ವ್ಯವಹಾರ ನಡೆಯುತ್ತಿದೆ. ಮಾನ್ಯ ಸದಸ್ಯರು ಮಾತನಾಡುತ್ತಾ ಇಲ್ಲಿ ಸುಮಾರು ೨೫–೩೦ ಜನ ಛೀಫ್ ಇಂಜಿನಿಯರ್‌ಗಳಿದ್ದಾರೆ. ಅವರ ಪೈಕಿ ಒಬ್ಬರೂ ನಿಮ್ಮ ವರ್ಗದವರು ಇಲ್ಲವೆಂದು ಹೇಳಿದ್ದಾರೆ. ಈ ಹುದ್ದೆಗೆ ಮೀಸಲಾತಿ ಇಲ್ಲದಿದ್ದರೂ ಕೂಡ ನಿಮ್ಮವರ್ಗದವರು ಒಬ್ಬರಾದರೂ ಇರಬೇಕೆಂದು ನಾವು ಒಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಇದಕ್ಕೂ ಒಂದು ತೊಡಕು ಏನು ಅಡ್ಡಿ ಇದೆ ಎಂದರೆ ಛೀಫ್ ಇಂಜಿನಿಯರ್ ಹುದ್ದೆ ಸೆಲೆಕ್ಷನ್ ಕಂ ಸೀನಿಯಾರಿಟಿಯದು. ಕಾನೂನು ಪ್ರಕಾರ ಛೀಫ್ ಇಂಜಿನಿಯರ್ ಹುದ್ದೆಗೆ ಆಯ್ಕೆಯಾಗಬೇಕಾದರೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಹುದ್ದೆಯಲ್ಲಿ ಕನಿಷ್ಟ ೫ ವರ್ಷ ಸೇವೆ ಸಲ್ಲಿಸಿರಬೇಕೆಂದು ಇದೆ. ಇಲ್ಲಿ ನಿಮ್ಮವರ್ಗದವರನ್ನೇ ಹೊಸದಾಗಿ ನೇರವಾಗಿ ನೇಮಿಸಿಕೊಂಡರೆ ಅವರಿಗೆ ಅಷ್ಟು ಅನುಭವ ಇರುವುದಿಲ್ಲ. ಈಗ ಈ ಕನ್‌ವೆನ್‌ಷನ್‌ನ್ನು ಸ್ವಲ್ಪ ಸಡಿಲ ಮಾಡಿ ೨ ವರ್ಷ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ್ದರೆ ಸಾಕು ಅವರನ್ನು ಛೀಫ್ ಇಂಜಿನಿಯರ್‌ರವರ ಹುದ್ದೆಗೆ ನೇಮಕ ಮಾಡಬಹುದೆಂದು ಮಾಡಿದ್ದೇವೆ, ಆದ್ದರಿಂದ ಇದುವರೆಗೂ ನಿಮ್ಮವರ್ಗದವರನ್ನು ನಾವು ಛೀಫ್ ಇಂಜಿನಿಯರ್ ಆಗಿ ನೇಮಕ ಮಾಡುವುದಕ್ಕೆ ಆಗಿರಲಿಲ್ಲ. ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಈ ರಾಜ್ಯದ ಛೀಫ್ ಸೆಕ್ರೆಟರಿಯವರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ೪–೫ ಜನರನ್ನು ಒವರ್‌ಲುಕ್ ಮಾಡಿ ಕೊಟ್ಟರು ಅದರಂತೆಯೇ ಇಲ್ಲೂ ಮಾಡಬಹುದಾಗಿತ್ತು ಎಂದು ಹೇಳಿದರು. ಆದರೆ ಇದು ಸೆಲೆಕ್ಷನ್ ಕಂ ಸೀನಿಯಾರಿಟಿ ಪೋಸ್ಟ್ ಆದ್ದರಿಂದ ಇಲ್ಲಿ ಸೀನಿಯಾರಿಟಿಯನ್ನೂ ನೋಡಬೇಕಾಗುತ್ತದೆ. ಒಟ್ಟಿನಲ್ಲಿ ನಿಮ್ಮವರ್ಗದವರೊಬ್ಬರನ್ನು ಛೀಫ್ ಇಂಜಿನಿಯರ್ ಆಗಿ ನೇಮಿಸಲೆಬೇಕೆಂಬ ನೀತಿಯನ್ನು ಸರ್ಕಾರ ಹೊಂದಿದ್ದು ಅದರಂತೇ ಪ್ರಯತ್ನ ಕೂಡ ಮಾಡುತ್ತಿದ್ದೇವೆದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನೇಕ ವಿಷಯಗಳ ಲೆಕ್ಕ ಇಲ್ಲಿ ಇದೆ, ಆದರೆ ಅದನ್ನೆಲ್ಲ ಈಗ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಲೆಜಿಲ್ಸೇಟರ್ಸ್ ಹೋಂ ಬಗ್ಗೆ ಮಾನ್ಯ ರಾಮಚಂದ್ರ ರೆಡ್ಡಿಯರು ಹೇಳಿದ್ದಾರೆ, ಆ ಕೆಲಸದ ಮೊದಲನೆಯ ಸ್ಟೇಜನ್ನು ಕಂಟ್ರಾಕ್ಟರಿಗೆ ಕೊಟ್ಟು ಮಾಡಿಸಿದಿರಿ ಮತ್ತು ಎರಡನೆ ಸ್ಟೇಜನ್ನು ಇಲಾಖೆಯ ವತಿಯಿಂದ ಕಂಟ್ರಾಕ್ಟರುಗಳಿಗಿಂತ ಕಡಿಮೇ ವೆಚ್ಚದಲ್ಲಿ ಮಾಡಿದ್ದೀರಿ ಇದಕ್ಕೆ ಕಾರಣವೇನು ಎಂದು ಕೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಆ ಮನೆಯ ಅಧ್ಯಕ್ಷರು ಎಲ್ಲ ಸೇರಿ ಒಂದು ತೀರ್ಮಾನ ಮಾಡಿ ೧೦೦ ಕೊಠಡಿಗಳಿರುವಂತಹ ಒಂದು ಕಟ್ಟಡವನ್ನು ಕಟ್ಟದಿದ್ದರೆ ಶಾಸಕರಿಗೆ ಬಹಳ ತೊಂದರೆಯಾಗುತ್ತದೆಂದೂ ಹಾಗೂ ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೆ ಹೋದರೆ ಟೆಂಡರ್ ಕರೆಯುವುದು ಅದಕ್ಕೆಲ್ಲ ಕಾಲ ವಿಳಂಬವಾಗುದಾದ್ದರಿಂದ ಶೀಘ್ರವಾಗಿ ಈ ಒಂದು ಕೆಲಸ ಮುಗಿಯಬೇಕೆಂದು ನಾವೇ ಪ್ರಾರಂಭ ಮಾಡಿದೆವು. ಇದು ತಮ್ಮ ಸಮುಖದಲ್ಲಿ ತೀರ್ಮಾನವಾಗಿರತಕ್ಕ ವಿಷಯ. ಇಲ್ಲಿ ತಪ್ಪು ತಿಳಿದುಕೊಳ್ಳಬಾರದೆಂದು ಈ ಮಾತನ್ನು ಹೇಳುತ್ತಿದ್ದೇನೆ. ತತ್ಸಂಬಂಧವಾಗಿ ಇಲಾಖೆಯ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿರುವುದು ತಿಳಿದು ಬಂದಿದೆ. ಒಳ್ಳೆಯ ಕೆಲಸ ಮಾಡತಕ್ಕ ಕಂಟ್ರಾಕ್ಟರ್ ಇದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಸರ್ಕಾರದಲ್ಲಿ ಯಾವ ರೀತಿ ಕೆಲಸವಾಗುತ್ತದೋ ಹಾಗೆ ಕಂಟ್ರಾಕ್ಟರು ಗಳಿಂದಲೂ ಕೂಡ ಕೆಲವು ಸಾರಿ ತಡವಾಗುತ್ತದೆ. ಕಂಟ್ರಾಕ್ಟರುಗಳಿಗೆ ಕೊಡತಕ್ಕ ಕೆಲಸಗಳನ್ನು ಕೊಟ್ಟಿದ್ದೇವೆ. ಇವತ್ತು ಕೆಲಸ ಮಾಡಿ ಹೋಗಿ ನಾಳೆ ದಿವಸ ಸರ್ಕಾರದ ತಲೆ ಮೇಲೆ ಗೂಬೆ ಕೂರಿಸತಕ್ಕ ಕೆಲಸ ಮಾಡಿದವರು ಇದ್ದಾರೆ. ರೇಟ್ಸ್ ರಿವೈಸ್ ಆಗಬೇಕೆಂದರೆ ಹಣವನ್ನು ಎಲ್ಲಿಂದ ತರಬೇಕು ? ಕೆಲವು ಕಂಟ್ರಾಕ್ಟರುಗಳು ತಮ್ಮ ಸ್ವಾರ್ಥತೆಯಿಂದ ಮಾಡಿದ ನಷ್ಟವನ್ನು ಸರ್ಕಾರ ಅನುಭವಿಸಬೇಕಾಗಿದೆ. ಆ ಅಪವಾದವನ್ನು ನಾವು ಹೊರಬೇಕಾಗಿದೆ, ಒಳ್ಳೆಯ ಕಂಟ್ರಾಕ್ಟರುಗಳು ಇದ್ದಾರೆ. ೬–೭ ತಿಂಗಳುಗಳ ಮುಂಚೆಯೇ ಕೆಲಸವನ್ನು ಮಾಡಿಕೊಟ್ಟಿರತಕ್ಕ ಕಂಟ್ರಾಕ್ಟರುಗಳು ಇದ್ದಾರೆ. ಕೆಲವೊಮ್ಮೆ ೫–೧೦ ಪರ್ಸೆಂಟ್ ಎಕ್ಸಸ್ ರೇಟ್ ಕೊಟ್ಟರೂ ಅಡ್ಡಿಯಿಲ್ಲ, ಕೆಲಸ ಚನ್ನಾಗಿ ಮಾಡಿಕೊಟ್ಟರೆ ಅವನಿಗೆ ಕೊಡಬಹುದು, ೫ ವರ್ಷಗಳ ಕಾಲ ಯಥೇಚ್ಛವಾಗಿ ಹಣ ಕೊಡವುದು ತಪ್ಪುತ್ತಿದೆ. ಇದೆಲ್ಲ ಆಯಾಯ ಕೆಲಸಗಳನ್ನು ಅವಲಂಬಿಸಿರುತ್ತದೆಂದು ಹೇಳುತ್ತೇನೆ. ಇನ್ನು ಲೆಜಿಸ್ಲೇಟರ್ ಹೋಮ್‌ಅನ್ನು ಎಕ್ಸ್‌ಟೆಂಡ್ ಮಾಡುವ ತರ್ಡ್ ಸ್ಟೇಜ್ ಕೆಲಸ ಏನಿದೆ ಅದನ್ನು ನಾವು ಒಳ್ಳೆಯ ಅಭಿಪ್ರಾಯದಿಂದ ತೆಗೆದುಕೊಂಡಿದ್ದೇವೆ. ಇಷ್ಟನ್ನು ಮಾನ್ಯ ರಾಮಚಂದ್ರ ರೆಡ್ಡಿಯವರಿಗೆ ತಿಳಿಸಿ ಸಾಮಾನ್ಯವಾಗಿ ಇಲ್ಲಿ ಮಾನ್ಯ ಬಿ. ರಾಮಯ್ಯನವರು, ಎಂ. ಸಿ. ಬಸಪ್ಪನವರು ಇವರೆಲ್ಲ ಅನೇಕ ವಿಷಯಗಳನ್ನು ಕೊಟ್ಟಿದ್ದಾರೆ, ಕಬಿನಿ ಪ್ರಾಜೆಕ್ಟ್ ಬಗ್ಗೆ ಮಾನ್ಯ ಬಸಪ್ಪನವರು ಹೇಳಿದ್ದಾರೆ, ಅಲ್ಲಿ ಬರತಕ್ಕ ನಾಲ್ಕು ಪಂಚೆಕ ಗಳು ೧೯೬೪ರಲ್ಲಿ ಆಗಿದ್ದರೆ ಕೇವಲ ೩೨ ಲಕ್ಷದಲ್ಲಿ ಆಗುತ್ತಿದ್ದವು ಆದರೆ ಇವತ್ತು ೫೦–೬೦ ಲಕ್ಷಕ್ಕೆ

ಹೋಗಿವೆ ಎಂದು ಹೇಳಿದ್ದಾರೆ. ಹಿಂದಿನ ಚರಿತ್ರೆ ನನಗೆ ಗೊತ್ತಿಲ್ಲ. ಅದು ಇತ್ತೀಚಿಗೆ ನನ್ನ ಗಮನಕ್ಕೆ ಬಂದಿದೆ ಅದು ಏನೇ ಇರಲಿ. ಈ ಸಂದರ್ಭದಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ ನಾನು ಸಚಿವನಾದಾಗ ಇದನ್ನು ವೈಂಡ್ ಆಪ್ ಮಾಡ ಬೇಕೆಂಬ ಸಂದರ್ಭ ಬಂದಿತ್ತು. ಆದರೆ ನಾನು ಅದನ್ನು ಮುಚ್ಚಬಾರದೆಂಬ ಮನಸ್ಸು ಮಾಡಿದೆ. ಏತಕ್ಕೆಂದರೆ, ಇವತ್ತು ಕಂಟ್ರಾಕ್ಟರುಗಳು ಸರ್ಕಾರದ ಏಜೆನ್ಸಿ ಇದ್ದ ಹಾಗೆ. ಕನ್‌ಸ್ಟ್ರಕ್ಷನ್ ಕಾರ್ಪೋರೇ ಷನ್ನಿನ ವ್ಯವಹಾರ ನೇರವಾಗಿ ಸರ್ಕಾರದ ಹತ್ತಿರ ಇದೆ. ಒಳ್ಳೆಯ ಕಂಟ್ರಾಕ್ಟರುಗಳನ್ನು ನೇಮಿಸಿಕೊಳ್ಳದೆ ಇದ್ದರೆ ಅವರನ್ನು ನಿಭಾಯಿಸುವುದಕ್ಕೆ ಆಗುವುದಿಲ್ಲ. ನಾನು ಯಾವತ್ತೂ ಅಧಿಕಾರಿಗಳನ್ನು ಅಭಿನಂದಿಸುವವನಲ್ಲ, ಆದರೆ ಈ ವಿಷಯದಲ್ಲಿ ಅವರು ಕಷ್ಟಪಟ್ಟು ದುಡಿಯುತ್ತಿರುವುದರಿಂದ ಅವರನ್ನು ಅಭಿನಂದಿಸಬೇಕಾಗಿದೆ. ಅವರು ಯಾವ ರೀತಿ ದುಡಿಯುತ್ತಿದ್ದಾರೆಂದರೆ, ನಮ್ಮ ಟರ್ನ್ ಓವರ್ ಏನಿತು ಅದು ಈಗಾಗಲೇ ತಿಂಗಳಿಗೆ ೫ ರಿಂದ ೬ ಲಕ್ಷ ರೂಪಾಯಿಗಳವರೆಗೆ ಏರಿದೆ. ಅಂದರೆ ೯–೧೦ ಲಕ್ಷ ರೂಪಾಯಿಗಳ ಕೆಲಸವನ್ನು ಈಗಾಗಲೇ ಏರಿಸಿದ್ದಾರೆ. ಬರತಕ್ಕ ವರ್ಷಗಳಲ್ಲಿ ಒಂದು ತಿಂಗಳಿಗೆ ೧೩–೧೪ ಲಕ್ಷ ರೂಪಾಯಿಗಳ ಕೆಲಸವನ್ನು ಏರಿಸತಕ್ಕುದ್ದು ಇದೆ. ಹೀಗೆ ಒಟ್ಟು ೪–೫ರಷ್ಟು ಪಟ್ಟು ಜಾಸ್ತಿ ಮಾಡತಕ್ಕ ತಿರ್ಮಾನಕ್ಕೆ ಬರಲಾಗಿದೆ. ಮಾನ್ಯ ಬಸಪ್ಪನವರು ಏನು ಅನುಮಾನವನ್ನು ವ್ಯಕ್ತಪಡಿಸಿದರೋ ಆ ರೀತಿ ಖಂಡಿತವಾಗಿಯು ಇಲ್ಲ. ಮಾನ್ಯ ಅಧ್ಯಕ್ಷರಿಗೂ ಕೂಡ ಅನುಮಾನ ಇದೆ. ಏಕೆಂದರೆ, ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಏನಾದರೂ ಕೆಲಸವನ್ನು ತೆಗೆದುಕೊಂಡರೆ ನಂಜನಗೂಡಿನ ಪ್ರಾಜೆಕ್ಟನ್ನು ಮಾಡುವುದಿಲ್ಲ ಎಂದು.

ಅಧ್ಯಕ್ಷರು—೮ ವರ್ಷ ತಡಮಾಡಿದರೆ ಕೆಲಸ ಏನಾಗಬಹುದು ? ಎಸ್. ಆರ್. ರೇಟ್ಸ್ ಏನು ?

ಶ್ರೀ ಎಸ್. ಬಂಗಾರಪ್ಪ.—ಕೆಲವು ಸೇತುವೆಗಳು ನಮ್ಮಿಂದ ಪ್ರಾರಂಭವಾಗಲಿಲ್ಲ. ಕೆಲವು ಪ್ರಾಜೆಕ್ಟ್ ಗಳನ್ನು ಬೇರೆ ಕಂಟ್ರಾಕ್ಟರುಗಳು ತಗೆದುಕೊಂಡು ಕೊನೆಗೆ ತಮ್ಮ ಪಾಲಿಗೆ ಬಿಟ್ಟಿದ್ದಾರೆ. ಅನಿವಾರ್ಯವಾಗಿ ಅವುಗಳನ್ನು ಕೂಡ ನಾವೇ ತೆಗೆದುಕೊಂಡು ಮುಗಿಸಬೇಕಾಗಿದೆ. ಬಹಳಷ್ಟು ಕೆಲಸಗಳನ್ನು ಅತಿ ಶೀಘ್ರ ವಾಗಿ ಮಾಡಬೇಕೆಂದು ಮಾಡಿದ್ದೇವೆ. ಅವುಗಳು ಕೂಡ ಜಾಗ್ರತೆಯಾಗಿ ಆಗಬಹುದೆಂಬ ಆಶಯವನ್ನು ಇಟ್ಟುಕೊಂಡಿದ್ದೇವೆ. ಇನ್ನು ಅನೇಕ ಮಿತ್ರರು ಅವರವರ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಹೇಳಿದ್ದಾರೆ ಆದರೆ ಸಮಯಾಭಾವ ಇರುವುದರಿಂದ ಪ್ರತಿಯೊಂದಕ್ಕೂ ಈಗ ಉತ್ತರ ಕೊಡುವುದಕ್ಕೆ ಸಾಧ್ಯವಾಗುವು ದಿಲ್ಲ. ನಂತರ ಸಾಧ್ಯವಾಗಬಹುದೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ಇನ್ನು ಉಳಿದಿರತಕ್ಕ ವಿಷಯ ಗಳನ್ನೇನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವುಗಳಲ್ಲ ಇಲ್ಲೇ ಕವರ್ ಆಗಿರುತ್ತವೆ. ಮತ್ತೊಂದು ಬಹಳ ಮುಖ್ಯವಾದ ಮಾತನ್ನು ಮಾನ್ಯ ಆರ್ಮುಗಂ ಅವರು ಹೇಳಿದ್ದಾರೆ, ಚಿಕ್ಕಹೊಳೆ ಡ್ಯಾಂ ಪ್ರಾಜೆಕ್ಟ್‌ನಲ್ಲಿ ಕೇಸಸ್ ಕೋರ್ಟಿಗೆ ಹೋಗಿದ್ದರೂ ಕೂಡ ಇಲ್ಲಿನ ಒಬ್ಬ ಅಧಿಕಾರಿಗೆ ಪ್ರೊಮೋಷನ್ ಕೊಟ್ಟು ಒಳ್ಳೆಯ ಜಾಗದಲ್ಲಿ ಕೂರಿಸಿದ್ದೀರಿ ಎಂದು. ಅದು ತಮಗೆ ಗೊತ್ತಿದೆ. ನಾನು ಆ ವಿಷಯವನ್ನು ಆ ಕಡೆ ಇದ್ದಾಗಲೇ ಪ್ರಸ್ತಾಪಿಸಿದ್ದೆ. ಆ ಬಗ್ಗೆ ಮೇನೆ ಎಂಬುವರು ಎನ್‌ಕ್ವೈರಿ ಮಾಡಿದ್ದಾರೆ ಮತ್ತು ಆ ವರದಿ ಕೂಡ ಇದೆ. ಆ ಅಧಿಕಾರಿಗೆ ಪ್ರೊಮೋಷನ್ ಅನ್ನು ಕಾನೂನು ಪ್ರಕಾರ ಕೊಡಬೇಕಾಯಿತು. ಕೊಟ್ಟಿದ್ದೇವೆ. ಆ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಹಿಂದಿನ ಸರ್ಕಾರದವರು ತೆಗೆದುಕೊಂಡಿದ್ದಾರೆ. ಆ ಅಧಿಕಾರಿಗೆ ಪ್ರೊಮೋಷನ್ ಕೊಟ್ಟರೂ ಅದೇ ಭಾಗದಲ್ಲಿ ಇರುವುದಕ್ಕೆ ಅವಕಾಶ ಮಾಡಿಲ್ಲ. ತಾವು, ಮತ್ತೆ ಅಲ್ಲೇ ಪೋಸ್ಟಿಂಗ್ಸ್ ಕೊಟ್ಟಿದ್ದೀರೆಂದು ಹೇಳಿದ್ದೀರಿ. ಅದು ಗೊತ್ತಿಲ್ಲದೆ ಒಂದು ಸಾರಿ ಆಗಿತ್ತು, ಅದನ್ನು ಕ್ಯಾನ್ಸಲ್ ಮಾಡಿದ್ದೇವೆ, ಮತ್ತು ಬೇರೆ ಕಡೆಗೆ ವರ್ಗ ಮಾಡಿದ್ದೇವೆಂದು ತಿಳಿಸುತ್ತೇನೆ.

ಎರಡನೆಯದಾಗಿ, ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ಸ್ ಬಗ್ಗೆ ಕೂಡ ಹೇಳಿದ್ದಾರೆ, ಡೆಪ್ಯೂಟಿ ಕಮೀಷನರ್ ಎಕ್ಸಿಕ್ಯೂಟೀವ್ ಎಂಜಿನಿಯರ್‌ರವರ ಹಾಗೂ ಡಿವಿಜನಲ್ ಕಮೀಷನರ್ ಸೂಪರಿಂ ಟೆಂಡಿಂಗ್ ಇಂಜಿನಿಯರ್‌ರವರ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ಗಳನ್ನು ಬರೆಯುವುದನ್ನು ತಪ್ಪಿಸ ಬೇಕೆಂದು ಹೇಳಿದ್ದಾರೆ. ಅದೇ ರೀತಿ ಬಹಳ ಜನ ಕಂಪ್ಲೈಂಟ್ ಮಾಡಿದ್ದಾರೆ, ಅದು ನನ್ನ ಗಮನಕ್ಕೂ ಬಂದಿದೆ. ಹಿಂದೆ ಇದು ಇರಲಿಲ್ಲ, ಕಳೆದ ೪–೬ ವರ್ಷಗಳಿಂದ ಇದು ಬಂದಿದೆ. ಆದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳೊಡನೆ ಮಾತನಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗದುಕೊಳ್ಳುತ್ತೇನೆ.

ಅದನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿರುವುದರಿಂದ ಆ ಒಂದು ಪದ್ಧತಿಯನ್ನು ತಪ್ಪಿಸಬಹುದೆಂಬುದು ನನ್ನ ಭಾವನೆ, ತಪ್ಪಿಸುವುದು ಒಳ್ಳೆಯದು. ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೆ ಇವರು ಏನು ಕೆಲಸ ಮಾಡುತ್ತಾರೆಂಬುದು ಗೊತ್ತಿಲ್ಲದಿದ್ದರೆ ಇವರ ಬಗ್ಗೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಕೂಡ ಬರೆಯುವುದಕ್ಕೆ ಗೊತ್ತಾಗುವುದಿಲ್ಲ. ಆದ್ದರಿಂದ ಅದನ್ನು ತಪ್ಪಿಸುವುದು ಒಳ್ಳೆಯದೆಂದು ನಾನು ವೈಯಕ್ತಿಕ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇನೆ. ಇದನ್ನು ಇಲಾಖೆಯ ದೃಷ್ಟಿಯಿಂದ ಯಾವ ರೀತಿ ಮಾಡಬೇಕೆಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೊಡನೆ ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಸರ್ವಶ್ರೀ ಕಡಿದಾಳ ದಿವಾಕರ್, ಕಕ್ಕಿಲಾಯ, ಮಲ್ಲಪ್ಪನವರು ಚೌಡಯ್ಯನವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಸುಮಾರಾಗಿ ಈಗ ನಾನು ಹೇಳಿರುವ ಉತ್ತರದಲ್ಲಿ ಬಂದಿವೆ. ಇನ್ನು ಮಾನ್ಯ ಮಣ್ಣಶೆಟ್ಟರು ಒಂದು ಮಾತನ್ನು ಹೇಳಿದರು. ನಾನು ಅವರ ಭಾಗಕ್ಕೆ ಪ್ರವಾಸ ಹೋದಾಗ ಎಷ್ಟೋ ವರ್ಷದ ಪೈಪುಗಳು ರಸ್ತೆಯಲ್ಲಿ ಇದ್ದವು, ಅವೆಲ್ಲ ಹಾಳಾಗುತ್ತಿವೆ ಎಂದರು ಅಲ್ಲಿ ಕೆಲಸ ತೆಗೆದುಕೊಳ್ಳುತ್ತಾರೆ, ಆದರೆ ಪೂರ್ಣಗೊಳಿಸುವುದಿಲ್ಲವೆಂದು ಕೂಡ ಹೇಳಿದರು. ಅದು ನಿಜ. ಆ ಬಗ್ಗೆ ನಾನು ಈಗಾಗಲೇ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಹೇಳಿದ್ದೇನೆ. ನಾನು ಅಲ್ಲಿಗೆ ಹೋದಾಗ ನೋಡಿದೆ, ಅಲ್ಲಿ ಒಂದು ಸಣ್ಣ ಸೇತುವೆ ಹತ್ತಿರ ಹೆಣ್ಣು ಮಕ್ಕಳು ಬಟ್ಟೆ ತೊಳೆಯುತ್ತಿದ್ದವು, ಅಲ್ಲಿ ಕೂಡ, ಅರ್ಜೆಂಟ್ ಆಗಿ ಸೇತುವೆರಿಪೇರಿ ಆಗಬೇಕೆಂದು ಆದೇಶ ಕೊಟ್ಟಿದ್ದೇನೆ. ಆದಷ್ಟು ಜಾಗ್ರತೆ ಮಾಡಿಸುತ್ತೇನೆ. ಹಾಗೆಯೇ ರಸ್ತೆಗಳನ್ನು ಮಾಡಿಸಬೇಕೆಂದರು ಮಾಡಿಸುತ್ತೇನೆ. ಮತ್ತು ಅಲ್ಲಿ ಇರತಕ್ಕ ಜಲ್ಲಿಯನ್ನು ಎತ್ತಿಸಬೇಕೆಂದರು. ಹೈದರಾಬಾದ್ ಭಾಗದಲ್ಲಿ ಬರಗಾಲ ಬಂದಿದ್ದಾಗ ಅವರಿಗೆ ಕೆಲಸಗಳನ್ನು ಕೊಡುವುದಕ್ಕೆ ಹೋಗಿ ಜಲ್ಲಿ ಹಾಗೆ ಸ್ಟಾಕ್ ಆಯಿತು. ಈಗ ಅದನ್ನು ಅಲ್ಲಿಂದ ತರುವುದಕ್ಕೆ ಖರ್ಚು ಬಹಳ ಒರುತ್ತದೆ. ಕೆಲಸ ಕೊಡುವ ಸಲುವಾಗಿ ಎಲ್ಲಲ್ಲೋ ಒಡೆಸಿದೆವು. ಅಲ್ಲಿಂದ ಜಲ್ಲಿ ತರುವುದಕ್ಕೆ ಬದಲಾಗಿ ಇಲ್ಲೇ ಬೇಕಾದರೆ, ಅಲ್ಲಿಂದ ತರುವುದಕ್ಕಿಂತ ಕಡಿಮೆ ಖರ್ಚಿನಲ್ಲಿ ಜಲ್ಲಿಯನ್ನು ಒಡೆಸಬಹುದೆಂದು ಇಲಾಖಾ ಅಧಿಕಾರಿಗಳ ಅಭಿಪ್ರಾಯವಾಗಿದೆ. ಅದು ಏನೇ ಇರಲಿ. ಒಟ್ಟಿನಲ್ಲಿ ರೋಡಿನ ಬಗ್ಗೆ ಮತ್ತು ಸೇತುವೆಯ ಬಗ್ಗೆ ಗಮನ ಕೊಡುತ್ತೇನೆಂದು ಹೇಳುತ್ತೇನೆ. ಮಾನ್ಯ ಡಿ. ಟಿ. ರಾಮು ಅವರು ಕೊನೆಯಲ್ಲಿ ಹೇಳಿದರು, ಹರಪ್ಪಾ ಮೊಹೆಂಜೇದಾರರ ಕೆಲಸ ನೆನಪಿರಬಹುದು ಆ ರೀತಿ ತಾವು ಮಾಡಬೇಕೆಂದು ತಿಳಿಸಿದ್ದಾರೆ. ಈ ಇಲಾಖೆಯಲ್ಲಿ ಲಂಚ ಕೂಡ ಜಾಸ್ತಿಯಾಗಿದೆ ಎಂದು ತಿಳಿಸಿದ್ದಾರೆ. ಹರಪ್ಪಾ ಮೊಹೆಂಜೇದಾರರು ಮಾಡಿರತಕ್ಕ ಕೆಲಸದ ಬಗ್ಗೆ ಹೇಳುವುದಾದರೆ, ಈ ನಮ್ಮ ಮಾಸ್ಟರ್ ಪ್ಲಾನ್ ಏನಿದೆ ಇದರಂತೆ ಮುಂದೆ ಒಳ್ಳೊಳ್ಳೆಯ ಕೆಲಸಗಳು ಆದರೆ ಒಳ್ಳೊಳ್ಳೆಯ ಸೇತುವೆಗಳು ನಿರ್ಮಾಣವಾದರೆ, ನಂತರ ಕೆಲವು ಶತಮಾನಗಳು ಕಳೆದ ಮೇಲೆ ಆ ಸೇತುವೆಗಳು ಚನ್ನಾಗಿದ್ದರೆ ಅವುಗಳನ್ನು ಕಾಣಬಹುದೆಂಬ ಆಸೆಯನ್ನಿಟ್ಟುಕೊಂಡಿದ್ದೇನೆ.

೭-೩೦ ಪಿ.ಎಂ.

ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನದಲ್ಲಿ ಕೂಡ ನಾನು ಇದೇ ಮಾತನ್ನು ಹೇಳಿದ್ದೇನೆ, ಇವತ್ತು ಕೂಡ ನಮ್ಮ ಇಲಾಖೆಯಲ್ಲಿ ಲಂಚ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಸ್ವಲ್ಪವೂ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಆಡುವುದಿಲ್ಲ. ನಮ್ಮ ಇಲಾಖೆಯಲ್ಲಿ ಲಂಚ ಇದೆ, ಆದರೆ ಮಾನ್ಯ ಸದಸ್ಯರುಗಳು ಹೇಳಿದಷ್ಟು ಪ್ರಮಾಣದಲ್ಲಿ ಲಂಚ ಇಲ್ಲ. ಈ ಲಂಚ ತೆಗೆದು ಕೊಳ್ಳತಕ್ಕಂಥಾದ್ದನ್ನು ತಡೆಗಟ್ಟಬೇಕಾದರೆ ಎಲ್ಲಾ ಕೈಗಳು ಸೇರಿ ಕೆಲಸಮಾಡಿದರೆ ಮಾತ್ರ ಸಾಧ್ಯ. ಈ ಸಮಾಜನಲ್ಲಿ ಲಂಚ ತೆಗೆದುಕೊಳ್ಳತಕ್ಕಂಥವರು ನಮ್ಮ ಅಣ್ಣತಮ್ಮಂದಿರು, ನಮ್ಮ ಸಂಬಂಧಿಕರು, ನಮ್ಮ ಊರಿನವರು ಆಗಿರಬಹುದು, ಅವರು ಈ ಸಮಾಜದಲ್ಲಿ ಅವಿಭಾಜ್ಯ ಅಂಗವಾಗಿ ಇದ್ದಾರೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡಬೇಕೆಂದರೆ ೧೯೬೭ನೇ ಇಸವಿಯಲ್ಲಿ ನಾನು ಇಲ್ಲಿಗೆ ಎಂ.ಎಲ್.ಎ ಆಗಿ ಆರಿಸಿ ಬಂದಾಗ, ನಮ್ಮ ಊರಿನ ಒಬ್ಬ ಹುಡುಗನಿಗೆ ವಿಲೇಜ್ ಅಕೌಂಟೆಂಟ್ ಆಗಿ ಸೆಲೆಕ್ಟ್ ಕಮಿಟಿಯಲ್ಲಿ ಸೆಲೆಕ್ಟ್ ಮಾಡಿಸಿದ್ದೇನೆ. ಆ ವಿಲೇಜ್ ಅಕೌಂಟೆಂಟ್ ತಂದೆ ಬಹಳ ಬಡವ. ಅವನು ಕ್ಯಾತೋಹಳ್ಳಿಯವನು. ನಾನು ಆಗ ಡೆಪ್ಯುಟಿ ಕಮಿಷನರ್‌ಗೆ ಹೇಳಿ ಅವನನ್ನು ಸೆಲೆಕ್ಟ್ ಮಾಡಿಸಿಕೊಟ್ಟೆ. ಈ ಸಂದರ್ಭದಲ್ಲಿ ಅವನಿಗೆ ಒಂದು ಕಂಡಿಷನ್ ಹಾಕಿ, 'ನೀನು ಒಂದು ಪೈಸೆಯಷ್ಟು ಲಂಚ ತೆಗೆದುಕೊಳ್ಳಕೂಡದು' ಎಂದು ಹೇಳಿ ವಿಲೇಜ್‌ಅಕೌಂಟೆಂಟ್ ಪೋಸ್ಟ್‌ಗೆ ಸೆಲೆಕ್ಟ್ ಮಾಡಿಸಿಕೊಟ್ಟಿದ್ದರೂ ಕೂಡ, ಅವನು ಜಮೀನ್ದಾರರುಗಳಿಂದ ಲಂಚ ತೆಗೆದುಕೊಂಡು ಆ ಊರಿನ ಮುಂಕ್ಕಾಲು ಪಾಲು ಜಮೀನನ್ನು ಆ ಜಮೀನ್ದಾರರ ಹೆಸರಿನಲ್ಲಿ ಬರೆದು ಇಟ್ಟಿದ್ದಾನೆ.

ಆಮೇಲೆ ಅವನು ಪಂಚಾಯತಿಯ ಹಣ ತಿಂದು, ಅದರಲ್ಲಿ ಸಿಕ್ಕಿಹಾಕಿಕೊಂಡು ಸಸ್ಪೆಂಡ್ ಆದ. ಇವತ್ತಿನ ಸಮಾಜದಲ್ಲಿ ಆ ವಿಲೇಜ್ ಅಕೌಂಟೆಂಟ್ ಒಬ್ಬನೇ ಅಲ್ಲ, ಬಹಳಷ್ಟು ಮಂದಿ ಲಂಚ ತೆಗೆದುಕೊಳ್ಳತಕ್ಕಂಥವರು ಇದ್ದಾರೆ. ಇದರಲ್ಲಿ ಲಂಚ ತೆಗೆದುಕೊಂಡವನು, ಲಂಚ ಕೊಡತಕ್ಕಂಥವನು ಇಬ್ಬರೂ ಇದಕ್ಕೆ ಕಾರಣರಾಗಿರುತ್ತಾರೆ. ಈ ಲಂಚ ಎನ್ನತಕ್ಕಂಥಾದ್ದು ರಾಷ್ಟ್ರಮಟ್ಟದಲ್ಲಿ ಕೂಡ ಇದೆ. ಇದನ್ನು ತಡೆಹಿಡಿಯಬೇಕಾದರೆ ಈ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಒಂದು ತೀರ್ಮಾನವಾಗಬೇಕು, ಅದರಂತೆ ನಾವು ಕಾರ್ಯ ನಿರ್ವಹಿಸಬೇಕಾಗುತ್ತದೆ. ಇಷ್ಟನ್ನು ಹೇಳಿ ಇನ್ನು ಅನೇಕ ಮಾನ್ಯಸದಸ್ಯರು ನಮ್ಮ ಇಲಾಖೆಯ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಅನೇಕ ವಿಷಯಗಳ ಬಗ್ಗೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದಕಾರಣ ತಮ್ಮ ಮೂಲಕ ಅವರ ಕ್ಷಮೆ ಯಾಚಿಸುತ್ತೇನೆ. ಈ ವರ್ಷದಲ್ಲಿ ಹೈಪವರ್ ಕಮಿಟಿಯ ರಿಪೋರ್ಟ್ ಬಂದಮೇಲೆ ನಮ್ಮ ಇಲಾಖೆಯು ವಹಿಸಿಕೊಂಡಿರತಕ್ಕಂಥ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ನಾನು ಹೆಚ್ಚಿನ ಗಮನ ಕೊಡುತ್ತೇನೆ. ಇಷ್ಟು ಹೊತ್ತಿನವರೆಗೆ ತಾವೆಲ್ಲಾ ಇಲ್ಲಿ ಕುಳಿತು ನಾನು ಕೊಟ್ಟಂಥ ಸಮಾಧಾನಕರವಾದ ಉತ್ತರವನ್ನು ಸ್ವೀಕಾರ ಮಾಡಿದ್ದೀರಿ. ತಮಗೆಲ್ಲರಿಗೂ ನಾನು ವಂದಿಸಿ, ಮಾನ್ಯ ಅಧ್ಯಕ್ಷರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಷುಗರ್ ಫ್ಯಾಕ್ಟರಿಯವರಿಂದ ಮಾರ್ಕೆಟ್ ಸೆಸ್ಸನ್ನು ವಸೂಲು ಮಾಡುತ್ತಿದ್ದೇವೆ ಎಂದು ಹೇಳಿದರು. ಇದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ವರಮಾನ ಬರುತ್ತಿದೆ. ಇದರಲ್ಲಿ ಸುಮಾರು ೮–೧೦ ಕೋಟಿ ರೂಪಾಯಿಗಳಾದರೂ ಅವರಿಗಾಗಿ ಖರ್ಚಾಗುತ್ತಾ ಇಲ್ಲ. ತಾವು ಇದರಲ್ಲಿ ೩೮ ಲಕ್ಷ, ೪೦ ಲಕ್ಷ, ೪೫ ಲಕ್ಷ ಹೀಗೆ ಖರ್ಚು ಮಾಡುತ್ತಿದ್ದೀರಿ. ಈ ಬಗ್ಗೆ ತಾವು ಒಂದು ಅಗ್ರೀಮೆಂಟ್ ಮಾಡಿಕೊಂಡಿದ್ದೀರಿ. ಅಗ್ರೀಮೆಂಟ್‌ನಲ್ಲಿರುವ ಹಾಗೆ ತಾವು ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಒಳ್ಳೆಯದು. ಏಕೆಂದರೆ ಅವರಿಗೆ ಟ್ರಾನ್ಸ್‌ಪೋರ್ಟ್ ಖರ್ಚು ಜಾಸ್ತಿಯಾಗುತ್ತಿದೆ. ಆದ್ದರಿಂದ ತಾವು ಅಗ್ರೀಮೆಂಟ್ ಪ್ರಕಾರ ನಡೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರವಾಗಿ ನಾನು ಈಗಾಗಲೇ ತಿಳಿಸಿದ್ದೇನೆ. ಈ ಬಗ್ಗೆ ಮತ್ತೆ ಹೇಳಿದರೆ ರಿಪೀಟ್ ಮಾಡಿದಂತಾಗುತ್ತದೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಎಂದರೆ ಮಾರ್ಕೆಟ್ ಸೆಸ್ಸನಿಂದ ಹೆಚ್ಚು ಹಣವನ್ನು ವಸೂಲು ಮಾಡಿದ್ದೀರಿ, ಹೆಚ್ಚು ಹಣವನ್ನು ಖರ್ಚು ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಭೀಮಣ್ಣ ಖಂಡ್ರೆ.—ಈ ವಿಚಾರದಲ್ಲಿ ತಾವು ಅಗ್ರೀಮೆಂಟ್ ಪ್ರಕಾರ ನಡೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲವು ಅಗ್ರಿಮೆಂಟ್ ಪ್ರಕಾರ ನಡೆಯುತ್ತಿದೆ. ಆ ರೀತಿಯಲ್ಲಿ ನಾವು ಕೆಲಸಮಾಡುತ್ತಿದ್ದೇವೆ.

SPEAKER.—The question is :

"That the respective sums not exceeding the amounts mentioned in the list of Demands, inclusive of the sums granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand Nos. 42, 43, 44 and 45".

The motion was adopted and sums were granted

As orderedby the Chair the motion for Demand for grants adopted by the House are reproduced below.

DEMAND NO. 42 —PUBLIC WORKS (EXCLUDING CONSTRUCTION)

"That a sum not exceeding Rs. 30,52,22,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 42 "Public Works (Excluding Construction)".

DEMAND NO. 43—BUILDINGS

"That a sum not exceeding Rs. 13,75.91,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No 43 "Buildings".

DEMAND NO. 44—ROADS AND BRIDGES

"That a sum not exceeding Rs 39,66,82 000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 44 "Roads and Bridges".

DEMAND NO. 45—PUBLICE HEALTH ENGINEERING

"That a sum not exceeding Rs. 12,19,30,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 45 "Public Health Engineering".

Business of the House

SRI A. LAKSHMI SAGAR.—Sir, I have one request to make. We may meet at 9-00a.m. tomorrow and the House may be adjourned at 10-00 a.m. to enable Members to attend the Inaugural function of the construction of Broad-gauge Railway line between Bangalore and Mysore, which will be inaugurated by the Minister for Railways Prof. Dandavate. This is an important event in the industrial development of our State. I submit that this may be agreed to.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆಗಬಹುದು.

MR. SPEAKER.—The House will adjourn now and meet at 9-00a.m. tomorrow.

The House adjourned at Forty minutes past seven of the clock to meet again at nine of the clock on Saturday the 19th May 1979.

W.D. 650